ವಿಶ್ವವಾಣಿ
ವಿಶ್ವಾಸವೇ ವಿಶ್ವ

ದೇವದತ್ತ ಪಡಿಕ್ಕಲ್ ಶತಕದಾಟ

ಮಯಾಂಕ್ ಅಗರ್ವಾಲ್ ನೇತೃತ್ವದ ಕರ್ನಾಟಕ ತಂಡ ವಿಜಯ್ ಹಜಾರೆ ಟ್ರೋಫಿ ಸೆಮಿಫೈನಲ್‌ಗೆ ಲಗ್ಗೆ

ಪುಟ ತೆರೆದಂತೆ...

ಎಲ್ಲರ ಸಲಹೆಗಳನ್ನು ಪರಿಗಣಿಸುವುದು ಜಾಣತನ
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
ಸಂ.ಪುಟ | 6

ತೀರ್ಥಸ್ನಾನ, ಕ್ಷೇತ್ರಯಾತ್ರೆ ಮತ್ತು ಅಲೌಕಿಕತೆ...
ವಿದ್ಯಮಾನ
ವಿನಾಯಕ ವೆಂ.ಭಟ್ಟ ಅಂಬ್ಲಿಹೊಂಡ
ಸಂ.ಗಮ | 7

ವಿಶ್ವವಾಣಿ ಸಂಕ್ರಾಂತಿ ಸಂಭ್ರಮ

2025ರ ಕ್ಯಾಲೆಂಡರ್ ವರ್ಷದ ಮೊದಲ ಹಬ್ಬವಾಗಿ ಸಂಕ್ರಾಂತಿ ಹಬ್ಬ ನಮ್ಮ ಮುಂದಿದೆ. ಸೂರ್ಯನ ಪಥ ಬದಲಾವಣೆ ಜತೆ ಸುಗ್ಗಿಯ ಸಂಭ್ರಮವನ್ನು ಸಾರುವ ಈ ಹಬ್ಬ ನಮ್ಮ ಕೃಷಿ ಸಂಸ್ಕೃತಿಯ ಪ್ರತೀಕ. ಮನೆಯ ಹೆಣ್ಣು ಮಕ್ಕಳು ಹೊಸ ಬಟ್ಟೆ ಉಟ್ಟು ಎಳ್ಳು ಬೆಲ್ಲ ಹಂಚುವುದು ಹಬ್ಬದ ವೈಶಿಷ್ಟ್ಯ. ಈ ಹಬ್ಬದ ಸಂಭ್ರಮ ಹೆಚ್ಚಿಸಿಕೊಳ್ಳಲು ವಿಶ್ವವಾಣಿ ವೇದಿಕೆ ಕಲ್ಪಿಸುತ್ತಿದೆ. ನಿಮ್ಮ ಮನೆಯ ಲಕ್ಷ್ಮೀಯರು ಎಳ್ಳು ಬೆಲ್ಲ ಬೀರುವ ಆಕರ್ಷಕ ಫೋಟೋವನ್ನು ಕ್ಲಿಕ್ಕಿಸಿ ನಮಗೆ ಕಳುಹಿಸಿ. ಆಯ್ದ ಫೋಟೋಗಳನ್ನು ಪ್ರಕಟಿಸುತ್ತೇವೆ.

ನಿಬಂಧನೆಗಳು

1. ಗುಣಮಟ್ಟದ ಒಂದು ಫೋಟೋ ಸಾಕು
2. ಒಬ್ಬರು ಅಥವಾ ಹೆಚ್ಚು ಸದಸ್ಯರಿರುವ ಫೋಟೋ ಕಳುಹಿಸಬಹುದು
3. ನಿಮ್ಮ ಫೋಟೋ ಜನವರಿ 15ರ ಅಪರಾಹ್ನ 2 ಗಂಟೆ ಒಳಗೆ ನಮಗೆ ತಲುಪಲಿ.

ವಾಟ್ಸ್ಆ್ಯಪ್ ನಂಬರ್
63623 93988

ದಾರಿದೀಪೋಕ್ತಿ

ಜೀವನದಲ್ಲಿ ತನ್ನಿಂದಾಗದು ಎಂದು ಕೈಚೆಲ್ಲಿದ ಶೇ.95ರಷ್ಟು ಜನರನ್ನು, ಎಂದೆಂದೂ ಕೈಚೆಲ್ಲದ ಉಳಿದ ಶೇ.5ರಷ್ಟು ಜನ ಕೆಲಸಕ್ಕೆ ಇಟ್ಟುಕೊಂಡಿದ್ದಾರೆ. ತನ್ನಿಂದ ಸಾಧ್ಯವೇ ಇಲ್ಲ ಎಂದು ಕೈಚೆಲ್ಲುವುದು ಬಹಳ ಸುಲಭ. ಆದರೆ ಅವರು ಬೇರೆಯವರ ಕೈಕೆಳಗೆ ಕೆಲಸ ಮಾಡುವುದಕ್ಕೆ ಸಿದ್ಧರಿರಬೇಕಾಗುತ್ತದೆ.

ವಕ್ರತುಂಡೋಕ್ತಿ

ಪಿಜ್ಜಾ ಕಂಡಾಗ, ಎಲ್ಲರೂ 'ಇಡೀ ಪಿಜ್ಜಾ ನನ್ನಿಂದ ತಿನ್ನಲು ಸಾಧ್ಯವಿಲ್ಲ' ಅಂತಾನೆ ಹೇಳ್ತಾರೆ. ನಂತರ ಕೈಬೆರಳು ನೆಕ್ಕುತ್ತಿರುತ್ತಾರೆ.

ಶಮಿ ಕಂಬ್ಯಾಕ್

ದೆಹಲಿ: ಇಂಗ್ಲೆಂಡ್ ವಿರುದ್ಧದ ಐದು ಟಿ20 ಕ್ರಿಕೆಟ್ ಪಂದ್ಯಗಳ ಸರಣಿಗೆ ಟೀಂ ಇಂಡಿಯಾವನ್ನು ಶನಿವಾರ ಪ್ರಕಟಿಸಲಾಗಿದೆ. ಸೂರ್ಯ ಕುಮಾರ್ ಯಾದವ್‌ತಂಡದ ನಾಯಕತ್ವ ವಹಿಸಲಿದ್ದಾರೆ. ಅಕ್ಷರ್ ಪಟೇಲ್ ಉಪ ನಾಯಕರಾಗಿದ್ದಾರೆ. ಈ ತಿಂಗಳ ಕೊನೆಯಲ್ಲಿ 5 ಪಂದ್ಯಗಳ ಇಂಗ್ಲೆಂಡ್ ವಿರುದ್ಧದ ಸರಣಿ ಆರಂಭವಾಗ ಲಿದ್ದು, ಸುಮಾರು ಒಂದೂವರೆ ವರ್ಷಗಳ ಬಳಿಕ ವೇಗದ ಬೌಲರ್ ಮೊಹಮ್ಮದ್ ಶಮಿ ಮತ್ತೆ ಟೀಂ ಇಂಡಿಯಾಕ್ಕೆ ಮರಳಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

'ಅನ್ಸುತ್ತೆ ನೋಯ್ಸುತ್ತೆ' – ಕನ್ನಡ ಸಿನೆಮಾ ತೆರೆಗೆ



ಮುಂದುವರಿದ ಮುಸುಕಿನ ಗುದ್ದಾಟ, ಇಂದು ವರಿಷ್ಠರ ಆಗಮನ
ನಾಳೆ ಬೆಳಗ್ಗೆ ಪದಾಧಿಕಾರಿಗಳ ಸಭೆ, ಸಂಜೆ ಸಿಎಲ್‌ಪಿ ಮೀಟಿಂಗ್

ಕೈ ಕಿತ್ತಾಟ: ಉಭಯ ಸಂಕಟ

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ಭುಗಿಲೆದ್ದಿರುವ ಬಣ ಗುದ್ದಾಟದ ವಿಷಯದಲ್ಲಿ ಇಡೀ ಕಾಂಗ್ರೆಸ್ ಘಟಕವೇ ಅಸಹಾಯಕ ಸ್ಥಿತಿಗೆ ತಲುಪಿದೆ. ಕೆಪಿಸಿಸಿಯಲ್ಲಿ ಐವರು ಕಾರ್ಯಾಧ್ಯಕ್ಷರಿದ್ದರೂ ಯಾರ ಪರವಾಗಿಯೂ ಬ್ಯಾಟ್ ಬೀಸಲಾಗದ ಸ್ಥಿತಿಯಲ್ಲಿರುವುದರಿಂದ ಮೌನಕ್ಕೆ ಶರಣಾಗಬೇಕಾದ ಪರಿಸ್ಥಿತಿ ಎದುರಾಗಿದೆ.

ಸಾಮಾನ್ಯವಾಗಿ ಈ ರೀತಿಯ ಪರಿಸ್ಥಿತಿ ಎದುರಾದರೆ ಕಾರ್ಯಾಧ್ಯಕ್ಷರುಗಳು ಮುಂದೆ ಬಂದು ಮಾತನಾಡುವ ಅಥವಾ ಪರಿಸ್ಥಿತಿಯನ್ನು ವಿವರಿಸುವ ಹಾಗೂ ಸರಿಪಡಿಸುವ ಕೆಲಸ ಮಾಡಬೇಕು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಇಬ್ಬರನ್ನೂ ಎದುರು ಹಾಕಿಕೊಳ್ಳುವ ಮನಸ್ಥಿತಿಯಲ್ಲಿ ಯಾರೊಬ್ಬರೂ ಇಲ್ಲ. ಆದ್ದರಿಂದ ಕೆಪಿಸಿಸಿ ಕಾರ್ಯಾಧ್ಯಕ್ಷರು ಸೇರಿದಂತೆ ಇಡೀ ಪದಾಧಿಕಾರಿಗಳು ಮೂಕ ಪ್ರೇಕ್ಷಕರಾಗಿದ್ದಾರೆ.

ಕೆಪಿಸಿಸಿ ಪದಾಧಿಕಾರಿಗಳ ಪಟ್ಟಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತರು ಹಾಗೂ ಡಿ.ಕೆ.ಶಿವಕುಮಾರ್ ಆಪ್ತರಿದ್ದಾರೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಯಾರ ಪರವಾಗಿ ನಿಂತರೂ ಇನ್ನೊಂದು ಬಣದ ವಿರೋಧ ಎದುರಿಸಬೇಕಾಗುತ್ತದೆ. ಪಕ್ಷದ ಹೈಕಮಾಂಡ್ ಯಾವ ರೀತಿಯ ತೀರ್ಮಾನ ಕೈಗೊಳ್ಳಲಿದೆ ಎನ್ನುವ ಗೊಂದಲವಿದೆ. ಆದ್ದರಿಂದ ಸದ್ಯಕ್ಕೆ ಮೌನವಾಗಿರುವುದೇ ಸೂಕ್ತ ಎನ್ನುವ ಲೆಕ್ಕಾಚಾರದಲ್ಲಿ ಬಹುತೇಕ ನಾಯಕರಿದ್ದಾರೆ ಎಂದು ಕಾಂಗ್ರೆಸ್ ನಾಯಕರು ಹೇಳಿದ್ದಾರೆ.

ಆರು ಮಂದಿಯ ನಡುವಿನ ಚರ್ಚೆ, ಹೇಳುವವರ್‍ಯಾರು?: ಅಧಿಕಾರ ಹಂಚಿಕೆ ಸೂತ್ರದ ಬಗ್ಗೆ ಹಲವು ರೀತಿಯ ಗೊಂದಲ ಸೃಷ್ಟಿಯಾಗುವುದಕ್ಕೆ ಪ್ರಮುಖವಾಗಿ ದೆಹಲಿಯಲ್ಲಿ ನಡೆದ ಸಭೆಯಲ್ಲಿ ಯಾವ ರೀತಿಯ ಚರ್ಚೆ ಹಾಗೂ ಒಪ್ಪಂದವಾಗಿದೆ ಎನ್ನುವ ಬಗ್ಗೆ ಸ್ಪಷ್ಟನೆಯಿಲ್ಲ. ಆ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣು ಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ ಅವರೊಂದಿಗೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿದ್ದರು. ಡಿಕೆಶಿ ಅವರು ಅಧಿಕಾರ ಹಂಚಿಕೆಯಾಗಿದೆ ಎಂದು ಆಪ್ತರ ಬಳಿ ಹೇಳಿಕೊಂಡಿದ್ದರೆ, ಸಿದ್ದರಾಮಯ್ಯ ಅವರು ಆಗಿಲ್ಲವೆಂದಿದ್ದಾರೆ. ಹೀಗಿರುವಾಗ ಸಭೆಯಲ್ಲಿದ್ದ ಮೂರನೇ ವ್ಯಕ್ತಿ ನಡೆದಿದ್ದೇನು ಎಂದು ಹೇಳಿದರೆ ಸ್ಪಷ್ಟನೆ ಸಿಗುತ್ತದೆ. ಆದರೆ ಸಿಎಂ, ಡಿಸಿಎಂ ಬಿಟ್ಟು ಇನ್ಯಾರ ಬಳಿಯೂ ಈ ಬಗ್ಗೆ ಚರ್ಚಿಸಲು ಸಾಧ್ಯವಿಲ್ಲವಾದ್ದರಿಂದ ಈ ಗೊಂದಲವಾಗುತ್ತಿದೆ ಎನ್ನುವುದು ಕಾಂಗ್ರೆಸ್ ನಾಯಕರೊಬ್ಬರ ಅಭಿಪ್ರಾಯವಾಗಿದೆ.

- ಸಿಎಂ–ಡಿಸಿಎಂ ನಡುವಿನ ಬಣ ಗುದ್ದಾಟ; ಮೌನಕ್ಕೆ ಶರಣಾದ ಕಾಂಗ್ರೆಸ್ ಪದಾಧಿಕಾರಿಗಳು
- ಸಿಎಂ, ಡಿಸಿಎಂ ನಡುವೆ ಯಾರ ಪರ ನಿಲ್ಲುವುದಕ್ಕೂ ಐವರು ಕಾರ್ಯಾಧ್ಯಕ್ಷರ ಹಿಂದೇಟು
- ಕುರ್ಚಿಗಾಗಿನ ಕುಸ್ತಿ ಬಗ್ಗೆ ಎಲ್ಲರಿಗೂ ಬೇಸರವಿದ್ದರೂ ಬಹಿರಂಗವಾಗಿ ಮಾತಾಡಲು ಹಿಂದೇಟು
- ಐವರು ಪ್ರಮುಖ ನಾಯಕರ ಸಮ್ಮುಖದಲ್ಲಾಗಿರುವ ಸಭೆಯ ಬಗ್ಗೆ ಯಾರಿಗೂ ಸ್ಪಷ್ಟನೆ ಇಲ್ಲ

> ನನಗೆ ಯಾರ ಬೆಂಬಲವೂ ಬೇಡ, ಪಕ್ಷ ಹೇಳಿದಂತೆ ನಾನು ಕೆಲಸ ಮಾಡುತ್ತೇನೆ. ನನ್ನ ಪರವಾಗಿ ಯಾರೂ ಒತ್ತಾಯ ಮಾಡುವುದು ಬೇಡ. ಮುಂದಿನ ಸಿಎಂ ಡಿ.ಕೆ.ಶಿವಕುಮಾರ್ ಆಗಬೇಕು ಎಂದು ಕಾರ್ಯಕರ್ತರು ಒತ್ತಾಯ ಮಾಡುತ್ತಿದ್ದಾರೆ. ಆದರೆ, ಈ ವಿಚಾರದಲ್ಲಿ ಯಾವುದೇ ಶಾಸಕರು ಬೆಂಬಲ ನೀಡುವುದು ಬೇಡ. ನಾನುಂಟು, ಕಾಂಗ್ರೆಸ್ ಪಕ್ಷವುಂಟು. ಪಕ್ಷದ ನಾಯಕರು ಹೇಳಿದಂತೆ ನಾನು ಕೆಲಸ ಮಾಡಿಕೊಂಡು ಹೋಗುತ್ತೇನೆ.
>
> – **ಡಿ.ಕೆ.ಶಿವಕುಮಾರ್** ಡಿಸಿಎಂ, ಕೆಪಿಸಿಸಿ ಅಧ್ಯಕ್ಷ

ಹೈ ನಾಯಕರ ಆಗಮನ

ಸೋಮವಾರ ಸಂಜೆ ಕೆಪಿಸಿಸಿ ಕಚೇರಿಯಲ್ಲಿ ನಡೆಯಲಿರುವ ಸಭೆಯಲ್ಲಿ ಭಾಗವಹಿಸಲು ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ಕೆ.ಸಿ.ವೇಣುಗೋಪಾಲ್ ಅವರು ಭಾನುವಾರವೇ ಬೆಂಗಳೂರಿಗೆ ಆಗಮಿಸಲಿದ್ದಾರೆ. ಈ ಸಭೆಯಲ್ಲಿ ಅಧಿಕಾರ ಹಂಚಿಕೆ, ಅಧ್ಯಕ್ಷರ ಬದಲಾವಣೆ, ಸಿಎಂ ಬದಲಾವಣೆಗೆ ಸಂಬಂಧಿಸಿದಂತೆ ನಾಯಕರು ಹೇಳುತ್ತಿರುವ ಹೇಳಿಕೆಗೆ ಬ್ರೇಕ್ ಹಾಕುವಂತೆ ಸೂಚನೆ ನೀಡುವ ಸಾಧ್ಯತೆಯಿದೆ. ಈ ಸಂಬಂಧ ಈಗಾಗಲೇ ಎಚ್ಚರಿಕೆ ನೀಡಿದ್ದರೂ, ಅನೇಕರು ಹೈಕಮಾಂಡ್ ಸೂಚನೆಯನ್ನು ಉಲ್ಲಂಘಿಸಿದ್ದಾರೆ. ಇದು ಪುನರಾವರ್ತನೆಯಾದರೆ ಕಠಿಣ ಕ್ರಮ ಎದುರಿಸಬೇಕಾಗುತ್ತದೆ ಎನ್ನುವ ಸ್ಪಷ್ಟ ಸಂದೇಶ ರವಾನಿಸುವ ಸಾಧ್ಯತೆ ಇದೆ.

ನಿಷ್ಠೆ ಇಂದು ಬಹಿರಂಗ, ಜಿಟಿಡಿ ಗೈರು
ಆಪರೇಷನ್ ಹಸ್ತ ಜೆಡಿಎಸ್ ಸಭೆ

- ಎಚ್‌ಡಿಡಿ, ಎಚ್‌ಡಿಕೆ ನೇತೃತ್ವದಲ್ಲಿ ಭಾನುವಾರ ಸಭೆ
- ಎಲ್ಲ ಶಾಸಕರನ್ನು ವಿಶ್ವಾಸಕ್ಕೆ ಪಡೆಯುವ ಲೆಕ್ಕಾಚಾರ
- ಜಿ.ಟಿ.ದೇವೇಗೌಡ ಸೇರಿ ಕೆಲ ಶಾಸಕರ ಗೈರು ಸಾಧ್ಯತೆ

ಬೆಂಗಳೂರು: ಆಪರೇಷನ್ ಹಸ್ತದ ಭೀತಿಯ ನಡುವೆ ಶಾಸಕರು, ಬೆಂಬಲಿಗರು ಹಾಗೂ ಕಾರ್ಯಕರ್ತರನ್ನು ವಿಶ್ವಾಸಕ್ಕೆ ಪಡೆದುಕೊಳ್ಳಲು ಪಕ್ಷ ಸಂಘಟನಾ ಸಭೆ ಮಾಡಲು ಭಾನುವಾರ ಜೆಡಿಎಸ್ ಸಭೆ ನಡೆಸಲಿದ್ದು, ಪ್ರಮುಖ ನಾಯಕರು ಸಭೆಯಿಂದ ದೂರ ಉಳಿಯಲು ನಿರ್ಧರಿಸಿರುವುದು ಅಚ್ಚರಿಯ ಬೆಳವಣಿಗೆಯಾಗಿದೆ.

ಬಿಬಿಎಂಪಿ, ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಚುನಾವಣೆ ಸಿದ್ಧತೆ ಕುರಿತಂತೆ ಸಭೆ ನಡೆಸಲಾಗುತ್ತಿದೆ ಎನ್ನಲಾಗುತ್ತಿದ್ದರೂ ಪಕ್ಷ ಹಾಗೂ ಮುಖಂಡರನ್ನು ಉಳಿಸಿಕೊಳ್ಳಲು ದಳಪತಿಗಳು ಹೊಸ ಲೆಕ್ಕಾಚಾರ ಹಾಕಿದ್ದಾರೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ನೇತೃತ್ವದಲ್ಲಿ ಭಾನುವಾರ ಜೆಪಿ ಭವನದಲ್ಲಿ ಸಭೆ ಜರುಗಲಿದೆ. ಸಭೆಯಲ್ಲಿ ಪ್ರಚಲಿತ ರಾಜಕೀಯ ವಿದ್ಯಮಾನ, ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ, ಪಕ್ಷದ ಸಂಘಟನೆ, ಸದಸ್ಯತ್ವ ನೋಂದಣಿ ಚುರುಕುಗೊಳಿಸುವುದು, ರಾಜ್ಯದ ಕಾಂಗ್ರೆಸ್ ಸರಕಾರದ ವಿರುದ್ಧ ಜನಪರ ಹೋರಾಟಗಳನ್ನು ಹಮ್ಮಿಕೊಳ್ಳುವುದು ಸೇರಿದಂತೆ ಪ್ರಮುಖ ವಿಚಾರಗಳ ಬಗ್ಗೆ ಚರ್ಚೆ ನಡೆಸಿ, ವರಿಷ್ಠರು ಸೂಕ್ತ ಮಾರ್ಗದರ್ಶನ ಮಾಡಲಿದ್ದಾರೆ.

ಎಚ್.ಡಿ.ದೇವೇಗೌಡರ ಅಧ್ಯಕ್ಷತೆಯಲ್ಲಿ ಜರುಗುವ ಸಭೆಯಲ್ಲಿ ಪಕ್ಷದ ರಾಜ್ಯಾಧ್ಯಕ್ಷರಾದ ಎಚ್.ಡಿ.ಕುಮಾರಸ್ವಾಮಿ ಅವರು ಭಾಗವಹಿಸಲಿದ್ದಾರೆ. ಶಾಸಕರು, ವಿಧಾನ ಪರಿಷತ್ ಸದಸ್ಯರು, ಮಾಜಿ ಶಾಸಕರು, ಸಂಸದರು, ಮಾಜಿ ಸಂಸದರು, ಮಾಜಿ ಸಚಿವರು, ರಾಜ್ಯಮಟ್ಟದ ಪದಾಧಿಕಾರಿಗಳು, ಜಿಲ್ಲಾಧ್ಯಕ್ಷರು ಮತ್ತು ತಾಲೂಕು ಅಧ್ಯಕ್ಷರನ್ನು ಆಹ್ವಾನಿಸಲಾಗಿದೆ ಎಂದು ಜೆಡಿಎಸ್ ಮೂಲಗಳು ತಿಳಿಸಿವೆ.

ಸಭೆಯಲ್ಲಿ ಉಪ ಚುನಾವಣೆಯ ಸೋಲಿಗೆ ಕಾರಣವಾಗಿದ್ದ ನ್ಯೂನ್ಯತೆ ಸರಿಪಡಿಸಿಕೊಂಡು ಮುಂಬರುವ ಚುನಾವಣೆ ಎದುರಿಸುವ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಲಾಗುತ್ತದೆ. ಜತೆಗೆ ಎನ್‌ಡಿಎ ಮಿತ್ರಪಕ್ಷ ಬಿಜೆಪಿ ಜತೆಗೂಡಿ ಚುನಾವಣೆಯಲ್ಲಿ ಸ್ಪರ್ಧಿಸುವುದರಿಂದ ಸೀಟು ಹಂಚಿಕೆ ಬಗ್ಗೆ ಚರ್ಚಿಸುವ ಸಾಧ್ಯತೆಗಳಿವೆ. ಅಲ್ಲದೆ, ಮೈಸೂರಿನಿಂದ ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಚುನಾವಣೆ ಪ್ರಚಾರ ಆರಂಭಿಸುವ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳುವ ಸಾಧ್ಯತೆಗಳಿವೆ.

ನಿಖಿಲ್‌ಗೆ ಪಟ್ಟ; ಅಸಮಾಧಾನ

ಕುಮಾರಸ್ವಾಮಿ ಕೇಂದ್ರ ಸಚಿವರಾದ ಮೇಲೆ ರಾಜ್ಯದಲ್ಲಿ ಸಂಘಟನೆಗೆ ಒತ್ತು ನೀಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ನಿಖಿಲ್ ಕುಮಾರಸ್ವಾಮಿ ಅವರಿಗೆ ರಾಜ್ಯಾಧ್ಯಕ್ಷರ ಪಟ್ಟ ಕಟ್ಟಲು ನಿರ್ಧರಿಸಿರುವುದು ಕೂಡ ಕೆಲ ಪ್ರಮುಖರ ಕೆಂಗಣ್ಣಿಗೆ ಕಾರಣವಾಗಿದೆ. ಮತ್ತೊಂದೆಡೆ ರೇವಣ್ಣ ಹಾಗೂ ಕುಟುಂಬದ ಮೇಲಿರುವ ಲೈಂಗಿಕ ಆರೋಪಗಳು ಕೂಡ ಮೈಸೂರು ಹಾಗೂ ಹಾಸನ ಭಾಗದಲ್ಲಿ ಪಕ್ಷಕ್ಕೆ ಹೊಡೆತ ಬಿದ್ದಿರುವುದನ್ನು ಅಲ್ಲಗಳೆಯುವಂತಿಲ್ಲ. ಹೀಗಾಗಿ ನಿಖಿಲ್‌ಗೆ ಪಟ್ಟ ಕಟ್ಟಲು ವರಿಷ್ಠರು ಮುಂದಾಗಿದ್ದರೂ, ಪಕ್ಷದೊಳಗೆ ಕೆಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಭೆಗೆ ಹೋಗಲ್ಲ

ಪಕ್ಷದ ಸಂಘಟನಾ ಸಭೆಯಿಂದ ದೂರ ಉಳಿಯಲು ನಿರ್ಧರಿಸಿದ್ದು, ಕ್ಷೇತ್ರದ ಕೆಲಸದಿಂದ ಸಭೆಯಲ್ಲಿ ಭಾಗಿಯಾಗುವುದಿಲ್ಲ ಎಂದು ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ತಿಳಿಸಿದ್ದಾರೆ.

ನನಗೆ ಯಾರ ಮೇಲೂ ಯಾವುದೇ ಕೋಪ, ಬೇಸರ ಇಲ್ಲ. ತಾಳ್ಮೆಯಿಂದ ಇದ್ದೇನೆ. ನನಗೆ 75 ವರ್ಷ ವಯಸ್ಸಾಗಿದ್ದು, ನನಗೆ ವಯಸ್ಸಾದ ಕಾರಣ ಓಡಾಟ ಮಾಡಲು ಕಷ್ಟ ಆಗುತ್ತಿದೆ. ಆ ಹಿನ್ನೆಲೆಯಲ್ಲಿ ಹಾಗೂ ಆರೋಗ್ಯ ಸರಿಯಿಲ್ಲದ ಕಾರಣ ಸಭೆಗೆ ಹೋಗುತ್ತಿಲ್ಲ. ಪಕ್ಷದ ರಾಜ್ಯಾಧ್ಯಕ್ಷರ ವಿಚಾರದಲ್ಲಿ ಎಚ್.ಡಿ.ದೇವೇಗೌಡರು ಹಾಗೂ ಕುಮಾರಸ್ವಾಮಿ ತೀರ್ಮಾನ ಮಾಡುತ್ತಾರೆ ಎಂದು ಹೇಳಿದ್ದಾರೆ.

ನಕ್ಸಲರಿದ್ದ ಕಾಡಲ್ಲಿ ಶಸ್ತ್ರಾಸ್ತ್ರಗಳು ವಶ

ಚಿಕ್ಕಮಗಳೂರು: 6 ನಕ್ಸಲರು ಮುಖ್ಯವಾಹಿನಿಗೆ ಬಂದ ಬೆನ್ನಲ್ಲೇ ಪೊಲೀಸರು ಅರಣ್ಯದಲ್ಲಿ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿದ್ದಾರೆ. ಕೊಪ್ಪ ತಾಲೂಕಿನ ಜಯಪುರ ವ್ಯಾಪ್ತಿಯ ಕಿತ್ತಲೆಗುಳಿ ಬಳಿಯ ಅರಣ್ಯದಲ್ಲಿ ಆರು ಬಂದೂಕು ಹಾಗೂ ಮದ್ದು ಗುಂಡು ದೊರೆತಿವೆ. ಒಂದು ಎ.ಕೆ–56, ಮೂರು 303 ರೈಫಲ್, 12 ಬೋರ್ ಎಸ್‌ಬಿಬಿಎಲ್, ಒಂದು ಸ್ವದೇಶ ನಿರ್ಮಿತ ಬಂದೂಕು. ಒಂದು ಎ.ಕೆ–56 ಖಾಲಿ ಮ್ಯಾಗ್ಜಿನ್ ಸೇರಿ ಒಟ್ಟು 176 ಮದ್ದುಗುಂಡು ದೊರೆತಿವೆ.

ಬೆಂಗಳೂರಿನ ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಶನಿವಾರ ನಡೆದ ರಾಜ್ಯ ಲೋಕಸೇವಾ ಆಯೋಗಗಳ ಅಧ್ಯಕ್ಷರ 25ನೇ ರಾಷ್ಟ್ರೀಯ ಸಮ್ಮೇಳನವನ್ನು ಉಪರಾಷ್ಟ್ರಪತಿ ಜಗದೀಪ್ ಧನಕರ್, ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ವೀರಗಾಥಾ 4.0 ಗೆದ್ದ ರಾಜ್ಯದ 8 ಮಕ್ಕಳು

ಬೆಂಗಳೂರು: ಗಣರಾಜ್ಯೋತ್ಸವದ ಭಾಗವಾಗಿ ಗ್ಯಾಲಂಟ್ರಿ ಅವಾರ್ಡ್ಸ್ ಪೋರ್ಟಲ್ ಆಫ್ ಇಂಡಿಯಾ ಆಯೋಜಿಸಿದ್ದ ವೀರಗಾಥಾ 4.0 ಸ್ಪರ್ಧೆಯಲ್ಲಿ ರಾಜ್ಯದ 8 ಮಕ್ಕಳು ಪ್ರಶಸ್ತಿ ಜಯಿಸಿದ್ದಾರೆ. ಪ್ರಶಸ್ತಿ ವಿಜೇತರು ದೆಹಲಿಯ ಕರ್ತವ್ಯಪಥದಲ್ಲಿ ಜ.26ರಂದು ನಡೆಯಲಿರುವ ಗಣರಾಜ್ಯೋತ್ಸವ ಪರೇಡ್ ವೀಕ್ಷಣೆಗೆ ವಿಶೇಷ ಆಹ್ವಾನ ಗಿಟ್ಟಿಸಿಕೊಂಡಿದ್ದಾರೆ. 4 ವಿಭಾಗಗಳಲ್ಲಿ ತಲಾ 25 ಮಕ್ಕಳಂತೆ ರಾಷ್ಟ್ರಮಟ್ಟಕ್ಕೆ 100 ಮಂದಿ ವಿಜೇತರನ್ನು ಆಯ್ಕೆ ಮಾಡಲಾಗಿದೆ.

ನಮ್ಮ ತೆರಿಗೆ ನಮ್ಮ ಹಕ್ಕು ಕೂಗಿಗೆ ತಯಾರಾದ ರಾಜ್ಯ ಕಾಂಗ್ರೆಸ್
ಕೇಂದ್ರದ ವಿರುದ್ಧ ಮತ್ತೆ ಹೋರಾಟ

ಬೆಂಗಳೂರು: ತೆರಿಗೆ ಪಾಲಿನ ಹಂಚಿಕೆಯಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ ಎಂದು ಆರೋಪಿಸಿರುವ ಕಾಂಗ್ರೆಸ್, ಇದೀಗ 2ನೇ ಹಂತದಲ್ಲಿ 'ನಮ್ಮ ತೆರಿಗೆ ನಮ್ಮ ಹಕ್ಕು' ಹೋರಾಟಕ್ಕೆ ಸಿದ್ಧತೆ ನಡೆಸಿದೆ.

ಈ ಬಗ್ಗೆ ಮಾತನಾಡಿರುವ ಡಿಸಿಎಂ ಡಿ.ಕೆ.ಶಿವಕುಮಾರ್, ಕೇಂದ್ರದ ಬಳಿ ನಮ್ಮ ತೆರಿಗೆ ನಮ್ಮ ಹಕ್ಕಿಗಾಗಿ ನಾವು ಹೋರಾಟ ಮಾಡಲೇಬೇಕು. ನಮ್ಮ ರಾಜ್ಯದ ಹಿತ ಕಾಪಾಡಲೇಬೇಕು. ಬಿಜೆಪಿಯ ಇಷ್ಟೊಂದು ಜನ ಸಂಸದರು ಏಕೆ ಮೌನವಾಗಿ ಇದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ನೀರಾವರಿ ಮತ್ತು ನಗರಾಭಿವೃದ್ಧಿಗೆ ನೀಡುವ ಹಣದ ವಿಚಾರದಲ್ಲಿ ಕೇಂದ್ರ ಸರಕಾರ ಕೊಟ್ಟ ಮಾತು ಉಳಿಸಿಕೊಂಡಿಲ್ಲ. ರಾಜ್ಯದ ಪಾಲಿನ ತೆರಿಗೆ ಅನ್ಯಾಯವನ್ನು ಕಾನೂನಾತ್ಮಕವಾಗಿ ಹೇಗೆ ಎದುರಿಸಬೇಕು ಎಂಬುದನ್ನು ಸಿಎಂ ಅಧ್ಯಯನ ಮಾಡುತ್ತಿದ್ದಾರೆ. ಬಜೆಟ್ ಮಂಡನೆ ವೇಳೆಗೆ ಇದಕ್ಕೆ ನಾವು ಉತ್ತರ ಕೊಡುತ್ತೇವೆ ಎಂದು ಹೇಳಿದರು.

ಕೇಂದ್ರ ಸರಕಾರವು ಶುಕ್ರವಾರ 28 ರಾಜ್ಯಗಳಿಗೆ ತೆರಿಗೆ ಪಾಲಿನ ಹಂಚಿಕೆ ಮಾಡಿದೆ.

ಶೀಘ್ರದಲ್ಲಿಯೇ ಸಭೆ

ತೆರಿಗೆ ಹಂಚಿಕೆ ಅನ್ಯಾಯ ಖಂಡಿಸಿ ಯಾವ ರೀತಿ ಹೋರಾಟ ನಡೆಸಬೇಕು ಎನ್ನುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೇತ್ವದಲ್ಲಿ ಶೀಘ್ರವೇ ಸಭೆ ನಡೆಯಲಿದೆ.

ಕನ್ನಡ ಮರು ಪರೀಕ್ಷೆಗೆ ಆದೇಶ

ಬೆಂಗಳೂರು: ಜೂನಿಯರ್ ಎಂಜಿನಿಯರ್ ಮತ್ತು ಸಹಾಯಕ ಎಂಜಿನಿಯರ್ (ಮೆಕ್ಯಾನಿಕಲ್) ಹುದ್ದೆಗಳಿಗೆ ಕನ್ನಡ ಭಾಷಾ ಪರೀಕ್ಷೆಯನ್ನು ಮತ್ತೊಮ್ಮೆ ನಡೆಸುವಂತೆ ಹೈಕೋರ್ಟ್ ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ ಆದೇಶಿಸಿದೆ.

ಜಿಟಿಡಿ ವಿರುದ್ಧ ದೂರು

ಮೈಸೂರು: ಶಾಸಕ ಜಿ.ಟಿ.ದೇವೇಗೌಡ ಅವರು ಮುಡಾದಿಂದ ಅಕ್ರಮವಾಗಿ ತಮ್ಮ ಪುತ್ರಿ ಮತ್ತು ಅಳಿಯನಿಗೆ ನಿವೇಶನ ಕೊಡಿಸಿದ್ದಾರೆ ಎಂದು ಆರೋಪಿಸಿ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಲೋಕಾಯುಕ್ತಕ್ಕೆ ದೂರು ನೀಡಿದ್ದಾರೆ. ಸರಕಾರಕ್ಕೆ ಸೇರಿದ ಮತ್ತು ಹೈಕೋರ್ಟ್‌ನಲ್ಲಿ ವಿಚಾರಣೆ ಬಾಕಿ ಇರುವ ಜಮೀನಿಗೆ ಸಂಬಂಧಿಸಿದಂತೆ ಸುಳ್ಳು ದಾಖಲೆ ಸೃಷ್ಟಿ ಮಾಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಮಾಹಿತಿ ಹಕ್ಕು ಕಾಯಿದೆಯ ದುರುಪಯೋಗಕ್ಕೆ ಹೈಕೋರ್ಟ್ ಗರಂ
9 ಸಾವಿರ ಆರ್‌ಟಿಐ ಅರ್ಜಿ, 90 ಲಕ್ಷ ರು. ದಂಡ

ಬೆಂಗಳೂರು: ಮಾಹಿತಿ ಹಕ್ಕು ಕಾಯಿದೆಯಡಿ ಅನಾವಶ್ಯಕ ಮತ್ತು ದುರುದ್ದೇಶಪೂರಿತ ವಿವರಣೆ ಕೇಳಿ ಬರೋಬ್ಬರಿ 9,646 ಅರ್ಜಿ ಸಲ್ಲಿಸಿದ್ದ ಆರ್‌ಟಿಐ ಕಾರ್ಯಕರ್ತನೊಬ್ಬರಿಗೆ ಹೈಕೋರ್ಟ್ ಛೀಮಾರಿ ಹಾಕಿ, ದಂಡ ವಿಧಿಸಿದೆ.

ಹುಬ್ಬಳ್ಳಿಯ ದಾವಲ್ಸಾಬ್ ಎಂ. ಮಿಯಾನ್ನವರ್ ಎಂಬ ಆರ್‌ಟಿಐ ಕಾರ್ಯಕರ್ತ ರಾಜ್ಯದ 14 ಇಲಾಖೆಗಳಿಗೆ ಮಾಹಿತಿ ಹಕ್ಕು ಕಾಯಿದೆಯಡಿ ಅನಾವಶ್ಯಕ ವಿವರಣೆ ಕೇಳಿ 9,646 ಅರ್ಜಿಗಳನ್ನು ಸಲ್ಲಿಸಿದ್ದರು. ತಮ್ಮ ಅರ್ಜಿಗಳಿಗೆ ಸೂಕ್ತ ಸ್ಪಂದನೆ ಸಿಗದ ಹಿನ್ನೆಲೆಯಲ್ಲಿ ನವಲಗುಂದದ ಪ್ರಥಮ ಮೇಲ್ಮನವಿ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದ್ದರು. ಅಲ್ಲಿಯೂ ಪ್ರತಿಕ್ರಿಯೆ ಸಿಗದ ಹಿನ್ನೆಲೆಯಲ್ಲಿ ರಾಜ್ಯ ಮಾಹಿತಿ ಆಯೋಗಕ್ಕೆ ಎರಡನೇ ಮೇಲ್ಮನವಿ ಸಲ್ಲಿಸಿದ್ದರು. ಅರ್ಜಿದಾರರ ಅರ್ಜಿಗಳ ಸಂಖ್ಯೆಯನ್ನು ಗಮನಿಸಿದ ರಾಜ್ಯದ ಮುಖ್ಯ ಮಾಹಿತಿ ಆಯುಕ್ತರು ಪ್ರಕರಣದ ವಿಚಾರಣೆಗೆ ಪೂರ್ಣ ಪೀಠ ರಚಿಸಿದ್ದರು.

ಪೂರ್ಣ ಪೀಠವು, ಅರ್ಜಿದಾರರು ಆರ್‌ಟಿಐ ಕಾಯಿದೆಯನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಅನಗತ್ಯ ಮಾಹಿತಿಯನ್ನು ಕೇಳಿದ್ದಾರೆ. ಬೇಜವಾಬ್ದಾರಿಯುತ ಮನವಿಗಳನ್ನು ಸಲ್ಲಿಸಿದ್ದಾರೆ. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ 3,737 ಅರ್ಜಿಗಳು, ಲೋಕೋಪ ಯೋಗಿ ಮತ್ತು ರಾಷ್ಟ್ರೀಯ ಹೆದ್ದಾರಿ ಇಲಾಖೆಯಲ್ಲಿ 964 ಅರ್ಜಿಗಳು, ತೋಟಗಾರಿಕೆ ಇಲಾಖೆಗೆ 492 ಅರ್ಜಿಗಳು ಸೇರಿದಂತೆ ಇನ್ನೂ ಹಲವು ಇಲಾಖೆಗಳಿಗೂ ಹತ್ತಾರು ಅರ್ಜಿಗಳನ್ನು ಸಲ್ಲಿಸಿದ್ದಾರೆ. → 4

- 14 ಇಲಾಖೆಗಳಿಂದ ಮಾಹಿತಿ ಕೇಳಿ 9,646 ಅರ್ಜಿ ಸಲ್ಲಿಸಿದ್ದ ಆರ್‌ಟಿಐ ಕಾರ್ಯಕರ್ತ
- ಸೂಕ್ತ ಮಾಹಿತಿ ಲಭ್ಯವಾಗದ ಹಿನ್ನೆಲೆಯಲ್ಲಿ ಹೈಕೋರ್ಟ್ ಮೊರೆ ಹೋಗಿದ್ದ ದಾವಲ್ಸಾಬ್
- ಹೈಕೋರ್ಟ್‌ನಲ್ಲಿ ಅರ್ಜಿ ವಜಾಗೊಳಿಸಿದ ಪೀಠ, 9,64,600 ರು. ದಂಡ ಪಾವತಿಗೆ ಆದೇಶ

ಹೈಕೋರ್ಟ್ ಅಭಿಪ್ರಾಯವೇನು?

ಅರ್ಜಿದಾರರು ಆರ್‌ಟಿಐ ಕಾಯಿದೆಯ ನಿಯಮಗಳನ್ನು ದುರುಪಯೋಗಪಡಿಸಿಕೊಂಡಿರುವುದು ಸ್ಪಷ್ಟ. ಯಾವುದೇ ನ್ಯಾಯಸಮ್ಮತ ಕಾರಣಗಳಿಲ್ಲದೆ ಸಾವಿರಾರು ಅರ್ಜಿಗಳನ್ನು ವಿವಿಧ ಇಲಾಖೆಗಳಲ್ಲಿ ಸಲ್ಲಿಸುವ ಮೂಲಕ ಕಾನೂನು ಪ್ರಕ್ರಿಯೆಯನ್ನು ದುರುಪಯೋಗಪಡಿಸಿ ಕೊಂಡಿದ್ದಾರೆ. ಅಲ್ಲದೇ, ನ್ಯಾಯಾಲಯದ ಶುಲ್ಕವನ್ನು ಪಾವತಿ ಮಾಡದೆ ಅರ್ಜಿಗಳನ್ನು ಹಿಂಪಡೆಯುತ್ತೇನೆ ಎಂದು ತಿಳಿಸಿದ್ದು, ಅದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಇದು ಅಪಾಯಕಾರಿ ನಡೆಯ ಪೂರ್ವ ನಿದರ್ಶನವಾಗುವುದರ ಜತೆಗೆ ಮಾಹಿತಿ ಹಕ್ಕು ಕಾಯಿದೆಯ ದುರುಪಯೋಗಕ್ಕೆ ಸಹಕರಿಸಿದಂತಾಗಲಿದೆ. ಈ ಪ್ರಕರಣ ಆರ್‌ಟಿಐ ಕಾಯಿದೆಯ ದುರುಪಯೋಗವು ಸಾರ್ವಜನಿಕ ಆಡಳಿತದ ಮೇಲೆ ಯಾವ ರೀತಿ ದುಷ್ಪರಿಣಾಮ ಬೀರಬಲ್ಲದು ಎಂಬುದರ ಅತ್ಯುತ್ತಮ ಉದಾಹರಣೆಯಾಗಿದೆ. ಅರ್ಜಿದಾರರ ಇಂತಹ ನಡೆಗೆ ಅವಕಾಶ ನೀಡಿದರೆ ಇದು ಅಮೂಲ್ಯವಾದ ಸಾರ್ವಜನಿಕ ಸಂಪನ್ಮೂಲ ವ್ಯರ್ಥವಾಗುವುದರ ಜತೆಗೆ ಸದುದ್ದೇಶದಿಂದ ಮಾಹಿತಿ ಕೋರಿ ಅರ್ಜಿ ಸಲ್ಲಿಸುವ ನಾಗರಿಕರ ಅರ್ಜಿಗಳ ವಿಳಂಬ ವಿಲೇವಾರಿಗೆ ಕಾರಣವಾಗುತ್ತದೆ ಎಂದು ಪೀಠ ಹೇಳಿದೆ.



ಸಮಾಚಾರ ಸಣ್ಣದಲ್ಲ

ಶ್ರೀಮಲ್ಲಿಕಾರ್ಜುನ ದೇವರ ಜಾತ್ರೆ 13ರಿಂದ

ಹುಕ್ಕೇರಿ: ತಾಲೂಕಿನ ಅಮ್ಮಣಗಿ ಗ್ರಾಮದ ಶ್ರೀಮಲ್ಲಿಕಾರ್ಜುನ ದೇವರ ಜಾತ್ರಾಮಹೋತ್ಸವ ದಿ 13 ರಿಂದ 17 ವರೆಗೆ ಜರುಗಲಿದೆ. ದಿ 13 ರಂದು ಮಲ್ಲಿಕಾರ್ಜುನ ದೇವರ ಪಲ್ಲಕ್ಕಿ ಉತ್ಸವದ ಮೆರವಣಿಗೆ ಹಾಗೂ ಅರಶಿನ ಕಾರ್ಯಕ್ರಮ, ದಿ. 14 ರಂದು ಮಲ್ಲಿಕಾರ್ಜುನ ದೇವರ ಲಗ್ನ, ದಿ. 15. ರಂದು ಕರಿದಿನ ದಿ. 16 ರಂದು ಜಂಗಿಕುಸ್ತಿಗಳು, ದಿ. 17 ರಂದು ಭವ್ಯ ಮೆರವಣಿಗೆಯೊಂದಿಗೆ ಪಲ್ಲಕ್ಕಿ ಉತ್ಸವ ಜರುಗಲಿದೆ. ಭಕ್ತಾಧಿಗಳು ಜಾತ್ರಾ ಮಹೋತ್ಸವ ಪಾಲ್ಗೊಂಡು ದೇವರ ದರ್ಶನ ಪಡೆದುಕೊಳ್ಳಬೇಕೆಂದು ತಹಶೀಲ್ದಾರ, ದೇವಸ್ಥಾನದ ಆಡಳಿತಾಧಿಕಾರಿ ಮಂಜುಳಾ ನಾಯಿಕ ಅವರು ಪ್ರಕಟಣೆಯ ತಿಳಿಸಿದ್ದಾರೆ.

ಪ್ರತಿಭಾ ಕಾರಂಜಿ: ರಾಜ್ಯ ಮಟ್ಟಕ್ಕೆ ಆಯ್ಕೆ

ಯರಗಟ್ಟಿ: ಬೆಳಗಾವಿಯಲ್ಲಿ ನಡೆದ ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಸಮೀಪದ ಮುಗಳಿಹಾಳ ಗ್ರಾಮದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ

ಶಾಲೆಯ ವಿದ್ಯಾರ್ಥಿಯಾದ ಕುಮಾರಿ ಶೈಲಾ ಪತ್ತಾರ ಇವಳು ಆಶುಭಾಷಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾಳೆ. ಇವಳಿಗೆ ಗ್ರಾ. ಪಂ. ಅಧ್ಯಕ್ಷರು, ಉಪಾಧ್ಯಕ್ಷರು ಸರ್ವ ಸದಸ್ಯರು ಹಾಗೂ ಎಸ್ ಡಿ ಎಂ ಸಿ ಅಧ್ಯಕ್ಷರು,ಉಪಾಧ್ಯಕ್ಷರು, ಸರ್ವ ಸದಸ್ಯರು, ಶಾಲೆಯ ಪ್ರಧಾನ ಗುರುಮಾತೆ, ಸಹ ಶಿಕ್ಷಕರು ಮತ್ತು ಊರಿನ ಹಿರಿಯರು, ಹಳೆಯ ವಿದ್ಯಾರ್ಥಿಗಳು ಅಭಿನಂದನೆ ಸಲ್ಲಿಸಿದರು.

ಅಧ್ಯಕ್ಷರಾಗಿ ಬಸಪ್ಪ ದಳವಾಯಿ ಆಯ್ಕೆ

ಯರಗಟ್ಟಿ: ಸಮೀಪದ ಮುಗಳಿಹಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾಗಿ ಬಸಪ್ಪ ದಳವಾಯಿ, ಉಪಾಧ್ಯಕ್ಷರಾಗಿ ಗೋವಿಂದಪ್ಪ ಮುರಗಟ್ಟಿ ಆಯ್ಕೆಯಾದರು. ಕಾಂಗ್ರೆಸ್ ಬೆಂಬಲಿತ ಕಾರ್ಯಕರ್ತರು ಅತಿ ವಿಜೃಂಭಣೆಯಿಂದ ಪಟಾಕಿ, ಗುಲಾಲ್ ಹಚ್ಚಿ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಬೆಳಗಾವಿ ಕೆಎಂಎಫ್ ನಿರ್ದೇಶಕರಾದ ಶಂಕರ್ ಇಟ್ನಾಳ್, ಮುಗಳಿಹಾಳ ಕೆಎಂಎಫ್ ಅಧ್ಯಕ್ಷ ಯಮನಪ್ಪ ಹುಲಕುಂದ, ಎಪಿಎಂಸಿ ಸದಸ್ಯರಾದ ಲಕ್ಷ್ಮಣ ದಳವಾಯಿ, ರಾಮಣ್ಣ ದಳವಾಯಿ, ಮುತ್ತು ಅಣ್ಣಿಗೇರಿ, ಗ್ರಾ ಪ. ಮಾಜಿ ಅಧ್ಯಕ್ಷರಾದ ವಿಠ್ಠಲ ದಳವಾಯಿ, ಪಂಚಾಕ್ಷರಿ ಪಟ್ಟಣಶೆಟ್ಟಿ, ಬಸಪ್ಪ ಹಾದಿಮನಿ, ಬಸಪ್ಪ ಅರಭಾವಿ, ಮಾರುತಿ ಅರಭಾವಿ , ಬಸಪ್ಪ ಮಾಯನ್ನಿ, ಗೋಪಾಲ ದಳವಾಯಿ, ನಾಗರಾಜ ದೇಸಾಯಿ, ಬಸವರಾಜ ಪಾರಿವಾಳ, ನಿಂಗಪ್ಪ ದಳವಾಯಿ, ಯಲ್ಲಪ್ಪ ಪೂಜೆರ, ಉದ್ದವ್ವ ಪಾರಿವಾಳ, ಬಸವರಾಜ ಹಸಬಿ, ಯಲ್ಲಪ್ಪ ಬಾವಿಕಟ್ಟಿ, ವಿಠ್ಠಲ ಮಾಲದಿನ್ನಿ, ಭೀಮಪ್ಪ ಕೌಜಲಗಿ , ಮತ್ತಿತರರು ಹಿರಿಯರು, ಯುವಕರು, ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

ವೀರಜ್ಯೋತಿಗೆ ಅದ್ದೂರಿ ಸ್ವಾಗತ

ಯರಗಟ್ಟಿ: ಪಟ್ಟಣಕ್ಕೆ ಆಗಮಿಸಿದ ಸಂಗೊಳ್ಳಿ ರಾಯಣ್ಣ ವೀರಜ್ಯೋತಿಗೆ ತಾಲೂಕಾ ಆಡಳಿತ, ಪಟ್ಟಣ ಪಂಚಾಯತಿ, ಜನಪ್ರತಿನಿಧಿಗಳು, ನಾಗರೀಕರು ಎಲ್ಲ ಇಲಾಖೆ ಸಿಬ್ಬಂದಿ ಡೋಳ್ಳು ಮೇಳ ಮತ್ತು ಆರತಿಯೋಂದಿಗೆ ಅದ್ದೂರಿಯಾಗಿ ರಾಯಣ್ಣ ವೃತ್ತದಲ್ಲಿ ಸ್ವಾಗತಿಸಿದ ತಹಶೀಲ್ದಾರ ಮಾಧವಾನಂದ ಗುಂಡಪ್ಪಗೊಳ ಪೂಜೆ ಸಲ್ಲಿಸಿದರು. ಈ ವೇಳೆ ಪ. ಪಂ. ಮುಖ್ಯಾಧಿಕಾರಿ ಡಿ. ಎನ್. ತಹಶೀಲ್ದಾರ, ಸಿ.ಪಿ.ಐ. ಈರಯ್ಯ ಮಠಪತಿ, ವೈದ್ಯಾಧಿಕಾರಿ ಡಾ. ಬಿ. ಎಸ್. ಬಳ್ಳೂರ, ಪಶುವೈದ್ಯಾಧಿಕಾರಿ ಡಾ. ಎಂ. ವಿ. ಪಾಟೀಲ, ಪಿ.ಎಸ್.ಐ. ಲಕ್ಷ್ಮಣ ಮಾಳಿ ಇದ್ದರು.

ಅಗಲಿದ ಜೀವ

ಕಲ್ಲೋಳೆಪ್ಪ ತಹಶೀಲದಾರ

ಗೋಕಾಕ: ನಗರದ ಉಪ್ಪಾರ ಗಲ್ಲಿಯ ನಿವಾಸಿ, ಉಪ್ಪಾರ ಸಮಾಜದ ಹಿರಿಯರು ಹಾಗೂ ನಿವೃತ್ತ

ಶಿಕ್ಷಕರಾದ ಕಲ್ಲೋಳೆಪ್ಪ ಲಕ್ಷ್ಮಪ್ಪ ತಹಶೀಲದಾರ (83) ಶನಿವಾರ ಮುಂಜಾನೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಒಬ್ಬ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

{ಡಿ.ಕೆ.ಶಿವಕುಮಾರ } ಡಿಸಿಎಂ

ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರನ್ನು ನಾನು ರಾಷ್ಟ್ರೀಯ ನಾಯಕ ಎಂದು ತಿಳಿದುಕೊಂಡಿದ್ದೆ. ಆದರೆ, ಅವರು ದೊಡ್ಡ ಡ್ರಾಮಾ ಮಾಸ್ಟರ್ ಆಗಿದ್ದಾರೆ. ಸಿ.ಟಿ. ರವಿ ಅವರ ಮಾತು-ವಿಚಾರ ನೋಡಿದರೆ ಈ ಮಟ್ಟಕ್ಕೆ ಇಳಿಯುತ್ತಾರೆ ಎಂದು ಭಾವಿಸಿರಲಿಲ್ಲ.

ಗ್ರಾಮದಲ್ಲಿ ಹಬ್ಬದ ವಾತಾವರಣ | 20 ಸಾವಿರ ಜನರು ಭಾಗಿ

ಇಂದಿನಿಂದ ರಾಯಣ್ಣ ಉತ್ಸವ

ಬೈಲಹೊಂಗಲ: ತಾಲೂಕಿನ ಸಂಗೊಳ್ಳಿ ರಾಯಣ್ಣನ ಹುಟ್ಟೂರಿನಲ್ಲಿ ಜ.12, 13 ರಂದು ಜರುಗಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ 2025ರ ಉತ್ಸವಕ್ಕೆ ಭರದಿಂದ ಸಿದ್ಧತೆಯಾಗಿದ್ದು, ಉದ್ಘಾಟನೆಗೆ ಕ್ಷಣಗಣನೆ ಪ್ರಾರಂಭವಾಗಿದೆ.

ಗ್ರಾಮದಲ್ಲಿ ಬೀದಿಗಳನ್ನು ತಳಿರು ತೋರಣಗಳಿಂದ ಸಿಂಗರಿಸಲಾಗಿದೆ. ರಾಯಣ್ಣ ಉದ್ಯಾನವನಕ್ಕೆ ವಿದ್ಯುತ್ತ ದೀಪಗಳಿಂದ ಶ್ರಂಗರಿಸಲಾಗಿದೆ. ಗ್ರಾಮದ ಜನತೆ ಉತ್ಸವವನ್ನು ಯಶಸ್ವಿಗೊಳಿಸಲು ತಲ್ಲಿಣರಾಗಿದ್ದಾರೆ. ಗ್ರಾಮ ಮದುವಣಗಿತ್ತಿಯಂತೆ ಶ್ರಂಗಾರಗೊಂಡಿದ್ದರಿಂದ ಹಬ್ಬದ ವಾತಾವರಣ ನಿರ್ಮಾಣವಾಗಿದೆ.

ಗ್ರಾಮದ ವಿಶಾಲವಾದ ಸರಕಾರಿ ಪ್ರೌಢ ಶಾಲೆ ಮೈದಾನದಲ್ಲಿ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣನ ವೇದಿಕೆಗೆ ಭವ್ಯವಾದ ಶ್ಯಾಮಿಯಾನದ 150-200 ಪೆಂಡಾಲ ನಿರ್ಮಾಣವಾಗಿದೆ. ಉತ್ಸವದಲ್ಲಿ ಸುಮಾರು 20 ಸಾವಿರ ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಗ್ರಾಮದ ಹೊರವಲಯದ ಎರಡು ರಸ್ತೆಗಳಿಗೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಮಹಾದ್ವಾರ ನಿರ್ಮಿಸಲಾಗಿದೆ. ಕಾರ್ಯಕ್ರಮ ವಿಕ್ಷೀಸಲು ಆಗಮಿಸುವ ಜನತೆಗೆ ಹಾಗೂ ಕಲಾವಿದರಿಗೆ ಊಟದ ವ್ಯವಸ್ಥೆ ಮಾಡಲಾಗಿದೆ. 30 ಕ್ಕೂ ಹೆಚ್ಚು ಕಲಾವಿದರು ಕಾರ್ಯಕ್ರಮ ನೀಡಲಿದ್ದು, ಪ್ರತಿ ದಿನ 15 ಕಲಾವಿದರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿಸಿ ಜನತೆಯನ್ನು ರಂಜಿಸಲಿದ್ದಾರೆ.

ಸಾರ್ವಜನಿಕರಿಗೆ ಮೋಬೈಲ ಶೌಚಾಲಯ ವ್ಯವಸ್ಥೆ ಮಾಡಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ 15 ಕ್ಕೂ ಹೆಚ್ಚು ಕಲಾ ತಂಡಗಳು ಪಾಲ್ಗೊಂಡು ಉತ್ಸವದ ಮೆರಗು ಹೆಚ್ಚಿಸಲಿದೆ. ಗ್ರಾಮದ ಸುಮಂಗಲೆಯರು ಕುಂಭ ಮೇಳ, ಜಾನಪದ ಹಾಡುಗಳ ಡಾಲ್ಬಿ ವ್ಯವಸ್ಥೆಗೆ ಯುವಕರು ಹೆಜ್ಜೆ ಹಾಕಲಿದ್ದಾರೆ. ವಸ್ತು ಪ್ರದರ್ಶನ ಮಳಿಗೆಯಲ್ಲಿ ಮಹಿಳಾ ಮತ್ತು ಸ್ವಸಹಾಯ ಸಂಘಗಳ, ವಾಣಿಜ್ಯ ಮಳಿಗೆ, ವಾರ್ತಾ ಮತ್ತು ಪ್ರಚಾರ ಇಲಾಖೆ ಸೇರಿ 50ಕ್ಕೂ ಹೆಚ್ಚು ಸ್ಟಾಲಗಳನ್ನು ಅಳವಡಿಸಲಾಗಿದೆ.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಜ.12 ರಂದು ಮುಂಜಾನೆ 6 ಕ್ಕೆ ಪ್ರಾಥಕಾಲದಲ್ಲಿ ರಾಯಣ್ಣನ ಮೂರ್ತಿಗೆ ಪೂಜೆ, 9 ಕ್ಕೆ ಕಿತ್ತೂರ ಸಂಸ್ಥಾನದ ಧ್ವಜಾರೋಹಣ, 10 ಕ್ಕೆ ಶೂರ ಸಂಗೊಳ್ಳಿ ರಾಯಣ್ಣ ಜ್ಯೋತಿಯನ್ನು ಶಾಸಕ ಮಹಾಂತೇಶ ಕೌಜಲಗಿ ಬರಮಾಡಿಕೊಳ್ಳುವರು. 10.15ಕ್ಕೆ ಜಾನಪದ ಕಲಾವಾಹಿನಿಯನ್ನು ಸಂಸದ ಜಗದೀಶ ಶೆಟ್ಟರ ಉದ್ಘಾಟಿಸಲಿದ್ದಾರೆ. 11ಕ್ಕೆ ಕಿತ್ತೂರು ಶಾಸಕ ಬಾಬಾಸಾಹೇಬ ಪಾಟೀಲ ವಸ್ತು ಪ್ರದರ್ಶನ ಉದ್ಘಾಟಿಸಲಿದ್ದಾರೆ.

ರಾತ್ರಿ 8ಕ್ಕೆ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ ಸಂಗೊಳ್ಳಿಯ ಗುರು ಸಿದ್ದಲಿಂಗೇಶ್ವರ ಸಂಸ್ಥಾನ ಹಿರೇಮಠದ ಗುರುಲಿಂಗ ಶಿವಾಚಾರ್ಯ ಸ್ವಾಮೀಜಿ, ಚನ್ನಮ್ಮನ ಕಿತ್ತೂರ ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ ಸಾನಿಧ್ಯವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಉದ್ಘಾಟಿಸಲಿದ್ದಾರೆ. ಮುಖ್ಯಅತಿಥಿಗಳಾಗಿ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ, ಶಿವರಾಜ ತಂಗಡಗಿ ಆಗಮಿಸಲಿದ್ದಾರೆ. ಶಾಸಕ ಮಹಾಂತೇಶ ಕೌಜಲಗಿ ಅಧ್ಯಕ್ಷತೆವಹಿಸಲಿದ್ದಾರೆ. ವಿಶೇಷ ಆಮಂತ್ರಿತರಾಗಿ ಜಿಲ್ಲೆಯ ಶಾಸಕರು, ಸಂಸದರು, ವಿಧಾನ ಪರಿಷತ್ ಸದಸ್ಯರು, ಗ್ರಾ.ಪಂ. ಅಧ್ಯಕ್ಷರು ಆಗಮಿಸಲಿದ್ದಾರೆ. ರಾತ್ರಿ 9 ಕ್ಕೆ ವೀರರ ಸ್ಮರಣೆಗಾಗಿ ದೀಪೋತ್ಸವವನ್ನು ಗ್ರಾ.ಪಂ.ಸದಸ್ಯರು ಉದ್ಘಾಟಿಸಲಿದ್ದಾರೆ. ನಂತರ ವಿವಿದ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಸಂಗೊಳ್ಳಿ ಉತ್ಸವದ ಮುಖ್ಯ ವೇದಿಕೆ, ಸಂಗೊಳ್ಳಿ ಉತ್ಸವದ ಉದ್ಘಾಟನೆಗೆ ಸಜ್ಜಾಗಿರುವ ಬೃಹತ್ ಶ್ಯಾಮಿಯಾನ್

10 ಸಾವಿರ ಆಸನಗಳ ವ್ಯವಸ್ಥೆ

10 ಸಾವಿರ ಆಸನಗಳ ವ್ಯವಸ್ಥೆ ಮಾಡಲಾಗಿದೆ. ಸ್ಟೇಜ ಮೇಲೆ ಲೇಡ ಬ್ಯಾಕ ಡ್ರಾಪ ಅಳವಡಿಸಾಗಿದೆ. ಸ್ಟೇಜ ಹೊರಗಡೆ ನಿಂತು ನೋಡುವ ಜನತೆಗೆ 6-8 ಸೈಜಿನ ನಾಲ್ಕು ಸ್ಕ್ರೀನಗಳನ್ನು ಅಳವಡಿಸಲಾಗಿದೆ.

ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ

ಗೋಕಾಕ: ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದ್ದು, ಪಾಲಕರು ತಮ್ಮ ಮಕ್ಕಳ ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುವಂತೆ ವಿಧಾನ ಪರಿಷತ ಸದಸ್ಯ ಹಾಗೂ ಮಯೂರ ಆಂಗ್ಲ ಮಾಧ್ಯಮ ಶಾಲೆಯ ಅಧ್ಯಕ್ಷ ಲಖನ ಜಾರಕಿಹೊಳಿ ಹೇಳಿದರು.

ಅವರು, ಶುಕ್ರವಾರದಂದು ನಗರದ ಮಯೂರ ಆಂಗ್ಲ ಮಾಧ್ಯಮ ಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿ ಮಾತನಾಡಿ, ಸೇವಾ ಮನೋಭಾವದಿಂದ ಸಾಮಾಜಿಕ ಕಳಕಳಿಯೊಂದಿಗೆ ಈ ಭಾಗದ ಮಕ್ಕಳಿಗೆ ಗುಣ ಮಟ್ಟದ ಶಿಕ್ಷಣದೊಂದಿಗೆ ಅವರ ಜ್ಞಾನ ಮಟ್ಟ ವಿಕಾಸಕ್ಕೆ ಎಲ್ಲ ರೀತಿಯ ಸೌಲಭ್ಯಗಳೊಂದಿಗೆ ಸಂಸ್ಥೆ ಕಾರ್ಯನಿರ್ವಹಿಸುತ್ತಿದ್ದು ಪಾಲಕರು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳುವಂತೆ ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಇಲ್ಲಿಯ ಕ್ಷೇತ್ರ ಶಿಕ್ಷಣಾಧಿಕಾರಿ ಜಿ ಬಿ ಬಳಗಾರ ಮಾತನಾಡಿ, ಪಾಲಕರು ತಮ್ಮ ಮಕ್ಕಳಿಗೆ ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರ ನೀಡಿ ಅವರನ್ನು ಮೌಲ್ಯಯುತ ಆಸ್ತಿಯನ್ನಾಗಿ ಮಾಡುವಂತೆ ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗೌರವಿಸಿ ಸತ್ಕರಿಸಲಾಯಿತು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ವೇದಿಕೆಯ ಮೇಲೆ ಅತಿಥಿ ಮೂಡಲಗಿ ಕ್ಷೇತ್ರ ಶಿಕ್ಷಣಾಧಿಕಾರಿ ಅಜೀತ ಮನ್ನಿಕೇರಿ, ಸಂಸ್ಥೆಯ ಉಪಾಧ್ಯಕ್ಷೆ ಶ್ರೀಮತಿ ಸಂಧ್ಯಾ ಲಖನ ಜಾರಕಿಹೊಳಿ, ಕಾರ್ಯದರ್ಶಿ ಸದಾನಂದ ಕಲಾಲ, ನಿರ್ದೇಶಕ ವಿನಾಯಕ ಚಿಪ್ಪಲಕಟ್ಟಿ, ಆಡಳಿತಾಧಿಕಾರಿ ಎಸ್ ಡಿ ಮುರಗೋಡ, ಮುಖ್ಯೋಪಾಧ್ಯಾಯನಿ ಸುಚಿತ್ರಾ ಹತಪಾಕಿ ಹಾಗೂ ಮತ್ತಿತರರು ಇದ್ದರು.

ಗೋಕಾಕ ನಗರದ ಮಯೂರ ಆಂಗ್ಲ ಮಾಧ್ಯಮ ಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಸ್ಮರಣ ಸಂಚಿಕೆ ಬಿಡುಗಡೆಗೊಳಿಸುತ್ತಿರುವದು.

ಜನವರಿ 12, 13 ರಂದು ನಡೆಯುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಉತ್ಸವದ ಅಂಗವಾಗಿ ಜಿಲ್ಲಾ ಆಡಳಿತ ಹೊರಡಿಸಿರುವ ರಾಯಣ್ಣ ಜ್ಯೋತಿ ಯಾತ್ರೆ, ಚನ್ನಮ್ಮನ ಕಿತ್ತೂರು ಪಟ್ಟಣಕ್ಕೆ ಆಗಮಿಸಿದಾಗ ತಹಶೀಲ್ದಾರ್ ರವೀಂದ್ರ ಹಾದಿಮನಿ ನೇತೃತ್ವದಲ್ಲಿ ಬರಮಾಡಿಕೊಂಡು ಗೌರವ ಸಲ್ಲಿಸಿದರು. ಪಟ್ಟಣದ ಗುರುವಾರ ಪೇಟೆಯಲ್ಲಿ ಸಾಗಿದ ಜ್ಯೋತಿಯಾತ್ರೆಯು ಸಂಗೊಳ್ಳಿ ಸೈನಿಕ ಶಾಲೆ ಕಡೆಗೆ ತೆರಳಿತು. ಬಿಇಒ ಚನಬಸಪ್ಪ ತುಬಾರದ, ಪಿಎಸ್ಐ ಪ್ರವೀಣ ಕೋಟಿ, ಕ್ಯೂರೇಟರ್ ರಾಘವೇಂದ್ರ, ಶಿಕ್ಷಕರಾದ ಬಸವರಾಜ ಬಿದರಿ, ಪಟ್ಟಣ ಪಂಚಾಯಿತಿ ಸಿಬ್ಬಂದಿಗಳು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಇದ್ದರು.

ಅನುದಾನ ಬಿಡುಗಡೆಯಿಂದ ಕ್ಷೇತ್ರದ ಅಭಿವೃದ್ಧಿ ಸಾಧ್ಯ

ಹುಕ್ಕೇರಿ: ಗ್ರಾಮಗಳಲ್ಲಿ ಸಾರ್ವಜನಿಕರ ಸಮಸ್ಯೆಗಳ ಗಮನ ಹರಿಸುವುದಕ್ಕಾಗಿ ಕ್ಷೇತ್ರದಲ್ಲಿ ಗ್ರಾಮಗಳ ಸಭೆಯನ್ನು ಮಾಡಲಾಗುತ್ತಿದೆ. ಸಾರ್ವಜನಿಕರು ತಮಗಲ್ಲಿರುವ ಸಮಸ್ಯೆಗಳನ್ನು ತಿಳಿಸಿದಲ್ಲಿ ಮಾತ್ರ ಪರಿಹರಿಸಲು ಅನೂಕೂಲವಾಗುತ್ತಿದೆ ಎಂದು ಶಾಸಕ ನಿಖಿಲ ಕತ್ತಿ ಹೇಳಿದರು.

ಅವರು ತಾಲೂಕಿನ ಹೊಸೂರು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಹುನ್ನೂರು ಹೊಸೂರ ಇಂಗಳಿ ನಿರ್ವಹನಹಟ್ಟಿ ಗ್ರಾಮಗಳಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಿ ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯಾ ಸರಕಾರದ ಪಂಚ ಗ್ಯಾರಂಟಿ ಯೋಜನೆಯಿಂದ ರಾಜ್ಯ, ಜಿಲ್ಲೆ, ತಾಲೂಕಿನ ಅಭಿವೃದ್ದಿಗಳಿಗೆ ಮಾರಕವಾಗಿದೆ. ಸರಕಾರದಿಂದ ಅನುದಾನ ಬಿಡುಗಡೆ ಮಾಡಿದಲ್ಲಿ ಮಾತ್ರ ಕ್ಷೇತ್ರ ಅಭಿವೃದ್ದಿ ಸಾಧ್ಯವಾಗುತ್ತಿದೆ. ಕಳೆದ ಅಧಿವೇಶನದಲ್ಲಿ ಕ್ಷೇತ್ರದದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಬೇಕಾಗುವ ಅನುದಾನದ ಕುರಿತು ಚರ್ಚಿಸಲಾಗಿದೆ. ಮುಖ್ಯಮಂತ್ರಿಗಳು ಅನುದಾನದ ಬಿಡಗಡೆ ಭರವಸೆ ನೀಡಿದ್ದಾರೆ. ಅನುದಾನ ಬಿಡಗಡೆ ಮಾಡಿದಲ್ಲಿ ಅಭಿವೃದ್ದಿಗೆ ಅನೂಕೂಲವಾಗುತ್ತದೆ ಎಂದು ಹೇಳಿದರು.

ತಾಲೂಕಿನ ಹುಕ್ಕೇರಿ ತಹಶೀಲ್ದಾರ, ಕಚೇರಿ, ನೊಂದಣಿ ಅಧಿಕಾರಿ, ಆಹಾರ ಇಲಾಖೆ ಭೂ ದಾಖಲೆಗಳ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಅಧಿಕಾರಿಗಳ ಲಂಚದ ಹಾವಳಿ ಹೆಚ್ಚಾಗಿದೆ. ಕಾಸು ಕೊಟ್ಟರೆ ಮಾತ್ರ ಜನರ ಕೆಲಸ ಈ ಕುರಿತು ಶಾಸಕ ಗಮನ ಹರಿಸಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಬೇಕೆಂದು ಸಾರ್ವಜನಿಕರು ತಮ್ಮ ಅಳಲನ್ನು ತೋಡಿಕೊಂಡರು.

ತಾಲೂಕಿನ ಹುನ್ನೂರು ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ 108 ವಿದ್ಯಾರ್ಥಿಗಳಿದ್ದಾರೆ. ಇದ್ದು ಕಳೆದ ಹತ್ತು ವರ್ಷಗಳಿಂದ ಶಾಲಾ ಮಕ್ಕಳು ಆಟವಾಡಲು ಸರಕಾರದಿಂದ ಆಟಿಕೆ ಸಮಾಗ್ರಿ ವಿತರಿಸಿಲ್ಲ. ಎಂದು ಗ್ರಾಮಸ್ಥರಾದ ಬಾಳಪ್ಪ ಗಸ್ತಿ ಸಿಂಗಾಡಿ ಪೂಜಾರಿ,ವಿಠ್ಠಲ ಭಂತಿ, ಮಾಯಪ್ಪ ಪೂಜರಿ ಅವರು ಶಾಸಕರು ಅಧಿಕಾರಿಳಿಗೆ ತಿಳಿಸಿ ಆಡಿಕೆ ಸಾಮಗ್ರಿಗಳನ್ನು ವಿತರಿಸಬೇಕೆಂದು ವಿನಂತಿಸಿದರು.

ಮಾಜಿ ಸಚಿವ ಶಶಾಂಕ್ ನಾಯಕ ಮಾತನಾಡಿ ಪಕ್ಷಾತೀತವಾಗಿ ಕೆಲಸ ಮಾಡಿದ್ದಾಗ ಮಾತ್ರ ಅಭಿವೃದ್ದಿ ಸಾಧ್ಯ ದೂರದ ತಾಲೂಕ ಕ್ಷೇತ್ರಗಳಿಗೆ ಜನರು ಹೋಗಿ ಕೆಲಸ ಮಾಡಿಕೊಳ್ಳುವುದು ಕಷ್ಟವಾಗುತ್ತದೆ. ಶಾಸಕ ನಿಖಿಲ ಕತ್ತಿಯವರು ಅಧಿಕಾರಿಗಳೊಂದಿಗೆ ಆಯಾ ಗ್ರಾಮಗಳಿಗೆ ಹೋಗಿ ಸಾರ್ವಜನಿಕ ಕುಂದು ಕೊರತೆಗಳ ವಿಚಾರಿಸಿ ಸಮಸ್ಯೆ ಪರಿಹರಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ಗುತ್ತಿಗೆದಾರ ಬಸವರಾಜ ಮಟಗಾರ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಂಘದ ಅಧ್ಯಕ್ಷ ಕಲಗೌಡ ಪಾಟೀಲ ಬಿಜೆಪಿ ಜಿ ಪಂ ಸದಸ್ಯ ಭೀಮಣ್ಣಾ ರಾಮಗೋನಹಟ್ಟಿ ಬಿ.ಬಿ ಪಾಟೀಲ, ಬಾಹುಬಲಿ ನಾಗನೂರಿ ಅಶೋಕ ಅಕ್ಕತಂಗೇರಹಾಳ, ಉಪಸ್ಥಿತರಿದರು.



ಹುಕ್ಕೇರಿ ತಾಲೂಕಿನ ಹೊಸೂರ ಗ್ರಾಮದಲ್ಲಿ ಸಾರ್ವಜನಿಕರ ಸಮಸ್ಯೆ ಆಲಿಸುತ್ತಿರುವ ಶಾಸಕ ನಿಖಿಲ ಕತ್ತಿ.

ನಂದಿ ಕೂಗೂ, ರೈತ ಜಾತ್ರೆ ಜ.20ಕ್ಕೆ

ಮೂಡಲಗಿ: ಜೋಡೆತ್ತಿನ ಕೃಷಿ ಪುನಶ್ಚತನಕ್ಕಾಗಿ ಬಹು ಜನರ ಧ್ವನಿ ಕ್ರೋಢೀಕರಿಸುವ ಉದ್ದೇಶದಿಂದ ತಾಲೂಕಿನ ಯಾದವಾಡ ಗ್ರಾಮದಲ್ಲಿ ಘಟ್ಟಿಗಿ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ತಾಲೂಕಾ ಮಟ್ಟದ ''ನಂದಿ ಕೂಗೂ'' ಹಾಗೂ ರೈತ ಜಾತ್ರಾ ಕಾರ್ಯಕ್ರಮವನ್ನು ಜ. 20 ರಂದು ಆಯೋಜಿಸಲಾಗಿದೆ ಎಂದು ನಮ್ಮ ಕರವೇ ಸಂಸ್ಥಾಪಕ ಯಾದವಾಡದ ಕಲ್ಮೇಶ ಗಾಣಿಗಿ ಹೇಳಿದರು.

ಶನಿವಾರದಂದು ಪಟ್ಟಣದ ಪತ್ರಿಕಾ ಕಾರ್ಯಾಲದಲ್ಲಿ ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ''ನಂದಿ ಕೂಗೂ'' ಹಾಗೂ ರೈತ ಜಾತ್ರಾ ಕಾರ್ಯವನ್ನು ಬಿಜ್ಜರಗಿಯ ಸಿದ್ದೇಶ್ವರ ಪುಣ್ಯಾಶ್ರಮದ ಸಂಯುಕ್ತ ಆಶ್ರಯದೊಂದಿಗೆ ಆಯೋಜನೆ ಮಾಡಲಾಗಿದ್ದು, ಕೃಷಿ ಮೇಳ ಹಾಗೂ ವಸ್ತು ಪ್ರದರ್ಶನ ಮತ್ತು ಜ.20ದು ಬೆಳಿಗ್ಗ 9ಕ್ಕೆ ಗೋ ಪೂಜೆ, 10 ಗಟೆಯಿಂದ ಕೃಷಿ ತಜ್ಞರಿಂದ ರೈತರೊಂದಿಗೆ ಸಂವಾದ, ಮಧ್ಯಹ್ನ 1 ಗಂಟೆಗೆ ಮಹಾಪ್ರಸಾದ, 3 ಗಂಟೆಗೆ ಸಕಲ ವಾದ್ಯ ಮೇಳಗಳೊಂದಿಗೆ ಶ್ರೀಬಸವೇಶ್ವರ ವೃತ್ತದಿಂದ ಶ್ರೀಘಟ್ಟಿಗಿ ಬಸವೇಶ್ವರ ದೇವಸ್ಥಾನದವರಿಗೆ ಶ್ರೀಗಳ ಮತ್ತು ಗೋವುಗಳು-ನಂದಿಗಳ ಭವ್ಯ ಮೆರವಣಿಗೆ ಜರುಗುವುದು. ಸಂಜೆ 5 ಗಂಟೆಗೆ ಶ್ರೀಗಳಿಂದ ಗೋ ರಕ್ಷಣೆ ಉಳುವಿಗಾಗಿ ಆಶೀರ್ವಚನ, ರಾತ್ರಿ 9ಕ್ಕೆ ರೈತ ಮಿತ್ರ ಸಮಾಜಿಕ ಕಿರು ನಾಟಕ ಜರಗುವುದು ಎಂದರು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಕೊಲ್ಹಾಪುರದ ಕನ್ನೇರಿ ಮಠದ ಅದೃಷ್ಯ ಕಾಡಸಿದ್ದೇಶ್ವರ ಮಹಾಸ್ವಾಮಿಗಳು ವಹಿಸುವವರು, ಸಾನ್ನಿಧ್ಯವನ್ನು ಶಿರೋಳದ ರಾಮಾರೊಢ ಮಠದ ಶಂಕರಾರೂಢ ಮಹಾಸ್ವಾಮಿಜಿ, ಯಾದವಾಡದ ಪಟ್ಟದ ದೇವರು ವಿಜಯಸಿದ್ದೇಶ್ವರ ಮಹಾಸ್ವಾಮೀಜಿ, ಯಾದವಾಡ-ಮಾನೋಮಿಯ ಮಾಳಿಂಗೇಶ್ವರ ಆಶ್ರಮದ ಸಿದ್ದೇಶ್ವರ ಸ್ವಾಮೀಜಿಗಳು ವಹಿಸುವರು.

ಅಂತಾರಾಷ್ಟ್ರೀಯ ಹಸಿರು ಪರಿಸರ ವಿಜ್ಞಾನಿ ಹಾಗೂ ಗ್ಲೋಬಲ್ ಗ್ರೀನ್ ಗ್ರೋಥ್‌ದ ಅಧ್ಯಕ್ಷ ಡಾ. ಚಂದ್ರಶೇಖರ ಬಿರಾದಾರ್, ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಸಾವಯುವ ಕೃಷಿ ಸಂಸ್ಥೆ ಸಂಶೋಧನಾ ನಿರ್ದೇಶನಾಲಯದ ಮುಖ್ಯಸ್ಥ ಡಾ. ಶ್ರೀಪಾದ ಕುಲಕರ್ಣಿ ಅವರು ಉಪನ್ಯಾಸ ನೀಡುವರು. ಕಾರ್ಯಕ್ರಮದಲ್ಲಿ ಭಾಗವಹಿಸುವವರು.

ಜ. 20ರಂದು ಮಧ್ಯಾಹ್ನ 3 ಗಂಟೆಗೆ ಶ್ರೀಗಳ ಜೊತೆಗೆ ಆಕಳುಗಳು ಹಾಗೂ ವಿವಿಧ ಜಿಲ್ಲೆಗಳಿಂದ 250 ಜೋಡೆತ್ತುಗಳ ಭವ್ಯ ಮೆರವಣಿಗೆ ಜರಗುವುದು. ಈ ''ನಂದಿ ಕೂಗೂ'' ಹಾಗೂ ರೈತ ಜಾತ್ರಾಯ ತಾಲೂಕಿನ ಮತ್ತು ಸುತ್ತಮುತ್ತಲಿನ ಗ್ರಾಮಗಳ ರೈತ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದರು. ಈ ಸಂದರ್ಭದಲ್ಲಿ ರೈತ ಮುಖಂಡರಾದ ಹಣಮಂತ ಅಮಲಝುರಿ, ಗುರುನಾಥ ರಾಮದುರ್ಗ ಇದ್ದರು.

ನಂದಿ ಕೂಗೂ ಹಾಗೂ ರೈತ ಜಾತ್ರಾ ಕಾರ್ಯಕ್ರಮದ ಪ್ರಚಾರ ಪತ್ರಿಕೆಗಳನ್ನು ನಮ್ಮ ಕರವೇ ಸಂಸ್ಥಾಪಕ ಕಲ್ಮೇಶ ಗಾಣಿಗಿ ಅವರು ಬಿಡುಗಡೆಗೋಳಿಸಿದರು.

ದೇಶಕ್ಕಾಗಿ ಹೋರಾಡಿದ ವೀರರ ಸ್ಮರಣೆ ಅತ್ಯವಶ್ಯ

ಬೈಲಹೊಂಗಲ: ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ತನ್ನ ಪ್ರಾಣವನ್ನೇ ಬಲಿದಾನಗೈದ ವೀರರ ಸ್ಮರಣೆ ಇಂದು ಅತ್ಯವಶ್ಯವಾಗಿದೆ ಎಂದು ಶಾಸಕ ಮಹಾಂತೇಶ ಕೌಜಲಗಿ ಹೇಳಿದರು.

ಪಟ್ಟಣದಲ್ಲಿ ವೀರರಾಣಿ ಕಿತ್ತೂರು ಚನ್ನಮ್ಮನ ಸಮಾಧಿ ಸ್ಥಳದಲ್ಲಿ ಬೆಳಗಾವಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಉತ್ಸವ-2025ರ ರಾಯಣ್ಣನ ಜ್ಯೋತಿ ಯಾತ್ರೆಯನ್ನು ಪೂಜೆ ಸಲ್ಲಿಸಿ ಬಿಳ್ಕೋಟ್ಟು ಅವರು ಮಾತನಾಡಿದರು.

ಕಿತ್ತೂರು ನಾಡನ್ನು ಜಗತ್ತಿಗೆ ಪರಿಚಯಿಸಿದ ಕೀರ್ತಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ವೀರಕೇಸರಿ ಅಮಟೂರು ಬಾಳಪ್ಪನಿಗೆ ಸಲ್ಲುತ್ತದೆ. ನಾಡಿಗೆ ಅವರೆಲ್ಲರ ಕೊಡುಗೆ ಅಪಾರವಿದೆ. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ನೆನಪು ಶಾಶ್ವತವಾಗಿ ಉಳಿಯಬೇಕಾದರೆ ಆತನ ಶೌರ್ಯ, ಸಾಹಸ, ದೇಶ ಪ್ರೇಮ, ಕೆಚ್ಚು, ಪರಾಕ್ರಮ ಬಗ್ಗೆ ಮಕ್ಕಳಿಗೆ ತಿಳಿಸಿ ಕೊಡುವುದು ಅತ್ಯವಶ್ಯವಾಗಿದೆ. ಉತ್ಸವಗಳು ಸರಕಾರಿ ಉತ್ಸವಗಳಾದೆ ಜನೋತ್ಸವವಾಗಬೇಕು. ಸರಕಾರದ ಪರವಾಗಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ರಾಯಣ್ಣನ ಉತ್ಸವವನ್ನು ಅದ್ದೂರಿ ಆಚರಣೆಗೆ ಸಕಲ ಸಿದ್ದತೆ ಮಾಡಿಕೊಂಡಿದೆ. ಉತ್ಸವದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಪಾಲ್ಗೊಂಡು ಉತ್ಸವ ಯಶಸ್ವಿಗೆ ಶ್ರಮಿಸಬೇಕೆಂದರು.

ತಹಶೀಲ್ದಾರ ಎಚ್.ಎನ್.ಶಿರಹಟ್ಟಿ, ಮುಖ್ಯಾಧಿಕಾರಿ ವಿರೇಶ ಹಸಬಿ, ಬಿಇ ಎ.ಎನ್.ಪ್ಯಾಟಿ, ಪಿಎಸ್ಐ ಎಫ್.ವೈ.ಮಲ್ಲೂರ, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷೆ ಹೇಮಲತಾ ಹಿರೇಮಠ, ಮಹಾಂತೇಶ ಕಳ್ಳಿಬಡ್ಡಿ, ಅನಿಲ ಮ್ಯಾಕಲಮರಡಿ, ಕುಮಾರ ದಳವಾಯಿ, ಲಕ್ಷ್ಮಣ ಸೋಮನಟ್ಟಿ, ಪುರಸಭೆ, ಕಂದಾಯ ಇಲಾಖೆ ಸಿಬ್ಬಂದಿ, ಸಾರ್ವಜನಿಕರು, ವಿದ್ಯಾರ್ಥಿಗಳು ಇದ್ದರು.

ಚನ್ನಮ್ಮನ ಸಮಾಧಿ ಸ್ಥಳದಿಂದ ಸಕಲ ವಾದ್ಯಮೇಳಗಳೊಂದಿಗೆ ಆರಂಭವಾದ ಜ್ಯೋತಿ ಯಾತ್ರೆ ರಾಯಣ್ಣ ವೃತ್ತ ಮಾರ್ಗವಾಗಿ ಸಂಗೊಳ್ಳಿ ಗ್ರಾಮಕ್ಕೆ ತೆರಳಿತು.



ಚನ್ನಮ್ಮನ ಸಮಾಧಿ ಸ್ಥಳದಲ್ಲಿ ಶಾಸಕ ಮಹಾಂತೇಶ ಕೌಜಲಗಿ ಅವರು ರಾಯಣ್ಣನ ಜ್ಯೋತಿ ಸ್ವಾಗತಿಸಿ ಸಂಗೊಳ್ಳಿಗೆ ಬಿಳ್ಕೋಡಲಾಯಿತು.

ಗೋಕಾಕ ನಗರದ ಕೆಎಲ್ಇ ಅಂಗ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ತ್ಯಾಗವೀರ ಶಿರಸಂಗಿ ಲಿಂಗರಾಜರ 164ನೇ ಜಯಂತೋತ್ಸವವನ್ನು ಶುಕ್ರವಾರದಂದು ಆಚರಿಸಲಾಯಿತು. ಈ ಸಂದರ್ಭದಲ್ಲಿ ಕೆಎಲ್ಇ ನಿರ್ದೇಶಕ ಜಯಾನಂದ ಮುನವಳ್ಳಿ, ಸ್ಥಳೀಯ ಆಡಳಿತ ಮಂಡಳಿಯ ಎಮ್ ಡಿ ಚುನಮರಿ, ಪ್ರೊ.ಚಂದ್ರಶೇಖರ ಅಕ್ಕಿ ಹಾಗೂ ಅಂಗ ಸಂಸ್ಥೆಗಳ ಮುಖ್ಯಸ್ಥರು ಇದ್ದರು.

ದತ್ತಿ ದಾನಿಗಳಿಂದಾಗಿ ಅರ್ಥಪೂರ್ಣ ಕಾರ್ಯಕ್ರಮ

ಬೆಳಗಾವಿ: ದತ್ತಿ ದಾನಿಗಳಿಂದಾಗಿ ಸಾಹಿತ್ಯದ ಕಾರ್ಯಕ್ರಮಗಳು ಸತತವಾಗಿ ಹಾಗೂ ಅರ್ಥಪೂರ್ಣವಾಗಿ ನಡೆಯುವಂತಾಗಿದೆ ಎಂದು ಸುಮಾ ಕಿತ್ತೂರ ಅವರು ಹೇಳಿದರು. ನಗರದ ಸಾಹಿತ್ಯ ಭವನದಲ್ಲಿ ಆಯೋಜಿಸಲಾದ ಬೆಳಗಾವಿ ಜಿಲ್ಲಾ ಲೇಖಕಿಯರ ಸಂಘದ ದತ್ತಿನಿಧಿ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮಹಿಳಾ ಸಂಘಟನೆಗಳು ಬಲವರ್ಧನೆಗೊಂಡಾಗ ಕಾರ್ಯಕ್ರಮಗಳು ಸುಸಜ್ಜಿತವಾಗಿ ನಡೆಸಲು ಸಾಧ್ಯವಾಗಲಿವೆ. ಮಹಿಳೆಯರಿಗೆ ಆತ್ಮಸ್ಥೈರ್ಯ ಹೆಚ್ಚಿಸಲು ಅನುಕೂಲವಾಗಲಿದೆ ಎಂದರು. ದತ್ತಿದಾನಿಗಳಾದ ರತ್ನಪ್ರಭಾ ಬೆಲ್ಲದ, ರಾಜನಂದಾ ಗಾರ್ಗಿ ಮಾತನಾಡಿ ತಮ್ಮ ಹಿರಿಯರ ಸ್ಮರಣೆಗೆ ಈ ಕಾರ್ಯಕ್ರಮ ಒಂದು ಉತ್ತಮ ವೇದಿಕೆಯಾಗಿದೆ ಎಂದರು. ಈ ವೇಳೆ ಕಥಾಕಥನ ಸಂಘದ 15 ಕ್ಕೂ ಹೆಚ್ಚು ಸದಸ್ಯೆಯರು ಭಾಗವಹಿಸಿ ಸ್ಥಳದಲ್ಲಿಯೆ ಕಥೆ ರಚನೆ ಮಾಡಿ ವಾಚಿಸಿದರು. ಸಂಘದ ಉಪಾಧ್ಯಕ್ಷೇ ವಾಸಂತಿ ಮೇಳೆದ ಸ್ವಾಗತಿಸಿದರು. ಲಲಿತಾ ಪರ್ವತರಾವ್ ಹಾಗೂ ಸಂಗಡಿಗರು ನಾಡಗೀತೆ ಹಾಡಿದರು. ಹಿರಿಯ ಸದಸ್ಯರಾದ ಪ್ರೇಮಾ ತಹಶೀಲ್ದಾರ್, ಲಲಿತಾ ಕೋಪರ್ಡೆ, ನೀಲಗಂಗಾ ಚರಂತಿಮಠ,ಹೇಮಾ ಸುನೋಳ್ಳಿ, ಡಾ.ಆಶಾ ನಾಯಕ,ಜ್ಯೋತಿ ಬದಾಮಿ,ಜಯಶೀಲಾ ಬ್ಯಾಕೋಡ,ಸುನಂದಾ ಹಾಲಬಾವಿ, ಲಲಿತಾ, ಅನ್ನಪೂರ್ಣ,ಸುನೀತಾ,ಮಮತಾ,ಇಂದಿರಾ, ಪ್ರಧಾನ ಕಾರ್ಯದರ್ಶಿ ಆಶಾ ಯಮಕನಮರಡಿ ಕಾರ್ಯಕ್ರಮ ಕುರಿತು ಪ್ರಾಸ್ತಾವಿಕ ಮಾತನಾಡಿ, ನಿರೂಪಿಸಿದರು. ಸುಪ್ರೀಯಾ ದೇಶಪಾಂಡೆ ವಂದಿಸಿದರು.

ಡಿಕೆಶಿ ಮುಂದಿನ ಸಿಎಂ: ವಿನಯ್ ಗುರೂಜಿ

ಹುಕ್ಕೇರಿ: ನೇರ ನಡೆ ನುಡಿಯ ವ್ಯಕ್ತಿತ್ವ, ಗುರು ಹಿರಿಯರ ಬಗ್ಗೆ ಅಪಾರ ಗೌರವ ಮತ್ತು ಪಕ್ಷ ನಿಷ್ಠೆ ಇರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ರಾಜ್ಯದ ಮುಖ್ಯಮಂತ್ರಿ ಆಗುವುದು ನಿಶ್ಚಿತ ಎಂದು ಚಿಕ್ಕಮಗಳೂರಿನ ಗೌರಿಗದ್ದೆಯ ವಿನಯ ಗುರೂಜಿ ಹೇಳಿದರು. ಪಟ್ಟಣದ ಹಿರೇಮಠದ ಗುರುಶಾಂತೇಶ್ವರ ಶಿಕ್ಷಣ ಸಮೂಹ ಸಂಸ್ಥೆಯ ಹುಕ್ಕೇರಿಶರ ಉತ್ಸವ-2025 ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಉತ್ತರ ಕರ್ನಾಟಕ ಆಚಾರ ವಿಚಾರಗಳ ಸಂಸ್ಕೃತಿಯಲ್ಲಿ ಹೆಸರಾಗಿದೆ. ಈ ಮಣ್ಣಿನ ಗುಣ ಎಲ್ಲರನ್ನೂ ಪ್ರೀತಿಸುವ ಮನೋಭಾವದ ಜನರದ್ದಾಗಿದೆ. ಹುಕ್ಕೇರಿ ಹಿರೇಮಠದ ಚಂದ್ರಶೇಖರ ತಾಯ್ತನದ ಮನಸ್ಸು ಜಗತ್ತಿನ ಜನರನ್ನು ಸೆಳೆಯುತ್ತಿದೆ.ಅದರಿಂದ ದೇಶ ವಿದೇಶದ ಜನ ಸಹ ಹುಕ್ಕೇರಿ ಹಿರೇಮಠ ಎಂದ ತಕ್ಷಣ ಗೌರವಿಸುತ್ತಾರೆಂದರು. ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯರು ಸಾನಿಧ್ಯ ವಹಿಸಿ ಮಾತನಾಡಿ ಮಕ್ಕಳು ದೇವರ ಸಮಾನ, ದೇವರಂತಹ ಮನಸ್ಸುಳ್ಳ ಮಕ್ಕಳಲ್ಲಿ ಒಳ್ಳೆಯ ವಿಚಾರಗಳನ್ನು ನಾವೆಲ್ಲ ಬೆಳೆಸಬೇಕಾಗಿದೆ. ವಿದ್ಯೆ ಸಂಬಳಕ್ಕಾದರೆ, ಸಂಸ್ಕಾರ ಉತ್ತಮ ಭವಿಷ್ಯಕ್ಕೆ ಅಗತ್ಯವೆಂದರು.

ವಾರ್ಷಿಕ ಕ್ರೀಡಾಕೂಟ ವಿಜೇತರಿಗೆ ಬಹುಮಾನ ಹಾಗೂ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಕಾರ್ಯಕ್ರಮ ಜರುಗಿತು. ಇದೇ ಸಂದರ್ಭದಲ್ಲಿ ಆಗಮಿಸಿದ್ದ ಶ್ರೀಗಳು ಮತ್ತು ಅತಿಥಿಗಳನ್ನು ಸನ್ಮಾನಿಸಲಾಯಿತು.

ಮಹಾವೀರ ಉದ್ಯೋಗ ಸಮೂಹ ಸಂಸ್ಥೆ ಉಪಾಧ್ಯಕ್ಷ ಪ್ರಜ್ವಲ ನಿಲಜಗಿ, ತಹಸಿಲ್ದಾರ ಮಂಜುಳಾ ನಾಯಕ, ಬಿ.ಇ.ಒ ಪ್ರಭಾವತಿ ಪಾಟೀಲ, ಬಿಸಿಯೂಟ ಅಧಿಕಾರಿ ಸವಿತಾ ಹಲಕಿ, ಕ್ಷೇತ್ರ ಸಮನ್ವಯಾಧಿಕಾರಿ ಎ.ಎಸ್.ಪದ್ಮನ್ನವರ, ಸಿ.ಆರ್.ಪಿ ವಿನಾಯಕ ರಜಪೂತ, ನಿವೃತ್ತ ಪ್ರಾಚಾರ್ಯೆ ಸುಮಂಗಲಾ ಶಿಂತ್ರೆ, ಉಮೇಶ ಜಿನರಾಳಿ, ಸಂಪತ್ತುಕುಮಾರ ಶಾಸ್ತ್ರೀ, ಎಸ್.ಬಿ.ಜಿನರಾಳಿ, ಎಸ್.ಎಸ್.ಹಿರೇಮಠ ಮತ್ತಿತರರಿದ್ದರು.

ಹುಕ್ಕೇರೀಶರ ಉತ್ಸವ-2025 ಸಮಾರಂಭದಲ್ಲಿ ವಿನಯ ಗುರೂಜಿ, ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಜಿ. ಅಧಿಕಾರಿಗಳು, ವಿದ್ಯಾರ್ಥಿಗಳು.

ಮಕ್ಕಳಲ್ಲಿ ಒಳ್ಳೆಯ ಗುಣ, ಪ್ರಾಮಾಣಿಕತೆ ಬೆಳೆಯಬೇಕಾದರೆ ತಾಯಿಯ ಪಾತ್ರ ಹಿರಿದಾಗಿದೆ. ಪಾಲಕರ ನಡೆ ನುಡಿ ನೋಡಿ ಬೆಳೆಯುವ ಮಕ್ಕಳು ಸಂಸ್ಕಾರವಂತರಾಗಬೇಕಾದರೆ ಹಿರಿಯರಲ್ಲಿ ಒಳ್ಳೆಯ ಸಂಸ್ಕಾರ ಇರಬೇಕೆಂದರು.
ಡಾ.ತ್ರೀನೇತ್ರ ಮಹಾಂತ ಶಿವಯೋಗಿಶ್ರೀಗಳು,
ಶ್ರೀರಂಗಪಟ್ಟಣದ ಬೇಬಿಮಠ

ಎಸ್.ಆರ್. ಪೂಜಾರಗೆ ವಿದ್ಯಾಭೂಷಣ ಪ್ರಶಸ್ತಿ

ಕಾಗವಾಡ: ತಾಲೂಕಿನ ಶೇಡಬಾಳ ಪಟ್ಟಣದ ಸನ್ಮತಿ ವಿದ್ಯಾಲಯದ ಶಿಕ್ಷಕಿ ಶ್ರೀಮತಿ ಎಸ್.ಆರ್. ಪೂಜಾರ ಅವರಿಗೆ ರಾಷ್ಟ್ರ ಮಟ್ಟದ ವಿದ್ಯಾಭೂಷಣ ಪ್ರಶಸ್ತಿ ಲಭಿಸಿದೆ. ಸರಳ ಸಜ್ಜನಿಕೆಯ ಸಾಕಾರ ಮೂರ್ತಿಗಳಾದ ಶ್ರೀಮತಿ ಎಸ್.ಆರ್. ಪೂಜಾರ ಅವರು ಕಳೆದ ಹಲವಾರು ವರ್ಷಗಳಿಂದ ಸನ್ಮತಿ ವಿದ್ಯಾಲಯದಲ್ಲಿ ಹಿಂದಿ ಶಿಕ್ಷಕಿಯಾಗಿ ಕಾರ್ಯನಿರ್ವಹಸುತ್ತಿದ್ದು, ಇವರ ಅನುಪಮ ಸೇವೆಯನ್ನು ಗುರುತಿಸಿ, ಕಸ್ತೂರಿ ಸಿರಿಗನ್ನಡ ವೇದಿಕೆ ಬೆಳಗಾವಿ ಇವರು ಭಾಷಾ ಪ್ರೇಮ ಮತ್ತು ಸಾಧನೆ ಗುರುತಿಸಿ, ರಾಷ್ಟ್ರ ಮಟ್ಟದ ವಿದ್ಯಾಭೂಷಣ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಅದೇ ಪ್ರಕಾರ ಚಿಕ್ಕೋಡಿಯಲ್ಲಿ ಜರುಗಿದ ರಾಜ್ಯ ಸರಕಾರಿ ಪ್ರೌಢಶಾಲಾ ಹಿಂದಿ ಸಹ ಶಿಕ್ಷಕರ ಸಂಘ ಬೆಳಗಾವಿ ಇವರು ಶ್ರೀಮತಿ ಎಸ್.ಆರ್. ಪೂಜಾರ ಅವರಿಗೆ ಹಿಂದಿ ಸಾಧಕ ಸಮ್ಮಾನ ಎಂಬ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಶ್ರೀಮತಿ ಎಸ್. ಆರ್. ಪೂಜಾರ ಅವರು ಅವರು ಕಳೆದ ಹಲವಾರು ವರ್ಷಗಳಿಂದ ಕರ್ನಾಟಕ ಹಾಗೂ ಮಹಾರಾಷ್ಟ್ರದ ಗಡಿ ಭಾಗವಾದ ಶೇಡಬಾಳದಲ್ಲಿ ಹಿಂದಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಅವರ ಸಾಧನೆಯನ್ನು ಗುರುತಿಸಿ, ಈ ವರ್ಷ ಎರಡು ಪ್ರಶಸ್ತಿಗಳು ಸಿಕ್ಕಿದ್ದು, ಇವರಿಗೆ ಸನ್ಮತಿ ವಿದ್ಯಾಲಯದ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರು, ಸಹ ಶಿಕ್ಷಕರು ಮತ್ತು ಈ ಭಾಗದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳು ಹಾಗೂ ಶಿಕ್ಷಕರು ಮತ್ತು ಶಿಕ್ಷಣ ಪ್ರೇಮಿಗಳು ಮೆಚ್ಚುಗೆ ವ್ಯಕ್ತ ಪಡಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಗುರುವಂದನೆ, ಸ್ನೇಹ ಸಮ್ಮಿಲನ ಇಂದು

ಅಮೀನಗಡ: ಎಸ್‌ವಿವಿ ಸಂಘದ ಸಂಗಮೇಶ್ವರ ಸಂಯುಕ್ತ ಪಪೂ ಕಾಲೇಜ್‌ನ 1993-94ನೇ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಂದ ಜ.12 ರಂದು ಗುರುವಂದನೆ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮ ಆಯೋಜಿಸಲಾಗಿದೆ. ಪ್ರಭುಶಂಕರೇಶ್ವರ ಅನುಭವ ಮಂಟಪದಲ್ಲಿ ಬೆಳಗ್ಗೆ 10.30ಕ್ಕೆ ನಡೆಯುವ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಕೆ.ಎಂ.ಜಾನಕಿ ಉದ್ಘಾಟಿಸಲಿದ್ದು, ಪ್ರಭುಶಂಕರೇಶ್ವರ ಗಚ್ಚಿನಮಠದ ಶಂಕರರಾಜೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಅತಿಥಿಗಳಾಗಿ ಬಿಇಒ ಜಾಸ್ಮಿನ್ ಕಿಲ್ಲೇದಾರ, ಪಿಎಸ್‌ಐ ಜ್ಯೋತಿ ವಾಲೀಕಾರ ಆಗಮಿಸಲಿದ್ದಾರೆ. ಗುರುಗಳಾದ ಎಸ್.ಬಿ.ಪಾಟೀಲ, ಎಸ್.ಎಸ್.ಶಿರೋಳ, ಬಿ.ಬಿ.ಹೊಸಮನಿ, ಬಿ.ಬಿ.ತಿಪ್ಪಾಶೆಟ್ಟಿ, ವಿ.ಎಂ.ವಸ್ತ್ರದ, ಎಂ.ಬಿ.ಶಿವಯೋಗಿ, ವೈ.ಎಸ್.ಪೂಜಾರ, ಎಸ್.ಪಿ.ಆಲಮೇಲ, ಆರ್.ಜಿ.ಸನ್ನಿ, ಆರ್.ಜಿ.ಪತ್ತಾರ, ಸಂಗಮೇಶ ನೀಲಗುಂದ, ಬಿ.ಕೆ.ಮಾಟೂರ ಹಾಗೂ ಬಿ.ವಿ.ಗಚ್ಚಿನಮಠ ಅವರಿಗೆ ಗುರುವಂದನೆ ಸಲ್ಲಿಸಲಾಗುವುದು ಎಂದು ಸ್ನೇಹ ಬಳಗ ತಿಳಿಸಿದೆ.

ಸೂಳೇಬಾವಿ ಗಾಯತ್ರಿ ಬ್ಯಾಂಕ್‌ಗೆ ಆಯ್ಕೆ

ಬಾಗಲಕೋಟೆ: ಜಿಲ್ಲೆಯ ಹುನಗುಂದ ತಾಲೂಕಿನ ಸೂಳೇಬಾವಿಯ ಗಾಯತ್ರಿ ಪತ್ತಿನ ಸಹಕಾರಿ ಸಂಘದ ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಕ್ಕೆ ಅವಿರೋಧ ಆಯ್ಕೆ ನಡೆದಿದೆ. ಹಾಲಿ ಅಧ್ಯಕ್ಷ ರವೀಂದ್ರ ಕಲಬುರ್ಗಿ, ಶಂಕ್ರಪ್ಪ ಜನಿವಾರದ, ರಾಜಮಹ್ಮದ ಕಿಡಕಿಮನಿ, ನಾರಾಯಣಪ್ಪ ರಾಮದುರ್ಗ, ಶಂಕ್ರಪ್ಪ ನೆಮದಿ, ಹನಮಂತಪ್ಪ ಕುಂಚಗನೂರ, ಏಕಾಂಬ್ರಪ್ಪ ಧುತ್ತರಗಿ, ಪ್ರಭಾಕರ ಭಾಪ್ರಿ, ರವೀಂದ್ರ ಮಿಣಜಗಿ, ಬಸಪ್ಪ ಕುರಿ, ಬಸವರಾಜ ಭದ್ರಣ್ಣವರ (ಸಾಮಾನ್ಯ), ಹನಮಂತಪ್ಪ ಒಡ್ಡೋಡಗಿ (ಹಿಂವಅ), ಹನಮಂತಗೌಡ ಮಾಚಾ (ಹಿಂವಬ), ದೊಡ್ಡಮುತ್ತಣ್ಣ ಭಜಂತ್ರಿ (ಪಜಾ), ಮೈನಪ್ಪ ಶಿಂಗಾಡಿ (ಪಪಂ), ಲಕ್ಷ್ಮೀಬಾಯಿ ಧೂಪದ, ಪಾರ್ವತಿ ಗಾಡಿ (ಮಹಿಳಾ) ಆಯ್ಕೆ ಆಗಿದ್ದಾರೆ ಎಂದು ಚುನಾವಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಲೂರ ಪಿಕೆಪಿಎಸ್: ಅವಿರೋಧ ಆಯ್ಕೆ

ಬಾಗಲಕೋಟೆ: ಜಿಲ್ಲೆಯ ಇಳಕಲ್ ತಾಲೂಕಿನ ಕೆಲೂರ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಕ್ಕೆ ನಡೆದ ಚುನಾವಣೆಯಲ್ಲಿ 12 ಸ್ಥಾನಗಳಿಗೂ ಅವಿರೋಧ ಆಯ್ಕೆ ನಡೆದಿದೆ. ಜ.5 ರಂದು ನಾಮಪತ್ರ ಪರಿಶೀಲನೆ ಕಾರ್ಯ ನಡೆದು ನಾಮಪತ್ರ ಸಲ್ಲಿಸಿದ್ದ 35 ಅಭ್ಯರ್ಥಿಗಳಲ್ಲಿ 23 ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತಗೊಂಡಿದ್ದವು. ಅಂತಿಮವಾಗಿ 12 ಅಭ್ಯರ್ಥಿಗಳ ನಾಮಪತ್ರ ಪುರಸ್ಕೃತಗೊಡಿದ್ದವು. ಜ.6 ರಂದು 12 ಸ್ಥಾನಗಳಿಗೂ ಅವಿರೋಧ ಆಯ್ಕೆ ನಡೆದಿದೆ ಎಂದು ಚುನಾವಣಾಧಿಕಾರಿ ಘೋಷಿಸಿದರು. ಸತ್ಯಪ್ಪ ದುರಗದ, ಮಲ್ಲವ್ವ ತಳವಾರ, ಶಿವಪ್ಪ ಇಟಗಿ, ಪ್ರಭಾಕರ ದೇಶಪಾಂಡೆ, ನಿಂಗನಗೌಡ ನಾಡಗೌಡ್ರ (ಸಾಮಾನ್ಯ), ರಾಮಚಂದ್ರ ವಡ್ಡರ (ಪಜಾ), ವಜೀರಪ್ಪ ಪೂಜಾರ (ಪಪಂ), ಬಸಪ್ಪ ಹೊಳಗುಂದಿ (ಹಿಂವಅ), ಅಪ್ಪಾಸಾಹೇಬ ನಾಡಗೌಡ್ರ (ಹಿಂವಬ), ನಿರ್ಮಲಾ ಅಂಗಡಿ, ಲಕ್ಷ್ಮಿಬಾಯಿ ಆಸಂಗಿ (ಮಹಿಳಾ) ಹಾಗೂ ವೀರಪ್ಪ ಮಂಡಿ (ಸಾಲೇತರ) ಆಯ್ಕೆ ಆಗಿದ್ದಾರೆ.

ಬಾಲ್ಯದ ಆರೈಕೆ, ಶಿಕ್ಷಣ ಅತ್ಯವಶ್ಯಕ

ರಬಕವಿ-ಬನಹಟ್ಟಿ: ಆರಂಭಿಕ ಬಾಲ್ಯವು ಮಗುವಿನ ಜೀವನದ ಮೊದಲ 6 ವರ್ಷಗಳ ಅವಧಿಯನ್ನು ಒಳಗೊಂಡಿರುತ್ತದೆ. ಇದರಲ್ಲಿ ಅವರ ಮೆದುಳು ಅಸಾಧಾರಣ ವೇಗದಲ್ಲಿ ಬೆಳೆಯುತ್ತದೆ. ಮೆದುಳಿಗೆ ಸಿನಾಪ್ಟಿಕ್ ಸಂಪರ್ಕಗಳನ್ನು ಮಗುವು ತನ್ನ ಪರಿಸರದಿಂದ ಸೆಳೆಯುವ ಅನುಭವಗಳಿಂದ ಮಾಡಲ್ಪಟ್ಟಿದೆ ಎಂದು ಎಸ್.ಎಸ್. ಚೆನ್ನಿ ತಿಳಿಸಿದರು. ಸಮೀಪದ ಆಸಂಗಿ ಗ್ರಾಮದ ಶ್ರೀ ವೇಣುಗೋಪಾಲ ದೇವಸ್ಥಾನದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗು ಅಜೀಂ ಪ್ರೇಮಜಿ ಫೌಂಡೇಶನ್‌ನಿಂದ ಜರುಗಿದ ಅಂಗನವಾಡಿ ಕಾರ್ಯಕರ್ತರೆಯರು ಹಾಗು ಸಹಾಯಕಿರಿಗೆ ಇಸಿಸಿಇ ಮಾಹಿತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಬಾಲ್ಯದ ಅವಧಿಯಲ್ಲಿ ಮೆದುಳಿನ ಬೆಳವಣಿಗೆಯಲ್ಲಿ ನಿರ್ಣಾಯಕ ಹಂತಗಳಿವೆ ಎಂದು ನಿರ್ಣಾಯಕ ಪುರಾವೆಗಳಿವೆ. ಇಸಿಸಿಇ ಯೋಜನೆಯಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ಮತ್ತು ನಡವಳಿಕೆಯ ಮಾರ್ಗಗಳ ಮೇಲೆ ಪ್ರಭಾವ ಬೀರುತ್ತದೆ ಎಂದರು. ವೇದಿಕೆ ಮೇಲೆ ಎ.ಆರ್. ಕರಿಗಾರ, ಗ್ರಾಪಂ ಅಧ್ಯಕ್ಷೆ ಪುಷ್ಪಾ ರಾವಳ, ರವಿ ಫಕೀರಪುರ, ಚಂದ್ರು ಭಜಂತ್ರಿ, ಸುನಂದಾ ಸಿಂಧೆ, ತುಳಜಾಬಾಯಿ ಪಾಟೀಲ, ಶಿವಕ್ಕ ಕಾಂಬಳೆ, ಹಣಮಂತರಾಯ ನಾಯಕ, ಅಶೋಕ ಸಣ್ಣಕ್ಕಿ, ಇಂದ್ರವ್ವಾ ಸಿಂಧೆ ಉಪಸ್ಥಿತರಿದ್ದರು.
ಆರ್.ಬಿ. ಕುಂಬಾರ, ಎಸ್.ಬಿ. ಹಡಪದ, ಎಸ್.ಬಿ. ಮಗದುಮ್, ಶ್ರೀಶೈಲ ದಾವಲಟ್ಟಿ ಸೇರಿದಂತೆ ಅನೇಕರಿದ್ದರು.

{ಬಸವರಾಜ ಬೊಮ್ಮಾಯಿ} ಸಂಸದ

ಗ್ಯಾರಂಟಿ ಯೋಜನೆಗಳಿಂದಾಗಿ ರಾಜ್ಯದ ಆರ್ಥಿಕ ಸ್ಥಿತಿ ಹದಗೆಟ್ಟಿದೆ. ಎಲ್ಲದರ ಮೇಲೂ ಸರಕಾರ ತೆರಿಗೆ ಹಾಕಿದೆ.ಇದನ್ನೆಲ್ಲ ನೋಡಿದರೆ ಈ ಸಾರಿ ರಾಜ್ಯದ 40 ಸಾವಿರ ಕೋಟಿ ಅಧಿಕ ತೆರಿಗೆ ಜನರಿಗೆ ಹೊರೆಯಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಸಂವಿಧಾನ ಬೆಳಕು ನೀಡುವ ರಥ ಜ್ಯೋತಿ

‘ಸಂವಿಧಾನ ಬದಲಾಯಿಸಿದವರು ಯಾರು?’ ಪುಸ್ತಕ ಬಿಡುಗಡೆ | ಸಂಸದ ಬಸವರಾಜ ಬೊಮ್ಮಾಯಿ

ಬಾಗಲಕೋಟೆ: ಸಂವಿಧಾನ ಬೆಳಕು ನೀಡುವ ರಥ ಜ್ಯೋತಿ ಇದ್ದಂತೆ. ಹೊಸ ಪೀಳಿಗೆ ಎಳೆದೊಯ್ಯಬೇಕು ಎಂದು ಮಾಜಿ ಸಿಎಂ, ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದ ಬಿವಿವಿ ಸಂಘದ ನೂತನ ಸಭಾಭವನದಲ್ಲಿ ಸಿಟಿಜನ್ಸ್ ಫಾರ್ ಸೋಷಿಯಲ್ ಜಸ್ಟೀಸ್ ಜಿಲ್ಲಾ ಘಟಕದ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಂವಿಧಾನ ಸನ್ಮಾನ ಹಾಗೂ ಸಂವಿಧಾನ ಬದಲಾಯಿಸಿದವರು ಯಾರು? ಪುಸ್ತಕ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದ ಅವರು, ಸಂವಿಧಾನ ಇದ್ದರೇ ನಾವು ಇರುತ್ತೇವೆ. ಇಲ್ಲವಾದಲ್ಲಿ ಇಲ್ಲ ಎಂದರು.

ಡಾ. ಬಾಬಾ ಸಾಹೇಬ ಅಂಬೇಡ್ಕರ್ ಸಮಾನತೆ, ಅಸ್ಪೃಶ್ಯತೆ ಹೋಗಲಾಡಿಲು ಸಂವಿಧಾನ ರಚಿಸಿದ ಪರಿಣಾಮ ಇಂದು ಬದಲಾವಣೆ ಆಗಲು ಸಾಧ್ಯವಿದೆ. ಕಾಂಗ್ರೆಸ್‌ಗೆ ಅಂಬೇಡ್ಕರ ಅವರ ಹೆಸರು ಹೇಳುವ ನೈತಿಕತೆ ಇಲ್ಲ. ಅಷ್ಟೊಂದು ಅವಮಾನ, ಕಿರುಕುಳ ನೀಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಎಂ ಸಿದ್ದರಾಮಯ್ಯ ಸಮಾಜವಾದಿ ಸಿದ್ಧಾಂತವನ್ನು ದೇವರ ಕೊಠಡಿಯಲ್ಲಿ ಇಟ್ಟಿದ್ದಾರೆ. ಮಾತಿನಲ್ಲಿ ಅಷ್ಟೇ ವ್ಯಕ್ತವಾಗುತ್ತಿದೆ. ಆಡಳಿತದಲ್ಲಿ ಇಲ್ಲ. ಎಂ.ಎನ್.ರಾಯ ನಮ್ಮ ತಂದೆಯ ರಾಜಕೀಯ ಗುರುವಾಗಿದ್ದರು. ಸ್ವತಂತ್ರ್ಯ ಪೂರ್ವದಲ್ಲಿ ದೊಡ್ಡ ಚಿಂತಕರಾಗಿದ್ದವರು.

ಬಾಗಲಕೋಟೆ ನಗರದ ಬಿವಿವಿ ಸಂಘದ ನೂತನ ಸಭಾಭವನದಲ್ಲಿ ಸಿಟಿಜನ್ಸ್ -ಫಾರ್ ಸೋಷಿಯಲ್ ಜಸ್ಟೀಸ್ ಜಿಲ್ಲಾ ಘಟಕದ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಸಂವಿಧಾನ ಸನ್ಮಾನ ಕಾರ್ಯಕ್ರಮದಲ್ಲಿ ಗಣ್ಯರು ಸಂವಿಧಾನ ಬದಲಾಯಿಸಿದವರು ಯಾರು? ಪುಸ್ತಕ ಬಿಡುಗಡೆಗೊಳಿಸಿದರು.

ಸಂವಿಧಾನ ಹಾಗೂ ಭೂಮಿಗೂ ಸಂಬಂದವಿದೆ ಅಂತ ತೋರಿಕೊಟ್ಟವರು. ಸ್ಪಷ್ಟವಾದ ನಿಲುವು ಹೊಂದಿದ್ದರು. ಇಂದು ಕೂಡಾ ಶೋಷಿತ ಸಮುದಾಯ, ಅಲ್ಪಸಂಖ್ಯಾತರು ಕಾಂಗ್ರೆಸ್ ನಂಬಿ ಮೋಸ ಹೋಗಬಾರದು. ನೈಜವಾದಕ್ಕೆ ಬೆನ್ನೆಲುಬಾಗಿ ನಿಲ್ಲಬೇಕು. ಬಿಜೆಪಿ ಸಂವಿಧಾನ ಹೆಸರಿನಲ್ಲಿ ರಾಜಕೀಯ ಮಾಡುತ್ತಿಲ್ಲ. ಆಶಯಗಳನ್ನು ಈಡೇರಿಸುತ್ತಿದೆ ಎಂದು ಹೇಳಿದರು.

ಕಾಂಗ್ರೆಸ್ ಮಂಡಲ್ ಕಮೀಷನ್ ಒಪ್ಪಲಿಲ್ಲ. ವಿ.ಪಿ.ಸಿಂಗ್ ಜಾರಿಗೊಳಿಸಿದರು. ನರೇಂದ್ರ ಮೋದಿ ಹಿಂದುಳಿದ ವರ್ಗಕ್ಕೆ ಹಕ್ಕು ನೀಡಿದರು. ಕಾಂಗ್ರೆಸ್ ಸಂವಿಧಾನದಲ್ಲಿ ಜಾತ್ಯಾತೀತ ಶಬ್ದ ಸೇರಿಸಿತು. ಆದರೇ ಜಾತಿ ಗಣತಿ ಜಪಿಸುತ್ತಿದೆ. ಬರೀ ನಾಟಕವಾಡುತ್ತಾರೆ. ವೋಟ್ ಬ್ಯಾಂಕ್ ರಾಜಕೀಯ ಅವರ ಉದ್ದೇಶವಾಗಿದೆ. ಇಂದಿರಾ ಗಾಂಧಿ ರಾಜೀನಾಮೆ ನೀಡಬೇಕಿತ್ತು. ಆದರೇ ಒಂದೇ ರಾತ್ರಿಯಲ್ಲಿ ಸಂವಿಧಾನ ಬದಲಾಯಿಸಿದರು. ಕಾಂಗ್ರೆಸ್ 75 ಕ್ಕೂ ಹೆಚ್ಚು ಸಾರಿ ಸಂವಿಧಾನ ತಿದ್ದುಪಡಿ ಮಾಡಿದೆ. ಅದು ಅಂಬೇಡ್ಕರ ಅವರ ಆಶಯಕ್ಕೆ ವಿರುದ್ಧವಾಗಿ. ಇಷ್ಟೇಲ್ಲ ಆದರು ಸಹ ಪ್ರಾಯಶ್ಚಿತ ಮಾಡಿಕೊಳ್ಳುತ್ತಿಲ್ಲ ಎಂದು ತಿಳಿಸಿದರು.

ಲೇಖಕ ವಿಕಾಸಕುಮಾರ ಪಿ ಮಾತನಾಡಿ, ಇಂದು ಮೊದಲ ಹಂತದ ಅಭಿಯಾನವಾಗಿದೆ. ಈ ವರೆಗೆ ಸಂವಿಧಾನ 106 ತಿದ್ದುಪಡಿ ಆಗಿದೆ. ಅದರಲ್ಲಿ 75 ಬಾರಿ ಕಾಂಗ್ರೆಸ್ ತಿದ್ದುಪಡಿ ಮಾಡಿದೆ. 22 ಸಾರಿ ಬಿಜೆಪಿ ಮಾಡಿದೆ. ಎಸ್ಸಿ,ಎಸ್ಟಿ ಜನರಿಗೆ ಅನ್ಯಾಯ ಮಾಡುತ್ತಿರುವುದು ಕಾಂಗ್ರೆಸ್ ಹೊರತು ಬಿಜೆಪಿ ಅಲ್ಲ. 1976 ರಲ್ಲಿ ತುರ್ತು ಪರಿಸ್ಥಿತಿ ಜಾರಿಗೊಳಿಸಿದಾಗಲೇ ಸಂವಿಧಾನವನ್ನು ಅಮಾನತ್ತಿನಲ್ಲಿ ಇಡಲಾಯಿತು. ಜನರು ಸತ್ಯವನ್ನು ಅರ್ಥ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಗುಳೇದಗುಡ್ಡ ಮರಡಿಮಠದ ಅಭಿನವ ಕಾಡಸಿದ್ದೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ವಿ.ಪ ಸದಸ್ಯ ಹನುಮಂತ ನಿರಾಣಿ, ಮಾಜಿ ಶಾಸಕರಾದ ವೀರಣ್ಣ ಚರಂತಿಮಠ, ಎಂ.ಕೆ.ಪಟ್ಟಣಶೆಟ್ಟಿ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಮುಖಂಡರಾದ ಶಿವಾನಂದ ಟವಳಿ, ಮುತ್ತಣ್ಣ ಬೆಣ್ಣೂರ ಸೇರಿದಂತೆ ಇತರರಿದ್ದರು.

ಸುಳ್ಳು ಹೇಳುವುದರಲ್ಲಿ ಕಾಂಗ್ರೆಸ್ಸಿಗರು ನಿಸ್ಸಿಮರು

1952 ರಲ್ಲಿ ಅಂಬೇಡ್ಕರ ಅವರನ್ನು ಚುನಾವಣೆಯಲ್ಲಿ ಸೋಲಿಸಿದ್ದು ಕಾಂಗ್ರೆಸ್. ಸಮಾ?ಗೂ ಕೂಡಾ ಜಾಗ ನೀಡಲಿಲ್ಲ. ಭಾರತ ರತ್ನ ಪ್ರಶಸ್ತಿ ನೀಡಲಿಲ್ಲ. 1990 ರಲ್ಲಿ ಕಾಂಗ್ರೆಸೇತರ ಸರಕಾರ ನೀಡಿತು. ಆರ್‌ಎಸ್‌ಎಸ್, ಬಿಜೆಪಿ ಸಂವಿಧಾನ ಬದಲಾವಣೆ ಮಾಡಿಲ್ಲ. ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅಧ್ಯಕ್ಷ ಸ್ಥಾನ ನೀಡಿದೆ. ಆದರೇ ಕೈ ಕಟ್ಟಿ ನಿಲ್ಲುವ ಪರಿಸ್ಥಿತಿ ಇದೆ. ಅಂಬೇಡ್ಕರ್ ಅವರಿಗೆ ಅಮಿತ್ ಷಾ ಅವಮಾನ ಮಾಡಿಲ್ಲ. ತಿರುಚುವ ಕೆಲಸ ನಡೆದಿದೆ. ಸಂವಿಧಾನ ವಿಷಯದಲ್ಲಿ ಸುಳ್ಳು ಸುದ್ದಿ ಹಬ್ಬಿಸುವದರಲ್ಲಿ ಕಾಂಗ್ರೆಸ್‌ನವರು ನಿಸ್ಸಿಮರು ಎಂದು ಸಂಸದ ಗೋವಿಂದ ಕಾರಜೋಳ ಹೇಳಿದರು.

ಸುಳ್ಳು ಊರು ಸುತ್ತಿಬಂದರು ಸತ್ಯ ಮನೆಯ ಹೊಸ್ತಿಲು ದಾಟಿರಲಿಲ್ಲ ಅಂತೆ. ಈ ಗಾಥೆ ಮಾತಿನಂತೆ ಇಂದು ನಡೆಯುತ್ತಿದೆ. ಸಂವಿಧಾನ ಬಗ್ಗೆ ಸತ್ಯದ ಬದಲು ಮಿಥ್ಯವೇ ಜನರಿಗೆ ತಲುಪಿಸುವ ಕೆಲಸ ಮಾಡುತ್ತಿದೆ. ಸಂವಿಧಾನ ರಚನಾ ಸಮಿತಿಯಲ್ಲಿ ಅಂಬೇಡ್ಕರ ಇದ್ದ ಪರಿಣಾಮ ಇಂದು ಸರ್ವರಿಗೂ ನ್ಯಾಯ ಸಿಗಲು ಸಾಧ್ಯವಾಗಿದೆ.
-ಎನ್.ಮಹೇಶ, ಮಾಜಿ ಸಚಿವ

ಶಂಕರರಾಜೇಂದ್ರ ಶ್ರೀಗಳ ಪಲ್ಲಕ್ಕಿ ಉತ್ಸವ

ಅಮೀನಗಡದಲ್ಲಿ ಪ್ರಭುಶಂಕರೇಶ್ವರ ಗಚ್ಚಿನಮಠದಿಂದ ನಡೆದ ಜಂಗಮೋತ್ಸವದಲ್ಲಿ ಶಂಕರರಾಜೇಂದ್ರ ಸ್ವಾಮೀಜಿಗಳ ಪಲ್ಲಕ್ಕಿ ಮಹೋತ್ಸವ ನಡೆಯಿತು.

ಬಾಗಲಕೋಟೆ: ಜಿಲ್ಲೆಯ ಹುನಗುಂದ ತಾಲೂಕಿನ ಅಮೀನಗಡ ಗಚ್ಚಿನಮಠದ ಲಿಂ.ಪ್ರಭುರಾಜೇಂದ್ರ ಸ್ವಾಮೀಜಿ ಜನ್ಮಶತಮಾನೋತ್ಸವ ನಿಮಿತ್ತ ಪ್ರಭುರಾಜೇಂದ್ರ ಶ್ರೀಗಳ ರಜತ ಮೂರ್ತಿ ಹಾಗೂ ಶಂಕರರಾಜೇಂದ್ರ ಸ್ವಾಮೀಜಿಗಳ ಜಂಗಮೋತ್ಸವ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.

ಜಂಗಮೋತ್ಸವ ನಿಮಿತ್ತ ಬೆಳಗ್ಗೆ ಗದ್ದುಗೆಗೆ ಮಹಾ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚಣೆ, ಅಯ್ಯಾಚಾರ ನಡೆದವು. ನಂತರ ಪ್ರಭುಶಂಕರೇಶ್ವರ ಅನುಭವ ಮಂಟಪದಿಂದ ನೂರಾರು ಕುಂಬ ಹೊತ್ತ ಮಹಿಳೆಯರು, ನಾನಾ ವಾದ್ಯ ಮೇಳದೊಂದಿಗೆ ಪಲ್ಲಕ್ಕಿಯಲ್ಲಿ ಪ್ರಭುರಾಜೇಂದ್ರ ಶ್ರೀಗಳ ರಜತ ಮೂರ್ತಿ ಹಾಗೂ ಮತ್ತೊಂದು ಹೂವಿನಿಂದ ಅಲಂಕೃತಗೊಂಡ ಪಲ್ಲಕ್ಕಿಯಲ್ಲಿ ಪೀಠಾಪತಿ ಶಂಕರಾಜೇಂದ್ರ ಸ್ವಾಮೀಜಿ ವಿರಾಜಮಾನರಾಗಿದ್ದರು.

ಪಟ್ಟಣದ ರಾಜ್ಯ ಹೆದ್ದಾರಿ, ಚಿತ್ತರಗಿ ಕ್ರಾಸ್, ಜಾಮಿಯಾ ಮಸೀದಿ, ಸಂಗಮೇಶ್ವರ ತೇರಿನ ಮನೆ, ಬಸವೇಶ್ವರ ದೇವಸ್ಥಾನ, ಮಂಗಳಮ್ಮನ ದೇವಸ್ಥಾನ, ನಾಗಪ್ಪನ ಕಟ್ಟೆ, ಗಣಪತಿ ಗುಡಿ ಮೂಲಕ ರಾಜ್ಯ ಹೆದ್ದಾರಿಯಲ್ಲಿ ಮೆರವಣಿಗೆ ಸಾಗಿತು. ಮೆರವಣಿಗೆಯುದ್ದಕ್ಕೂ ಪ್ರಮುಖ ಬೀದಿಗಳನ್ನು ತಳಿರು ತೋರಣದಿಂದ ಶೃಂಗರಿಸಲಾಗಿತ್ತು. ಅಲ್ಲಲ್ಲಿ ರಂಗೋಲಿಯ ಚಿತ್ತಾರ ಗಮನ ಸೆಳೆಯಿತು. ಜಾಮಿಯಾ ಮಸೀದಿ ಬಳಿ ಇಸ್ಲಾಂ ಸಮಾಜದಿಂದ ಶ್ರೀಗಳಿಗೆ ಪುಷ್ಪವೃಷ್ಟಿಗೈಯಲಾಯಿತು.

ಕಷ್ಟ-ಸುಖ ಸಮನಾಗಿ ಹಂಚಿಕೊಂಡು ಬದುಕಿ

ಕೆರೂರ: ನೂತನ ದಾಂಪತ್ಯಕ್ಕೆ ಕಾಲಿಟ್ಟ ವಧು-ವರರು ಕಷ್ಟ-ಸುಖ ಸಮನಾಗಿ ಹಂಚಿಕೊಂಡು ಪರಸ್ಪರ ಒಬ್ಬರಿಗೊಬ್ಬರು ಅರ್ಥ ಮಾಡಿಕೊಂಡು ಜೀವನ ಸಾಗಿಸಬೇಕು ಎಂದು ನರಸಾಪೂರ ಹಿರೇಮಠದ ಮರುಳಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಜಿ ಹೇಳಿದರು.

ಸಮೀಪದ ಗೋವನಕೊಪ್ಪ ಗ್ರಾಮದ ಬ್ರಹ್ಮಾನಂದ ಪರಮಹಂಸರ 87ನೇ ಜಾತ್ರಾ ಮಹೋತ್ಸವ ಜೀವನ ದರ್ಶನ ಪ್ರವಚನದ ಅಂಗವಾಗಿ ಆಯೋಜಿಸಿದ್ದ ಸಾಮೂಹಿಕ ವಿವಾಹ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು. ಹುಟ್ಟುವ ಮಕ್ಕಳಿಗೆ ಒಳ್ಳೆ ಸಂಸ್ಕಾರ-ಸಂಸ್ಕೃತಿ ಹೇಳಿಕೊಡುವ ಮೂಲಕ ಹೆತ್ತ ತಂದೆ-ತಾಯಂದಿರನ್ನ ಗೌರವದಿಂದ ಕಾಣಬೇಕು ಎಂದು ನೂತನ ದಂಪತಿಗಳಿಗೆ ಉಪದೇಶ ಮಾಡಿದರು. ಶ್ರೀಗಳ ಸಾನ್ನಿಧ್ಯದಲ್ಲಿ 11 ಜೋಡಿ ನೂತನ ವಧು-ವರರು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಹೊಳೆ-ಆಲೂರ ಯಚ್ಚರೇಶ್ವರ ಸ್ವಾಮಿಜಿ, ಬೈರನಹಟ್ಟಿ ಪೂಜ್ಯ ಶಾಂತಲಿಂಗ ಸ್ವಾಮಿಜಿ ಮಾತನಾಡಿ ದುಂದುವೆಚ್ಚ ಆಡಂಬರಕ್ಕೆ ಕಡಿವಾಣ ಹಾಕುವ ಸಾಮೂಹಿಕ ವಿವಾಹ ಬಡವರಿಗೆ ತುಂಬಾ ಅನಕೂಲವಾಗಿದೆ.

ಗೋವನಕೊಪ್ಪ ಗ್ರಾಮದ ಭಕ್ತರು ಸುಮಾರು ವರ್ಷಗಳಿಂದ ಜಾತಿ-ಭೇಧ ಮರೆತು ಇಂತಹ ಸಮಾಜಮುಖಿ ಕಾರ್ಯಕ್ರಮಗಳನ್ನ ಹಮ್ಮಿಕೊಳ್ಳುವ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ ಎಂದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ ಮಾತನಾಡಿದರು. ಪಿಡಿಒ ಎಸ್.ಎನ್. ತೋಟರ, ಮುಖ್ಯಶಿಕ್ಷಕಿ ಎಸ್.ವಿ.ಸಾಲಿಮಠ, ಅಂಗನವಾಡಿ ಮೇಲ್ವಿಚಾರಕಿ ರೇಣುಕಾ. ಪೂಜಾರ, ಶಿವು.ಓಜುಗ, ಪ್ರವಚನಕಾರರಾದ ಎಸ್.ಉಮಾಪತಿ, ಎಸ್.ಅಕ್ಕಮಹಾದೇವಿ, ಸಂಗೀತಗಾರ ಬಿ.ಚಂದ್ರು, ಕಮಿಟಿ ಅಧ್ಯಕ್ಷ ಕಿಷ್ಟಣ್ಣ.ಬೀಜಾಪೂರ, ಆರ್.ಅಚ್.ಯಾವಗಲ್, ಎನ್.ಎಚ್.ಪಾಟೀಲ, ಮುದಕಣ್ಣ.ಹೆರಕಲ್, ಹ'ನ'ವ'ಂ'ತ'ಗೌ'ಡ'. ಪಾಟೀಲ, ಮುರಳಿದರ.ಯಡನ್ನವರ, ಚಂದ್ರಗೌಡ. ಪಾಟೀಲ್, ದಾವಲ್‌ಸಾಬ.ಹೊಸಮನಿ, ಪ್ರವೀಣ.ಮೇಟಿ, ಎಮ್.ಎಸ್.ಮೇಟಿ, ಲಕ್ಷ್ಮಣ.ದೊಡಮನಿ, ರಂಗನಗೌಡ.ಪಾಟೀಲ, ಯಚ್ಚರಪ್ಪ. ದೊಡಮನಿ, ಹನಮಂತಪ್ಪ.ಧಳಪತಿ ಇದ್ದರು.

ಆಡಿಟೋರಿಯಂ ನಿರ್ಮಾಣಕ್ಕೆ ಶ್ರೀಗಳು ಭೂಮಿ ಪೂಜೆ

ಬಾಗಲಕೋಟೆ: ಜಿಲ್ಲೆಯ ಹುನಗುಂದ ತಾಲೂಕಿನ ಅಮೀನಗಡ ಎಸ್‌ವಿವಿ ಸಂಘದಲ್ಲಿ ಹಿರಿಯ ವಿದ್ಯಾರ್ಥಿಗಳಿಂದ ನಿರ್ಮಾಣಗೊಳ್ಳಲಿರುವ ಆಡಿಟೋರಿಯಂ ಹಾಲ್ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಯಿತು.

ಗಚ್ಚಿನಮಠದ ಲಿಂ.ಪ್ರಭುರಾಜೇಂದ್ರ ಸ್ವಾಮೀಜಿಗಳ ಜನ್ಮ ಶತಮಾನೋತ್ಸವ ನಿಮಿತ್ತ ನಾನಾ ಕಾರ್ಯಕ್ರಮ ಹಮ್ಮಿಕೊಂಡಿದ್ದು ಸಂಸ್ಥೆಯಲ್ಲಿ ಕಲಿತ ಹಿರಿಯ ವಿದ್ಯಾರ್ಥಿಗಳ ನೆನಪಿಗೋಸ್ಕರ ಬೃಹತ್ ಆಡಿಟೋರಿಯಂ ನಿರ್ಮಾಣಕ್ಕೆ ನಿರ್ಧರಿಸಲಾಗಿದೆ.

ಸಂಸ್ಥೆಯಲ್ಲಿ ಕಲಿತ ಪ್ರತಿ ವಿದ್ಯಾರ್ಥಿಗಳಿಗೂ ಅವರ ನೆನಪು ಚಿರಸ್ಥಾಯಿ ಆಗಿರಲಿ ಎಂಬ ಉದ್ದೇಶದಿಂದ ಈ ಆಡಿಟೋರಿಯಂ ಹಾಲ್ ನಿರ್ಮಾಣಕ್ಕೆ ಸಂಸ್ಥೆ ಮುಂದಾಗಿದ್ದು ಅಂದಾಜು 70 ಎಸ್ಸೆಸ್ಸೆಲ್ಸಿ ಬ್ಯಾಚ್ ವಿದ್ಯಾರ್ಥಿಗಳು ಆಡಿಟೋರಿಯಂ ನಿರ್ಮಾಣಕ್ಕೆ ಸಹಾಯ ಹಸ್ತ ಚಾಚಲಿದ್ದಾರೆ ಎಂದು ಉಪಪ್ರಾಚಾರ್ಯ ಆರ್.ಜಿ.ಸನ್ನಿ ತಿಳಿಸಿದರು.

ಅಮೀನಗಡ ಎಸ್‌ವಿವಿ ಸಂಘದಲ್ಲಿ ಹಿರಿಯ ವಿದ್ಯಾರ್ಥಿಗಳಿಂದ ನಿರ್ಮಾಣಗೊಳ್ಳಲಿರುವ ಆಡಿಟೋರಿಯಂ ಹಾಲ್‌ಗೆ ಭೂಮಿ ಪೂಜೆ ನೆರವೇರಿಸಲಾಯಿತು.

ಪ್ರಭುಶಂಕರೇಶ್ವರ ಗಚ್ಚಿನಮಠದ ಶಂಕರರಾಜೇಂದ್ರ ಸ್ವಾಮೀಜಿ ಭೂಮಿ ಪೂಜೆ ನೆರವೇರಿಸಿದರು. ಸಂಘದ ಚೇರ್‌ಮನ್ ಐ.ಎಸ್. ಲಿಂಗದಾಳ, ಸಿ.ಡಿ.ಇಲಕಲ್, ಡಾ.ಎಂ.ವಿ.ಹಾದಿಮನಿ, ಎಂ.ಎಸ್.ಸಜ್ಜನ, ಎಸ್.ಜಿ.ಕನ್ನೂರ, ಪ್ರಾಚಾರ್ಯ ಎಂ.ಎನ್. ವಂದಾಲ, ಗುರುನಾಥ ಚಳ್ಳಮರದ ಇತರರು ಇದ್ದರು.

ಶಿಕ್ಷಣ ಕ್ರಾಂತಿಗೆ ಲಿಂಗರಾಜರ ಕೊಡುಗೆ ಅಪಾರ

ಮಹಾಲಿಂಗಪುರ: ಉತ್ತರಕರ್ನಾಟಕದಲ್ಲಿ ಶಿಕ್ಷಣ ಕ್ರಾಂತಿಯಾಗಲು ತ್ಯಾಗರಾಜ ಶಿರಸಂಗಿ ಲಿಂಗರಾಜರ ಕೊಡುಗೆ ಅಪಾರ ಎಂದು ಕೆಎಲ್‌ಇ ಪಾಲಿಟೆಕ್ನಿಕ್ ಪ್ರಾಚಾರ್ಯ ಎಸ್.ಐ.ಕುಂದಗೋಳ ಹೇಳಿದರು.

ಸ್ಥಳೀಯ ಕೆಎಲ್‌ಇ ಅಂಗ ಸಂಸ್ಥೆಗಳ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಶಿರಸಂಗಿ ಲಿಂಗರಾಜ ಜಯಂತಿಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಲಿಂಗರಾಜರು ತಮ್ಮ ಸಮಸ್ತ ಅಸ್ತಿ ಶೇ. 80ರಷ್ಟು ಭಾಗ ಧಾನ ಶಿಕ್ಷಣ ಸಂಸ್ಥೆಗಳಿಗೆ ದಾನ ಮಾಡಿದವರು.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯವನ್ನು ಬೆಳೆಸಿ ಉತ್ತುಂಗಕ್ಕೆ ಕೊಂಡೊಯ್ದ ಡಿ.ಸಿ.ಪಾವಟೆ ಅವರ ಶಿಕ್ಷಣಕ್ಕೆ ಶಿರಸಂಗಿ ಲಿಂಗರಾಜರು ಧಾರೆಯೆರೆದಿದ್ದರು. ಲಿಂಗರಾಜರ ಟ್ರಸ್ಟ್‌ನಿಂದ ಉತ್ತರಕರ್ನಾಟಕದ ಬಹುತೇಕ ಶಿಕ್ಷಣ ಸಂಸ್ಥೆಗಳು ದಾನ ಪಡೆದಿವೆ. ನಮ್ಮ ಅದಾಯದ ಒಂದು ಭಾಗವನ್ನು ಬಡ ಮಕ್ಕಳ ಶಿಕ್ಷಣಕ್ಕೆ ತ್ಯಾಗ ಮಾಡಿದರೆ ಕಾರ್ಯಕ್ರಮ ಸಾರ್ಥಕ ಎಂದರು.

ಅಥಣಿಯ ಖ್ಯಾತ ಸಾಹಿತಿ ಡಾ. ಅರ್ಚನಾ ಅಥಣಿ ವಿಶೇಷ ಉಪನ್ಯಾಸ ನೀಡಿ ಲಿಂಗರಾಜರ ತ್ಯಾಗ, ದಾನ, ಕಳಕಳಿ, ಆದರ್ಶಗಳ ಬಗ್ಗೆ ತಿಳಿಸಿದರು. ಇದಕ್ಕೂ ಮುನ್ನ ಶಿರಸಂಗಿ ಲಿಂಗರಾಜರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪವೃಷ್ಟಿ ಮಾಡಲಾಯಿತು.

ಪದವಿ ಕಾಲೇಜಿನ ಪ್ರಾಚಾರ್ಯ ಡಾ. ಕೆ. ಎಂ. ಅವರಾದಿ ಪ್ರಾಸ್ತಾವಿಕ ಮಾತನಾಡಿದರು. ಪಿಯು ಕಾಲೇಜಿನ ಪ್ರಾಚಾರ್ಯ ಎಲ್. ಬಿ. ತುಪ್ಪದ ಸ್ವಾಗತಿಸಿದರು. ಪ್ರೌಢ ಶಾಲಾ ಉಪ ಪ್ರಾಚಾರ್ಯ ಬಿ. ಎನ್. ಅರಕೇರಿ ವಂದಿಸಿದರು. ಇತಿಹಾಸ ಉಪನ್ಯಾಸಕ ಬಿ. ಎನ್. ಹಂದಿಗುಂದ ನಿರೂಪಿಸಿದರು. ಸ್ಥಾನಿಕ ಆಡಳಿತ ಮಂಡಳಿ ಸದಸ್ಯರಾದ ಸಂತೋಷ ಹುದ್ದಾರ, ಐ.ಟಿ.ಐ ಪ್ರಾಚಾರ್ಯ ಎಸ್. ಎಸ್. ಅಂಗಡಿ, ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕಿ ಜಯಶ್ರೀ ಹಿರೇಮಠ, ಶಿಕ್ಷಕ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು.

ನಾಳೆ ಶ್ರೀ ಬನಶಂಕರಿ ದೇವಿ ರಥೋತ್ಸವ

ಬನಶಂಕರಿ ಜಾತ್ರೆ ಭಕ್ತರ, ಕಲಾವಿದರ ಪಾಲಿನ ಅದೃಷ್ಟದೈವ

ಬಸವರಾಜ್ ಉಳ್ಳಾಗಡ್ಡಿ, ಬಾದಾಮಿ

ಕೋಟ್ಯವಧಿ ಆರಾಧ್ಯ ದೇವತೆ ಬನಶಂಕರಿ ದೇವಿಯ ಜಾತ್ರೆಯ ಸಡಗರ ಸಂಭ್ರಮ ಹೊಸ ವರ್ಷದ ಜ. 13 ಸೋಮವಾರರಂದು ದೇವಿಯ ಮಹಾ ರಥೋತ್ಸವ ಜರುಗಲಿದ್ದು ಶುಕ್ರವಾರ 17ರಂದು ಕಳಸಾರೋಹನ ನಡೆಯುತ್ತದೆ 14 ರಂದು ಸಂಕ್ರಮಣದ ಬಂದಿರುವುದರಿಂದ ಪ್ರವಾಸಿಗರಿಗೆ, ಭಕ್ತರಿಗೆ ಇದು ಅನುಕೂಲವಾಗಲಿದೆ.

ಜಾತ್ರೆಯ ವಿಶೇಷ: ಕೇವಲ ಮಕ್ಕಳ ಆಟಿಗೆ, ಮಹಿಳೆಯರ ಶೃಂಗಾರ ಸಾಧನಗಳು ಮಾರಾಟವಾಗುವುದಿಲ್ಲ. ಇದರ ಜೊತೆಗೆ ಮನೆಗೆ, ಮನೆ ಕಟ್ಟಲು ಅಗತ್ಯವಿರುವ ಎಲ್ಲ ಸಾಮಗ್ರಿಗಳು ಈ ಜಾತ್ರೆಯಲ್ಲಿ ದೊರೆಯುವುದು ವಿಶೇಷ. ಸಾಗವಾನಿ, ಮತ್ತಿ, ತೇಗು ಮುಂತಾದ ಉತ್ಕೃಷ್ಠ ದರ್ಜೆಯ ಕಟ್ಟಿಗೆಯಿಂದ ಕುಶಲ ಕರ್ಮಿಗಳಿಂದ ನಾಜೂಕು ಕೆತ್ತನೆ ಮಾಡಿದ ಬಾಗಿಲು, ಚೌಕಟ್ಟು, ತೊಲೆಗಳು, ಮಂಚ, ಕುರ್ಚಿ, ಮೇಜುಗಳು ಮಾರಲ್ಪಡುತ್ತವೆ. ಕೆತ್ತನೆಯ ಕಲೆ ಕುಶಲ ಕಲೆ ಕಲಾಪ್ರಿಯರನ್ನು ಕೈ ಬೀಸಿ ಕರೆಯುತ್ತಲೇ ಇರುತ್ತವೆ.

ತಿನಿಸಿನ ಗಮ್ಮತ್ತು ತಿಂದವರಿಗೆ ಗೊತ್ತು:ತಿಂಡಿ, ತಿನುಸುಗಳ ಮಾರಾಟ ವೈವಿಧ್ಯಮಯವಾಗಿರುತ್ತವೆ. ಚುರುಮರಿ (ಮಂಡಕ್ಕಿ), ಖಾರಾ, ಸೇವು, ಮಿರ್ಚಿ, ಮೆಣಸಿನಕಾಯಿ, ಉಳ್ಳಾಗಡ್ಡಿ (ಈರುಳ್ಳಿ) ಭಜಿ, ಉಪ್ಪಿಟ್ಟು, ಪುರಿಭಾಜಿ, ಒಗ್ಗರಣೆ, ಗಿರಮಿಟ್ಟು ಹೀಗೆ ಒಂದೆಡೆಯಾದರೆ ಅಮ್ಮೀನಗಡ, ಗೋಕಾಕ ಕರದಂಟು, ಧಾರವಾಡ ಐನಾಪೂರ ಫೇಡೆ, ಬೆಳಗಾವಿ ಖೋವ-ಕುಂದಾಗಳ ಮಾರಾಟವೂ ಭರ್ಜರಿಯಾಗಿರುತ್ತದೆ.

ನಾಟಕಗಳ ಕಲರವ: ಬನಶಂಕರಿ ಜಾತ್ರೆ ಬಂದರೆ ಉತ್ತರ ಕರ್ನಾಟಕದ ನಾಟಕ ಕಂಪೆನಿಗಳೆಲ್ಲ ಲಗ್ಗೆ ಹಾಕುತ್ತವೆ. ಈ ವರ್ಷ ತ್ತಾರು ಕಂಪನಿಗಳ ನಾಟಕಗಳು ಆಗಮಿಸಿದ್ದು ತಾಳಿಕೊಟಿಯವರ ಚೈನಿಮಾಡಕ ರೊಕ್ಕಬೇಕ ಪ್ರೀತಿಮಾಡಕ

ದಿಲ್ ಬೇಕು, ಜೇವರ್ಗಿಯವರ ಅಕ್ಕ ಅಂಗಾರ ತಂಗಿ ಬಂಗಾರ, ಹರೀಶ ಹಿರಿಯೂರ ನಟಿಸಿರುವ ನೀ ಹೂ ಅಂದ್ರ ಗಿಚ್ಚ ಆಕ್ಕೇನಿ ಇಲ್ಲಂದ್ರ ಹುಚ್ಚೆಕ್ಕೆನಿ, ಜಂಪ ಹೊಡಿತಾಳ ಕೆಂಪಿ, ಸುಮ್ಮಿರ್ ಸುಂದ್ರಿ, ಶಿಸ್ತ ಪ್ರೀತಿಮಾಡು ಮಸ್ತ ಮಜಾಮಾಡು, ನಾ ಡ್ರೈವರ ಅಕಿ ನನ್ನ ಲವರ, ರೊಕ್ಕಿನವ ನಾ ಅಲ್ಲಾ ಸೊಕ್ಕಿನವ ನಾ ಅಲ್ಲಾ ನಾಟಕಗಳಲ್ಲಿ ಬಣ್ಣ ಬಣ್ಣದ ಸೀನರಿ, ಥಳಕು, ಬಳುಕಿನ ನಟಿಯರ ವೈಯ್ಯಾರ, ಹುಚ್ಚೆಬ್ಬಿಸುವ ಹಾಡುಗಳು, ಸಂಗೀತ ರಸಿಕ ಜನರು ಥೇಟರುಗಳಿಗೆ ನುಗ್ಗಿ ಬಿಡುತ್ತಾರೆ. ಸತತ 24 ತಾಸು ನಾಟಕಗಳು ರಾತ್ರಿ ಬೆಳತನ ತೆರಪಿಲ್ಲದೇ ನಡೆದು ಹೌಸ್ ಫುಲ್ ಗೆ ಮಾತ್ರ ಕೊರತೆಯೇ ಇಲ್ಲ. ವರ್ಷವಿಡೀ ಬೇರೆ ಕಡೆ ಆಗಿರುವ ಮತ್ತು ಸಾಲವನ್ನು ತೀರಿಸಲು ನಾಟಕ ಕಂಪನಿಗಳ ಮಾಲೀಕರಿಗೆ ಈ ಜಾತ್ರೆಯ ಹಂಗಾಮು ಚಿಂತೆ ದೂರ ಮಾಡುವ ಫಲವತ್ತಾದ ಭೂಮಿಯಾಗಿರುತ್ತದೆ.

ಬಸವರಾಜಗೆ ವರ್ಷದ ಕನ್ನಡಿಗ ಪ್ರಶಸ್ತಿ

ಬೀಳಗಿ: ತಾಲೂಕಿನ ಕುಂದರಗಿಯ ಶ್ರೀ ರಾಮಲಿಂಗೇಶ್ವರ ಅನುದಾನಿತ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕ ಬಸವರಾಜ ದಾವಣಗೆರೆವರ್ಷದ ಕನ್ನಡಿಗ 2024 ರಾಜ್ಯಮಟ್ಟದ ಸಾಧಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಬೆಂಗಳೂರಿನ ಗಿರೀಶ್ ಗೌಡ ಸಾರಥ್ಯದ ನಾಡಿನ ಸಂಸ್ಕೃತಿ ಮತ್ತು ಸಂಭ್ರಮವನ್ನು ಹರಡುವ ಚಿತ್ರಸಂತೆ ವೇದಿಕೆ ವತಿಯಿಂದ ಕೊಡಮಾಡುವ ವರ್ಷದ ಕನ್ನಡಿಗ 2024 ರಾಜ್ಯಮಟ್ಟದ ಸಾಧಕ ಪ್ರಶಸ್ತಿಯನ್ನು ಜನವರಿ 9 ರಂದು ಗುರುವಾರ ಬೆಂಗಳೂರಿನ ಅರಮನೆ ನಗರದ ಹೈಡ್ ಪಾರ್ಕ್ ಅಪಾರ್ಟ್ ಸಭಾಭವನದಲ್ಲಿ ನಡೆದ ಸಮಾರಂಭದಲ್ಲಿ ರುದ್ರ, ಗರುಡ ಪುರಾಣ ಚಿತ್ರದ ನಾಯಕನಟ ರಿಷಿ ಯವರು ನೀಡಿ ಗೌರವಿಸಿದರು..

ವಿಶ್ವಕರ್ಮ ಸಮಾಜದ ಸಮಾವೇಶ ಇಂದು

ಗುಳೇದಗುಡ್ಡ: ಅಖಿಲ ಕರ್ನಾಟಕ ವಿಶ್ವಕರ್ಮ ಸಮಾಜ ಜಿಲ್ಲಾ ಘಟಕ, ತಾಲೂಕ ಅಖಿಲ ಕರ್ನಾಟಕ ವಿಶ್ವಕರ್ಮ ಸಮಾಜ ಸೇವಾ ಸಂಘ ಹಾಗೂ ಶ್ರೀ ಅನ್ನಪೂರ್ಣೇಶ್ವರಿ ಮಹಿಳಾ ಮಂಡಳ, ಶ್ರೀ ವಿಶ್ವಕರ್ಮ ತರುಣ ಸಂಘ ತಾಲೂಕ ಘಟಕದ ಸಹಯೋಗದಲ್ಲಿ ಭಗವಾನ್ ಶ್ರೀ ವಿಶ್ವಕರ್ಮ ಪೂಜಾ ಮಹೋತ್ಸವ-2025, ತಾಲೂಕಮಟ್ಟದ ವಿಶ್ವಕರ್ಮ ಸಮಾಜದ ಜನಜಾಗೃತಿ ಸಮಾವೇಶ ಹಾಗೂ ಸಮಾಜದ ಸಾಧಕರಿಗೆ ಸನ್ಮಾನ ಸಮಾರಂಭ ಜ.12 ರಂದು ಬೆಳಗ್ಗೆ 11.30 ಗಂಟೆಗೆ ಪಟ್ಟಣದ ಕರನಂದಿಯವರ ರಂಗ ಮಂದಿರದಲ್ಲಿ ನಡೆಯಲಿದೆ ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಸಮಾಜದ ಜಿಲ್ಲಾಧ್ಯಕ್ಷ ಹನಮಂತ ಪತ್ತಾರ ಹೇಳಿದರು.

ಅವರು ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಿಗ್ಗೆ 8.30ಕ್ಕೆ ಶ್ರೀ ಮಳೆರಾಜೇಂದ್ರಸ್ವಾಮಿ ಮಠದಿಂದ ಮಂಗಲ ವಾದ್ಯ ಹಾಗೂ ಸುಮಂಗಲಿಯರ ಕುಂಭ, ಕಳಸದಾರತಿಯೊಂದಿಗೆ ಶ್ರೀ ವಿಶ್ವಕರ್ಮ ಮೂರ್ತಿ ಮೆರವಣಿಗೆಗೆ ಅಖಿಲ ಕರ್ನಾಟಕ ವಿಶ್ವಕರ್ಮ ಸಮಾಜದ ರಾಜ್ಯಾಧ್ಯಕ್ಷೆ ವಸಂತ ಮುರಳಿ ಆಚಾರ್ಯ ಅವರು ಚಾಲನೆ ನಿಡುವರು.

ಬಳಿಕ ಶ್ರೀ ವಿಶ್ವಕರ್ಮ ಪೂಜಾ ಮಹೋತ್ಸವದ ಧಾರ್ಮಿಕ ಹಾಗೂ ತಾಲೂಕಮಟ್ಟದ ವಿಶ್ವಕರ್ಮ ಸಮಾಜದ ಜಾಗೃತಿ ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ಬಾಗಲಕೋಟೆ ಶ್ರೀ ಮಳೆರಾಜೇಂದ್ರ ಸ್ವಾಮಿ ಮಠದ ಶ್ರೀ ಮಳಿಯಪ್ಪಯ್ಯಸ್ವಾಮಿ ಮಹಾಪುರುಷರು, ಗದ್ದನಕೇರಿ ಮಠದ ಶ್ರೀ ಭಾಸ್ಕರಸ್ವಾಮಿ ಮಹಾಪುರುಷರು, ಮೂರನಾಳ ಮಠದ ಶ್ರೀ ಜಗನ್ನಾಥಸ್ವಾಮಿ ಮಹಾಪುರುಷರು, ಹೊನಗನಹಳ್ಳಿ ಬ್ರಹ್ಮಾನಂದ ಆಶ್ರಮದ ಸಂಗಪ್ಪಜ್ಜ ಶರಣರು ಸಾನ್ನಿಧ್ಯ

ವಹಿಸುವರು. ಕಗಲಗೊಂಬದ ಶ್ರೀರಾಮಾಚಾರ್ಯ ವಿಶ್ವಬ್ರಾಹ್ಮಣ ಅವರು ಸಾನಿಧ್ಯ ವಹಿಸುವರು.

ಸಮಾಜದ ಜಾಗೃತಿ ಸಮಾವೇಶವನ್ನು ಶಾಸಕ ಭೀಮಸೇನ ಚಿಮ್ಮನಕಟ್ಟಿ ಉದ್ಘಾಟಿಸುವರು. ವಿಶ್ವಕರ್ಮ ಸಮಾಜದ ಜಿಲ್ಲಾ ಅಧ್ಯಕ್ಷ ಹನಮಂತ ಪತ್ತಾರ ಅಧ್ಯಕ್ಷತೆ ವಹಿಸುವರು. ವಿ.ಕ. ಸಮಾಜದ ರಾಜ್ಯಾಧ್ಯಕ್ಷ ಶ್ರೀನಿವಾಸ ಮುನವಳ್ಳಿ ಅವರು ವಿಶ್ವಕರ್ಮ ಮೂರ್ತಿಗೆ ಪುಷ್ಪಾರ್ಚನೆ ಮಾಡುವರು. ಸಂಸದ ಪಿ.ಸಿ. ಗದ್ದಿಗೌಡರ, ಮಾಜಿ ಶಾಸಕ ಎಂ.ಕೆ. ಪಟ್ಟಣಶೆಟ್ಟಿ, ಸಮಾಜ ಬಾಂಧವರು ಉಪಸ್ಥಿತರಿರುವರು. ಇದೇ ಸಂದರ್ಭದಲ್ಲಿ ಸಮಾಜದ ಸಾಧಕರು ಹಾಗೂ ದಾನಿಗಳನ್ನು ಸನ್ಮಾನಿಸಲಾಗುವುದು ಸಂಘದ ಎಂದು ಹೇಳಿದರು.

ಸಮಾಜದ ತಾಲೂಕು ಅಧ್ಯಕ್ಷ ಚಂದ್ರಶೇಖರ ಬಡಿಗೇರ, ಗೌರವಾಧ್ಯಕ್ಷ ಸುಭಾಷ ಬಡಿಗೇರ, ಉಪಾಧ್ಯಕ್ಷ ಮಾನಪ್ಪ ಬಡಿಗೇರ, ಪ್ರಧಾನ ಕಾರ್ಯದರ್ಶಿ ಅಖಂಡೇಶ್ವರ ಎಂ. ಪತ್ತಾರ, ನೀಲಪ್ಪ ಬಡಿಗೇರ, ಈರಪ್ಪ ಬಡಿಗೇರ, ಲಚ್ಚಪ್ಪ ಕಂಬಾರ, ಮೌನೇಶ ಬಡಿಗೇರ ಮತ್ತಿತರರು ಇದ್ದರು.

ಜ.14ರಿಂದ ಸಿದ್ದಶ್ರೀ ರಾಷ್ಟ್ರೀಯ ಉತ್ಸವ

ಅಮೀನಗಡ: ಸಮೀಪದ ಸುಕ್ಷೇತ್ರ ಸಿದ್ದನಕೊಳ್ಳದಲ್ಲಿ ಜ.14 ಮತ್ತು 15 ರಂದು ಸಿದ್ದಶ್ರೀ ರಾಷ್ಟ್ರೀಯ ಉತ್ಸವ ಹಾಗೂ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಜ.14 ರಂದು ಚಾಲನೆ ದೊರೆಯಲಿದೆ.

ಶ್ರೀಮಠದ ಆವರಣದಲ್ಲಿ ಸಂಜೆ 7ಕ್ಕೆ ನಡೆಯುವ ಉತ್ಸವವನ್ನು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಉದ್ಘಾಟಿಸಲಿದ್ದಾರೆ. ಸೊರಬದ ಮುರುಘರಾಜೇಂದ್ರ ಸ್ವಾಮೀಜಿ, ಗುಳೇದಗುಡ್ಡದ ಅಭಿನವ ಕಾಡಸಿದ್ದೇಶ್ವರ ಶ್ರೀ, ಮುರನಾಳದ ಮಳಿಯಪ್ಪಜ್ಜನವರು, ಕ್ಷೇತ್ರದ ಧರ್ಮಾಧಿಕಾರಿ ಶಿವಕುಮಾರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಶಾಸಕ ವಿಜಯಾನಂದ ಕಾಶಪ್ಪನವರ, ಜಿಪಂ ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ, ಕೇಂದ್ರ ಕಿಸಾನ್ ಸಮಿತಿ ನಿರ್ದೇಶಕ ಡಾ.ಆರ್.ಎಸ್.ರಾಜು, ಶಾಸಕ ಸಿ.ಎಸ್.ನಾಡಗೌಡರ, ಎನ್.ಎಚ್.ಕೋನರೆಡ್ಡಿ ಇತರರು ಆಗಮಿಸಲಿದ್ದಾರೆ. ಜ.15 ರಂದು ಸಂಜೆ ನಡೆಯುವ ಚಲನಚಿತ್ರೋತ್ಸವವನ್ನು ಸಚಿವ ಎನ್.ಎಸ್.ಬೋಸರಾಜು ಉದ್ಘಾಟಿಸಲಿದ್ದು, ಇಳಕಲ್‌ನ ಗುರುಮಹಾಂತ ಸ್ವಾಮೀಜಿ, ಗದಗನ ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯ ಅಜ್ಜನವರು ಸಾನ್ನಿಧ್ಯ ವಹಿಸಲಿದ್ದಾರೆ. ಡಾ.ಶಿವಕುಮಾರ ಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದು, ಜನಪ್ರತಿನಿಧಿಗಳು, ಗಣ್ಯರು, ಸನ್ಮಾನಿತರು ಆಗಮಿಸಲಿದ್ದಾರೆ. ಸಿದ್ದಶ್ರೀ ಉತ್ಸವದ ನಿಮಿತ್ತ ಜ.14 ಹಾಗೂ 15 ರಂದು ನಾನಾ ಸಾಂಸ್ಕೃತಿಕ ಕಾರ್ಯಕ್ರಮ, ಚಲನಚಿತ್ರ ಪ್ರದರ್ಶನ ಸೇರಿದಂತೆ ಇತರೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

ಸಮಾಚಾರ ಸಣ್ಣದಲ್ಲ

ಪ್ರವಾಸಗಳ ಕುರಿತು ತಜ್ಞರಿಂದ ಉಚಿತ ಮಾಹಿತಿ

ಬೆಂಗಳೂರು: ಪ್ರವಾಸೋದ್ಯಮ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಅಡಿಗಾಸ್ ಯಾತ್ರಾ, ತನ್ನ 30 ವರ್ಷಗಳ ಸಮರ್ಪಿತ ಸೇವೆಯನ್ನು ಪೂರ್ಣಗೊಳಿಸಿರುವ ಮಹತ್ವದ ಸಾಧನೆಯನ್ನು ಆಚರಿಸುವ ಸಲುವಾಗಿ ಜ. 12 ರಂದು ಬೆಳಗ್ಗೆ 10 ರಿಂದ 3 ಗಂಟೆಯವರೆಗೂ 3ನೆ ಮಹಡಿ ಕಾಸಿಯ ಬಿಲ್ಡಿಂಗ್ (ಡಿ ಮಾರ್ಟ್ ಮೇಲೆ) ಹೊಸಹಳ್ಳಿ ಮೆಟ್ರೋ ಸ್ಟೇಷನ್ ಹತ್ತಿರ, ವಿಜಯನಗರದಲ್ಲಿ ಹಾಗೂ 13 ರಂದು ಬೆಳಗ್ಗೆ 10ರಿಂದ ಸಂಜೆ 6ರ ವರೆಗೂ 144, ದುರ್ಗಾ ಮ್ಯಾನ್ಸನ್, ಡಿ ವಿ ಜಿ ರಸ್ತೆ, ಬಸವನಗುಡಿಯಲ್ಲಿ ಉಚಿತವಾಗಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರವಾಸಗಳ ಕುರಿತು ನುರಿತ ಅನುಭವಿ ತಜ್ಞರಿಂದ ಮಾಹಿತಿ ಪಡೆದುಕೊಳ್ಳಬಹುದಾಗಿದೆ. ಇದು ಸಂಪೂರ್ಣ ಉಚಿತ. ಹೆಚ್ಚಿನ ವಿವರಗಳಿಗಾಗಿ 080-26616678, 9449478944 ಸಂಪರ್ಕಿಸಬಹುದು.

ತಂದೆ, ಮಲತಾಯಿ ಹತ್ಯೆಗೈದಿದ್ದ ಪುತ್ರ ಬಂಧನ

ಹುಬ್ಬಳ್ಳಿ: ಆಸ್ತಿಗಾಗಿ ತಂದೆ ಹಾಗೂ ಮಲ ತಾಯಿಯನ್ನು ಕೊಲೆ ಮಾಡಿದ್ದ ಮಗನನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತ ಆರೋಪಿಯನ್ನು ಗಂಗಾಧರ ಎಂದು ಗುರುತಿಸಲಾಗಿದೆ. ಶುಕ್ರವಾರ ಹುಬ್ಬಳ್ಳಿಯ ಕುಸಗುಲ್ ಗ್ರಾಮದಲ್ಲಿ ಅಶೋಕ್ ಹಾಗೂ ಶಾರದಾ ಎಂಬವರನ್ನು ಆರೋಪಿ ಕೊಲೆ ಮಾಡಿದ್ದ. ತನಿಖೆ ವೇಳೆ ಆಸ್ತಿಗಾಗಿ ಮಗನೇ ಕೃತ್ಯ ಎಸಗಿರುವುದಾಗಿ ತಿಳಿದು ಬಂದಿತ್ತು. ಕೇವಲ ಎರಡು ಎಕರೆ ಜಮೀನಿಗಾಗಿ ಹೆತ್ತವರನ್ನೇ ಆರೋಪಿ ಕಬ್ಬಿಣದ ರಾಡ್‌ನಿಂದ ಹಲ್ಲೆ ಮಾಡಿ ಕೊಲೆ ಮಾಡಿದ್ದ. ಬಳಿಕ ಸ್ಥಳದಿಂದ ಪರಾರಿಯಾಗಿದ್ದ. ಕೊಲೆ ಆರೋಪಿಯನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಲಾಗಿದೆ. ಕೊಲೆ ನಡೆದ ಸ್ಥಳದಲ್ಲಿ ಗ್ರಾಮೀಣ ಠಾಣೆ ಪೊಲೀಸರು ಆರೋಪಿಯನ್ನು ಕರೆತಂದು ಸ್ಥಳ ಮಹಜರು ನಡೆಸಿದ್ದಾರೆ.

ಅಕ್ರಮ ಡ್ರಗ್ಸ್ ಮಾರಾಟ ಪೊಲೀಸರಿಂದ ಫೈರಿಂಗ್

ಕಲಬುರಗಿ: ಅಕ್ರಮವಾಗಿ ಡ್ರಗ್ ಮಾರಾಟ ಮಾಡುತ್ತಿದ್ದ ಆರೋಪಿಯ ಮೇಲೆ ಬೆಳ್ಳಂಬೆಳಗ್ಗೆ ಪೊಲೀಸರು ಫೈರಿಂಗ್ ಮಾಡಿರುವ ಘಟನೆ ನಗರದ ಹೊರವಲಯದ ತಾವರಗೇರಾ ಬಳಿ ನಡೆದಿದೆ.



ಸುಪ್ರೀತ್ ನವಲೆ ಎಂಬ ವ್ಯಕ್ತಿ ಅಕ್ರಮವಾಗಿ ಕಾರಿನಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಎಂಬ ಮಾಹಿತಿ ಮೇರೆಗೆ ಖಾಕಿಪಡೆ ದಾಳಿ ಮಾಡಿದ್ದು, ಕಾರು ನಿಲ್ಲಿಸಿ ತಪಾಸಣೆ ಮಾಡುವಾಗ ಆರೋಪಿ ಚಾಕುವಿನಿಂದ ಪೊಲೀಸರ ಮೇಲೆ ದಾಳಿ ಮಾಡಿದ್ದಾನೆ. ಮುಖ್ಯಪೇದೆ ಗುರುಮೂರ್ತಿಯ ಮೇಲೆ ನಡೆದ ವೇಳೆ ಆರೋಪಿ ಚಾಕುವಿನಿಂದ ಹಲ್ಲೆ ಮಾಡಿದ್ದು,ಈ ವೇಳೆ ಚೌಕ್ ಪೊಲೀಸ್ ಠಾಣೆಯ ಪಿಐ ರಾಘವೇಂದ್ರ, ಅವರಿಂದ ಆರೋಪಿ ಮೇಲೆ ಫೈರಿಂಗ್ ನಡೆದಿದೆ. ಇನ್ನೂ ಫೈರಿಂಗ್ ಮಾಡಿದ ಪರಿಣಾಮವಾಗಿ ಆರೋಪಿ ಸುಪ್ರೀತ ನವಲೆಗೆ ಗಾಯವಾಗಿದ್ದು,ಜಿಮ್ಸ್ ಆಸ್ಪತ್ರೆಯ ಟ್ರಾಮಾ ಕೇರ್ ಸೆಂಟರ್ ಗೆ ದಾಖಲು ಮಾಡಲಾಗಿದೆ.

ಕಲಬುರಗಿ: ಆನ್‌ಲೈನ್ ಗೇಮ್‌ಗೆ ಯುವಕ ಬಲಿ

ಕಲಬುರಗಿ: ಡ್ರೀಮ್ 11 ಆನ್‌ಲೈನ್ ಗೇಮ ವ್ಯಸನಕ್ಕೆ ಒಳಗಾಗಿದ್ದ ವ್ಯಕ್ತಿ ಸಾಲಕ್ಕೆ ಒಳಗಾಗಿ, ಮಾನಸಿಕ ರೋಗಿಯಾಗಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಸಿದ್ದರಾಮೇಶ್ವರ ಕಾಲೊನಿಯಲ್ಲಿ ನಡೆದಿದೆ. ನಗರದಲ್ಲಿ ಖಾನಾವಳಿಯಲ್ಲಿ ಕೆಲಸ ಮಾಡುತ್ತಿದ್ದ ಅಕ್ಕಲಕೋಟ ತಾಲೂಕಿನ ಜೇವೂರ ಗ್ರಾಮದ ಸಾಗರ ಚವ್ಹಾಣ್ ಆತ್ಮಹತ್ಯೆಗೆ ಒಳಗಾದವ. ಕಳೆದ ಒಂದು ತಿಂಗಳಿಂದ ಮೊಬೈಲ್‌ನಲ್ಲಿ ಡ್ರೀಮ್ 11 ಗೇಮ್ ಆಡುತ್ತಿದ್ದು, ಮಾನಸಿಕ ಅಸ್ವಸ್ಥನಾಗಿದ್ದ. ಕೆಲ ದಿನಗಳ ಹಿಂದೆ ಮನೋರೋಗ ತಜ್ಞರಿಗೆ ತೋರಿಸಲಾಗಿದೆ. ಆದರೂ ಗೇಮ್ ಆಡುವುದು ಬಿಟ್ಟಿರಲಿಲ್ಲ. ಆನ್‌ಲೈನ್ ಗೇಮ್‌ನಲ್ಲಿ ಹಣ ಸೋತಿರುವುದಾಗಿ ಪತ್ನಿಗೆ ಸಾಗರ ಹೇಳಿದ್ದ. ಈ ಮಧ್ಯೆ ಮೃತನ ಸಹೋದರರು ಆತನ ಮೊಬೈಲ್‌ನಲ್ಲಿನ ಡ್ರೀಮ್ 11 ಆ್ಯಪ್ ಡಿಲಿಟ್ ಮಾಡಿ, ಬುದ್ಧಿವಾದ ಹೇಳಿದರು. ಕುಟುಂಬಸ್ಥರೆಲ್ಲರೂ ಕೆಲಸಕ್ಕೆ ಹೋಗಿದ್ದಾಗ ಕೋಣೆಯಲ್ಲಿ ಫ್ಯಾನ್‌ಗೆ ನೇಣು ಹಾಕಿಕೊಂಡಿದ್ದಾನೆ. ಚೌಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದೇ ರಾಜಧಾನಿಗೆ ಸುರ್ಜೇವಾಲ, ವೇಣುಗೋಪಾಲ್?

ಸೋಮವಾರ ಬೆ.11ಕ್ಕೆ ಕೆಪಿಸಿಸಿ ಕಚೇರಿಯಲ್ಲಿ ಸಭೆ
ಶಾಸಕ, ಸಚಿವ, ಹಿರಿಯ ಸಭೆ ಕರೆದ ಕಾಂಗ್ರೆಸ್

- ಸೋಮವಾರ ಸಂಜೆ ಖಾಸಗಿ ಹೋಟೆಲ್‌ನಲ್ಲಿ ಶಾಸಕಾಂಗ ಪಕ್ಷದ ಸಭೆ
- ಪದಾಧಿಕಾರಿಗಳು, ಶಾಸಕರು, ಸಚಿವರಗಳು ಭಾಗಿ
- ಸಿಎಂ ಬದಲಾವಣೆ ಹೇಳಿಕೆ ಬ್ರೇಕ್ ಹಾಕುವಂತೆ ಸೂಚನೆ ನೀಡುವ ಸಾಧ್ಯತೆ

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ಎದ್ದಿರುವ ಗೊಂದಲಗಳ ಪರಿಹಾರಕ್ಕಾಗಿ ರಾಜಧಾನಿ ಬೆಂಗಳೂರಿಗೆ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ಕೆ.ಸಿ. ವೇಣುಗೋಪಾಲ್ ಅವರು ಭಾನುವಾರವೇ ಆಗಮಿಸಲಿದ್ದಾರೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಅಧಿಕಾರ ಹಂಚಿಕೆ ವಿಷಯದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಯಾವುದೇ ಹೇಳಿಕೆ ನೀಡದಿದ್ದರೂ, ಸಿದ್ದರಾಮಯ್ಯ ಆಪ್ತರು ನಿತ್ಯ 'ಐದು ವರ್ಷ ಸಿದ್ದರಾಮಯ್ಯ ಮುಖ್ಯಮಂತ್ರಿ' ಎನ್ನುವ ಮೂಲಕ ಡಿಕೆಶಿಗೆ ಪರೋಕ್ಷ ಟಾಂಗ್ ನೀಡುತ್ತಿದ್ದಾರೆ. ಇದು ಡಿಕೆಶಿ ಹಾಗೂ ಅವರ ಆಪ್ತರ ಅಸಮಾಧಾನಕ್ಕೆ ಕಾರಣವಾಗಿದೆ. ಆದ್ದರಿಂದ ಈ ಸಮಸ್ಯೆ ಬಗೆಹರಿಸಲು ಹೈಕಮಾಂಡ್ ನಾಯಕರು ಬೆಂಗಳೂರಿಗೆ ಆಗಮಿಸಲಿದ್ದಾರೆ ಎನ್ನಲಾಗಿದೆ.

ಈ ವಿವಾದ ಹೆಚ್ಚಾಗುತ್ತಿದ್ದಂತೆ ಸೋಮವಾರ ತುರ್ತು ಶಾಸಕಾಂಗ ಸಭೆಯನ್ನು ಸಿದ್ದರಾಮಯ್ಯ ಅವರು ಕರೆದಿದ್ದರು. ಈ ಸಭೆಗೆ ಸುರ್ಜೇವಾಲ ಅವರು ಭಾಗವಹಿಸುವುದು ಖಚಿತವಾಗಿತ್ತು. ಆದರೀಗ ಅವರೊಂದಿಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿಯಾಗಿರುವ ಕೆ.ಸಿ. ವೇಣುಗೋಪಾಲ್ ಸಹ ಭಾಗವಹಿಸಲಿದ್ದಾರೆ ಎನ್ನಲಾಗಿದೆ. ಸೋಮವಾರ ಬೆ.11ಗಂಟೆ ಕೆಪಿಸಿಸಿ ಕಚೇರಿಯಲ್ಲಿ ಆಯೋಜಿಸಿರುವ ಸಭೆಯಲ್ಲಿ ಈ ಇಬ್ಬರು ನಾಯಕರು ಶಾಸಕ, ಸಚಿವರ ಮಾತುಗಳನ್ನು ಆಲಿಸಲಿದ್ದಾರೆ.

ಭಾನುವಾರ ರಾತ್ರಿ ಆಗಮಿಸುವ ನಾಯಕರು, ಸಿಎಂ, ಡಿಸಿಎಂ ಅವರನ್ನು ಭೇಟಿಯಾಗುವ ಸಾಧ್ಯತೆಯಿದೆ. ಈ ಭೇಟಿಯ ವೇಳೆ ಇತರೆ ನಾಯಕರಿಗೆ ಪ್ರತ್ಯೇಕ ಭೇಟಿಗೆ ಅವಕಾಶವಿಲ್ಲ ಎನ್ನಲಾಗಿದೆ. ಆದರೆ ಪರಿಶಿಷ್ಟ ಜಾತಿ, ಪಂಗಡದ ಸಭೆಗೆ ಸಂಬಂಧಿಸಿದಂತೆ ಸುರ್ಜೇವಾಲ ಅವರನ್ನು ಪ್ರತ್ಯೇಕವಾಗಿ ಭೇಟಿಯಾಗಲು ಗೃಹ ಸಚಿವ ಡಾ.ಪರಮೇಶ್ವರ್ ಪ್ರಯತ್ನಿಸಿದ್ದು, ಆದರೆ ಸಮಯ ನಿಗದಿಯಾಗಿಲ್ಲ ಎನ್ನಲಾಗಿದೆ.

ಬೆಳಗ್ಗೆ ನಡೆಯುವ ಸಭೆಯಲ್ಲಿ ಪ್ರಮುಖವಾಗಿ ಅಧಿಕಾರ ಹಂಚಿಕೆ, ಅಧ್ಯಕ್ಷರ ಬದಲಾವಣೆ, ಮುಖ್ಯಮಂತ್ರಿ ಬದಲಾವಣೆಗೆ ಸಂಬಂಧಿಸಿದಂತೆ ನಾಯಕರು ಹೇಳುತ್ತಿರುವ ಹೇಳಿಕೆಗೆ ಬ್ರೇಕ್ ಹಾಕುವಂತೆ ಹೈಕಮಾಂಡ್ ಸೂಚನೆ ನೀಡುವ ಸಾಧ್ಯತೆಯಿದೆ. ಈ ಸಂಬಂಧ ಈಗಾಗಲೇ ಎಚ್ಚರಿಕೆ ನೀಡಿದ್ದರೂ, ನಾಯಕರು ಹೈಕಮಾಂಡ್ ಸೂಚನೆಯನ್ನು ಉಲ್ಲಂಘಿಸುವುದನ್ನು ಗಮನಿಸಿದೆ. ಇನ್ನೊಮ್ಮೆ ಇದು ಪರಿವರ್ತನೆಯಾದರೆ, ಕಠಿಣ ಕ್ರಮ ಎದುರಿಸಬೇಕಾಗುತ್ತದೆ ಎನ್ನುವ ಸ್ಪಷ್ಟ ಸಂದೇಶ ರವಾನಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ಕೆಪಿಸಿಸಿ ಕಚೇರಿಯಲ್ಲಿ ಸಭೆ

ಈ ಹಿಂದೆ ಕೇವಲ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯನ್ನು ಆಯೋಜಿಸಲಾಗಿತ್ತು. ಆದರೀಗ ಸೋಮವಾರ ಬೆಳಗ್ಗೆ ಕೆಪಿಸಿಸಿ ಕಚೇರಿಯಲ್ಲಿ ಮೊದಲ ಹಂತದ ಸಭೆ ನಡೆಸಲು ತೀರ್ಮಾನಿಸಲಾಗಿದೆ. ಈ ಸಭೆಯಲ್ಲಿ ಶಾಸಕರು, ಸಚಿವರೊಂದಿಗೆ ಕೆ.ಸಿ. ವೇಣುಗೋಪಾಲ್ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲ ಅವರು ಚರ್ಚೆ ನಡೆಸಲಿದ್ದಾರೆ. ಇದರೊಂದಿಗೆ ಪ್ರಮುಖ ಪದಾಧಿಕಾರಿಗಳು ಸಭೆಯಲ್ಲಿರಲಿದ್ದು, ಪ್ರಸ್ತುತ ರಾಜಕೀಯ ಬೆಳವಣಿಗೆಯ ಬಗ್ಗೆ ಮಾತನಾಡಲಿದ್ದಾರೆ ಎನ್ನಲಾಗಿದೆ.

ದೆಹಲಿಯಲ್ಲಿ ಅಂತಿಮ ತೀರ್ಮಾನ

ಸೋಮವಾರ ಸಭೆ ನಡೆದರೂ, ಪ್ರಧಾನ ಕಾರ್ಯದರ್ಶಿಗಳಿಬ್ಬರೂ ನಾಯಕರ ಅಭಿಪ್ರಾಯವನ್ನು ಆಲಿಸಿ ವಾಪಸು ತೆರಳಲಿದ್ದಾರೆ.

ಬಳಿಕ ಮಂಗಳವಾರ ರಾತ್ರಿ ಸಿಎಂ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರೂ ದೆಹಲಿಗೆ ತೆರಳಲಿದ್ದು, ಎಐಸಿಸಿ ಕಟ್ಟಡ ಉದ್ಘಾಟನೆಯ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮದ ಬಳಿಕ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಅವರೊಂದಿಗೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ ಎನ್ನಲಾಗಿದೆ.

ಸೋಮವಾರ ಸಂಜೆ ಸಿಎಲ್‌ಪಿ ಸಭೆ: ಸೋಮವಾರ ಬೆಳಗ್ಗೆ ಕೆಪಿಸಿಸಿ ಕಚೇರಿಯಲ್ಲಿ ಪದಾಧಿಕಾರಿಗಳು, ಶಾಸಕ ಹಾಗೂ ಸಚಿವರನ್ನು ಒಳಗೊಂಡ ಸಭೆ ನಡೆಯಲಿದೆ. ಈ ವೇಳೆ ದೂರು, ಪ್ರತಿದೂರು ದಾಖಲಿಸುವ ಸಾಧ್ಯತೆಯಿದೆ. ಇದಾದ ಬಳಿಕ ಸಂಜೆ ಸಿದ್ದರಾಮಯ್ಯ ನೇತೃತ್ವದಲ್ಲಿ ಶಾಸಕಾಂಗ ಪಕ್ಷದ ಸಭೆ ನಡೆಯಲಿದೆ.

ಅಪಹರಣ ಪ್ರಕರಣ: 10 ಮಂದಿ ಸೆರೆ

ಆರೋಪಿಗಳ ಬಂಧನ ವೇಳೆ ಘರ್ಷಣೆ, ಮೂವರು ಪೊಲೀಸರಿಗೆ ಗಾಯ

ಯಲ್ಲಾಪುರ: ಮುಂಡಗೋಡಿನಲ್ಲಿ ನಡೆದ ಅಪಹರಣ ಪ್ರಕರಣದಲ್ಲಿ ಭಾಗಿಯಾಗಿದ್ದ 10 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಉಳಿದ ಇಬ್ಬರನ್ನು ಶೀಘ್ರವೇ ಬಂಧಿಸಲಾಗುವುದು ಎಂದು ಉತ್ತರ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠ ನಾರಾಯಣ ಎಂ ತಿಳಿಸಿದ್ದಾರೆ.

ಯಲ್ಲಾಪುರ ಠಾಣೆಯಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಮುಂಡಗೋಡಿನ ಜಮೀರ್ ಅಹ್ಮದ್ ದರ್ಗಾವಾಲೆಯನ್ನು ಜ.9ರಂದು ಸಂಜೆ ಅಪಹರಿಸಲಾಗಿತ್ತು. ಜಮೀರ್ ಈ ಹಿಂದೆ ಬ್ಲ್ಯಾಕ್ ರೈಲ್ವೆ ಟಿಕೆಟ್ ಮಾರಾಟ, ಮರಳು ಮಾಫಿಯಾ, ಐಪಿಎಲ್ ಬೆಟ್ಟಿಂಗ್ ಮುಂತಾದ ಕೃತ್ಯಗಳಲ್ಲಿ ಭಾಗಿಯಾಗಿದ್ದು, ಆತನ ವಿರುದ್ಧ ಅನೇಕ ಪ್ರಕರಣ ದಾಖಲಾಗಿವೆ.. ಜೈಲಿನಿಂದ ಬಿಡುಗಡೆಗೊಂಡ ಅಪರಾಧಿಗಳನ್ನು ಪರಿಚಯಿಸಿಕೊಂಡು ತನ್ನ ವ್ಯವಹಾರ ನಡೆಸುತ್ತಿದ್ದ.

ಅಪಹರಣಕ್ಕೆ ಯೋಜನೆ: ಮುಂಡಗೋಡಿನ ಖಾಜಾ ಹಾಗೂ ಇನ್ನೊಬ್ಬ ವ್ಯಕ್ತಿ ಈ ಪ್ರಕರಣದ ಸೂತ್ರಧಾರ. ಕೊಲೆ ಪ್ರಕರಣದಲ್ಲಿ 40 ದಿನಗಳ ಹಿಂದೆ ಧಾರವಾಡದ ಜೈಲಿನಿಂದ ಜಾಮೀನಿನ ಮೇಲೆ ಹೊರಬಂದ ರಹೀಂ ಜಾಫರ್‌ಸಾಬ್, ಅಜಯ ಫಕೀರಪ್ಪ ಮೂಡ್ಲಗಿ ಎಂಬುವವರಿಗೆ ಜಮೀರ್ ಅಹ್ಮದ್ ದರ್ಗಾವಾಲೆ ಕುರಿತು ಮಾಹಿತಿ ನೀಡಿ ಡಿ. 3 ರಿಂದಲೇ ಯೋಜನೆ ರೂಪಿಸಿದ್ದರು.

ಮೊದಲು ಐವರು, ಬಳಿಕ ಇನ್ನೂ ಐವರ ಬಂಧನ: ಘಟನೆ ನಡೆದ ಕೂಡಲೇ ಪೊಲೀಸ್ ಇಲಾಖೆಯಿಂದ 4 ತಂಡಗಳನ್ನು ರಚಿಸಿ ತನಿಖೆ ನಡೆಸಲಾಗಿತ್ತು. ಶುಕ್ರವಾರ ಒತ್ತೆಹಣ ಒಯ್ಯುತ್ತಿದ್ದ ಐವರು ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಲಾಗಿದೆ. ಬಂಧಿತರು ನೀಡಿದ ಮಾಹಿತಿ ಮೇರೆಗೆ ಶನಿವಾರ ಮುಂಜಾನೆ ಇತರ ಐವರನ್ನು ಬಂಧಿಸಲು ಪೊಲೀಸರು ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಯಲ್ಲಾಪುರ ತಾಲೂಕಿನ ಡೋಂಗಿನಾಳ ಬಳಿ ಖಾರದಪುಡಿ, ಕಲ್ಲು ಹಾಗೂ ಚಾಕುವಿನಿಂದ ಆರೋಪಿಗಳು ದಾಳಿ ನಡೆಸಿದ್ದಾರೆ. ಪೊಲೀಸರು ಪ್ರಾಣರಕ್ಷಣೆಗಾಗಿ ರಹೀಂ ಜಾಫರ್‌ಸಾಬ್, ಅಜಯ ಮಡ್ಲಿ ಕಾಲಿಗೆ ಗುಂಡು ಹಾರಿಸಿದ್ದಾರೆ. ಕೊನೆಗೆ ವಾಹನದಲ್ಲಿದ್ದ ಎಲ್ಲ ಐವರು ಆರೋಪಿಗಳನ್ನು ಬಂಧಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಮುಂಡಗೋಡ ಇನ್ಸ್‌ಪೆಕ್ಟರ್ ರಂಗನಾಥ ನೀಲಮ್ಮನವರ್, ಹಳಿಯಾಳ ಪಿಎಸ್‌ಐ ಪರಶುರಾಮ, ಯಲ್ಲಾಪುರ ಠಾಣೆಯ ಸಿಬ್ಬಂದಿ ಮಹಮದ್ ಷಫಿ ಅವರಿಗೆ ಗಾಯಗಳಾಗಿದ್ದು, ಯಲ್ಲಾಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗುಂಡೇಟು ತಿಂದ ಆರೋಪಿಗಳನ್ನು ಕಾರವಾರದ ಕ್ರಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಎಸ್‌ಪಿ ನಾರಾಯಣ ವಿವರಿಸಿದರು.

ಸವದತ್ತಿ ದೇಗುಲಕ್ಕೆ ಅನುದಾನ ಪ್ರಧಾನಿಗೆ ಶೆಟ್ಟರ್ ಧನ್ಯವಾದ

ದೆಹಲಿಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಭೇಟಿಯಾದ ಸಂಸದ ಜಗದೀಶ್ ಶೆಟ್ಟರ್.

ದೆಹಲಿ: ಸಂಸದ ಜಗದೀಶ್ ಶೆಟ್ಟರ್ ದೆಹಲಿಯಲ್ಲಿ ಶನಿವಾರಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿಯಾಗಿ ಶುಭಾಶಯ ಕೋರಿದರು.

ಸವದತ್ತಿ ರೇಣುಕಾ ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿಗೆ ಕೇಂದ್ರದಿಂದ ನೂರು ಕೋಟಿ ರು. ಅನುದಾನ ಬಿಡುಗಡೆ ಮಾಡಿದ್ದಕ್ಕೆ ಕೃತಜ್ಞತೆ ಸಲ್ಲಿಸಿದರು. ಇದೇ ಮಾದರಿಯಲ್ಲಿ ರಾಮದುರ್ಗ ತಾಲೂಕಿನ ಐತಿಹಾಸಿಕ ಶಬರಿಕೊಳ್ಳ ಅಭಿವೃದ್ಧಿಗೂ ಶೆಟ್ಟರ್ ಮನವಿ ಮಾಡಿದರು. ಬೆಂಗಳೂರು – ಧಾರವಾಡದ ನಡುವೆ ಸದ್ಯ ಸಂಚರಿಸುತ್ತಿರುವ ವಂದೇ ಭಾರತ ಎಕ್ಸ್ ಪ್ರೆಸ್ ರೈಲು ಸಂಚಾರವನ್ನು ಬೆಳಗಾವಿಯವರೆಗೆ ವಿಸ್ತರಿಸಬೇಕು. ವಿಮಾನಯಾನ ಸೇವೆಗೆ ಸಂಬಂಧಿಸಿದಂತೆ ಉಡಾನ್ 3.0 ಯೋಜನೆ ಅವಧಿಯನ್ನು ಹೆಚ್ಚಿಸುವಂತೆ ಸಂಸದರು ಪ್ರಧಾನಿಗೆ ಮನವಿ ಮಾಡಿದರು. ತಮ್ಮ ವಿನಂತಿಗೆ ಪ್ರಧಾನಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಜಗದೀಶ್ ಶೆಟ್ಟರ್ ತಿಳಿಸಿದ್ದಾರೆ.

ಗಾಂಜಾ ವಿಚಾರಕ್ಕೆ ಜಗಳ: ಯುವಕ ಸಾವು

ಬೆಳಗಾವಿ: ಗಾಂಜಾ ಸೇವಿಸುವ ವಿಚಾರವಾಗಿ ಸಹೋದರರ ಮಧ್ಯೆ ಜಗಳ ಉಂಟಾಗಿ ಒಬ್ಬ ಸಾವನ್ನಪ್ಪಿದ್ದು, ಇನ್ನೊಬ್ಬ ಗಂಭೀರವಾಗಿ ಗಾಯಗೊಂಡ ಘಟನೆ ನಿಲಜಿಯಲ್ಲಿ ನಡೆದಿದೆ.

ಬೆಳಗಾವಿ ತಾಲೂಕಿನ ನಿಲಜಿ ಗ್ರಾಮದ ನಿವಾಸಿಗಳಾದ ಸುಶಾಂತ ಪಾಟೀಲ್(20) ಓಂಕಾರ ಪಾಟೀಲ್(23) ಶುಕ್ರವಾರ ರಾತ್ರಿ ಮನೆಯ ಎರಡನೇ ಮಹಡಿಯಲ್ಲಿ ಗಾಂಜಾ ಸೇವಿಸುವ ಉದ್ದೇಶದಿಂದ ಗಲಾಟೆ ಮಾಡಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ತಳ್ಳಾಟದಲ್ಲಿ ಇಬ್ಬರೂ ಕೆಳಗೆ ಬಿದ್ದಿದ್ದು ಸುಶಾಂತ ಪಾಟೀಲ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಓಂಕಾರ ಪಾಟೀಲ್ ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಇಬ್ಬರು ಸಹೋದರರು ಕಳೆದ ಕೆಲ ವರ್ಷಗಳಿಂದ ಗಾಂಜಾ ವ್ಯಸನಿಗಳಾಗಿದ್ದರು, ಅನೇಕ ಬಾರಿ ಸಹೋದರರ ತಂದೆ ಸುಭಾಷ್ ಪಾಟೀಲ್ ಮಕ್ಕಳಿಗೆ ಬುದ್ಧಿಮಾತು ಹೇಳಿದ್ದರು ಯಾವುದೇ ಪ್ರಯೋಜನವಾಗಿಲ್ಲ. ಮನೆಯಲ್ಲಿ ಯಾವುದೇ ಕೆಲಸ ಮಾಡಿದೆ ದಿನನಿತ್ಯ ಜಗಳ ಮಾಡುವುದನ್ನೇ ಕಾಯಕ ಮಾಡಿಕೊಂಡಿದ್ದರು. ಈ ಕುರಿತು ಮಾರಿಹಾಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಚಿನ್ ಆತ್ಮಹತ್ಯೆ ಕೇಸ್: ನಾಲ್ವರು ನಾಪತ್ತೆ

ಬೀದರ್: ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಡೆತ್‌ನೋಟ್ ನಲ್ಲಿ ಉಲ್ಲೇಖಿಸಿದ್ದ 9 ಜನರ ಪೈಕಿ ನಾಲ್ವರು ನಾಪತ್ತೆಯಾಗಿದ್ದಾರೆ.

ಈಗಾಗಲೇ ರಾಜು ಕಪನೂರು ಸೇರಿದಂತೆ ಘೋರ್ಕನಾಥ್ ಸಜ್ಜನ್, ಆರ್‌ಕೆ ಪಾಟೀಲ್, ನಂದಕುಮಾರ ನಾಗಭುಜಂಗೆ, ಸತೀಶ್ ರತ್ನಾಕರ್ ಎಂಬ ಐವರನ್ನು ಪೊಲೀಸರು ಬಂಧಿಸಿದ್ದಾರೆ. ನ್ಯಾಯಾಧೀಶರ ಆದೇಶದಂತೆ ಸದ್ಯ ಐವರು ಸಿಐಡಿ ಕಸ್ಟಡಿಯಲ್ಲಿದ್ದು, ರಾಜು ಕಪನೂರು ಗ್ಯಾಂಗ್‌ನ್ನು ತೀವ್ರ ವಿಚಾರಣೆ ಮಾಡಲಾಗುತ್ತಿದೆ. ಸಿಐಡಿ ತಂಡ ಶನಿವಾರ ಬಂಧಿತ ಐವರನ್ನು ಗೌಪ್ಯ ಸ್ಥಳದಲ್ಲಿ ವಿಚಾರಣೆ ನಡೆಸಿದ್ದು, ಯಾವುದೇ ಮಾಹಿತಿ ಸಿಗದಂತೆ ವಿಚಾರಣೆ ನಡೆಸಿದ್ದಾರೆ. ಇನ್ನೂ ಹೆಚ್ಚಿನ ವಿಚಾರಣೆಗಾಗಿ ರಾಜು ಕಪನೂರು ಆ್ಯಂಡ್ ಗ್ಯಾಂಗ್‌ನ್ನು ಬೆಂಗಳೂರಿಗೆ ಕರೆದುಕೊಂಡು ಹೋಗುವ ಸಾಧ್ಯತೆಯಿದೆ. ವಿಚಾರಣೆಗೆ ಹಾಜರಾಗುವಂತೆ ರೌಡಿಶೀಟರರ್ ಪ್ರತಾಪ್ ದೀರ್ ಪಾಟೀಲ್, ಮನೋಜ್ ಸೆರ್ಜಿವಾಲ್, ವಿಕಾಶ್ ಎಚ್.ಎಂ, ವಿನಯ್ ಟಿಪಿ ನಾಲ್ವರಿಗೂ ಕೂಡ ಸಿಐಡಿ ನೋಟಿಸ್ ನೀಡಿತ್ತು. ಆದರೆ ವಿಚಾರಣೆಗೆ ಹಾಜರಾಗದೆ ನಾಪತ್ತೆಯಾಗಿರುವ ಹಿನ್ನೆಲೆ ನಾಲ್ವರನ್ನು ಪತ್ತೆಹಚ್ಚುವಲ್ಲಿ ಸಿಐಡಿ ಅಧಿಕಾರಿಗಳು ನಿರತರಾಗಿದ್ದು, ಮಹಾರಾಷ್ಟ್ರ ಸೇರಿದಂತೆ ಇನ್ನಿತರ ಕಡೆಗಳಲ್ಲಿ ಹುಡುಕಾಟ ನಡೆಸಿದ್ದಾರೆ.

ರಾಸಾಯನಿಕ ಸೋರಿಕೆ: 12 ಕಾರ್ಮಿಕರು ಅಸ್ವಸ್ಥ

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕಾರ್ಮಿಕರು.

ಕಾರವಾರ: ರಾಸಾಯನಿಕ ಸೋರಿಕೆಯಾಗಿ 12 ಕಾರ್ಮಿಕರು ಅಸ್ವಸ್ಥಗೊಂಡ ಘಟನೆ ಕಾರವಾರದ ಬಿಣಗಾ ಬಳಿಯ ಆದಿತ್ಯ ಬಿರ್ಲಾ ಕಂಪನಿಯಲ್ಲಿ ಶನಿವಾರ ನಡೆದಿದೆ. ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಉತ್ತರ ಪ್ರದೇಶ ಹಾಗೂ ಬಿಹಾರ ಮೂಲದ ಕಾರ್ಮಿಕರು ಅಸ್ವಸ್ಥಗೊಂಡಿದ್ದಾರೆ. ಘಟಕದಲ್ಲಿ ಕೆಲಸ ಮಾಡುತ್ತಿದ್ದಾಗ ರಾಸಾಯನಿಕ ಸೋರಿಕೆಯಾಗಿ ಈ ಕಾರ್ಮಿಕರು ಅಸ್ವಸ್ಥಗೊಂಡಿದ್ದು, ತಕ್ಷಣ ಅವರನ್ನು ತಕ್ಷಣ ಅಸ್ವಸ್ಥಗೊಂಡ ಕಾರ್ಮಿಕರನ್ನು ಕಾರವಾರದ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ ತುರ್ತು ಚಿಕಿತ್ಸೆ ನೀಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳಕ್ಕೆ ಕಂಪನಿ ಅಧಿಕಾರಿಗಳು ದೌಡಾಯಿಸಿದ್ದಾರೆ. ಕಳೆದ ಕೆಲ ದಿನಗಳ ಹಿಂದೆ ಕ್ಲೋರಿನ್ ಸೋರಿಕೆಯಿಂದ ಕಾರ್ಮಿಕನೊಬ್ಬ ಮೃತಪಟ್ಟಿದ್ದ. ಇದರ ಬೆನ್ನಲ್ಲೇ ಇದೀಗ ಮತ್ತೆ ರಾಸಾಯನಿಕ ಸೋರಿಕೆ ಘಟನೆ ನಡೆದಿದೆ. ಕಾರವಾರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಕ್ರೋಫೈನಾನ್ಸ್ ಕಂಪನಿಗಳ ಕಿರುಕುಳ: ಎಚ್ಚೆತ್ತ ಅಧಿಕಾರಿಗಳು

ಚಾಮರಾಜನಗರ: ಮೈಕ್ರೋಫೈನಾನ್ಸ್ ಕಂಪನಿಗಳ ಕಿರುಕುಳ ವಿರುದ್ಧ ಚಾಮರಾಜನಗರ ಜಿಲ್ಲಾಡಳಿತ ಎಚ್ಚೆತ್ತಿದೆ.

ಮೈಕ್ರೋಫೈನಾನ್ಸ್ ಕಂಪನಿಗಳ ವಿರುದ್ಧ ಸಮರ ಸಾರಿದೆ. ಊರು ತೊರೆಯುತ್ತಿದ್ದ ಕುಟುಂಬಗಳಿಗೆ ಧೈರ್ಯ ಹೇಳಿದೆ. ಕಿರುಕುಳ ನೀಡುತ್ತಿರುವ ಬಗ್ಗೆ ದೂರು ನೀಡಲು ಸಹಾಯವಾಣಿ ತೆರದು ಫೈನಾನ್ಸ್ ಕಂಪನಿಗಳಿಗೆ ಎಚ್ಚರಿಕೆ ಸಂದೇಶ ರವಾನಿಸಿದೆ. ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲು ಆರಂಭಿಸಿದ್ದಾರೆ.

ಸಾಲ ಮರುಪಾವತಿಗೆ ಇವರು ನೀಡುವ ಕಿರುಕುಳದಿಂದ ಬೇಸತ್ತು ಜಿಲ್ಲೆಯ ಹಲವಾರು ಗ್ರಾಮಗಳಲ್ಲಿ ನೂರಾರು ಕುಟುಂಬಗಳು ಊರನ್ನೇ ಖಾಲಿ ಮಾಡಿವೆ. ಶಾಲೆಯಲ್ಲಿ ಓದುತ್ತಿದ್ದ ತಮ್ಮ ಮಕ್ಕಳನ್ನು ಶಾಲೆ ಬಿಡಿಸಿ ತಮ್ಮ ಜೊತೆ ಕರೆದೊಯ್ದಿದ್ದಾರೆ. ಸಾಲ ವಸೂಲಾತಿಗೆ ದೌರ್ಜನ್ಯ, ಕಿರುಕುಳ ಮಾನಸಿಕ ಹಿಂಸೆ ನೀಡಿದರೆ ದೂರು ನೀಡಲು ಜಿಲ್ಲಾಡಳಿತ ಸಹಾಯವಾಣಿ ತೆರೆದಿದೆ. ಗ್ರಾಮಗಳಲ್ಲಿ ಮಾಹಿತಿ ಸಂಗ್ರಹಿಸಲು ಅಧಿಕಾರಿಗಳ ತಂಡ ರಚನೆ ಮಾಡಿದೆ.

ಮರುಪಾವತಿಗೆ ಕಾಲಾವಕಾಶದ ಭರವಸೆ: ಚಾಮರಾಜನಗರ ತಹಸೀಲ್ದಾರ್ ಗಿರಿಜಾ ನೇತೃತ್ವದ ತಂಡ ದೇಶವಳ್ಳಿ ಹಾಗೂ ಹೆಗ್ಗವಾಡಿ ಗ್ರಾಮಕ್ಕೆ ಭೇಟಿ ನೀಡಿ ಕಿರುಕುಳದಿಂದ ನೊಂದ ಕುಟುಂಬಗಳಿಗೆ ಧೈರ್ಯ ತುಂಬಿದೆ. ಯಾರು ಸಹ ಗ್ರಾಮ ತೊರೆಯಬಾರದು, ನಿಮ್ಮ ಜೊತೆ ನಾವಿದ್ದೇವೆ, ನಿಮಗೆ ಕಿರುಕುಳ ನೀಡಿದಲ್ಲಿ ನಮಗೆ ದೂರು ನೀಡಿ, ಸಾಲ ಮರುಪಾವತಿಗೆ ಕಾಲಾವಕಾಶ ಕೊಡಿಸುತ್ತೇವೆ ಎಂದು ಭರವಸೆ ನೀಡಿದೆ. ಗ್ರಾಮ ತೊರೆದಿರುವ ಕುಟುಂಬಗಳನ್ನು ವಾಪಸ್ ಕರೆಸಲು ಹಾಗು ಶಾಲೆಬಿಟ್ಟ ಮಕ್ಕಳನ್ನು ಮರಳಿ ಶಾಲೆಗೆ ಸೇರಿಸಲು ಸದ್ಯದಲ್ಲೇ ಗ್ರಾಮ ಸಭೆ ನಡೆಸಲು ಅಧಿಕಾರಿಗಳು ಮುಂದಾಗಿದ್ದಾರೆ.

ಚಾಮರಾಜನಗರ ತಹಸೀಲ್ದಾರ್ ಗಿರಿಜಾ ನೇತೃತ್ವದ ತಂಡ ದೇಶವಳ್ಳಿ ಹಾಗೂ ಹೆಗ್ಗವಾಡಿ ಗ್ರಾಮಕ್ಕೆ ಭೇಟಿ ನೀಡಿ ಕಿರುಕುಳದಿಂದ ನೊಂದ ಕುಟುಂಬಗಳಿಗೆ ಧೈರ್ಯ ತುಂಬಿದರು.

50 ಲಕ್ಷ ರುಪಾಯಿ ಗೆದ್ದ ಮಹಾಲಿಂಗಪುರದ ಯುವಕ

ಕೌನ್ ಬನೇಗಾ ಕರೋಡ್‌ಪತಿಯಲ್ಲಿ ಭಾಗಿ

ಬಾಗಲಕೋಟೆ: ಜಿಲ್ಲೆಯ ರಬಕವಿ ಬನಹಟ್ಟಿ ತಾಲೂಕಿನ ಮಹಾಲಿಂಗಪುರದ ರಂಜಾನ್ ಪೀರಜಾದೆ ಎಂಬ ಯುವಕ ಕೌನ್ ಬನೇಗಾ ಕರೋಡ್ ಪತಿ ಕಾರ್ಯಕ್ರಮದಲ್ಲಿ 50 ಲಕ್ಷ ರು. ಗೆದ್ದಿದ್ದಾರೆ.

ಕೌನ್ ಬನೇಗಾ ಕರೋಡ್ ಪತಿ ಕಾರ್ಯಕ್ರಮ 1 ಕೋಟಿ ರು. ಪ್ರಶ್ನೆಗೆ ಉತ್ತರಿಸಲು ಹಿಂದೇ ಸರಿದ ಪರಿಣಾಮ 50 ಲಕ್ಷಕ್ಕೆ ಖುಷಿಪಟ್ಟಿದ್ದು, ಬಾಲಿವುಡ್ ಸೂಪರ್ ಸ್ಟಾರ್ ಅಮಿತಾಬ್ ಬಚ್ಚನ್ ಅವರಿಂದ ಚೆಕ್ ಸ್ವೀಕರಿಸಿದ್ದಾರೆ. ಬಡ ಕುಟುಂಬದಲ್ಲಿ ಜನಿಸಿರುವ ರಂಜಾನ್ ತಾಯಿ ಮುನೇರಾ ತಮ್ಮ ಮನೆಯ ಕೆಲಸ ಮಾಡಿದರೆ, ತಂದೆ ಮಲಿಕ್ ಸಾಬ್ ಗ್ಯಾಸ್ ವೆಲ್ಡರ್ ಆಗಿದ್ದಾರೆ. ಅಲ್ಪ ಸ್ವಲ್ಪ ಆದಾಯದಲ್ಲಿ ಮಕ್ಕಳ ಶಿಕ್ಷಣ ಕೊಟ್ಟಿರುವ ರಂಜಾನ್ ತಂದೆಯ ಜೊತೆಗೂಡಿ ಕೆಲಸ ಮಾಡುತ್ತಾ, ವಾಚ್ ಮನ್ ಕೆಲಸ ಮಾಡಿಯೂ ಶಿಕ್ಷಣವನ್ನು ಮುಂದುವರಿಸಿದ್ದಾನೆ.

ಮಹಾಲಿಂಗಪುರ ಸಿಪಿ ಸಂಸ್ಥೆಯ ಕೆಎಲ್‌ಇ ಕಾಲೇಜಿನಲ್ಲಿ ಬಿಎ ಪದವಿ ಪೂರೈಸಿ, ಧಾರವಾಡದಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ತಯಾರಿ ನಡೆಸಿರುವ ಯುವಕ ಜ.13ರಂದು ರಾತ್ರಿ 9 ಗಂಟೆಗೆ ಸೋನಿ ವಾಹಿನಿಯಲ್ಲಿ ಈ ಎಪಿಸೋಡ್ ನಲ್ಲಿ ಪ್ರಸಾರವಾಗಲಿದೆ.

ರಂಜಾನ್ ಪೀರಜಾದೆ.

ಜಿಲ್ಲಾ ಪಂಚಾಯತ, ಕೊಪ್ಪಳ

ಅನುಬಂಧ-"ಎ"

2024-25ನೇ ಸಾಲಿನ ಕೊಪ್ಪಳ ಜಿಲ್ಲೆಯ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಅನುದಾನದ ಕಾಮಗಾರಿಗಳು ಹಾಗೂ ಇತರೆ ಯೋಜನೆಗಳಲ್ಲಿ ನಡೆಯುತ್ತಿರುವ ಎಲ್ಲಾ ಕಾಮಗಾರಿಗಳನ್ನು ಗುಣಮಟ್ಟ ಪರಿಶೀಲಿಸಿ 3ನೇ ವ್ಯಕ್ತಿಯ ತಪಾಸಣೆಯ ಇ-ಟೆಂಡರನ್ನು ದ್ವಿ-ಲಕೋಟೆಗಳಲ್ಲಿ ಸಲ್ಲಿಸಲು ಜಿಲ್ಲಾ ಪಂಚಾಯತಿ ಕೊಪ್ಪಳ ಇವರು ಅವ್ಹಾನಿಸಿರುತ್ತಾರೆ. ಆಸಕ್ತಿಯುಳ್ಳ ಟೆಂಡರುದಾರರು, ಟೆಂಡರ್ https://www.eproc.karnataka.gov.in ವೆಬ್ ಸೈಟ್ ಸಂಪರ್ಕಿಸಲು ತಿಳಿಸಲಾಗಿದೆ. (ಎಲ್ಲಾ ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ಈ ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ:08539-220002, e-Mail: ceo_zp_kpl@nic.in)

ಕಾಮಗಾರಿ ಹೆಸರು: 2024-25ನೇ ಸಾಲಿನ ಕೊಪ್ಪಳ ಜಿಲ್ಲೆಯ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಅನುದಾನದ ಕಾಮಗಾರಿಗಳು ಹಾಗೂ ಇತರೆ ಯೋಜನೆಗಳಲ್ಲಿ ನಡೆಯುತ್ತಿರುವ ಎಲ್ಲಾ ಕಾಮಗಾರಿಗಳನ್ನು ಗುಣಮಟ್ಟ ಪರಿಶೀಲಿಸಿ 3ನೇ ತಂಡದ ತಪಾಸಣೆಯ ಇ-ಟೆಂಡರ ಮೂಲಕ ಆಯ್ಕೆ ಮಾಡುವ ಕುರಿತು.

ಅಂದಾಜು ಮೊತ್ತ (ಲಕ್ಷಗಳಲ್ಲಿ): 4050.00 **ಇ.ಎಮ್.ಡಿ ಮೊತ್ತ (ಲಕ್ಷಗಳಲ್ಲಿ):** 15.00

ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ : 20/01/2025 Evening at 5.30 PM

ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 22/01/2025 **ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ:** 28/01/2025

ಸಹಿ/- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್ ಕೊಪ್ಪಳ.

ವಾ.ಸಾ.ಇ/ಕೊಪ್ಪಳ/666/ದೇಶಪಾಂಡೆಪಬ್ಲಿಸಿಟಿ/2024-25

ಸಮುದಾಯಗಳ ಅಭಿವೃದ್ಧಿಗೆ ಮಠಗಳು ಅನಿವಾರ್ಯ

ಸಚಿವ ದಿನೇಶ್ ಗುಂಡೂರಾವ್ ಅಭಿಮತ | ಗಾಣಿಗರ ಹಬ್ಬ, ಸ್ವಾಮೀಜಿ ಪೀಠಾರೋಹಣ ಸಮಾರಂಭ

ನೆಲಮಂಗಲ: ಗಾಣಿಗರ ಸಮುದಾಯದಂತಹ ಸಣ್ಣ ಸಣ್ಣ ಜಾತಿಗಳಿಗೆ ಧ್ವನಿಯಾಗಲು ಮಠಗಳು ಅನಿವಾರ್ಯ ಎಂದು ಸಚಿವ ದಿನೇಶ್ ಗುಂಡೂರಾವ್ ಅಭಿಪ್ರಾಯಪಟ್ಟರು.

ನಗೂರಿನ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ಆವರಣದಲ್ಲಿ ನಡೆದ ಗಾಣಿಗರ ಹಬ್ಬ ಹಾಗೂ ಶ್ರೀಗಳ 2ನೇ ಪೀಠಾರೋಹಣ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿ, ರಾಜಕೀಯದಲ್ಲಿ ಶಕ್ತಿಯಾಗಿದ್ದ ಪುಟ್ಟಸ್ವಾಮಿ ಗಾಣಿಗ ಸಮುದಾಯದ ಸ್ವಾಮೀಜಿಯಾಗಿ ಸಮುದಾಯಕ್ಕೆ ಶಕ್ತಿಯಾಗಿದ್ದಾರೆ. ನಮ್ಮ ತಂದೆ ಜತೆ ಕೆಲಸ ಮಾಡಿದ ನಂತರ ಯಡಿಯೂರಪ್ಪ ಬಳಿ ಕೆಲಸ ಮಾಡಿದರು. ಅವರ ಉದ್ದೇಶ ಮಾತ್ರ ಸಮುದಾಯದ ಅಭಿವೃದ್ಧಿಯಾಗಿತ್ತು ಎಂದರು.

ಕಾನೂನು ಸಚಿವ ಎಚ್.ಕೆ ಪಾಟೀಲ್ ಮಾತನಾಡಿ, ಪುಟ್ಟಸ್ವಾಮಿಯವರು ಸ್ವಂತ ಜಮೀನು ಮಾಡಿ ಮಠಕ್ಕೆ ದಾನ ನೀಡಿ ಸಮುದಾಯಕ್ಕೆ ಶಕ್ತಿ ನೀಡಿರುವುದು ಸಂತೋಷವಾಗಿದೆ. ಗಾಣಿಗ ಸಮುದಾಯದ ಅಭಿವೃದ್ಧಿಗೆ ಮುಖ್ಯಮಂತ್ರಿ ಮೂಲಕ ಸಹಕಾರದ ಕೆಲಸ ಮಾಡುತ್ತೇನೆ. ನಿಮ್ಮ ಬೇಡಿಕೆ ಈಡೇರಿಸುವ ಪ್ರಯತ್ನ ಮಾಡುತ್ತೇನೆ ಎಂದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಮಾಜಿ ಸಭಾಪತಿ ವಿ.ಆರ್ ಸುದರ್ಶನ್, ಆಂಧ್ರದ ಎಂಎಲ್‌ಸಿ ಗೌನಿವಾರಿ ಶ್ರೀನಿವಾಸಲು, ಬಗ್ಗುಬಡಿಗೋಪಾಲ್,ವಿಶೇಷ ಜಿಲ್ಲಾಧಿಕಾರಿ ಡಾ.ಬಿ.ವಿ ವಾಸಂತಿ ಅಮರ್,ಗಾಣಿಗರ ಹಬ್ಬ ಸಮಿತಿ ಅಧ್ಯಕ್ಷ ಅಮರನಾಥ್ ಇದ್ದರು.

ಗಾಣಿಗರ ಅಭಿವೃದ್ಧಿಗೆ ನಿಗಮಕ್ಕೆ ಆಗ್ರಹ: ಗಾಣಿಗರ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಬೇಕು ಹಾಗೂ ಮಠಕ್ಕೆ ಕಾಂಪೌಂಡ್, ಸಮುದಾಯ ಭವನ,ಶಾಲೆ ನಿರ್ಮಾಣ ಮಾಡಲಾಗಿದೆ. ಉಳಿದ 1.5 ಕೋಟಿ ಅನುದಾನದ ನಮ್ಮ ಫೈಲ್ ಹಿಂದುಳಿದವರ್ಗಗಳ ಇಲಾಖೆ ಸಚಿವರ ಬಳಿ ಪೆಂಡಿಂಗ್ ಇದ್ದು ಈ ಹಣ ತಕ್ಷಣ ಬಿಡುಗಡೆಗೊಳಿಸಬೇಕು ಎಂದು ಸಚಿವ ದಿನೇಶ್ ಗುಂಡೂರಾವ್, ಪಾಟೀಲ್ ಬಳಿ ಶ್ರೀ ಪೂರ್ಣಾನಂದಪುರಿ ಸ್ವಾಮೀಜಿ ಬೇಡಿಕೆ ಇಟ್ಟರು.

ನಗೂರಿನ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ಆವರಣದಲ್ಲಿ ನಡೆದ ಗಾಣಿಗರ ಹಬ್ಬ ಹಾಗೂ ಶ್ರೀಗಳ 2ನೇ ಪೀಠಾರೋಹಣ ಸಮಾರಂಭವನ್ನು ಸಚಿವರಾದ ದಿನೇಶ್ ಗುಂಡೂರಾವ್, ಎಚ್.ಕೆ.ಪಾಟೀಲ್ ಉದ್ಘಾಟಿಸಿದರು.

9 ಸಾವಿರ ಆರ್‌ಟಿಐ ಅರ್ಜಿ, ₹90 ಲಕ್ಷ ದಂಡ

← ಮೊದಲಪುಟದಿಂದ

ಅರ್ಜಿದಾರರು ಸದುದ್ದೇಶವಿಲ್ಲದ ವರ್ತನೆ ತೋರಿದ್ದು, ಇಂತಹ ಅರ್ಜಿಗಳಿಗೆ ಮಾನ್ಯತೆ ನೀಡಿದರೆ ಆಡಳಿತದ ದಕ್ಷತೆಗೆ ಧಕ್ಕೆ ತರಲಿದೆ ಮತ್ತು ಸಾರ್ವಜನಿಕ ಸಂಪನ್ಮೂಲಕ್ಕೆ ಹೊರೆ ಉಂಟು ಮಾಡಲಿದೆ ಎಂದು ಸುಪ್ರೀಂಕೋರ್ಟ್‌ನ ವಿವಿಧ ಆದೇಶಗಳನ್ನು ಉಲ್ಲೇಖಿಸಿ ಅರ್ಜಿಯನ್ನು ವಜಾ ಮಾಡಿ 2023ರ ಆಗಸ್ಟ್‌ನಲ್ಲಿ ಆದೇಶಿಸಿತ್ತು.

ಇದನ್ನು ಪ್ರಶ್ನಿಸಿ ದವಲ್ ಸಾಬ್ ಎಂ ಮಿಯಾನ್ನವರ್ ಹೈಕೋರ್ಟ್ ಮೊರೆ ಹೋಗಿದ್ದರು.

ಹೈಕೋರ್ಟ್‌ನಲ್ಲಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದಂ ಅವರಿದ್ದ ಏಕಸದಸ್ಯ ಪೀಠ, ಮಾಹಿತಿ ಆಯೋಗದ ಪೂರ್ಣಪೀಠದ ಆದೇಶವನ್ನು ಎತ್ತಿ ಹಿಡಿದಿದ್ದು, ಅರ್ಜಿದಾರರಿಂದ ಬಾಕಿಯಿರುವ ಕೋರ್ಟ್ ಶುಲ್ಕ 9,64,600 ರು.ಗಳ ಪಾವತಿಗೆ ನ್ಯಾಯಾಲಯದ ರಿಜಿಸ್ಟ್ರಾರ್ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶಿಸಿ, ಅರ್ಜಿದಾರರ ಅರ್ಜಿ ವಜಾಗೊಳಿಸಿದೆ.

ಟ್ವೀಟೂ-ಖಾರಾ

ಕಾಂಗ್ರೆಸ್, ಕರ್ನಾಟಕ

ದೇಶಕ್ಕೆ ಕಾಂಗ್ರೆಸ್ ಕೊಡುಗೆ. ದೇಶದಲ್ಲಿ ಶಿಕ್ಷಣವನ್ನು ಉತ್ತೇಜಿಸಲು, ಎಲ್ಲರಿಗೂ ಶಿಕ್ಷಣವನ್ನು ನೀಡಲು 1968ರಲ್ಲಿ ಪ್ರಧಾನಿ ಇಂದಿರಾಗಾಂಧಿ ಅವರು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತಂದರು.

ಅಮೃತ ಕುಂಬಾರ, ಬೆಂಗಳೂರು

ಅದೇ ಇಂದಿನ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಎಂದರೆ. ಆದರೆ ನೀವೇ ಈಗ ಅದನ್ನು ವಿರೋಧಿಸುತ್ತಿದ್ದೀರಿ..!

ನಾಡ ಸಮಸ್ಯೆಗೆ ಸಿಎಂ ಪರಿಹಾರ

- ಸ್ಥಳ : ಬೆಂಗಳೂರು

ಸಮಸ್ಯೆಯೇನು..?

- ಕಗ್ಗದಾಸಪುರ ಮತ್ತು ವಿಜ್ಞಾನ ನಗರದ ನಡುವಿನ ರಸ್ತೆಗಳು ಹಾಳಾಗಿರುವುದು.
- **ಪರಿಹಾರ:** ಕಗ್ಗದಾಸಪುರ ಮತ್ತು ವಿಜ್ಞಾನ ನಗರದ ನಡುವಿನ ರಸ್ತೆಗಳ ಗುಂಡಿಗಳನ್ನು ಮುಚ್ಚಲಾಗಿದ್ದು, ಸಾರ್ವಜನಿಕರಿಗೆ ಅನುಕೂಲ ಮಾಡಲಾಗಿದೆ.

ಮುಂದಿನ ಸಿಎಂ ಆಗಬೇಕೆಂಬುದು ಕಾರ್ಯಕರ್ತರ ಒತ್ತಾಯ: ಡಿಸಿಎಂ ಡಿ.ಕೆ.ಶಿವಕುಮಾರ್

ನನಗೆ ಯಾರ ಬೆಂಬಲವೂ ಬೇಡ ಪಕ್ಷ ಹೇಳಿದಂತೆ ಕೆಲಸ ಮಾಡುವೆ

ಚಿಕ್ಕಮಗಳೂರು: ನನಗೆ ಯಾರ ಬೆಂಬಲವೂ ಬೇಡ, ಪಕ್ಷ ಹೇಳಿದಂತೆ ನಾನು ಕೆಲಸ ಮಾಡುತ್ತೇನೆ. ನನ್ನ ಪರವಾಗಿ ಯಾರೂ ಒತ್ತಾಯ ಮಾಡುವುದು ಬೇಡ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟವಾಗಿ ಹೇಳಿದ್ದಾರೆ.

ಕಳೆದ ಕೆಲ ದಿನಗಳಿಂದ ರಾಜ್ಯದಲ್ಲಿ ಹೆಚ್ಚು ಸುದ್ದಿಮಾಡಿರುವ ಸಿಎಂ ಕುರ್ಚಿ ಬಗೆಗಿನ ಚರ್ಚೆ ಕುರಿತು ಶೃಂಗೇರಿಯಲ್ಲಿ ತಮ್ಮ ನಿಲುವು ತಿಳಿಸಿದ ಅವರು, ಮುಂದಿನ ಸಿಎಂ ಡಿ.ಕೆ.ಶಿವಕುಮಾರ್ ಆಗಬೇಕು ಎಂದು ಕಾರ್ಯಕರ್ತರು ಒತ್ತಾಯ ಮಾಡುತ್ತಿದ್ದಾರೆ. ಆದರೆ, ಈ ವಿಚಾರದಲ್ಲಿ ಯಾವುದೇ ಶಾಸಕರು ನನಗೆ ಬೆಂಬಲ ನೀಡುವುದು ಬೇಡ. ನಾನುಂಟು, ಕಾಂಗ್ರೆಸ್ ಪಕ್ಷವುಂಟು. ಪಕ್ಷದ ನಾಯಕರು ಹೇಳಿದಂತೆ ನಾನು ಕೆಲಸ ಮಾಡಿಕೊಂಡು ಹೋಗುತ್ತೇನೆ. ನನ್ನ ಪರವಾಗಿ ಶಾಸಕರು, ಕಾರ್ಯಕರ್ತರು ಕೂಗುವುದು ಬೇಡ. ನಾನು ನನ್ನ ಕರ್ತವ್ಯ ಮಾಡುತ್ತೇನೆ ಎಂದು ಹೇಳಿದರು.

ರವಿಗೆ ಸಾಮಾನ್ಯ ಪರಿಜ್ಞಾನ ಇಲ್ಲ: ನಕ್ಸಲರ ಶಸ್ತ್ರಾಸ್ತ್ರ ವಿಚಾರವಾಗಿ ರವಿ ಅವರ ಹೇಳಿಕೆ ಬಗ್ಗೆ ಕೇಳಿದಾಗ, ಯಾರಾದರೂ ಮುಖ್ಯಮಂತ್ರಿಗಳ ಬಳಿ ಬಂದು ಶರಣಾಗುವಾಗ ಯಾರಾದರೂ ಬಂದೂಕು ಹಿಡಿದುಕೊಂಡು ಬರುತ್ತಾರಾ? ರವಿಗೆ ಇಷ್ಟು ಸಾಮಾನ್ಯ ಪ್ರಜ್ಞೆ ಇಲ್ಲವೇ? ವೀರಪ್ಪನ್ ಅವರಿಂದ ರಾಜಕುಮಾರ್ ಅವರನ್ನು ಕರೆ ತಂದಾಗ ಬಂದೂಕು ಸಮೇತ ಕರೆತರಲಾಗಿತ್ತೆ? ಈ ವಿಚಾರವನ್ನು ನಿಭಾಯಿಸಲು ಪೊಲೀಸ್ ಇಲಾಖೆ ಇದೆ. ಅವರು ಕೆಲವು ವಿಚಾರಗಳನ್ನು ಗೌಪ್ಯವಾಗಿಟ್ಟುಕೊಂಡು ಕರ್ತವ್ಯ ನಿಭಾಯಿಸುತ್ತಿದ್ದಾರೆ. ಅವರ ಕರ್ತವ್ಯದಲ್ಲಿ ನಾವು ಹಸ್ತಕ್ಷೇಪ ಮಾಡುವಂತಿಲ್ಲ. ರಾಜ್ಯವನ್ನು ನಕ್ಸಲ್ ಮುಕ್ತ ಮಾಡಿರುವುದಕ್ಕೆ ಸಂತೋಷಪಡಬೇಕು. ಆದರೆ ಮೊಸರಲ್ಲಿ ಕಲ್ಲು ಹುಡುಕುವ ಪ್ರಯತ್ನ ಮಾಡಲಾಗುತ್ತಿದೆ. ಚುನಾವಣೆಗೆ ಇನ್ನು ಸಮಯವಿದೆ. ಚುನಾವಣೆ ಬಂದಾಗ ರಾಜಕೀಯ ಮಾಡಲಿ. ಈಗ ರಾಜ್ಯದ ಪ್ರಗತಿ ಬಗ್ಗೆ ಚರ್ಚೆ ಮಾಡಿ, ರಾಜ್ಯ ಹಾಗೂ ದೇಶ ಉಳಿಸುವ ಕೆಲಸ ಮಾಡೋಣ ಎಂದು ತಿರುಗೇಟು ನೀಡಿದರು.

ಟೆಂಪಲ್ ರನ್ ಎನ್ನುವವರು ದೇವಾಲಯ ಮುಚ್ಚಿಬಿಡಿ

ನಾನು ಧರ್ಮದ ಮೇಲೆ ನಂಬಿಕೆ ಇಟ್ಟುಕೊಂಡಿರುವವ, ನಿತ್ಯ ಪೂಜೆ ಮಾಡುವವನು. ನನ್ನ, ಸಮಾಜ, ರಾಜ್ಯದ ಒಳಿತು ಮತ್ತು ನನ್ನ ನಂಬಿದವರಿಗೆ ಒಳ್ಳೆಯದಾಗಲಿ ಎಂದು ಪ್ರಾರ್ಥಿಸುತ್ತೇನೆ. ಟೆಂಪಲ್ ರನ್ ಎಂದು ವ್ಯಾಖ್ಯಾನಿಸುವುದಾದರೆ ನೀವೆಲ್ಲ ಸೇರಿ ದೇವಾಲಯಗಳನ್ನು ಮುಚ್ಚಿಬಿಡಿ. ಅವರವರ ವಿಚಾರ ಅವರವರ ನಂಬಿಕೆ. ಧರ್ಮ ಯಾವುದಾದರೂ ತತ್ವ ಒಂದೇ, ಕರ್ಮ ಹಲವಾದರೂ ನಿಷ್ಠೆ ಒಂದೇ, ಪೂಜೆ ಯಾವುದಾದರೂ ಭಕ್ತಿ ಒಂದೇ, ದೇವನೊಬ್ಬ, ನಾಮ ಹಲವು ಎಂದು ನಾನು ಪದೇ ಪದೆ ಹೇಳುತ್ತೇನೆ ಎಂದು ಉಪ ಮುಖ್ಯಮಂತ್ರಿ ಹೇಳಿದರು.

ಸಿ.ಟಿ.ರವಿ ಡ್ರಾಮಾ ಮಾಸ್ಟರ್

ಲಕ್ಷ್ಮೀ ಹೆಬ್ಬಾಳ್ಕರ್‌ಗೆ ಕ್ಷಮೆ ಕೇಳದಿದ್ದರೆ ಹತ್ಯೆ ಮಾಡುವುದಾಗಿ ಸಿ.ಟಿ. ರವಿಗೆ ಬೆದರಿಕೆ ಪತ್ರ ಬಂದಿದೆ ಎಂದು ಕೇಳಿದಾಗ, ಸಿ.ಟಿ. ರವಿ ದೊಡ್ಡ ಡ್ರಾಮಾ ಮಾಸ್ಟರ್. ಸುಳ್ಳಿಗೆ ಸುಳ್ಳು ಪೋಣಿಸಿ ಕತೆ ಹೆಣೆಯುವುದರಲ್ಲಿ ನಿಸ್ಸೀಮ. ಅವರನ್ನು ರಾಷ್ಟ್ರೀಯ ನಾಯಕರು, ಬಿಜೆಪಿ ರಾಷ್ಟ್ರೀಯ ಪದಾಧಿಕಾರಿ ಎಂದು ಭಾವಿಸಿದ್ದೆ. ಅವರ ಮಾತು, ವಿಚಾರ ನೋಡಿದ ನಂತರ ಇಷ್ಟು ಕೀಳುಮಟ್ಟಕ್ಕೆ ಇಳಿಯುತ್ತಾರೆ ಎಂದು ನಿರೀಕ್ಷಿಸಿರಲಿಲ್ಲ. ಈ ಪ್ರಕರಣದಲ್ಲಿ ರವಿ ತಮ್ಮ ಆತ್ಮಸಾಕ್ಷಿಯ ಮಾತನ್ನು ಕೇಳಲಿ. ಆ ರೀತಿ ಮಾತನಾಡಬಾರದಿತ್ತು ಎಂದು ಅವರ ಪಕ್ಷದ ನೂರು ನಾಯಕರು ನನ್ನ ಬಳಿ ಹೇಳಿದ್ದಾರೆ. ಅಚಾತುರ್ಯವಾಗಿ ಆ ರೀತಿ ಮಾತಾಡಿದ್ದೇನೆ ಕ್ಷಮೆ ಕೇಳುತ್ತೇನೆ ಎಂದಿದ್ದರೆ ಪ್ರಕರಣ ಮುಗಿಯುತ್ತಿತ್ತು. ಅದನ್ನು ಬಿಟ್ಟು ಸುಳ್ಳಿಗೆ ಸುಳ್ಳು ಸೇರಿಸಿಕೊಂಡು ಹೋದರೆ ಪ್ರಯೋಜನವಿಲ್ಲ ಎಂದು ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದರು.

- ಸಿಎಂ ಸ್ಥಾನದ ಚರ್ಚೆಗೆ ಡಿಕೆಶಿ ಖಡಕ್ ನುಡಿ
- ನಾನುಂಟು, ಪಕ್ಷವುಂಟು- ವರಿಷ್ಠರ ಸೂಚನೆಯಂತೆ ಕೆಲಸ
- ನನ್ನ ಪರ ಧ್ವನಿ ಎತ್ತುವುದು ಬೇಡ: ಬೆಂಬಲಿಗರಿಗೆ ತಾಕೀತು
- ನಕ್ಸಲ್ ಶರಣಾಗತಿ: ಬಿಜೆಪಿ ಟೀಕೆಗೆ ಡಿಸಿಎಂ ತಿರುಗೇಟು

ಯಾರೂ ನನ್ನ ತಲೆಕೆಡಿಸಿಕೊಳ್ಳುವುದು ಬೇಡ. ನನಗೆ ಯಾವುದೇ ತಿರುವಿನ ಅಗತ್ಯವಿಲ್ಲ. ಜನರು ಆಶೀರ್ವಾದ ಮಾಡಿ ನಮಗೊಂದು ಅವಕಾಶ ಕೊಟ್ಟಿದ್ದಾರೆ. ಐದು ವರ್ಷ ಸರಕಾರ ಮಾಡುತ್ತೇವೆ. ಕಾಂಗ್ರೆಸ್ ಪಕ್ಷ ಹೇಳಿದಂತೆ ನಾನು ಹಾಗೂ ಸಿಎಂ ಕೆಲಸ ಮಾಡುತ್ತೇವೆ. ಬೇರೆಯವರ ಮಾತುಗಳು ಗೌಣ.

-ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

ಸುವರ್ಣ ಭಾರತೀ ಮಹೋತ್ಸವದಲ್ಲಿ ಡಿಸಿಎಂ ಡಿಕೆಶಿ ಕರೆ

ಧರ್ಮ ರಕ್ಷಿಸುವ ಮಠಕ್ಕೆ ನೆರವು ನೀಡಿ



ಶೃಂಗೇರಿಯಲ್ಲಿ ಶನಿವಾರ ಏರ್ಪಡಿಸಿದ್ದ ''ಸುವರ್ಣ ಭಾರತೀ ಮಹೋತ್ಸವ'' ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಭಾಗವಹಿಸಿದ್ದರು.

ಶೃಂಗೇರಿ: ನಾವು ನಮ್ಮ ಮನೆಗಳನ್ನು ಕಾಪಾಡಿಕೊಳ್ಳುವಂತೆ, ನಮ್ಮ ಮಠಗಳನ್ನು ಕಾಪಾಡಿಕೊಳ್ಳಬೇಕು. ಧರ್ಮ ಕಾಪಾಡುವ ಮಠಕ್ಕೆ ನಮ್ಮ ಕೈಲಾದ ನೆರವು ನೀಡಬೇಕು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ಭಾರತೀತೀರ್ಥ ಮಹಾಸ್ವಾಮೀಜಿ ಯವರು ಸನ್ಯಾಸ ಸ್ವೀಕರಿಸಿ 50 ವರ್ಷಗಳು ಪೂರೈಸಿದ ಶುಭ ಸಂವತ್ಸರದ ಅಂಗವಾಗಿ ಶೃಂಗೇರಿಯಲ್ಲಿ ಶನಿವಾರ ಏರ್ಪಡಿಸಿದ್ದ ಸುವರ್ಣ ಭಾರತೀ ಮಹೋತ್ಸವದಲ್ಲಿ ಮಾತನಾಡಿದ ಅವರು, ನಮ್ಮ ಹಿರಿಯರು, ಮನೆ ಹುಷಾರು, ಮಠ ಹುಷಾರು ಎಂದು ಹೇಳಿದ್ದಾರೆ. ನಮ್ಮ ಮನೆ ಕಾಯ್ದುಕೊಳ್ಳುವಂತೆ ಮಠಗಳನ್ನು ರಕ್ಷಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ನೀವು ನೂರು ರುಪಾಯಿ ಸಂಪಾದನೆ ಮಾಡಿದರೆ, ಒಂದು ರುಪಾಯಿ ಯಾದರೂ ಧರ್ಮ ಉಳಿಸುವ ಮಠಕ್ಕೆ ನೀಡಬೇಕು. ಆಗ ಮಾತ್ರ ಮಠ ಉಳಿಯಲು ಸಾಧ್ಯ ಎಂದು ಕರೆ ನೀಡಿದರು.

ನೆಮ್ಮದಿ ಪಡೆಯಲು ಬಂದಿದ್ದೇನೆ: ವಿಧುಶೇಖರಭಾರತೀ ಮಹಾಸ್ವಾಮೀಜಿಯವರ ಪ್ರವಚನ ಕೇಳಿ ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ನೆಮ್ಮದಿ ಪಡೆದುಕೊಳ್ಳಲು ನಾನು ಭಾಗವಹಿಸಿದ್ದು ನನ್ನ ಭಾಗ್ಯ ಎಂದು ಹೇಳಿದರು.

ವಿಧುಶೇಖರಭಾರತೀ ಪಾಂಡಿತ್ಯಕ್ಕೆ ಶರಣು

ಯಾರ ಮಾತಿಗೂ ನಾವು ಅಂಜುವ ಅಗತ್ಯವಿಲ್ಲ. ನಾವು ಯಾರ ಆಣತಿಯಂತೆ ಇರುವುದು ಬೇಡ. ಯಾರನ್ನೂ ನಂಬಿ ನಾವು ಬದುಕುವುದು ಬೇಡ. ನಮ್ಮ ಜೀವನವನ್ನು ನಾವು ನಂಬೋಣ. ನಮ್ಮ ಧರ್ಮ, ದೇವರಲ್ಲಿ ವಿಶ್ವಾಸವಿಟ್ಟು ಬದುಕಿದಾಗ ಒಳ್ಳೆಯದಾಗುತ್ತದೆ. ಭಾರತೀ ಶ್ರೀಗಳು ಅನೇಕ ಶಿಷ್ಯಕೋಟಿಗಳನ್ನು ಬೆಳೆಸಿದ್ದಾರೆ, ವಿಧುಶೇಖರಭಾರತಿ ಸ್ವಾಮೀಜಿಗಳ ವಯಸ್ಸಿಗೆ ಅವರ ಪಾಂಡಿತ್ಯಕ್ಕೆ ನಾನು ಶರಣಾಗಿದ್ದೇನೆ ಎಂದು ಡಿಸಿಎಂ ಹೇಳಿದರು.

ಸಮಾಚಾರ ಸಣ್ಣದಲ್ಲ

ಸರಕಾರ ನೀತಿಯಿಂದ ನಕಲ್‌ವಾದ ಹೆಚ್ಚಳ

ಉಡುಪಿ: ನಕ್ಸಲರು ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ಮುಖ್ಯವಾಹಿನಿಗೆ ಬಂದರೆ ಅವರನ್ನು ಸ್ವೀಕರಿಸುವುದು ತಪ್ಪಲ್ಲ. ಆದರೆ ಮೊನ್ನೆ ನಕ್ಸಲರು ಸರಕಾರಕ್ಕೆ ಶರಣಾದಂತೆ ತೋರಿಲ್ಲ. ಬದಲಾಗಿ ಸರಕಾ ರವೇ ನಕ್ಸಲರಿಗೆ ಶರಣಾದಂತೆ ಭಾಸವಾಯಿತು ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು. ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಈ ಹಿಂದೆ ಶರಣಾದವರಿಗೆ ಸರಿಯಾದ ಸೌಲಭ್ಯ ಲಭಿಸಿಲ್ಲ, ಅಲ್ಲದೆ ನಕ್ಸಲ್‌ಪೀಡಿತ ಪ್ರದೇಶದ ಜನರಿಗೆ ಮೂಲಸೌಲಭ್ಯಗಳನ್ನು ಒದಗಿಸುವ ಕಾರ್ಯವೂ ನಡೆದಿಲ್ಲ. ಸರಕಾರವೇ ನಕ್ಸಲರಿಗೆ ಶರಣಾದ ನೀತಿಯಿಂದಾಗಿ ಇನ್ನು ಮುಂದೆ ನಕ್ಸಲರ ಚಟುವಟಿಕೆ ಹೆಚ್ಚಾಗುವ ಆತಂಕವೂ ಕಾಡುತ್ತಿದೆ ಎಂದರು.

ರಣಹದ್ದುಗಳಂತೆ ಕೈ ನಾಯಕರ ಕಚ್ಚಾಟ

ಬಾಗಲಕೋಟೆ: ಸರಕಾರ ಸತ್ತ ಹೆಣವಾಗಿದೆ, ಅಧಿಕಾರಕ್ಕಾಗಿ ಕೈ ನಾಯಕರು ರಣಹದ್ದುಗಳ ತರಹ ಕಚ್ಚಾಡುತ್ತಿದ್ದಾರೆ ಎಂದು ಚಿತ್ರದುರ್ಗದ ಬಿಜೆಪಿ ಸಂಸದ ಗೋವಿಂದ ಕಾರಜೋಳ ಟೀಕೆ ಮಾಡಿದ್ದಾರೆ. ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ಸಿದ್ದರಾಮಯ್ಯ ಸಿಎಂ ಸ್ಥಾನದಲ್ಲಿ ಮುಂದುವರಿಯಬೇಕೆಂದು ಕೆಲವರು ಹೇಳುತ್ತಿದ್ದಾರೆ. ದಲಿತರು ಸಿಎಂ ಆಗ ಬೇಕೆಂದು ಸಚಿವ ಪರಮೇಶ್ವರ್ ತಮ್ಮ ಮನೆಯಲ್ಲಿ ಸಭೆ ಮಾಡುತ್ತಾರೆ, ಸತೀಶ್ ಜಾರಕಿಹೊಳಿ ಪ್ರತ್ಯೇಕ ಸಭೆ ಮಾಡುತ್ತಿದ್ದಾರೆ. ಅತ್ತ ಲಿಂಗಾಯತರೂ ಮೀಟಿಂಗ್ ಮಾಡಲು ಚಿಂತನೆ ನಡೆಸಿದ್ದಾರೆ. ಗೌಡರು, ಲಿಂಗಾಯತರ ಹಾಗೂ ದಲಿತರು ಮೂರು ಗುಂಪಾಗಿ ಅಧಿಕಾರಕ್ಕಾಗಿ ಬಡಿದಾಡುತ್ತಿದ್ದಾರೆ. ಆಡಳಿತ ಸುಗಮವಾಗಿ ನಡೆಯುತ್ತಿಲ್ಲ, ಯಾರೂ ಲಕ್ಷ್ಯ ವಹಿಸುತ್ತಿಲ್ಲ ಎಂದು ಆರೋಪಿಸಿದರು.

ಸರಕಾರ ಪತನ ಖಚಿತ: ಶೆಟ್ಟರ್



ಹುಬ್ಬಳ್ಳಿ: ಮುಖ್ಯಮಂತ್ರಿ ಕುರ್ಚಿ ಕಿತ್ತಾಟ ಇನ್ನಷ್ಟು ಜೋರಾಗಲಿದ್ದು, ಇದರಿಂದ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಪತನಗೊಳ್ಳುವುದು ಖಚಿತ ಎಂದು ಸಂಸದ ಜಗದೀಶ ಶೆಟ್ಟರ ಭವಿಷ್ಯ ನುಡಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಕುರ್ಚಿ ವಿಷಯ ವಾಗಿಯೇ ಔತಣಕೂಟ ಆರಂಭವಾಗಿದೆ. ಪರಿಶಿಷ್ಟ ಜಾತಿ, ಪಂಗಡ ಶಾಸಕರು, ಸಚಿವರ ಔತಣಕೂಟಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ ಅಡ್ಡಗಾಲು ಹಾಕಿದ್ದಾರೆ. ತಮ್ಮ ವಿರುದ್ಧ ಪಕ್ಷದೊಳಗೆ ಷಡ್ಯಂತ್ರ ನಡೆಯುತ್ತಿದೆ ಎಂದೆನಿಸಿಯೇ ಡಿ.ಕೆ.ಶಿವಕುಮಾರ ಶತ್ರು ಸಂಹಾರ ಯಾಗ ಮಾಡಿಸಿದ್ದಾರೆ. ತೆರೆಮರೆಯಲ್ಲಿ ಇರುವ ಕಾಂಗ್ರೆಸ್ ಗುದ್ದಾಟ ಶೀಘ್ರದಲ್ಲೇ ಬೀದಿರಂಪವಾಗಲಿದೆ ಎಂದರು. ವಿಧಾನಪರಿಷತ್ತು ಸದಸ್ಯ ಸಿ.ಟಿ.ರವಿ ಅವರಿಗೆ ಏನಾದರು ಆದರೆ ಅದಕ್ಕೆ ಕಾಂಗ್ರೆಸ್ ಸರಕಾರವೇ ಹೊಣೆ ಎಂದು ಶೆಟ್ಟರ್ ಹೇಳಿದರು. ನಕ್ಸಲರ ಶರಣಾಗತಿ ಬಗ್ಗೆ ಸರಕಾರ ಇಷ್ಟೊಂದು ವೈಭವೀಕರಿಸುವ ಅವಶ್ಯಕತೆ ಇರಲಿಲ್ಲ. ನಕ್ಸಲರು ಚಿಕ್ಕಮಗಳೂರು ಜಿಲ್ಲಾಧಿಕಾರಿಗಳ ಮುಂದೆ ಶರಣಾಗಬೇಕಾಗಿತ್ತು. ಕೊನೆ ಕ್ಷಣದಲ್ಲಿ ನಿಲುವು ಬದಲಿಸಿ ಸಿಎಂ ಎದುರು ಶರಣಾಗಿದ್ದು ಸರಿಯಲ್ಲ ಎಂದು ಕಿಡಿಕಾರಿದರು.

ವಿರಾಮ
ಪ್ರತಿ ಭಾನುವಾರ

ರಾಜ್ಯ ಸರಕಾರದ ವಿರುದ್ಧ ತಮಿಳುನಾಡು ಬಿಜೆಪಿ ರಾಜ್ಯಾಧ್ಯಕ್ಷ ವಾಗ್ದಾಳಿ

ನಕ್ಸಲರ ಶರಣಾಗತಿ ಸಂಶಯ ಮೂಡುತ್ತಿದೆ: ಕೆ.ಅಣ್ಣಾಮಲೈ

ಮಂಗಳೂರು: ಕರ್ನಾಟಕದಲ್ಲಿ ಇತ್ತೀಚೆಗೆ ನಡೆದ ನಕ್ಸಲ್ ಶರಣಾಗತಿ, ಎನ್‌ಕೌಂಟರ್ ಬಗ್ಗೆ ಅನುಮಾನ ಮೂಡುತ್ತಿದೆ. ಇಲ್ಲಿ ರಾಜಕೀಯ ಲಾಭ ಪಡೆಯಲು ಶರಣಾಗತಿ ಪ್ರಕ್ರಿಯೆ ನಡೆಸಲಾಗಿದೆ ಎಂದು ತಮಿಳುನಾಡು ಬಿಜೆಪಿ ರಾಜ್ಯಾಧ್ಯಕ್ಷ ಅಣ್ಣಾಮಲೈ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಕ್ಸಲ್ ಶರಣಾಗತಿ ನಿಯಮ ಬಹಳ ದೊಡ್ಡಮಟ್ಟದ ಪ್ರಕ್ರಿಯೆ. ಶರಣಾಗತಿ ಸಂದರ್ಭದಲ್ಲಿ ಕೆಲ ನಿಯಮಗಳಿರುತ್ತವೆ. ಆದರೆ, ಕರ್ನಾಟಕದಲ್ಲಿ ನಡೆದ ನಕ್ಸಲ್ ಶರಣಾಗತಿ ಪ್ರಕ್ರಿಯೆ ಅನುಮಾನ ಮೂಡಿಸುತ್ತಿದೆ. ನಕ್ಸಲ್ ಮುಖಂಡ ವಿಕ್ರಮ್ ಗೌಡನ ಎನ್‌ಕೌಂಟರ್‌ನಲ್ಲೂ ಸಂಶಯವಿದೆ. ಎನ್‌ಕೌಂಟರ್ ಆದ ತಕ್ಷಣ ನಕ್ಸಲ್ ಶರಣಾದರು ಎಂದು ಸರಕಾರ ಹೇಳುತ್ತಿದೆ. ನಕ್ಸಲರು ಶರಣಾಗುವಂತೆ ಯಾರು ಮಾತುಕತೆ ನಡೆಸಿದರು ಎಂಬುದು ಗೊತ್ತಿಲ್ಲ. ನಕ್ಸಲ್ ತಂಡದೊಳಗಡೆ ಇರುವ ಆಂತರಿಕ ರಾಜಕೀಯವನ್ನು ಕಾಂಗ್ರೆಸ್ ದುರ್ಬಳಕೆ ಮಾಡುತ್ತಿದೆಯೇ ಎಂಬ ಅನುಮಾನ ಮೂಡುತ್ತಿದೆ ಎಂದರು.

ನಕ್ಸಲ್ ಬೆಂಬಲಿಗರು ಸರಕಾರದ ಮೇಲೆ ಪ್ರಭಾವ ಬೀರಿದ್ದಾರೆ. ನಕ್ಸಲರು ಶರಣಾದಾಗ ಜನರಿಗೆ ವಿಶ್ವಾಸ ಬರಬೇಕು. ಆದರೆ ಅವರ ಶರಣಾಗತಿಯ ಬಗ್ಗೆ ಜನರಿಗೆ ವಿಶ್ವಾಸವಿಲ್ಲ. ಶರಣಾಗತಿಯ ಬಗ್ಗೆ ಗೃಹಸಚಿವರಿಗೆ ಮಾಹಿತಿಯ ಕೊರತೆಯಿದೆ. ಶರಣಾದ ನಕ್ಸಲರು ನಾಗರಿಕ ಸಮಾಜದ ಮೇಲೆ ಪ್ರಭಾವ ಬೀರುವ ಅಪಾಯವಿದೆ.

-ಅಣ್ಣಾಮಲೈ, ತಮಿಳುನಾಡು ಬಿಜೆಪಿ ಅಧ್ಯಕ್ಷ

ನಕ್ಸಲರ ಶರಣಾಗತಿ ಪ್ರಕ್ರಿಯೆ ಸರಿಯಾಗಿ ನಡೆದಿಲ್ಲ

ಸಿಎಂ ಕಚೇರಿ ನಕ್ಸಲರ ಕಚೇರಿಯಾಗದಿರಲಿ

ಉಡುಪಿ: ಮುಖ್ಯಮಂತ್ರಿ ಕಚೇರಿಯನ್ನು ಸಂಪೂರ್ಣವಾಗಿ ನಗರ ನಕ್ಸಲರು ಆವರಿಸಿ ಕೊಂಡಿರುವುದು ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದಲ್ಲ, ಮುಖ್ಯಮಂತ್ರಿ ಕಚೇರಿ ಮುಖ್ಯಮಂತ್ರಿಯವರ ಕಚೇರಿಯಾಗಿರಬೇಕೇ ಹೊರತು ನಗರ ನಕ್ಸಲರ ಕಚೇರಿಯಾಗಬಾರದು ಎಂದು ಶಾಸಕ ವಿ. ಸುನಿಲ್ ಕುಮಾರ್ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರಕಾರವು ನಗರ ನಕ್ಸಲರ ಕೈಗೊಂಬೆಯಂತೆ ಕೆಲಸ ಮಾಡುತ್ತಿದೆ. ಸಿಎಂ ಸಿದ್ದರಾಮಯ್ಯ ಅವರು ನಗರ ನಕ್ಸಲರ ಬಗ್ಗೆ ಮೃದು ಧೋರಣೆ ಬಿಟ್ಟು ದಿಟ್ಟ ನಿರ್ಧಾರ ಕೈಗೊಳ್ಳಬೇಕು. ಗಾಂಧಿವಾದಿ ಎನ್ನುತ್ತಿದ್ದ ಸಿದ್ದರಾಮಯ್ಯ ತಮ್ಮ ರಾಜಕೀಯದ ಕೊನೆಯ ದಿನಗಳಲ್ಲಿ ಮಾವೋವಾದದತ್ತ ಹೊರಳುತ್ತಿರುವುದು ಅವರ ಧೋರಣೆಗಳಿಂದ ಭಾಸವಾಗುತ್ತಿದೆ. ಸಿದ್ದರಾಮಯ್ಯನವರ ವಿವೇಚನೆ, ಆಲೋಚನೆ ಅವರದ್ದೇ ಆಗಬೇಕು ವಿನಾ ನಗರ ನಕ್ಸಲರದ್ದಾಗಬಾರದು ಎಂದು ಮಾರ್ಮಿಕವಾಗಿ ನುಡಿದರು.

ನಕ್ಸಲರ ಶರಣಾಗತಿ ಪ್ರಕ್ರಿಯೆ ಸರಿಯಾದ ರೀತಿಯಲ್ಲಿ ನಡೆದಿಲ್ಲ. ಅದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಮೊದಲಿಗೆ ವಿಕ್ರಂ ಗೌಡನ ಎನ್‌ಕೌಂಟರ್ ನಡೆಯುತ್ತದೆ. ಬಳಿಕ ಮುಖ್ಯಮಂತ್ರಿ ಟ್ವೀಟ್ ಮಾಡುತ್ತಾರೆ, ಅನಂತರ ಶರಣಾಗತಿ ನಡೆಯುತ್ತದೆ. ಇದು ಅನುಮಾನಕ್ಕೆ ಕಾರಣವಾಗಿದೆ ಎಂದು ಸುನಿಲ್ ಕುಮಾರ್ ವಿಶ್ಲೇಷಿಸಿದರು.

ಇಷ್ಟು ವರ್ಷ ಸಿಗದವರು ಈಗ ಹೇಗೆ ಸಿಕ್ಕರು?: ಛಲವಾದಿ ನಾರಾಯಣ ಸ್ವಾಮಿ

ಆರು ನಕ್ಸಲರು ಶರಣಾಗಿಲ್ಲ ರಾಜ್ಯ ಸರಕಾರ ಶರಣಾಗಿದೆ

ಚಿತ್ರದುರ್ಗ: ನಕ್ಸಲರು ಸರಕಾರಕ್ಕೆ ಶರಣಾಗಿಲ್ಲ, ಸರಕಾರವೇ ನಕ್ಸಲರಿಗೆ ಶರಣಾಗಿದೆ. ಇಷ್ಟು ವರ್ಷ ಸಿಗದವರು ಈಗ ಹೇಗೆ ಸಿಕ್ಕರು ಎಂದು ವಿಧಾನಪರಿಷತ್ ಪ್ರತಿ ಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಕ್ಸಲರು ಬರಿಗೈನಲ್ಲಿ ಶರಣಾಗಿದ್ದಾರೆ. ಅವರ ಶಸ್ತ್ರಾಸ್ತ್ರ ಎಲ್ಲೋದವು? ಇವರ ಹಿಂದೆ ಇನ್ನೂ ನಕ್ಸಲರಿದ್ದಾರಾ? ಶಸ್ತ್ರಾಸ್ತ್ರ ಅವರಿಗೆ ಕೊಟ್ಟು ಬಂದಿದ್ದಾರೆಂಬ ಪ್ರಶ್ನೆ ಮೂಡಲಿವೆ. ನಕ್ಸಲರನ್ನು ಕೋರ್ಟ್, ಪೊಲೀಸರ ಮುಂದೆ ಶರಣಾಗತಿ ಮಾಡಬೇಕು. ಸಿಎಂ ಮುಂದೆ ನಕ್ಸಲರ ಶರಣಾಗತಿ ಸರಿಯಲ್ಲ ಎಂದು ಕಿಡಿಕಾರಿದರು.

ಮುಡಾದಲ್ಲಿ ಸುಳ್ಳು ದಾಖಲೆ ನೀಡಿ ಜಿಟಿಡಿ ಫ್ಯಾಮಿಲಿ ಸೈಟ್ ಪಡೆದ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಇದು 14 ಸೈಟ್‌ಗಳ ವಿಚಾರವಲ್ಲ, ಸಾವಿರಾರು ಸೈಟ್‌ಗಳ ವಿಚಾರ. ಅವರನ್ನು ರಕ್ಷಣೆ ಮಾಡಲು ಎಲ್ಲಾ ಕೇಸ್ ಮುಚ್ಚಿ ಹಾಕುವ ಪ್ರಯತ್ನ. ಜಗ್ಗಲ್ಲ, ಬಗ್ಗಲ್ಲ ಎಂದು ಹೇಳಿ ರಾತ್ರೋರಾತ್ರಿ ಹೋಗಿ ಸೈಟ್ ವಾಪಸ್ ಕೊಟ್ಟಿದ್ದು ಯಾಕೆ? ತಪ್ಪು ಮಾಡಿದ್ದು ಅರಿವಾದ ಮೇಲೆ ಸಿಎಂ ಸೈಟ್ ವಾಪಸ್ ಕೊಟ್ಟಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಕಾಂಗ್ರೆಸ್‌ನಲ್ಲಿ ಎರಡು ಗುಂಪುಗಳಿವೆ. ಒಂದು ದಲಿತ ವಿರೋಧಿ ಮಾಫಿಯಾವಿದೆ. ಇನ್ನೊಂದು ದಲಿತ ಮಾಫಿಯಾವಿದೆ. ಇವರೆಲ್ಲರೂ ಮತ್ತೋರ್ವ ದಲಿತ ಬೆಳೆಯಲು ಬಿಡಲ್ಲ. ಕಾಂಗ್ರೆಸ್‌ನಲ್ಲಿ ದಲಿತರಿಗೆ ಬೆಲೆ ಇಲ್ಲ. ಕಾಂಗ್ರೆಸ್ ನಾಶವಾಗುವ ಸ್ಥಿತಿಯಲ್ಲಿದೆ.

-ಛಲವಾದಿ ನಾರಾಯಣಸ್ವಾಮಿ, ಪ್ರತಿ ಪಕ್ಷ ನಾಯಕ

ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಗಂಭೀರ ಆರೋಪ

ಖರ್ಗೆ ಧಮ್ಕಿಗೆ ಬೆದರಿದ ಬಿವೈವಿ

ವಿಜಯಪುರ: ಸಚಿವ ಪ್ರಿಯಾಂಕ್ ಖರ್ಗೆ ಅವರ ಧಮ್ಕಿಯಿಂದಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇತ್ತೀಚೆಗೆ ಕಲಬುರಗಿಯಲ್ಲಿ ನಡೆದ ಪಕ್ಷದ ಹೋರಾಟದಿಂದ ದೂರ ಉಳಿದಿದ್ದರು ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಗಂಭೀರ ಆರೋಪ ಮಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಲಬುರಗಿಯಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ವಿಜಯೇಂದ್ರ ಹಿತೈಷಿಗಳೇ ದೊಡ್ಡ ಮಟ್ಟದ ಹೋರಾಟ ಆಯೋಜನೆ ಮಾಡಿದ್ದರು. ಆದರೂ, ವಿಜಯೇಂದ್ರ ಈ ಹೋರಾಟಕ್ಕೆ ಯಾಕೆ ಹೋಗಲಿಲ್ಲ? ಗೈರಾಗಿದ್ದು ಯಾಕೆ? ಸುರಕ್ಷತೆಯ ಭಯವೇ ಎಂದು ವಿಜಯೇಂದ್ರನೇ ಹೇಳಬೇಕು ಎಂದರು.

ಯತ್ನಾಳ, ವಿಜಯೇಂದ್ರಗೆ ನಿಮ್ಮ ತಂದೆಯ ಎಲ್ಲ ವಿಷಯಗಳನ್ನು ಹೊರ ತೆಗೆಯುತ್ತೇನೆ ಎಂದು ಸಚಿವ ಪ್ರಿಯಾಂಕ್ ಖರ್ಗೆಯವರು ಧಮ್ಕಿ ಹಾಕಿದ್ದರು.

ಈ ಭಯದ ಕಾರಣಕ್ಕೆ ವಿಜಯೇಂದ್ರ ಹೋಗಿಲ್ಲ ಎಂದು ದೂರಿದರು. ಅಖಾಡಕ್ಕೆ ಯಡಿಯೂರಪ್ಪ ಸೇರಿ ಯಾರೇ ಇಳಿದರೂ, ನನಗೆ ಏನೂ ಆಗಲ್ಲ. ಗುರುವಾರದ ಸಭೆಯಲ್ಲಿ ಪಾಲ್ಗೊಂಡಿದ್ದ 17 ಜನರು ನನಗೆ ಕರೆ ಮಾಡಿದ್ದರು.

ನಾವು ನಮ್ಮ ಆತ್ಮಸಾಕ್ಷಿಯಿಂದ ಸಭೆಗೆ ಹೋಗಿಲ್ಲ. ವಿಜಯೇಂದ್ರ ರಾಜ್ಯಾಧ್ಯಕ್ಷ ಹುದ್ದೆಯಲ್ಲಿ ಇರುವ ಕಾರಣ ಹೋಗಿರುವುದಾಗಿ ಹೇಳಿದ್ದಾರೆ.

ಕಳೆದ ಚುನಾವಣೆಯುಲ್ಲಿ ನಮ್ಮ ಶಾಸಕರನ್ನು ಸೋಲಿಸಿರುವ ಕಾಣದ ಕೈಗಳು ಯಾವುವು? ಆ ಕೈಗಳು ಎರಡಾ? ನಾಲ್ಕಾ ಎಂಬ ಬಗ್ಗೆ ಆ ಸಭೆಯಲ್ಲಿ ಚರ್ಚೆಯಾಗಬೇಕಿತ್ತು. ಅಷ್ಟೇ ಅಲ್ಲ, ಚುನಾವಣೆಯಲ್ಲಿ ಸೋತ 2 ವರ್ಷಗಳ ನಂತರ ಮಾಜಿ ಶಾಸಕರಿಗೆ ಈಗ ಸಾಂತ್ವನ ಹೇಳುತ್ತಿದ್ದಾರೆ. ಇದಕ್ಕೆ ನಿಷ್ಠಾವಂತ ಬಿಜೆಪಿ ಗುಂಪೇ ಕಾರಣ. ಯತ್ನಾಳ್, ರಮೇಶ ಜಾರಕಿಹೊಳಿ ಮತ್ತು ಅರವಿಂದ ಲಿಂಬಾವಳಿ ಅವರ ಗುಂಪಿನ ಪರಿಣಾಮವಾಗಿ ಮಾಜಿ ಶಾಸಕರಿಗೆ ಗೌರವ ಸಿಕ್ಕಿದೆ.

ಬಸನಗೌಡ ಪಾಟೀಲ್ ಯತ್ನಾಳ್, ಶಾಸಕ

ಕಾಂಗ್ರೆಸ್ ಸರಕಾರದ ವಿರುದ್ಧ ಸಂಸದ ಬಸವರಾಜ ಬೊಮ್ಮಾಯಿ ಕಿಡಿ

ರಾಜ್ಯದಲ್ಲಿ ಹದಗೆಟ್ಟ ಆರ್ಥಿಕ ಪರಿಸ್ಥಿತಿ

ಬಾಗಲಕೋಟೆ: ಗ್ಯಾರಂಟಿ ಯೋಜನೆಗಳಿಂದಾಗಿ ರಾಜ್ಯದ ಆರ್ಥಿಕ ಸ್ಥಿತಿ ಹದಗೆಟ್ಟಿದೆ. ಎಲ್ಲದರ ಮೇಲೂ ಸರಕಾರ ತೆರಿಗೆ ಹಾಕಿದೆ.ಇದನ್ನೆಲ್ಲ ನೋಡಿದರೆ ಈ ಸಾರಿ ರಾಜ್ಯದ 40 ಸಾವಿರ ಕೋಟಿ ಅಧಿಕ ತೆರಿಗೆ ಜನರಿಗೆ ಹೊರೆಯಾಗಲಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಆತಂಕ ವ್ಯಕ್ತಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಆರ್ಥಿಕವಾಗಿ ದಿವಾಳಿಯಾಗಿದೆ ಎಂದು ಇದರಿಂದಲೇ ಸ್ಪಷ್ಟವಾಗುತ್ತದೆ. ಒಂದೂವರೆ ವರ್ಷದಲ್ಲಿ ಅಭಿವೃದ್ಧಿಗೆ ಹಣ ಸಿಕ್ಕಿಲ್ಲ ಎಂದು ಸ್ವತಃ ಕಾಂಗ್ರೆಸ್ ಪಕ್ಷದ ಶಾಸಕರೇ ಹೇಳುತ್ತಿದ್ದಾರೆ. ಇದಕ್ಕೆ ಸಿಎಂ ಉತ್ತರ ಕೊಡಲಿ ಎಂದರು.

ಕೇಂದ್ರದ ವಿರುದ್ಧ ಟೀಕೆ ಸರಿಯಲ್ಲ: ಕೇಂದ್ರದಿಂದ ತೆರಿಗೆ ಹಂಚಿಕೆ ಸಮರ್ಪಕವಾಗಿ ಬರುತ್ತಿಲ್ಲ ಎಂಬ ಕಾಂಗ್ರೆಸ್ ಅವರ ಆರೋಪ ವಿಚಾರಕ್ಕೆ ಉತ್ತರಿಸಿದ ಅವರು, ಈಗಾಗಲೇ ಇದಕ್ಕೆ ನಮ್ಮ ಸಚಿವರು ಉತ್ತರ ಕೊಟ್ಟಿದ್ದಾರೆ. ತಮ್ಮ ತಪ್ಪು ಮರೆಮಾಚಲು ಕೇಂದ್ರದ ಮೇಲೆ ಬೊಟ್ಟು ಮಾಡುತ್ತಿದ್ದಾರೆ. ಹಣಕಾಸು ನಿರ್ವಹಣೆ, ಆಡಳಿತದಲ್ಲಿ ರಾಜ್ಯ ಸರಕಾರ ವಿಫಲವಾಗಿದೆ ಎಂದು ಬೊಮ್ಮಾಯಿ ತರಾಟೆಗೆ ತೆಗೆದುಕೊಂಡರು.

ಬಿಜೆಪಿ ಬಣ ಸಮಸ್ಯೆಗೆ ಶೀಘ್ರ ತೆರೆ: ಬಿಜೆಪಿಯಲ್ಲಿ ಬಣಗಳಾಗಿರುವುದಕ್ಕೆ ಪ್ರತಿಕ್ರಿಯಿಸಿದ ಅವರು, ನಮ್ಮದೇನು ಬಹಳ ದೊಡ್ಡ ಸಮಸ್ಯೆ ಇಲ್ಲ. ಹೈಕಮಾಂಡ್ ಈಗಾಗಲೇ ಈ ಬಗ್ಗೆ ವಿಚಾರ ಮಾಡಿದೆ. ಕೆಲವೇ ದಿನಗಳಲ್ಲಿ ಆ ಸಮಸ್ಯೆ ಸಂಪೂರ್ಣವಾಗಿ ಬಗೆಹರಿಯುತ್ತದೆ ಎಂದರು.

ಕಾಂಗ್ರೆಸ್‌ನಲ್ಲಿ ಕುರ್ಚಿಗಾಗಿ ಕಾಳಗ

ಕಾಂಗ್ರೆಸ್ ನಲ್ಲಿ ಡಿನ್ನರ್ ಪಾಲಿಟಿಕ್ಸ್ ವಿಚಾರಕ್ಕೆ ಪ್ರತಿಕ್ರಿಯಿಸಿ, ಅವರು ಲಂಚ್ ಮಾಡಲಿ, ಅವರ ಆಂತರಿಕ ವಿಚಾರ. ರಾಜ್ಯ ಆರ್ಥಿಕವಾಗಿ ಸಂಕಷ್ಟದಲ್ಲಿದೆ. ಕಾನೂನು ಸುವ್ಯವಸ್ಥೆ ಜತೆಗೆ ದಲಿತರ ಮೇಲೆ ದೌರ್ಜನ್ಯ ಆಗುತ್ತಿದೆ. ವಿದ್ಯಾರ್ಥಿಗಳಿಗೆ ವೇತನ ಸಿಗುತ್ತಿಲ್ಲ. ರೈತರಿಗೆ ಪರಿಹಾರ ಸಿಗುತ್ತಿಲ್ಲ. ಬಾಣಂತಿಯರ ಸರಣಿ ಸಾವು ಆಗುತ್ತಿದೆ. ಅಗಾಧವಾಗಿರುವ ಸಮಸ್ಯೆಗಳು ಇರುವಾಗ, ಕಾಂಗ್ರೆಸ್‌ನವರು ಎಲ್ಲವನ್ನು ಬಿಟ್ಟು ತಮ್ಮ ರಾಜಕಾರಣವೇ ಮುಖ್ಯವಾಗಿದೆ. ಯಾರು ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು. ಯಾರು ಸಿಎಂ ಆಗಬೇಕು ಎನ್ನುವುದು ಬಹಳ ಮಹತ್ವವಾಗಿದೆ. ಜನರು ತಮ್ಮನ್ನು ಆರಿಸಿರುವ ಉದ್ದೇಶವನ್ನೇ ಮರೆತು ತಮ್ಮ ಕುರ್ಚಿಯ ಭದ್ರತೆಯ ಆಟವನ್ನು ಆಡುತ್ತಿದ್ದಾರೆ ಹೊರತು ಜನರ ಸಂಕಷ್ಟ ದೂರಮಾಡಲು ಪೂರ್ಣವಾಗಿ ವಿಫಲವಾಗಿದ್ದಾರೆ ಎಂದು ಬಸವರಾಜ ಬೊಮ್ಮಾಯಿ ಆರೋಪಿಸಿದರು.

ನಕ್ಸಲರ ಶರಣಾಗತಿ ಪ್ರಕ್ರಿಯೆ ಬಗ್ಗೆ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅಸಮಾಧಾನ

ತನಿಖೆ ನಡೆಸಿ ಪ್ಯಾಕೇಜ್ ನೀಡಿ

ಚಿಕ್ಕಮಗಳೂರು: ನಕ್ಸಲರು ತಂತ್ರಗಾರಿಕೆ ಕಾರಣಕ್ಕೆ ಶರಣಾಗಿದ್ದಾರೋ ಅಥವಾ ನಕ್ಸಲ್ ಸಿದ್ಧಾಂತದಿಂದ ಹೊರಬಂದು ಶರಣಾಗಿದ್ದಾರೋ ಎಂಬುದನ್ನು ತನಿಖೆ ನಡೆಸಿ ಪ್ಯಾಕೇಜ್ ನೀಡಬೇಕು. ಇಲ್ಲದಿದ್ದರೇ ಪ್ಯಾಕೇಜ್ ನೀಡುವುದರಲ್ಲಿ ಅರ್ಥವಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಸರಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶರಣಾಗತಿ ಹೆಸರಿನಲ್ಲಿ ನಕ್ಸಲ್ ಚಟುವಟಿಕೆ ಬಲಗೊಳಿಸಲು ಅವಕಾಶ ನೀಡಿದಂತಾಗಬಾರದು. ನಕ್ಸಲರ ಚಲನವಲನಗಳ ಮೇಲೆ ನಿಗಾ ಇಡುವ ಜತೆಗೆ ಅವರು ತನಿಖೆಗೆ ಸಹಕರಿಸಬೇಕು ಎಂದು ತಾಕೀತು ಮಾಡಿದರು.

ಶಸ್ತ್ರಾಸ್ತ್ರಗಳ ಮೂಲದ ಬಗ್ಗೆ ಮಾಹಿತಿ ಹಂಚಿಕೊಳ್ಳಿ: ನಕ್ಸಲರು ಬಳಸುತ್ತಿದ್ದ ಶಸ್ತ್ರಾಸ್ತ್ರ ಪತ್ತೆ ಕುರಿತು ಪ್ರತಿಕ್ರಿಯಿಸಿ, ನಕ್ಸಲರು ಎಲ್ಲಿ ಕಾರ್ಯಾಚರಣೆ ಮಾಡಿದರು, ಹಣ, ಶಸ್ತ್ರಾಸ್ತ್ರ ಎಲ್ಲಿಂದ ಬಂತು. ಯಾವ ವ್ಯಕ್ತಿ, ಸಂಘಟನೆ ಸಹಾಯ ಮಾಡಿದ್ದಾರೆ. ಎಲ್ಲ ಮಾಹಿತಿ ಹಂಚಿಕೊಂಡರೆ ಶರಣಾಗತಿಗೆ ಅರ್ಥ ಬರುತ್ತದೆ ಎಂದು ಸಿ.ಟಿ.ರವಿ ಹೇಳಿದರು.

ನಕ್ಸಲ್‌ವಾದ ಸಂವಿಧಾನಕ್ಕೆ ವಿರುದ್ಧವಾದ, ಪ್ರಜಾಪ್ರಭುತ್ವ ಮೇಲೆ ನಂಬಿಕೆ ಇಲ್ಲದ ಸಿದ್ಧಾಂತ. ಅವರಿಗೆ ಬ್ಯಾಲೆಟ್ ಮೇಲೆ ನಂಬಿಕೆ ಇಲ್ಲ, ಬುಲೆಟ್ ಮೇಲೆ ನಂಬಿಕೆ ಇದೆ ಎಂದ ಬಿಜೆಪಿ ನಾಯಕ, ನಕ್ಸಲರಿಂದಾಗಿ ನಾಗರಿಕರು, ಪೊಲೀಸರು, ಸೈನಿಕರು ಪ್ರಾಣತ್ಯಾಗ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ಯಾಕೇಜ್ ನೀಡುವ ಮುನ್ನ ಎಲ್ಲ ಮಾಹಿತಿ ಕಲೆ ಹಾಕಬೇಕು ಎಂದು ಸಿ.ಟಿ. ರವಿ ಒತ್ತಾಯಿಸಿದರು.

ಡಿನ್ನರ್ ಮೀಟಿಂಗ್ ಅಲ್ಲ, ಸಾವಿಗೆ ಕಾರಣವಾದ ಸಂಬಂಧ ಉನ್ನತ ಮೀಟಿಂಗ್ ಮಾಡಬೇಕಿತ್ತು. ಸಾವಿಗೆ ಕಾರಣ ಆಸ್ಪತ್ರೆಯೋ, ವೈದ್ಯರೋ, ಔಷಧಿಯೋ ಏನು ಎಂದು ತಿಳಿಯಬೇಕಿತ್ತು. ರಾಜ್ಯ ಸರಕಾರಕ್ಕೆ ಸಂವೇದನೆ ಇಲ್ಲದಂತಾಗಿದೆ. ಕಲ್ಲು ಹೃದಯ, ಹೃದಯ ಹೀನರಂತೆ ವರ್ತಿಸುತ್ತಿದ್ದಾರೆ. ಡಿನ್ನರ್ ಮೀಟಿಂಗ್, ಟೆಂಪಲ್ ರನ್ ಸ್ವಾರ್ಥಕ್ಕಾಗಿ ಮಾಡ್ತಿರೋದು.

- ಸಿ.ಟಿ.ರವಿ, ವಿಧಾನ ಪರಿಷತ್ ಸದಸ್ಯ

ತಜ್ಞರ ಸಮಿತಿ ರಚನೆಯಾದರೂ ನಿಲ್ಲದ ಸಾವು

ರಾಜ್ಯದಲ್ಲಿ ಸರಣಿ ಬಾಣಂತಿಯರ ಸಾವು ಪ್ರಕರಣ ನಡೆಯುತ್ತಿದ್ದು ಕರ್ನಾಟಕ ಸಾವಿನ ಮನೆಯಂತಾಗಿದೆ. 2500ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ರಾಮಾಣಿಕ ಅಧಿಕಾರಿಗಳು ಜೀವ ಕಳೆದುಕೊಳ್ಳುತ್ತಿದ್ದಾರೆ. ತಜ್ಞರ ಸಮಿತಿ ರಚನೆಯಾಗಿದ್ದರೂ ಬಾಣಂತಿಯರು ಮತ್ತು ಹಸುಗೂಸುಗಳ ಸಾವಿಗೆ ಕಾರಣವೇನೆಂದು ತಿಳಿದಿಲ್ಲ. ಸರಕಾರ ಈ ಸಂಗತಿಗಳನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ರವಿ ಒತ್ತಾಯಿಸಿದರು.

ಅನಾಥೇಮಯ ಬೆದರಿಕೆ ಪತ್ರ

ಚಿಕ್ಕಮಗಳೂರು: ಬಿಜೆಪಿ ಎಂಎಲ್‌ಸಿ ಸಿ.ಟಿ ರವಿ ಹಾಗೂ ಅವರ ಮಗ ಸೂರ್ಯನಿಗೆ ಅನಾಮಧೇಯ ವ್ಯಕ್ತಿಗಳಿಂದ ಬೆದರಿಕೆ ಪತ್ರವೊಂದು ಬಂದಿದೆ.

ಸಿ.ಟಿ ರವಿ ಸ್ವಗೃಹಕ್ಕೆ ಅನಾಮಧೇಯ ವ್ಯಕ್ತಿಗಳು ಪತ್ರ ಕಳುಹಿಸಿದ್ದಾರೆ. ಪತ್ರದಲ್ಲಿ ಇನ್ನೂ 15 ದಿನದೊಳಗೆ ಚಿಕ್ಕಮಗಳೂರಿನಿಂದ ಬೆಳಗಾವಿಗೆ ಬಂದು ಅಭಿನೇತ್ರಿಯ ಕೈಕಾಲು ಹಿಡಿದು ಕ್ಷಮೆ ಕೇಳಬೇಕು. ಇಲ್ಲದಿದ್ದರೆ ನಿಮ್ಮ ಮನೆಗೆ ನುಗ್ಗಿ ನಿಮ್ಮ ಕೈಕಾಲ ಮುರಿದು ಸಾಯಿಸುತ್ತೇವೆ. ನಿನ್ನ ಕೈ ಕಾಲು ಮುರಿಯುತ್ತೇವೆ, ಪ್ರಾಣ ತೆಗೆಯುತ್ತೇವೆ ಹಾಗೂ ನಿನ್ನ ಮಗನನ್ನೂ ಸಾಯಿಸುತ್ತೇವೆ. ಹುಷಾರ್ ಹುಷಾರ್ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಈ ಕುರಿತು ಸಿ.ಟಿ ರವಿ ಅವರು ಚಿಕ್ಕಮಗಳೂರು ನಗರದ ಬಸವನಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿದ್ದಾರೆ. ಸದ್ಯ ಪ್ರಕರಣ ದಾಖಲಿಸಿ ಕೊಂಡ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಒಪ್ಪಿಸಿದ ಶಸ್ತ್ರಾಸ್ತ್ರ ಎಷ್ಟು?

ಹುಬ್ಬಳ್ಳಿ: ನಕ್ಸಲರ ಶರಣಾಗತಿಗೆ ನನ್ನ ವಿರೋಧವಿಲ್ಲ. ಆದರೆ, ರಾಜ್ಯದಲ್ಲಿ ನಕ್ಸಲರ ಶರಣಾಗತಿ ತರಾತುರಿಯಿಂದ ನಡೆಯಿತು ಎಂಬ ಭಾವನೆ ಹಲವರಲ್ಲಿದ್ದು, ಪ್ರಶ್ನೆಗಳಿಗೆ ಹುಟ್ಟುಹಾಕಿದೆ. ಶರಣಾದ ನಕ್ಸಲರು ಎಷ್ಟು ಶಸ್ತ್ರಾಸ್ತ್ರ ಒಪ್ಪಿಸಿದ್ದಾರೆ ಎಂಬ ಮಾಹಿತಿಯನ್ನು ಜನರಿಗೆ ಮುಖ್ಯಮಂತ್ರಿ ನೀಡಲಿ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನಕ್ಸಲರ ಹೋರಾಟದ ಹಿಂದೆ ವಿದೇಶಿಯರ ಕೈವಾಡವಿದ್ದು, ಹಣ ಕೂಡ ಸಂದಾಯ ಆಗುತ್ತಿದೆ. ಇದರಲ್ಲಿ ನಮ್ಮ ರಾಜ್ಯದ ಕೆಲ ಯುವಕರು ಸಿಲುಕಿದ್ದಾರೆ. ಅವರು ವಾಪಸ್ ಬರಲು ಬಯಸಿದರೆ, ನೀಡಲಾಗುವ ಪುನರ್ವಸತಿ ಪ್ಯಾಕೇಜ್ ಬಗ್ಗೆ ನನಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿದರು. ಬೇರೆ ಬೇರೆ ಭಾಗಗಳಲ್ಲಿ ಶರಣಾಗತಿ ಆದ ನಕ್ಸಲರು ತಮ್ಮ ಬಳಿ ಇದ್ದ ಶಸ್ತ್ರಾಸ್ತ್ರಗಳನ್ನು ಒಪ್ಪಿಸಿದ್ದಾರೆ. ನಕ್ಸಲರ ಪ್ಯಾಕೇಜ್ ವ್ಯವಸ್ಥೆ ಎಲ್ಲಾ ಸರಕಾರದಲ್ಲಿದೆ. ನಕ್ಸಲ್ ಪ್ಯಾಕೇಜ್ ಇತರೇ ನಕ್ಸಲರಿಗೆ ಸಲುಗೆಯಾಗದಿರಲಿ. ಆರು ನಕ್ಸಲರು ಶರಣಾದರೆ, ರಾಜ್ಯದಲ್ಲಿ ನಕ್ಸಲ್ ಚಳವಳಿ ಮುಗಿಯಿತು ಎಂಬಂತೆ ಬಿಂಬಿಸಲಾಗುತ್ತದೆ. ನಕ್ಸಲ್ ನಿಗ್ರಹ ಪಡೆ ತಂಡದ ಕಾರ್ಯಾಚರಣೆ ಸ್ಥಗಿತಗೊಳ್ಳಲಿದೆ ಎನ್ನುವುದು ಎಷ್ಟರಮಟ್ಟಿಗೆ ಸರಿ' ಎಂದರು.

ಬೇರೆ ಬೇರೆ ರಾಜ್ಯಗಳಲ್ಲಿ ನಕ್ಸಲರು ಶರಣಾಗಲು ಕಾಲಾವಕಾಶ ಪಡೆಯುತ್ತಾರೆ. ಹಲವು ಸುತ್ತಿನ ಮಾತುಕತೆ ನಡೆಯುತ್ತವೆ. ಆದರೆ, ಇಲ್ಲಿ ಸಿಎಂ ಪ್ರಕಟಿಸಿದ ವಾರದಲ್ಲಿ ನಕ್ಸಲರು ಶರಣಾಗಿದ್ದು, ಸಂಶಯವಾಗಿದೆ.

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಎಲ್ಲರ ಸಲಹೆಗಳನ್ನು ಪರಿಗಣಿಸುವುದು, ಸ್ವೀಕರಿಸುವುದು ಜಾಣತನ

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಕೆಲವರಿಗೆ, ತಮ್ಮ ಕೆಲಸದಲ್ಲಿ ಬೇರೆಯವರು ಒಂದು ಸಣ್ಣ ಸಲಹೆ-ಸೂಚನೆ ವ್ಯಕ್ತಪಡಿಸುವುದು ಸಹ ಇಷ್ಟವಾಗುವುದಿಲ್ಲ. ಅದರಲ್ಲೂ ಬೇರೆಯವರು ತಮ್ಮ ಕೆಲಸವನ್ನು ತಿದ್ದಿದರೆ ಅದನ್ನು ಸುತರಾಂ ತಳ್ಳಿ ಹಾಕುತ್ತಾರೆ. ಅವರಿಗೆ ತಾವು ಹೇಳಿದ್ದೇ ವೇದವಾಕ್ಯ, ತಾವು ಮಾಡಿದ್ದೇ ಸರ್ವಶ್ರೇಷ್ಠ. ''ನನಗೆ ಹೇಳಲು ಅವನಾರು? ನನ್ನ ಸ್ಥಾನಮಾನವೇನು, ಅವನದ್ದೇನು? ನನಗೆ ಸಲಹೆ ಕೊಡುವಷ್ಟು ಅವನಿಗೆ ಧಿಮಾಕಾ?'' ಎಂಬ ಅಹಂಕಾರದ ಮಾತುಗಳನ್ನು ಹೇಳಿ ಬೇರೆಯವರ ಅಭಿಪ್ರಾಯಗಳನ್ನು ಹೊಸಕಿ ಹಾಕುತ್ತಾರೆ. ಬೇರೆಯವರ ಅನಿಸಿಕೆ, ಸಲಹೆಗಳನ್ನು ಪಡೆಯುವುದೆಂದರೆ ಅದು ತಮಗೆ ಅವಮಾನ ಎಂದು ಇಂಥವರು ಭಾವಿಸುತ್ತಾರೆ. ಬೇರೆಯವರ ಅನಿಸಿಕೆಗಳನ್ನು ಕೇಳಿ ಅವನ್ನು ಅಳವಡಿಸಿಕೊಂಡರೆ, ತಾವು ಮಾಡುವ ಕೆಲಸದಲ್ಲಿ ಇನ್ನಷ್ಟು ಸುಧಾರಣೆ ತರಬಹುದು ಎಂಬುದನ್ನು ಒಪ್ಪುವುದಿಲ್ಲ. ಅವರಿಗೆ 'ತಮಗಿಂತ ಹಿರಿಯರಿಲ್ಲ' ಎಂಬ ಅಹಂ.

ಒಬ್ಬರು ಹಿರಿಯ ಪತ್ರಕರ್ತರಿದ್ದರು. ಅವರ ಕಾಪಿಯನ್ನು ಯಾರೂ ತಿದ್ದುವಂತಿರಲಿಲ್ಲ. ಅವರಿಗೆ ಸಮಾಜದಲ್ಲಿ ತಕ್ಕಮಟ್ಟಿಗಿನ ಗೌರವವೂ ಇತ್ತು. ಮಂತ್ರಿಗಳು, ರಾಜಕಾರಣಿಗಳ ಜತೆ ಸಖ್ಯವಿತ್ತು. ''ದಿನ ಬೆಳಗಾದರೆ ಮಂತ್ರಿ, ಮುಖ್ಯಮಂತ್ರಿಯವರನ್ನು ಭೇಟಿ ಮಾಡ್ತೇನೆ, ಅವರು ನನ್ನ ವರದಿಯನ್ನು ಪ್ರಶಂಸೆ ಮಾಡ್ತಾರೆ. ಹೀಗಿರುವಾಗ ಡೆಸ್ಕ್‌ನಲ್ಲಿರುವ ಉಪಸಂಪಾದಕರು ನನ್ನ ಕಾಪಿಯನ್ನು ತಿದ್ದುತ್ತಾರೆ. ಅವರಿಗೆ ಆ ಯೋಗ್ಯತೆ ಇದೆಯಾ?'' ಎಂದು ಜಂಭದಿಂದ ಪ್ರಶ್ನಿಸುತ್ತಿದ್ದರು.

ತಮ್ಮದೇ ಉತ್ಕೃಷ್ಟ, ಸರ್ವಶ್ರೇಷ್ಠ ಎಂದು ಭಾವಿಸುವುದು ತಪ್ಪಲ್ಲ, ಅದು ಉತ್ಕೃಷ್ಟ ಅಥವಾ ಸರ್ವಶ್ರೇಷ್ಠವಾಗಿದ್ದಾಗ. ಆದರೆ ಬೇರೆಯವರು ನಮ್ಮ ಕೃತಿಯನ್ನು ನೋಡಿ ಸಲಹೆ ಸೂಚನೆ ನೀಡಿದಾಗ, ಅದನ್ನು ಸ್ವೀಕರಿಸುವುದು ಅಥವಾ ಅಳವಡಿಸಿಕೊಳ್ಳುವುದು ಜಾಣತನ. 'ನನಗೆ ಸಲಹೆ, ಸೂಚನೆ ನೀಡಲು ಇವನ್ಯಾರು? ನನಗೇ ಬುದ್ಧಿ ಹೇಳುವಷ್ಟು ಬೆಳೆದು ಬಿಟ್ಟನಾ?' ಎಂದು ಯೋಚಿಸುವುದು ನಮ್ಮ ಸಣ್ಣತನವಾದೀತು. ಬೇರೆಯವರಿಗೂ ಬುದ್ಧಿಯಿದೆ, ಅವರಿಗೂ ಜೀವನ ಅನುಭವವಿದೆ, ಅವರಲ್ಲೂ ಒಳ್ಳೆಯ ಐಡಿಯಾಗಳಿರಬಹುದು. ಅದನ್ನೂ ಸ್ವೀಕರಿಸೋಣ ಎಂದು ಭಾವಿಸುವುದರಿಂದ ನಮಗೇ ಒಳ್ಳೆಯದಾಗುತ್ತದೆ.

ಅಷ್ಟಕ್ಕೂ, ಉತ್ತಮ ಸಲಹೆಗಳೆಂದರೆ ಜೀವನಾನುಭಗಳ ಫಲ, ಸಾರ ತಾನೆ? ಅದನ್ನು ಬಿಟ್ಟು, 'ನಾನೇಕೆ ಬೇರೆಯವರ ಸಲಹೆ ಪಡೆಯಬೇಕು, ಅಂಥ ಬೌದ್ಧಿಕ ದಾರಿದ್ರ್ಯ ನನಗಿದೆಯೇ?' ಎಂದು ಭಾವಿಸುವುದು ನಮ್ಮ ಸಂಕುಚಿತ ಮನೋಭಾವವನ್ನು ತೋರಿಸುತ್ತದೆ. ಉತ್ತಮ ಬರಹಗಾರನಾದವನು, ಕಾದಂಬರಿಕಾರನಾದವನು ಮುದ್ರಣಕ್ಕೆ ಕಳಿಸುವ ಮುನ್ನ, ತಾನು ಬರೆದಿದ್ದನ್ನು ನಾಲ್ಕಾರು ಮಂದಿಗೆ ತೋರಿಸಿ ಅವರ ಸಲಹೆ ಪಡೆಯುತ್ತಾನೆ. ಆ ಸಲಹೆಯನ್ನು ಜಾರಿಗೊಳಿಸುತ್ತಾನೆ. ಇದರಿಂದ ಆ ಕೃತಿಯ ಮೆರುಗು ಹೆಚ್ಚಾಗುತ್ತದೆ.

ಪ್ರಸಿದ್ಧ ಪತ್ರಕರ್ತರು, ಸಂಪಾದಕರು ತಾವು ಬರೆದಿದ್ದನ್ನು ನೇರವಾಗಿ ಪ್ರಿಂಟ್‌ಗೆ ಕಳಿಸುವುದಿಲ್ಲ. ತಮ್ಮ ಸಹೋದ್ಯೋಗಿಗಳಿಗೆ ತೋರಿಸಿ ಅವರ ಸಲಹೆ ಪಡೆಯುತ್ತಾರೆ. ಅವರಿಗೆ ತಮ್ಮ ಕಾಪಿಯನ್ನು ಎಡಿಟ್ ಮಾಡುವಂತೆ ಸೂಚಿಸುತ್ತಾರೆ. 'ನಾನು ಬರೆದಿದ್ದನ್ನು ಎಡಿಟ್ ಮಾಡಲು ಅವನ್ಯಾರು?' ಎಂದು ಭಾವಿಸುವುದಿಲ್ಲ. ಅಷ್ಟಕ್ಕೂ ಐಡಿಯಾಗಳು ನಮ್ಮದೊಂದೇ ಸ್ವತ್ತಲ್ಲ, ಅವು ಎಲ್ಲಿಂದ ಬೇಕಾದರೂ ಬರಬಹುದು.

ಯೋಗಿ ಪರಿಚಯಿಸಿದ ಯೋಗಿ!

ನನಗೆ ಹೇಮಿನ್ ಸುನಿಮ್ ಅವರ ಬಗ್ಗೆ ಮೊದಲ ಸಲ ಹೇಳಿದವರು ಯೋಗಿ ದುರ್ಲಭಜೀ. ಅಲ್ಲಿಯವರೆಗೆ ನಾನು ಅವರ ಬಗ್ಗೆ ಕೇಳಿಯೇ ಇರಲಿಲ್ಲ. ಒಂದು ದಿನ ಯೋಗಿಯವರು 'ನೀವು ಹೇಮಿನ್ ಸುನಿಮ್ ಕೃತಿಗಳನ್ನು ಓದಿದ್ದೀರಾ?' ಎಂದು ಕೇಳಿದರು. 'ಅವರ ಕೃತಿಗಳನ್ನೂ ಓದಿಲ್ಲ, ಅವರ ಹೆಸರನ್ನೂ ಕೇಳಿಲ್ಲ' ಎಂದೆ. 'ನನಗೆ ಆಶ್ಚರ್ಯವಾಗುತ್ತಿದೆ' ಎಂದರು ಯೋಗಿಜೀ. ನನಗೆ ಒಂಥರಾ ಮುಜುಗರವಾಯಿತು.

ಒಂದು ದಿನದ ನಂತರ, ಕೊರಿಯರ್‌ನಲ್ಲಿ ಪುಸ್ತಕ ಬಂತು. ಯೋಗಿಜೀಯವರು ಹೇಮಿನ್ ಸುನಿಮ್ ಬರೆದ The Things You Can See Only When You Slow Down ಎಂಬ ಪುಸ್ತಕ ಕಳಿಸಿಕೊಟ್ಟಿದ್ದರು. ಅಂದ ಹಾಗೆ, ಈ ಕೃತಿಯ ಸುಮಾರು 30 ಲಕ್ಷ ಪ್ರತಿಗಳು ಮಾರಾಟವಾಗಿವೆ. ನಾನು ಎರಡು ರಾತ್ರಿ ಕುಳಿತು ಈ ಪುಸ್ತಕವನ್ನು ಓದಿ ಮುಗಿಸಿದೆ. ಇದು ಎಷ್ಟು ಸೊಗಸಾದ ಕೃತಿಯೆಂದರೆ, ಯೋಗಿಜೀ ಅವರಿಗೆ ದುಂಬಾಲು ಬಿದ್ದು ಮೂಲಪ್ರಕಾಶಕರನ್ನು ಸಂಪರ್ಕಿಸಿ ಅನುವಾದದ ಹಕ್ಕನ್ನು ಪಡೆದೆ.

ಈ ಪುಸ್ತಕದ ಸಾರಾಂಶವನ್ನು ಒಂದೇ ಸಾಲಿನಲ್ಲಿ ಹೇಳುವುದಾದರೆ, ಈ ಜಂಜಡದ, ಒತ್ತಡದ, ತಾಪತ್ರಯದ ಜಗತ್ತಿನಲ್ಲಿ ಶಾಂತವಾಗಿ ಯೋಚಿಸುವುದು ಹೇಗೆ, ನೆಮ್ಮದಿಯಿಂದ ಬದುಕುವುದು ಹೇಗೆ ಎಂಬುದನ್ನು ಸುನಿಮ್ ಅತ್ಯಂತ ಸ್ವಾರಸ್ಯವಾಗಿ ಹೇಳಿದ್ದಾರೆ. ಒಂಥರಾ ಕತೆಯಂತೆ ಓದಿಸಿಕೊಂಡು ಹೋಗುತ್ತದೆ. ಅಂದ ಹಾಗೆ, ಹೇಮಿನ್ ಸುನಿಮ್ ಅವರು ಮೂಲತಃ ದಕ್ಷಿಣ ಕೊರಿಯಾದವರು. ಇವರನ್ನು ಆ ದೇಶದಲ್ಲಿ ಅತ್ಯಂತ ಪ್ರಭಾವಿ 'ಝೆನ್ ಬುದ್ಧಿಸ್ಟ್' ಎಂದು ಪರಿಗಣಿಸಲಾಗಿದೆ. ಸುನಿಮ್ ಅವರು ಸಿನಿಮಾ ಅಧ್ಯಯನಕ್ಕೆಂದು ಅಮೆರಿಕಕ್ಕೆ ತೆರಳಿದರು. ಆದರೆ ಹಿಂದಿರುಗುವಾಗ ಝೆನ್ ಧರ್ಮಗುರುವಾಗಿದ್ದರು. ಅಲ್ಲಿ ಇವರು ಯುಸಿ ಬರ್ಕ್‌ಲಿ, ಹಾರ್ವರ್ಡ್ ಹಾಗೂ ಪ್ರಿನ್ಸ್‌ಟನ್

ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿ, ನಂತರ ಮೆಸಾಚುಸೆಟ್ಸ್‌ನ ಹ್ಯಾಂಪ್‌ಷೈರ್ ಕಾಲೇಜಿನಲ್ಲಿ ಬೌದ್ಧಧರ್ಮ ಪ್ರಾಧ್ಯಾಪಕರಾಗಿ ಕೆಲಸಕ್ಕೆ ಸೇರಿಕೊಂಡರು. ಜಗತ್ತಿನಾದ್ಯಂತ ಸಂಚರಿಸುತ್ತಾ 'ನೆಮ್ಮದಿಯ ಬದುಕು ಸಾಗಿಸುವ ವಿಧಾನ'ದ ಬಗ್ಗೆ ಉಪನ್ಯಾಸ ಮಾಡಿದ್ದು ಇವರ ಹೆಗ್ಗಳಿಕೆ. ಸುನಿಮ್ ಅವರನ್ನು 'ದಕ್ಷಿಣ ಏಷ್ಯಾದ ಪ್ರಭಾವಿ ವ್ಯಕ್ತಿ' ಎಂದು ಪರಿಗಣಿಸಲಾಗಿದೆ.

'ನಾವು ನಮ್ಮ ಮನಸ್ಸಿನ ಕಿಟಕಿಯ ಮೂಲಕ ಜಗತ್ತನ್ನು ನೋಡುತ್ತೇವೆ. ನಮ್ಮ ಮನಸ್ಸು ಗಲಿಬಿಲಿಯಾಗಿದ್ದರೆ, ಜಗತ್ತೂ ಹಾಗೇ ಕಾಣುತ್ತದೆ. ನಮ್ಮ ಮನಸ್ಸು ಶಾಂತವಾಗಿದ್ದರೆ, ಜಗತ್ತೂ ಶಾಂತವಾಗಿಯೇ ತೋರುತ್ತದೆ. ಈ ಜಗತ್ತನ್ನು ಬದಲಾಯಿಸುವ ಮುನ್ನ ನಮ್ಮ ಮನಸ್ಸನ್ನು ಅರ್ಥಮಾಡಿಕೊಳ್ಳುವುದು ಸಹ ಅಷ್ಟೇ ಮುಖ್ಯ' ಎಂದು ಹೇಮಿನ್ ಸುನಿಮ್ ಹೇಳುತ್ತಾರೆ. 'ದೊಡ್ಡ ನಗರದ ಲೋಕಲ್ ಅಥವಾ ಮೆಟ್ರೋ ಟ್ರೇನಿನಲ್ಲಿ ನಾನು ಹೇಗೋ ತೂರಿಕೊಂಡು ಆ ಜನಜಂಗುಳಿಯಲ್ಲಿ ನಿಂತುಕೊಳ್ಳಲು ಹೇಗೋ ಜಾಗ ಸಂಪಾದಿಸಿಕೊಳ್ಳುತ್ತೇನೆ. ನನ್ನ ಸುತ್ತ ಜನರೂ ನನ್ನ ಹಾಗೇ ನಿಂತಿರುತ್ತಾರೆ. ಒಂದೋ ನಾನು ಆ ಸ್ಥಿತಿಯನ್ನು ಆನಂದಿಸಬೇಕು, ಇಲ್ಲವೇ ಸಿಡಿಮಿಡಿಗೊಳ್ಳಬೇಕು. ನನ್ನ ಸುತ್ತಮುತ್ತ ನಿಂತಿರುವವರಿಗೂ ಇದೇ ಆಯ್ಕೆ. ಆದರೆ ಸನ್ನಿವೇಶ ಒಂದೇ ಆದರೂ, ಒಬ್ಬೊಬ್ಬರು ಒಂದೊಂದು ರೀತಿ ಪ್ರತಿಕ್ರಿಯಿಸುತ್ತಾರೆ. ಈ ಸನ್ನಿವೇಶವನ್ನು ಇನ್ನೂ ಸೂಕ್ಷ್ಮವಾಗಿ ಅವಲೋಕಿಸಿದರೆ ಗೊತ್ತಾಗುವುದೇನೆಂದರೆ, ನಮಗೆ ತೊಂದರೆ ಕೊಡುತ್ತಿರುವುದು ಆ ಪರಿಸ್ಥಿತಿ ಅಲ್ಲ, ನಾವು ಅದನ್ನು ಹೇಗೆ ನೋಡುತ್ತಿದ್ದೇವೆಂಬ ನಮ್ಮ ದೃಷ್ಟಿಕೋನ' ಅಂತಾರೆ ಸುನಿಮ್.

'ಯಾರೂ ಮೂಲತಃ ಒಳ್ಳೆಯವರೂ ಅಲ್ಲ, ಕೆಟ್ಟವರೂ ಅಲ್ಲ. ನಾವು ಯಾವ ಪರಿಸ್ಥಿತಿಯಲ್ಲಿ ಸಿಲುಕಿ ಹೇಗೆ ವರ್ತಿಸುತ್ತೇವೆ ಎಂಬುದನ್ನು ಆಧರಿಸಿ ನಮ್ಮ ಒಳ್ಳೆಯತನ ಹಾಗೂ ಕೆಟ್ಟತನ ನಿರ್ಧಾರವಾಗುತ್ತದೆ. ನನ್ನ ಮೇಲೆ ಕಾರು ಹತ್ತಿಸಿದವನು ಕಳ್ಳನೇ ಆಗಿರಬಹುದು, ಆದರೆ ಆತ ಕಾರು ನಿಲ್ಲಿಸಿ ಆಸ್ಪತ್ರೆಗೆ ಸೇರಿಸಿದರೆ ಆತ ಪುಣ್ಯಾತ್ಮನೇ. ಅದೇ ನನ್ನ ಮೇಲೆ ಕಾರು ಹತ್ತಿಸಿದವನು ನೊಬೆಲ್ ಪ್ರಶಸ್ತಿ ಪುರಸ್ಕೃತನೇ ಆಗಿರಬಹುದು, ಆತ ಹಾಗೇ ಓಡಿಹೋದರೆ ಆತ ದುರಾತ್ಮನೇ' ಅಂತಾರೆ ಸುನಿಮ್.

ಯೋಗಿ ದುರ್ಲಭಜೀ ಬೆಳಗ್ಗೆ ಒಂದು ಸಂದೇಶ ಕಳಿಸಿದ್ದರು. 'ನಮ್ಮನ್ನು ಯಾರಾದರೂ ಇಷ್ಟಪಡದಿದ್ದರೆ, ಅದು ನಮ್ಮ ಸಮಸ್ಯೆ ಅಲ್ಲ, ಅದು ಅವರ ಸಮಸ್ಯೆ. ಅದಕ್ಕೆ ನಾವು ತಲೆಕೆಡಿಸಿಕೊಳ್ಳಬಾರದು. ಗೊತ್ತಿರಲಿ, ಎಲ್ಲರೂ ನಮ್ಮನ್ನು ಇಷ್ಟಪಡುವುದಿಲ್ಲ. ಈ ಸಂಗತಿ ನಮ್ಮನ್ನು ವಿಪರೀತ ಕಾಡಿದರೆ ಅದೇ ನಮ್ಮ ಸಮಸ್ಯೆ' ಎಂದು ಬರೆದಿದ್ದರು. 'ಈ ಸಂದೇಶ ಹೇಮಿನ್ ಸುನಿಮ್ ಅವರದು' ಎಂದು ಯೋಗಿ ಅಂದಿನ ಸಂದೇಶವನ್ನು ಕೊನೆಗೊಳಿಸಿದರು. ನಮ್ಮ ದೈನಂದಿನ ಬದುಕಿನ ಪ್ರಸಂಗಗಳನ್ನೇ, ಉದಾಹರಣೆಗಳನ್ನೇ ಹೇಳುತ್ತಾ ಮನಸ್ಸಿಗೆ ಒಂದಷ್ಟು ಸಾಂತ್ವನ ನೀಡುವ ಸುನಿಮ್ ಅವರ ಮಾತುಗಳು ಚೇತೋಹಾರಿ. 'ದಾರಿದೀಪೋಕ್ತಿ'ಯಂಥ ಸುನಿಮ್ ಅವರ ಅನುಭವದ ನುಡಿಗಳು ಮಜಾ ಕೊಡುತ್ತವೆ. ಅವುಗಳ ಒಂದಿಷ್ಟು ಸ್ಯಾಂಪಲ್ ಇಲ್ಲಿವೆ ನೋಡಿ:

- ಚುನಾವಣೆಯಲ್ಲಿ ಗೆದ್ದ ನಂತರ ರಾಜಕಾರಣಿಯೊಬ್ಬ ಹೇಗೆ ವರ್ತಿಸಬಹುದು ಎಂದು ಊಹಿಸುವುದರ ಬದಲು, ಈಗ ಆತ ಹೇಗಿದ್ದಾನೆ, ಹಿಂದೆ ಯಾವ ರೀತಿ ಇದ್ದ ಎಂಬುದನ್ನು ತಿಳಿದುಕೊಳ್ಳಿ. ಗೆದ್ದ ನಂತರ ನಾನು ಬದಲಾಗಲಿದ್ದೇನೆಂಬ ವ್ಯಕ್ತಿ ಬದಲಾಗುವುದಿಲ್ಲ. ಇಷ್ಟು ವರ್ಷ ಹೇಗೆ ಬದುಕಿದ್ದನೋ ಅದೇ ರೀತಿ ಮುಂದೆಯೂ ಆತ ಬದುಕುತ್ತಾನೆ. ಗೆದ್ದ ನಂತರ ಬದಲಾಗುವೆ ಎಂಬ ಮಾತುಗಳಿಗೆ ಮರುಳಾಗಬಾರದು.
- ಯಾರನ್ನೇ ಆಗಲಿ, ಮೊದಲ ಸಲ ಭೇಟಿಯಾದಾಗ ಅತೀವ ಒಳ್ಳೆಯವನಂತೆ, ದಯಾಳುವಿನಂತೆ ವರ್ತಿಸುತ್ತಾನೆ. ಪ್ರಶ್ನೆಯೆಂದರೆ ಅವರ ಒಳ್ಳೆಯತನ, ದಯಾಪರತೆ ಎಷ್ಟು ದಿನ ಮುಂದುವರಿಯುತ್ತದೆ ಎಂಬುದು. ಮೊದಲ ಸಲ ಬಹಳ ಚೆನ್ನಾಗಿ ವರ್ತಿಸಿದವರು ಯಾವತ್ತೂ ಹಾಗೆಯೇ ಇರುತ್ತಾರೆ ಎಂದು ತಿಳಿದು ಮೋಸ ಹೋಗಬಾರದು.
- ನಮಗೆ ಏನೋ ಲಾಭವಾಗುತ್ತದೆ ಅಥವಾ ಏನೋ ಸಿಗುತ್ತದೆಂದು ತಿಳಿದು ಉಪಕಾರ ಮಾಡುವುದೆಂದರೆ ಅದು ಉಪಕಾರವಲ್ಲ, ವ್ಯವಹಾರ. ಏನೂ ಅಪೇಕ್ಷಿಸದೇ ಸಹಾಯ ಮಾಡುವುದು ನಿಜವಾದ ಉಪಕಾರ. ಕೊಟ್ಟದ್ದನ್ನು ಮರೆಯುವುದು ನಿಜವಾದ ದಾನ. ಉಳಿದವುಗಳೆಲ್ಲ ಪಕ್ಕಾ ದಂಧೆ.
- ಆತ ಆಕೆಯ ಹಿಂದೆ ಏನೇನೋ ದೂರು ಹೇಳುತ್ತಾನೆ. ಆದರೆ ಆಕೆಗೆ ಇದೇನೂ ಗೊತ್ತಿಲ್ಲ. ಅವನ ಬಳಿ ಒಳ್ಳೆಯ ಮಾತುಗಳನ್ನೇ ಹೇಳುತ್ತಾಳೆ. ಬಹಳ ಒಳ್ಳೆಯ ಪ್ರತೀಕಾರ ಎಂದರೆ ಪ್ರೀತಿ.
- ನಾನು ಒಳಗೆ ತೆಗೆದುಕೊಳ್ಳುವ ಗಾಳಿ ನನ್ನ ದೇಹವನ್ನು ಹೊಕ್ಕು ನನ್ನ ದೇಹದ ಭಾಗವೇ ಆಗುತ್ತದೆ. ನಾನು ಹೊರಗೆ ಬಿಡುವ ಗಾಳಿ ಬೇರೆಯವರ ದೇಹದೊಳಗೆ ಹೊಕ್ಕು ಅವರ ದೇಹದ ಭಾಗವಾಗುತ್ತದೆ. ಗಾಳಿಯ ಈ ಚಲನೆಯನ್ನೇ ಗಮನಿಸಿದರೆ ನಾವೆಲ್ಲ ಒಬ್ಬರಿಗೊಬ್ಬರು ಕನೆಕ್ಟ್ ಆಗಿದ್ದೇವೆಂಬುದು ಗೊತ್ತಾಗುತ್ತದೆ. ಕೇವಲ ಸಾಂಕೇತಿಕವಾಗಷ್ಟೇ ಅಲ್ಲ, ಅಕ್ಷರಶಃ!
- ಲಂಚ್ ಬಾಕ್ಸಿನಲ್ಲಿಟ್ಟ ಸೇಬು ಹಣ್ಣನ್ನು ನೋಡಿದೆ. ಅದು ಅಲ್ಲಿಗೆ ಬಂದು ಕುಳಿತಿದ್ದಾದರೂ ಹೇಗೆ? ಆಗ ನನ್ನ ಕಣ್ಣೆದುರಿಗೆ, ಸೇಬಿನ ಮರ, ಸೂರ್ಯನ ಕಿರಣ, ಮೋಡ, ಮಳೆ, ಭೂಮಿ, ಗಾಳಿ, ರೈತನ ಬೆವರು... ಇವೆಲ್ಲ ಬಂದವು. ಇವೆಲ್ಲ ಆ ಸೇಬಿನಲ್ಲಿದೆಯೆಂದು ಅನಿಸಿತು. ಡೆಲಿವರಿ ಟ್ರಕ್, ಪೆಟ್ರೋಲ್, ಮಾರ್ಕೆಟ್, ಹಣ, ಕ್ಯಾಶಿಯರ್‌ನ ನಗು ಎಲ್ಲವೂ ಸೇಬು ಹಣ್ಣಿನೊಳಗಿದೆಯೆಂದು ಅನಿಸಿತು. ರೆಫ್ರಿಜರೇಟರ್, ಚಾಕು, ಕಟಿಂಗ್ ಬೋರ್ಡ್, ತಾಯಿಯ ಪ್ರೀತಿ ಎಲ್ಲವೂ ಅದರೊಳಗಿದೆಯೆಂದು ಅನಿಸಿತು. ಈ ಪ್ರಪಂಚದಲ್ಲಿರುವ ಪ್ರತಿ ವಸ್ತುವೂ ಮತ್ತೊಂದನ್ನು ಅವಲಂಬಿಸಿದೆ. ನಮ್ಮೊಳಗೆ ಏನಿದೆ ಎಂಬುದನ್ನು ಒಂದು ಕ್ಷಣ ಯೋಚಿಸಿ. ನನಗನಿಸುತ್ತದೆ ನಮ್ಮೊಳಗೆ ಇಡೀ ಬ್ರಹ್ಮಾಂಡವೇ ಅಡಗಿದೆ.
- ಜೀವನವೆಂಬುದು ಪಿಜ್ಜಾದ ಒಂದು ತುಂಡು ಇದ್ದಂತೆ. ಜಾಹೀರಾತಿನಲ್ಲಿ ಪಿಜ್ಜಾವನ್ನು ನೋಡಿದರೆ, ಬಾಯಲ್ಲಿ ನೀರು ಬರುತ್ತದೆ. ಆದರೆ ಅದನ್ನು ತಿನ್ನುವಾಗ ನಾವು ಊಹಿಸಿದಷ್ಟು ಅದು ರುಚಿಯಾಗಿರುವುದಿಲ್ಲ. ಬೇರೆಯವರ ಜೀವನ ನೋಡಿ ಕರುಬುವಾಗ, ಜಾಹೀರಾತಿನಲ್ಲಿರುವ ಪಿಜ್ಜಾವನ್ನು ಕಲ್ಪಿಸಿಕೊಳ್ಳಿ. ಅದು ಇರುವುದಕ್ಕಿಂತ ಚೆನ್ನಾಗಿ ಕಾಣುತ್ತದೆ.

ಓಶೋ ಉತ್ತರಿಸಿದ ಪರಿ!

ಓಶೋ ರಜನೀಶ್ ಬಳಿ ಮಹಿಳೆಯೊಬ್ಬಳು ಕೇಳುತ್ತಾಳೆ- 'ಎಲ್ಲರೂ ಪ್ರೀತಿಸುತ್ತೇನೆ ಎಂದು ಮೋಸ ಮಾಡುತ್ತಾರಲ್ಲ, ಏಕೆ?'. ಇದಕ್ಕೆ ಓಶೋ ಹೇಳಿದ ಉತ್ತರ ಕೇಳಿ- 'ಯಾರನ್ನಾದರೂ ಮೋಸ ಮಾಡಬೇಕು ಅಂದೆನಿಸಿದರೆ ಪ್ರೀತಿಸುವಂತೆ ನಟಿಸುವುದರ ಹೊರತಾಗಿ ಬೇರ್‍ಯಾವ ಸುಲಭ ಉಪಾಯವೂ ಇಲ್ಲ. ಪ್ರೀತಿ, ಸ್ನೇಹದಿಂದ ಯಾರನ್ನಾದರೂ ಮೋಸ ಮಾಡಬಹುದು. ಮೋಸದ ಆಪ್ತ ಸಂಗಾತಿ ಪ್ರೀತಿ, ಸ್ನೇಹ. ಅದು ಅಕ್ಕಪಕ್ಕದಲ್ಲಿ ಇವೆರಡನ್ನು ಇರಿಸಿಕೊಂಡೇ ತನ್ನ ಕೆಲಸ-ಕಾರ್ಯವನ್ನು ಸಾಧಿಸಿಕೊಳ್ಳುತ್ತದೆ. ಎಲ್ಲ ಮೋಸದಲ್ಲೂ ಪ್ರೀತಿ, ಸಲುಗೆ, ಸ್ನೇಹವಿರುತ್ತದೆ. ಆದರೆ ಪ್ರೀತಿಯಲ್ಲಿ ಮೋಸವಿರುವುದಿಲ್ಲ. ನೀನು ಮೋಸವನ್ನೇ ಪ್ರೀತಿಯೆಂದು ಭಾವಿಸುತ್ತೀಯಾ ಎಂದಾದರೆ ಪದೇ ಪದೇ ಮೋಸ ಹೋಗುತ್ತೀಯಾ. ಇವೆರಡರ ವ್ಯತ್ಯಾಸವನ್ನು ಎಲ್ಲಿತನಕ ನೀನು ಗುರುತಿಸುವುದಿಲ್ಲವೋ, ಅಲ್ಲಿ ತನಕ ನೀನು ಪ್ರೀತಿಸುತ್ತಾ ಮೋಸ ಹೋಗುತ್ತೀಯಾ'.

ಸ್ನೇಹಿತರ ಹೊಂಚೂ ಇದೇ ಆಗಿರುತ್ತದೆ. ಅವರಿಗೆ ತಾನು ನಿಜವಾದ ಸ್ನೇಹಿತ, ಕೊರಳ ಗೆಳೆಯ, ಅಣ್ಣ, ಬ್ರದರ್, ಜಿಗ್ರಿ ದೋಸ್ತ್, ಖಾಸಾ ಖಾಸಾ ಸ್ನೇಹಿತ ಎಂಬುದನ್ನು ನಿಮಗೆ ಮನವರಿಕೆ ಮಾಡಿಕೊಡದೇ ಮೋಸ ಮಾಡಲು ಆಗುವುದಿಲ್ಲ. ಅಲ್ಲಿ ತನಕ ಅವನು ಮುಖವಾಡಕ್ಕೆ ತೊಡಗಿಸಿದ ಬಂಡವಾಳಕ್ಕೆ returns ಬರುವುದಿಲ್ಲ. ನೀವು ಸಂಪೂರ್ಣವಾಗಿ ಅವನನ್ನು ಸ್ನೇಹಿತನೆಂದು ಪರಿಗಣಿಸಿದ ಬಳಿಕ, ಒಳಗೆ ಬಿಟ್ಟುಕೊಂಡ ಬಳಿಕ, ನಿಮ್ಮನ್ನು ಕುಯ್ಯುವ ಅವಕಾಶಕ್ಕಾಗಿ ಕಾಯುತ್ತಿರುತ್ತಾನೆ. ಅಷ್ಟರಲ್ಲಿ ನಿಮ್ಮಿಂದ ಪಡೆಯುವ ಸಹಾಯ ಪಡೆದಿರುತ್ತಾನೆ. ಲಾಭ ಮಾಡಿಕೊಂಡಿರುತ್ತಾನೆ. ಅದೇ ಸಂದರ್ಭದಲ್ಲಿ ನೀವು ಅಧಿಕಾರ ಕಳೆದುಕೊಂಡರೆ ಅವನಾದರೂ ಏನು ಮಾಡಬೇಕು ಹೇಳಿ? ಇಲ್ಲಿ 'ಸ್ನೇಹಿತ' ಎಂದು ಪರಿಗಣಿಸಿದ ನಿಮ್ಮ ಸ್ನೇಹಿತನದೇನು ತಪ್ಪು?

ಮಂಗ್ಯಾ ಆದವರು ನೀವು! ಅವನು ನಿಮ್ಮನ್ನು ಮಂಗ್ಯಾ ಮಾಡಿರಬಹುದು. ಅವನ ಕೆಲಸವೇ ಅದು. ನೀವೇಕೆ ಆದಿರಿ? ಹಾಗೆ ಆಗಿ ಎಂದು ಅವನೇನು ಹೇಳಿದನಾ? ಆದ್ದರಿಂದ 'ಸ್ನೇಹಿತ' ಎಂದು ಕರೆಸಿಕೊಂಡವರು ಕುಯ್ಯುತ್ತಾರೆ. ನಿಜವಾದ ಸ್ನೇಹಿತರು ಕಾಪಾಡುತ್ತಾರೆ. ಯಾರು ಬೇಕಾದರೂ ಸ್ನೇಹಿತರಾಗಬಹುದು. ಆದರೆ ಕಾಪಾಡುವವರು, ಕಾಪಾಡಬೇಕೆಂಬ ಉತ್ಕಟ ಹಂಬಲವಿದ್ದವರು ಮಾತ್ರ 'ನಿಜವಾದ ಸ್ನೇಹಿತ'ರಾಗುತ್ತಾರೆ. ಉಳಿದಂತೆ ಸ್ನೇಹದ ಸೋಗಿನಲ್ಲಿ ಒಡನಾಡುವವರು ಗೆಳೆತನವನ್ನು en-cash ಮಾಡಿಕೊಳ್ಳುವುದು ಹೇಗೆ ಎಂದು ಸದಾ ಯೋಚಿಸುತ್ತಿರುತ್ತಾರೆ. ಇಂಥವರನ್ನು ಪ್ರಾಣ ಸ್ನೇಹಿತರು ಎಂದು ಯಾರು ಭಾವಿಸುತ್ತಾರೋ ಅವರು ಡಬ್ಬು ಬೀಳುತ್ತಾರೆ. ಅನೇಕರು ಇಂಥ ಸ್ನೇಹಿತರ ನಿಜಬಣ್ಣ ಬಯಲಾದಾಗ ಬೇಸರಿಸಿಕೊಳ್ಳುತ್ತಾರೆ. ಆಗಲೂ ನೀವು ಮಾಡುವ ತಪ್ಪೇನೆಂದರೆ ಅವರನ್ನು ಸ್ನೇಹಿತರೆಂದು ಭಾವಿಸುವುದು!

ಸಣ್ಣ ಕತೆಗಳು

ಒಂದು ವಾಕ್ಯಕ್ಕೆ, ಒಂದು ಪ್ರಸಂಗಕ್ಕೆ ಒಂದು ಕಾದಂಬರಿಯಾಗುವ ಅವಕಾಶ ಮತ್ತು ಸಾಮರ್ಥ್ಯವಿರುವುದು ಸಣ್ಣಕತೆಗಳಿಗೆ ಮಾತ್ರ. ಸಣ್ಣಕತೆಗಳೆಂದರೆ ಎಂದೂ ತೀರದ ನೆನಪಿನಂತೆ, ಮಳೆಯ ಕೊನೆ ಹನಿಯಂತೆ, ಸದಾ ಮನಸ್ಸಿನಲ್ಲಿ ತೊಟ್ಟಿಕ್ಕುತ್ತಿರುತ್ತವೆ. ಅಂಥ ಕೆಲವು ಹನಿಗಳು...

ಆತ ತನ್ನ ದೇಹವನ್ನು ಬೇರೆಯವಳ ಜತೆ ಹಂಚಿಕೊಂಡ.
ಆಕೆ ಹೃದಯವನ್ನು ಬೇರೆಯವನ ಜತೆ ಹಂಚಿಕೊಂಡಳು.
ಆ ವೃದ್ಧ ದಂಪತಿಗಳು 'ಯಾರದ್ದು ದ್ರೋಹ' ಎಂಬ ಬಗ್ಗೆ ಈಗಲೂ ಜಗಳವಾಡುತ್ತಾರೆ.

• •

ಮಲಗಿದೆ.
ನಿದ್ದೆಯಲ್ಲಿ ಎಲ್ಲೆಲ್ಲೋ ಹೋಗಿ
ಪುನಃ ಅಲ್ಲಿಯೇ ಎದ್ದೆ.

• •

ತಂದೆಯವರ ಆರೋಗ್ಯ ತೀವ್ರ ಹದಗೆಟ್ಟಿತು.
'ವಕೀಲರನ್ನು ಕರೆಯಿಸಿ' ಎಂದರು.

• •

'ಒಂದು ವಾಕ್ಯದಲ್ಲಿ ಜೀವನ ಅಂದ್ರೆ ಏನು? ಅಂತ ಬರೆಯಿರಿ' ಎಂದರು ಮೇಷ್ಟ್ರು
ಆತ ಬರೆದ- 'ಜೀವನ ಅಂದ್ರೆ ಒಂದು ವಾಕ್ಯ'

• •

ಎಷ್ಟೋ ವರ್ಷಗಳ ನಂತರ ಅವಳ ಫೋನ್ ಬಂತು.
ಮಾತಾಡುವ ಮುನ್ನವೇ ಕಟ್ ಆಯಿತು.
ನಂತರ ಲೈನ್ ಸಿಗಲೇ ಇಲ್ಲ.
ಕೈಗೆ ಸಿಗದಿರುವುದು ನಕ್ಷತ್ರವೊಂದೇ ಅಲ್ಲ ಎಂದೆನಿಸಿತು.

• •

'ಅವರು ನಮ್ಮ ಸಂಬಂಧಿಕರು. ನೀನು ಅವರೊಂದಿಗೆ ಉತ್ತಮ ಬಾಂಧವ್ಯ ಹೊಂದಿರಬೇಕು. ಸದಾ ಸಂಪರ್ಕದಲ್ಲಿ ಇರಬೇಕು ಇಲ್ಲದಿದ್ದರೆ ಅವರು ನಿನ್ನ ಬಗ್ಗೆ ಕಾಳಜಿ ವಹಿಸುವುದಿಲ್ಲ' ಎಂದು ತಾಯಿ ಉಪದೇಶ ಮಾಡಿದಳು.
ಆದರೆ ನಾನು ಆ ಮಾತನ್ನು ಕಿವಿ ಮೇಲೆ ಹಾಕಿಕೊಳ್ಳಲಿಲ್ಲ.
ಅಂದಿನಿಂದ ನಾನು ನೆಮ್ಮದಿಯಿಂದ ಬಾಳಲಾರಂಭಿಸಿದೆ.

• •

ತಂದೆಗೆ ನಾಯಿ ಅಂದ್ರೆ ಇಷ್ಟ.
ತಾಯಿಗೆ ಬೆಕ್ಕು ಇಷ್ಟ.
ನಾಯಿ-ಬೆಕ್ಕು ಸದಾ ಕಿತ್ತಾಡುತ್ತಿದ್ದವು.
ನಾವೆಲ್ಲರೂ ಸಂತಸದಿಂದ ಇರಬೇಕಾದರೆ, ತಂದೆ-ತಾಯಿ ಜತೆ ನಾಯಿ, ಬೆಕ್ಕನ್ನು ಇಷ್ಟಪಡಬೇಕೆಂದು ನಿರ್ಧರಿಸಿದೆ.

ಮಜ್ಜಿಗೆ ಪಳದ್ಯದಂತೆ ರುಚಿಕರ ಸಂಸ್ಕೃತದ ಮಜ್ಜಿಗೆ ಪದ್ಯಗಳು

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಅನ್ನದ ಜತೆ ಕಲಸಿ ಉಣ್ಣುವುದಕ್ಕೆ ತಯಾರಿಸುವ 'ಪಳದ್ಯ' ಎಂಬ ಮೇಲೋಗರ ನಿಮ್ಮಲ್ಲನೇಕರಿಗೆ ಗೊತ್ತಿದೆ ಎಂದುಕೊಂಡಿದ್ದೇನೆ. ಮಜ್ಜಿಗೆಹುಳಿಗೂ ಪಳದ್ಯಕ್ಕೂ ವ್ಯತ್ಯಾಸವಿದೆಯೇ, ಯಾವ್ಯಾವ ತರಕಾರಿಗಳು ಪಳದ್ಯಕ್ಕೆ ಚೆನ್ನಾಗಿ ಒದಗಿಬರುತ್ತವೆ, ತೆಂಗಿನಕಾಯಿ ರುಬ್ಬಿ ಹಾಕುವುದಿದೆಯೇ ಇಲ್ಲವೇ ಮುಂತಾದ ವಿಚಾರಗಳಲ್ಲಿ ಪ್ರಾದೇಶಿಕವಾಗಿ ಚಿಕ್ಕಪುಟ್ಟ ವ್ಯತ್ಯಾಸಗಳು ಇರಬಹುದು. ನಾನು ಪಳದ್ಯಪ್ರಿಯ ಹೌದಾದರೂ ಪಳದ್ಯ ಪರಿಣತನೇನಲ್ಲ, ಹಾಗಾಗಿ ಆ ವಿವರಗಳಿಗೆಲ್ಲ ಹೋಗುತ್ತಿಲ್ಲ. ಒಟ್ಟಾರೆಯಾಗಿ ಪಳದ್ಯವು ಕನ್ನಡಿಗರ ಅಡುಗೆಮನೆಯ ಘಮವನ್ನು ಹೆಚ್ಚಿಸಿರುವುದು, ಕನ್ನಡ ನಾಲಗೆಗಳಲ್ಲಿ ನೀರೂರಿಸಿರುವುದು, ಕನ್ನಡ ಮನಸ್ಸುಗಳನ್ನು ಅರಳಿಸಿರುವುದು ಹೌದೆಂದು ಖಂಡಿತವಾಗಿ ಹೇಳಬಲ್ಲೆ. 'ಹಸಿಯ ಅಲ್ಲವು ಲೇಸು। ಬಿಸಿಯ ಪಳದ್ಯ ಲೇಸು। ಹುಸಿ ಲೇಸು ಕಳ್ಳ ಹೆಣ್ಣಿಂಗೆ, ಬೈಗಿನ। ಬಿಸಿಲು ಲೇಸೆಂದ ಸರ್ವಜ್ಞ॥' ಎಂದು ಸರ್ವಜ್ಞನೂ, 'ಓಂಕಾರವೆಂಬ ನಿನ್ನ ನಾಮ ಉಪ್ಪಿನಕಾಯಿ। ಶಂಖಪಾಣಿಯ ನಾಮ ಶಾಕಾದಿ ಸೂಪ। ಸಂಕರುಷಣ ಎಂಬ ನಾಮ ದಿವ್ಯ ಶಾಲ್ಯನ್ನವು। ಪಂಕಜಾಕ್ಷ ನಿನ್ನ ನಾಮ ಪಳದ್ಯ ಸಾರು॥' ಎಂದು ಪುರಂದರದಾಸರೂ ಹೇಳಿದ್ದಾರೆಂದ ಮೇಲೆ ಪಳದ್ಯ ಪುರಾತನ ಕಾಲದಿಂದಲೂ ಫೇಮಸ್ ಎನ್ನುವುದಕ್ಕೆ ಬೇರೆ ಪುರಾವೆ ಬೇಕಿಲ್ಲ. ಬೇಕಿದ್ದರೆ 'ಜೈಮಿನಿ ಭಾರತ' ಕೃತಿಯಲ್ಲಿ ಲಕ್ಷ್ಮೀಶ ಬರೆದಿದ್ದನ್ನೂ ಉಲ್ಲೇಖಿಸಬಹುದು: 'ಎಸೆವ ಪೊಂಬರಿವಾಣ ಮಿಸುನಿವಟ್ಟಲ್ಗಳೊಳ್। ಮಿಸುಪ ಶಾಲ್ಯೋದನಂ ಸೂಪ ಘೃತ ಭಕ್ಷ್ಯ ಪಾ। ಯಸ ಪರಡಿ ಮಧು ಶರ್ಕರಾಮಿಷ ಪಳದ್ಯ ಸೀಕರಣೆ ಶಾಕ ತನಿವಣ್ಗಳ್। ರಸ ರಸಾಯನ ಸಾರ್ಗಳು ಪ್ಪುಗಾಯ್ ಬಾಳುಕಂ। ಕೃಸರಿ ಪಚ್ಚಡಿ ಪಾಲ್ಮೊಸರ್ಗಳಿವು ಬಗೆಗೊಳಿಸಿ। ಪೊಸತೆನಿಸಿರಲ್ ಸವಿದನಚ್ಯುತಂ ದೇವಕಿಯ ಶೋದೆಯರ್ ತಂದಿಕ್ಕಲು॥' ಹೆತ್ತತಾಯಿ ದೇವಕಿ ಮತ್ತು ಸಾಕುತಾಯಿ ಯಶೋದೆ ಇಬ್ಬರೂ ಸೇರಿ ಕೃಷ್ಣನಿಗೆ ಉಣಿಸಿದ ಔತಣದಲ್ಲಿ ಬಾಳ್ಕಮೆಣ್ಸೂ ಪಳದ್ಯವೂ ಇದ್ದುವಂತೆ!

ಇರಲಿ, ನಾನಿಂದು ಬರೆಯಲಿಕ್ಕೆ ಹೊರಟಿದ್ದು ಪಳದ್ಯದ ಬಗೆಗಲ್ಲ. ಬದಲಿಗೆ, ಪಳದ್ಯದ ಒಂದು ಮುಖ್ಯ ಇನ್‌ಗ್ರೇಡಿಯೆಂಟ್ ಆಗಿರುವ ಮಜ್ಜಿಗೆಯ ಬಗೆಗೆ. ಮಜ್ಜಿಗೆಯ ಮಹಿಮೆಯನ್ನು ಬಣ್ಣಿಸುವ ಸಂಸ್ಕೃತ ಶ್ಲೋಕ-ಸುಭಾಷಿತ-ಚಾಟೂಕ್ತಿಗಳ ಬಗೆಗೆ. ಇವು ನನಗೆ ಸಿಕ್ಕಿದ್ದು 'ವೈದ್ಯಕೀಯ ಸುಭಾಷಿತ ಸಾಹಿತ್ಯಮ್' ಎಂಬ ಗ್ರಂಥದಲ್ಲಿ. ಸುಮಾರು 800 ಪುಟಗಳಷ್ಟು ಗಾತ್ರದ ಅತ್ಯಮೂಲ್ಯ ಪುಸ್ತಕವಿದು. ಇಂಟರ್‌ನೆಟ್ ಆರ್ಕೈವ್ಸ್ ತಾಣದಲ್ಲಿದೆ. ಆಯುರ್ವೇದಾಚಾರ್ಯ ಡಾ.ಭಾಸ್ಕರ ಗೋವಿಂದ ಘಾಣೇಕರರು ಸಂಕಲಿಸಿ ಹಿಂದಿ ಭಾಷೆಯಲ್ಲಿ ವ್ಯಾಖ್ಯಾನ ಒದಗಿಸಿದ, ವಾರಾಣಸಿಯ ಚೌಖಂಬಾ ಸಂಸ್ಕೃತ ಪ್ರಕಾಶನದ ಪ್ರಕಟಣೆ. ಋಗ್ವೇದದಿಂದ ಮೊದಲ್ಗೊಂಡು ಸಂಸ್ಕೃತ ವಾಙ್ಮಯದ ಎಲ್ಲ ಪ್ರಕಾರಗಳನ್ನು ಆಕರವಾಗಿಸಿ ಆರಿಸಿದ ಆಯುರ್ವೇದ ಸಂಬಂಧಿ ಪದ್ಯ-ವಾಕ್ಯಾದಿಗಳ ಸಂಗ್ರಹ. ಗ್ರಂಥಕರ್ತರೇ ಹೇಳುವಂತೆ- 'ಸಂಸ್ಕೃತ ಸಾಹಿತ್ಯವೆಂಬ ಪುಷ್ಪವಾಟಿಕೆಯಲ್ಲಿ ಗ್ರಂಥಗಳೆಂಬ ಪುಷ್ಪಗಳಿಂದ, ಭ್ರಮರವೃತ್ತಿಯನ್ನನುಸರಿಸಿ, ಪದ್ಯಾದಿಗಳೆಂಬ ಪುಷ್ಪಮಕರಂದ ಬಿಂದುವನ್ನು ಸಂಕಲನಗೊಳಿಸಿರುವ ಗ್ರಂಥಕರಂಡಕ'. ಇದರ ಕೆಲವು ಭಾಗಗಳು ಬೇರೆಬೇರೆ ವಿಶ್ವವಿದ್ಯಾಲಯಗಳಲ್ಲಿ ಆಯುರ್ವೇದ ವೈದ್ಯಕೀಯ ಪದವಿ ಶಿಕ್ಷಣದ ಪಠ್ಯವೂ ಆಗಿವೆಯಂತೆ. ಆರಂಭಿಕ ಕೆಲವು ಅಧ್ಯಾಯಗಳ ಕನ್ನಡ ಅನುವಾದ (ವಿದ್ವಾನ್ ಬ.ರಾಜಶೇಖರಯ್ಯ, ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಕಾಶನ) ಪುಸ್ತಕವೂ ಇದೆ. ಆಯುರ್ವೇದ ವಿದ್ಯಾರ್ಥಿಗಳೇ ಅಲ್ಲದೇ ಜನಸಾಮಾನ್ಯರೂ ಈ ಕೃತಿಯನ್ನು ಅವಲೋಕಿಸಬಹುದಾಗಿದೆ. ಆರೋಗ್ಯವನ್ನು ಕಾಪಾಡಿಕೊಂಡು ಆಯುಷ್ಯವರ್ಧನೆ ಮಾಡಿಕೊಂಡು ದೀರ್ಘಕಾಲ ದೃಢಕಾಯದಿಂದ ಬಾಳಬೇಕಾದರೆ ಅದಕ್ಕೆ ಬೇಕಾದ ಮಾರ್ಗದರ್ಶನವನ್ನು ಈ ಸುಭಾಷಿತ ಕೃತಿಯು ನೀಡುತ್ತದೆ. ಅಂಥದರಲ್ಲಿ ಸಿಂಧುವಿನಿಂದ ಬಿಂದು ಎಂಬಂತೆ ಮಜ್ಜಿಗೆಗೆ ಸಂಬಂಧಿಸಿದ ಸುಭಾಷಿತಗಳನ್ನಷ್ಟೇ ನಾನಿಲ್ಲಿ ಆಯ್ದುಕೊಂಡಿದ್ದೇನೆ. ಹೈನುಪದಾರ್ಥಗಳ ಪೈಕಿ ಹಾಲು, ಮೊಸರು, ಬೆಣ್ಣೆ, ತುಪ್ಪಗಳಿಗೆ ಹೋಲಿಸಿದರೆ ಮಜ್ಜಿಗೆಗೆ-ಸಾಹಿತ್ಯಲೋಕದಲ್ಲೂ ಲೌಕಿಕವಾಗಿಯೂ ಸಲ್ಲುವ ಘನತೆ-ಗೌರವ ಕಡಿಮೆ. ಆ ಅನ್ಯಾಯವನ್ನು ಸ್ವಲ್ಪವಾದರೂ ಅಳಿಸಬೇಕು ಎಂಬ ಉದ್ದೇಶ ನನ್ನದು.

ಮಜ್ಜಿಗೆ ಸುಭಾಷಿತ ಎಂದೊಡನೆ ಥಟ್ಟನೆ ನೆನಪಾಗುವ ಈ ಒಂದು ಚಮತ್ಕಾರ ಶ್ಲೋಕದಿಂದಲೇ ಆರಂಭಿಸೋಣ. ಇದು ತುಂಬ ಪ್ರಖ್ಯಾತವಾದುದು. 'ಭೋಜನಾಂತೇ ಚ ಕಿಂ ಪೇಯಂ। ಜಯಂತಃ ಕಸ್ಯ ವೈ ಪುತ್ರಃ। ಕಥಂ ವಿಷ್ಣುಪದಂ ಪ್ರೋಕ್ತಂ। ತಕ್ರಂ ಶಕ್ರಸ್ಯ ದುರ್ಲಭಮ್॥' ಇದರ ಮೊದಲ ಮೂರು ಚರಣಗಳಲ್ಲಿ, ಒಂದಕ್ಕೊಂದು ಸಂಬಂಧವಿಲ್ಲದ ಮೂರು ಸರಳ ಪ್ರಶ್ನೆಗಳು. ಊಟದ ಕೊನೆಯಲ್ಲಿ ಏನನ್ನು ಕುಡಿಯಬೇಕು? ಜಯಂತನು ಯಾರ ಮಗ ಗೊತ್ತೇನು? ಭಗವಂತನ ಸನ್ನಿಧಾನ ಎಲ್ಲರಿಗೂ ಸಿಗುತ್ತದೆಯೇ?- ಇವೇ ಆ ಮೂರು ಪ್ರಶ್ನೆಗಳು. ಇವಕ್ಕೆ ತಲಾ ಒಂದೊಂದು ಪದದ ಚಿಕ್ಕಚೊಕ್ಕ ಉತ್ತರ. ಆ ಮೂರು ಪದಗಳು ಸೇರಿ ನಾಲ್ಕನೆಯ ಚರಣ ಪೂರ್ತಿಯಾಗಿರುವುದು. ಜೋಡಿಸಿದಾಗ 'ಮಜ್ಜಿಗೆ ಇಂದ್ರನಿಗೆ ಸಿಗದು' ಎಂಬ ಅರ್ಥ ಬರುವುದು.

ಇಂದ್ರನಿಗೇನಾಗಬೇಕಿದೆ ಮಜ್ಜಿಗೆಯಿಂದ? ಏನೂ ಇಲ್ಲ! ಅಂಥ ದೊಡ್ಡ ಇಂದ್ರಪದವಿ ಪಡೆದವನಿಗೂ ಮಜ್ಜಿಗೆ ಸುಲಭವಾಗಿ ದೊರಕದು ಎನ್ನುತ್ತ ಮಜ್ಜಿಗೆಯ ಮಹಿಮೆ-ಶ್ರೇಷ್ಠತೆಗಳನ್ನು ಮತ್ತಷ್ಟು ವೈಭವೀಕರಿಸುವುದಕ್ಕಾಗಿ ಈ ಮಾತು. ಭೂಲೋಕದಲ್ಲಿರುವ ಮನುಷ್ಯಜಾತಿಗೆ ಹೇಗೆ ಅಮೃತ ಲಭ್ಯವಿಲ್ಲವೋ ಹಾಗೆ ದೇವಲೋಕದವರಿಗೆ ಮಜ್ಜಿಗೆ ಅಲಭ್ಯ. ಅದನ್ನೇ ವಿಸ್ತರಿಸಿ ಹೇಳುತ್ತಿದೆ ಇನ್ನೊಂದು ಸುಭಾಷಿತ: 'ಅಮೃತಂ ದುರ್ಲಭಂ ನೃಣಾಂ ದೇವಾನಾಮುದಕಂ ತಥಾ। ಪಿತೃಣಾಂ ದುರ್ಲಭಃ ಪುತ್ರಃ ತಕ್ರಂ ಶಕ್ರಸ್ಯ ದುರ್ಲಭಮ್॥' ಅಂದರೆ, ಮನುಷ್ಯರಿಗೆ ಅಮೃತ ದುರ್ಲಭ. ದೇವತೆಗಳಿಗೆ ನೀರು ದುರ್ಲಭ (ಸ್ವರ್ಗದಲ್ಲಿ ಪ್ರತಿಯೊಂದಕ್ಕೂ ನೀರಿನ ಬದಲಿಗೆ ಅಮೃತವೇ ಬಳಕೆಯಾಗುತ್ತದೆಯೇ? ಮುಖಪ್ರಕ್ಷಾಲನ, ಪೃಷ್ಠಪ್ರಕ್ಷಾಲನ ಎಲ್ಲವನ್ನೂ ಅಮೃತದಿಂದಲೇ ಮಾಡುತ್ತಾರೆಯೇ? ಅಂತೆಲ್ಲ ಕೇಳಬೇಡಿ! ಹೋಗಿ ನೋಡಿ ಅನುಭವಿಸಿ ಬಂದವರಿಲ್ಲ); ಇಹಲೋಕ ತ್ಯಜಿಸಿದ ಪಿತೃಗಳಿಗೆ ಮತ್ತೆ ಸಂತಾನಪ್ರಾಪ್ತಿ ಇರುವುದಿಲ್ಲ; ಈ ಎಲ್ಲ ಇಲ್ಲಗಳ ಥರವೇ ಇಂದ್ರನಿಗೆ ಮಜ್ಜಿಗೆಯೂ ಸಿಗುವುದಿಲ್ಲ. ಒಟ್ಟಿನಲ್ಲಿ ಮಜ್ಜಿಗೆ ಭೂಲೋಕವಾಸಿಗಳಿಗೆ ಅಮೃತಸಮಾನ ಎಂದು ತಾತ್ಪರ್ಯ. ಪುಷ್ಟೀಕರಿಸಲಿಕ್ಕೆ ಮತ್ತೊಂದು ಸುಭಾಷಿತ: 'ಅಮರತ್ವಂ ಯಥಾ ಸ್ವರ್ಗೇ ದೇವಾನಾಮಮೃತಾದ್ಭವೇತ್। ತಕ್ರಾದ್ ಭೂಮೌ ತಥಾ ನೃಣಾಮಮರತ್ವಂ ಹಿ ಜಾಯತೇ॥' ಸ್ವರ್ಗದಲ್ಲಿ ದೇವತೆಗಳಿಗೆ ಹೇಗೆ ಅಮೃತದಿಂದ ಅಮರತ್ವ (ಮರಣವೇ ಇಲ್ಲದಿರುವಿಕೆ) ಸಂಭವವೋ, ಹಾಗೆಯೇ ಭೂಮಿಯಲ್ಲಿ ಮನುಷ್ಯರಿಗೆ ಮಜ್ಜಿಗೆಯಿಂದ ಅಮರತ್ವ (ದೀರ್ಘಾಯುಷ್ಯ) ಸಂಭವ. ಪಾಲ್ಗಡಲನ್ನು ಮಥಿಸಿದಾಗ ಸಿಕ್ಕಿದ ಅಮೃತವೇ ತಾನೆ ದೇವತೆಗಳ ಪಾಲಾದದ್ದು? ಅದೇರೀತಿ, ಹೆಪ್ಪುಗಟ್ಟಿದ ಹಾಲನ್ನು ಮಥಿಸಿದಾಗ ಸಿಗುವ ಮಜ್ಜಿಗೆಯು ಭೂಲೋಕವಾಸಿಗಳಿಗೆ ಅಮೃತ ಎಂದು ಹೋಲಿಕೆ ಮಾಡಿದ್ದಿರಬಹುದು.

ತಕ್ರಂ ಶಕ್ರಸ್ಯ ದುರ್ಲಭಮ್ ಎಂದು ಕೊನೆಯಾಗುವ ಇನ್ನೂ ಒಂದು ತಮಾಷೆ ಶ್ಲೋಕ ಇದೆ. ಆ ವಾಕ್ಯಕ್ಕೆ ಒಂಚೂರು ಸಾಹಿತ್ಯಿಕ ಅಲಂಕಾರ ಸೇರಿಸಿ ಹೆಣೆದಿರುವುದು: 'ಘೃತಂ ನ ಶ್ರೂಯತೇ ಕರ್ಣೇ ದಧಿ ಸ್ವಪ್ನೇಽಪಿ ದುರ್ಲಭಮ್। ಮುಗ್ಧೇ ದುಗ್ಧಸ್ಯ ಕಾ ವಾರ್ತಾ ತಕ್ರಂ ಶಕ್ರಸ್ಯ ದುರ್ಲಭಮ್॥' ಮನೆಯಲ್ಲಿ ಹೈನು ಪದಾರ್ಥಗಳಿಗೆ ತತ್ವಾರ ಎಷ್ಟಿದೆ ಎಂಬುದನ್ನು ಬಡವನೊಬ್ಬ ತನ್ನ ಭಾರ್ಯೆಯೊಡನೆ ತೋಡಿಕೊಳ್ಳುವ ಸನ್ನಿವೇಶ. 'ತುಪ್ಪ ಎಂದರೇನೆಂದು ಕೇಳಿಯೇ ಗೊತ್ತಿಲ್ಲ. ಮೊಸರನ್ನು ಕನಸಲ್ಲೂ ಕಂಡಿಲ್ಲ. ಹಾಲಿನ ಸಮಾಚಾರವೇನನ್ನು ಹೇಳಲಿ ಮುಗ್ಧೆಯೇ, ಮಜ್ಜಿಗೆಯೂ ನನ್ನ ಪಾಲಿಗೆ ಇಂದ್ರಪದವಿಯಷ್ಟು ದುರ್ಲಭವಾಗಿದೆ!' ಎಂಬ ಗೋಳು. ಅಥವಾ, ದೇವೇಂದ್ರನಿಗೇ ಮಜ್ಜಿಗೆ ಸಿಗುವುದಿಲ್ಲವಂತೆ ಇನ್ನು ನನಗೆಲ್ಲಿಂದ? ಎಂದು ಕೂಡ ಅರ್ಥೈಸಬಹುದು.

ಮಜ್ಜಿಗೆಯನ್ನು ಅಷ್ಟೊಂದು ಅಮೃತತುಲ್ಯವಾಗಿಸುವುದು ಏಕೆ? ಈ ಸುಭಾಷಿತವು ಅದನ್ನು ಚಂದವಾಗಿ ಬಣ್ಣಿಸುತ್ತದೆ: 'ನ ತಕ್ರಸೇವೀ ವ್ಯಥತೇ ಕದಾಚಿನ್ ನ ತಕ್ರದಗ್ಧಾ ಪ್ರಭವಂತಿ ರೋಗಾಃ। ಯಥಾ ಸುರಾಣಾಮಮೃತಂ ಪ್ರಧಾನಂ ತಥಾ ನರಾಣಾಂ ಭುವಿ ತಕ್ರಮಾಹುಃ॥' ಅಂದರೆ, ಮಜ್ಜಿಗೆ ಸೇವನೆ ಮಾಡುವವನು ಎಂದೂ ರೋಗಪೀಡಿತನಾಗುವುದಿಲ್ಲ. ಆ ಮಟ್ಟಿಗೆ ಚಿಂತೆ ಅವನಿಗಿಲ್ಲ. ಮಜ್ಜಿಗೆಯಿಂದ ಉಪಶಮನಗೊಂಡ ಉದರಶೂಲೆಗಳೆಲ್ಲ ಮತ್ತೆಂದೂ ತಲೆಯೆತ್ತುವುದಿಲ್ಲ. ಸ್ವರ್ಗದಲ್ಲಿ ಅಮೃತವು ಹೇಗೆ ದೇವತೆಗಳನ್ನು ರೋಗಮುಕ್ತರನ್ನಾಗಿಡುತ್ತದೆಯೋ ಭೂಲೋಕದಲ್ಲಿ ಮಜ್ಜಿಗೆಯು ಆ ಕೆಲಸವನ್ನು ಮಾಡುತ್ತದೆ. ಇಷ್ಟೇಅಲ್ಲ, ಮತ್ತೊಬ್ಬ ಸಂಸ್ಕೃತಕವಿಯಂತೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸ್ವರ್ಗದಲ್ಲಿ ಮಜ್ಜಿಗೆ ಇಲ್ಲದೆ ಅಲ್ಲಿನವರು ಏನೇನೆಲ್ಲ ಪೊರಪಾಟು ಪಡಬೇಕಾಯಿತು ಎಂದು ಒಂದು ಸುಭಾಷಿತದಲ್ಲಿ ಬಣ್ಣಿಸಿದ್ದಾನೆ: 'ಕೈಲಾಸೇ ಯದಿ ತಕ್ರಮಸ್ತಿ ಗಿರಿಶಃ ಕಿಂ ನೀಲಕಂಠೋ ಭವೇದ್। ವೈಕುಂಠೇ ಯದಿ ಕೃಷ್ಣತಾಮನುಭವೇದದ್ಯಾಪಿ ಕಿಂ ಕೇಶವಃ। ಇಂದ್ರೋ ದುರ್ಭಗತಾಂ ಕ್ಷಯಂ ದ್ವಿಜಪತಿರ್ಲಂಬೋದರತ್ವಂ ಗಣಃ। ಕುಷ್ಠಿತ್ವಂ ಚ ಕುಬೇರಕೋ ದಹನತಾಮಗ್ನಿಶ್ಚ ಕಿಂ ವಿಂದತಿ॥' ಕೈಲಾಸದಲ್ಲಿ ಮಜ್ಜಿಗೆ ಲಭ್ಯವಿರುತ್ತಿದ್ದರೆ ಪರಶಿವನು 'ನೀಲಕಂಠ' ಆಗಬೇಕಾಗಿ ಬರುತ್ತಿರಲಿಲ್ಲ. ವೈಕುಂಠದಲ್ಲಿ ಮಜ್ಜಿಗೆ ಸಿಗುತ್ತಿದ್ದರೆ ವಿಷ್ಣುವು 'ಕೃಷ್ಣತ್ವ'ವನ್ನು ಅನುಭವಿಸಬೇಕಾಗಿ ಬರುತ್ತಿರಲಿಲ್ಲ. ಹಾಗೆಯೇ ಇಂದ್ರನಿಗೆ ದುರ್ಭಗತ್ವ (ಮೈಯೆಲ್ಲ ತೂತಾಗಿರುವಿಕೆ) ಬರುತ್ತಿರಲಿಲ್ಲ. ಚಂದ್ರನನ್ನು ಕ್ಷಯರೋಗ (ಪಕ್ಷಕ್ಕೊಮ್ಮೆ ಶರೀರ ಕ್ಷೀಣವಾಗುವಿಕೆ) ಕಾಡುತ್ತಿರಲಿಲ್ಲ. ಗಣಪನನ್ನು ಡೊಳ್ಳುಹೊಟ್ಟೆ ಸ್ಥೂಲತನ ಬಾಧಿಸುತ್ತಿರಲಿಲ್ಲ. ಕುಬೇರನಿಗೆ ಕುಷ್ಠರೋಗ ತಟ್ಟುತ್ತಿರಲಿಲ್ಲ. ಅಗ್ನಿ ಆ ನಮೂನೆ ಧಗಧಗ ಉರಿದು ಸಂಕಟಪಡಬೇಕಾಗುತ್ತಿರಲಿಲ್ಲ.

ಇಂಥ ಮಹಾಮಹಿಮ ಮಜ್ಜಿಗೆಯನ್ನು ನಾವು ಯಾವಾಗ ಸೇವಿಸಿದರೆ ಒಳ್ಳೆಯದು? ಗೊತ್ತೇ ಇದೆಯಲ್ಲ, ಊಟದ ಕೊನೆಗೆ. ಅದನ್ನೇ ಅಚ್ಚುಕಟ್ಟಾಗಿ ಹೇಳುವ ಸುಭಾಷಿತ ಹೀಗಿದೆ: 'ಭೋಜನಾಂತೇ ಪಿಬೇತ್ತಕ್ರಂ ವಾಸರಾಂತೇ ಪಿಬೇತ್ಪಯಃ। ನಿಶಾಂತೇ ಚ ಪಿಬೇತ್ವಾರಿ ತ್ರಿಭಿರ್ರೋಗೋ ನ ಜಾಯತೇ॥' ಅಂದರೆ ಪ್ರತಿ ಊಟವನ್ನು ಮಜ್ಜಿಗೆ ಕುಡಿಯುವುದರ ಮೂಲಕ ಕೊನೆಗೊಳಿಸಬೇಕು. ಪ್ರತಿ ಹಗಲನ್ನು ಹಾಲು ಕುಡಿಯುವುದರ ಮೂಲಕ ಕೊನೆಗೊಳಿಸಬೇಕು (ಮಲಗುವ ಮುನ್ನ ಒಂದು ಲೋಟ ಬಿಸಿಹಾಲು ಕುಡಿಯಬೇಕು). ರಾತ್ರಿಯನ್ನು ನೀರು ಕುಡಿಯುವುದರ ಮೂಲಕ ಕೊನೆಗೊಳಿಸಬೇಕು (ಬೆಳಗ್ಗೆದ್ದು ಮೊದಲಿಗೆ ಒಂದು ಲೋಟ ನೀರು ಕುಡಿಯಬೇಕು. ತಾಮ್ರದ ತಂಬಿಗೆಯಿಂದ ಎಂದು ಇಲ್ಲಿ ಹೇಳಿಲ್ಲವಾದರೂ ಅದು ಇನ್ನೂ ಉತ್ತಮವೆಂದು ಆರೋಗ್ಯತಜ್ಞರ ಶಿಫಾರಸು). ಮಜ್ಜಿಗೆಯಿಂದ ಕೊನೆಗೊಳ್ಳುವುದು ಭೋಜನಕ್ಕೆ ಭೂಷಣವೆಂದು ಇನ್ನೊಂದು ಸುಭಾಷಿತದಲ್ಲಿ ಉಪಮೆಗಳನ್ನು ಬಳಸಿ ಬಣ್ಣಿಸಿದ್ದಿದೆ: 'ಲಲಿತಾಂತಾನಿ ಗೀತಾನಿ ಪ್ರಸವಾಂತಂ ಚ ಯೌವನಮ್। ವಿಶಾಖಾಂತಾನಿ ಮೇಘಾನಿ ತಕ್ರಾಂತಂ ಖಲು ಭೋಜನಮ್॥' ಗೀತಗಾಯನ ಗೋಷ್ಠಿಗಳು ಬಣ್ಣದ ಓಕುಳಿಯಾಟದಂಥ ರಾಸಲೀಲೆ ಮೋಜುಮಸ್ತಿಗಳಿಂದ ಸಮಾಪ್ತವಾಗುತ್ತವೆ. ಸ್ತ್ರೀಯರಲ್ಲಿ ಪುಟಿದೇಳುವ ಯೌವನವು ಪ್ರಸವದಿಂದ ಅಂತ್ಯವಾಗುತ್ತದೆ. ವಿಶಾಖಾ ಮಹಾನಕ್ಷತ್ರ ಪ್ರವೇಶಿಸುವುದರ ಮೂಲಕ ಮೋಡಗಳ ಅಂತ್ಯವಾಗುತ್ತದೆ (ಅವು ಕರಗಿ ಮಳೆ ಸುರಿಯುತ್ತದೆ). ಅಂತೆಯೇ ಮಜ್ಜಿಗೆಯ ಸೇವನೆಯಿಂದ ಭೋಜನವು ಸಮಾಪ್ತವಾಗುತ್ತದೆ.

ವೈದ್ಯಕೀಯ ಸಾಹಿತ್ಯ ಎಂದು ಕರೆಸಿಕೊಳ್ಳುವ ಗ್ರಂಥದಲ್ಲಿ ಹೀಗೆಲ್ಲ ಆಲಂಕಾರಿಕ ಬಣ್ಣನೆಗಳು ಇರಬಹುದೇ ಎಂದು ನೀವು ಪ್ರಶ್ನಿಸಬಹುದು. ಯಾಕೆ ಕೂಡದು? ವೈದ್ಯರಿಗೂ ಒಂದಿಷ್ಟು ಹಾಸ್ಯ ಮನೋರಂಜನೆ ಬೇಡವೇ? ಮಾಡರ್ನ್ ಮೆಡಿಸಿನ್ ಫೀಲ್ಡಲ್ಲೂ ಡಾಕ್ಟರ್ಸ್ ಜೋಕುಗಳು, ನರ್ಸ್‌ಗಳ ಜೋಕುಗಳು ಅಂತೆಲ್ಲ ಬೇಕಾದಷ್ಟು ಇವೆ. 'ನಾನ್‌ವೆಜ್' ಎನಿಸಿಕೊಳ್ಳುವಂಥವೂ ಇರುತ್ತವೆ. 'ಡಾ.ರನೆ ಲೆನೆಕ್ ಎಂಬ ಫ್ರೆಂಚ್ ವೈದ್ಯನು ಆಕರ್ಣಕ (ಸ್ಟೆಥೋಸ್ಕೋಪ್)ವನ್ನು ಕಂಡುಹಿಡಿಯುವುದಕ್ಕಿಂತ ಮೊದಲೆಲ್ಲ ವೈದ್ಯರು ರೋಗಿಯ ಎದೆಗೋ ಬೆನ್ನಿಗೋ ಕಿವಿಯಾನಿಸಿಯೇ ಎದೆಬಡಿತ, ಶ್ವಾಸಕೋಶಗತಿಗಳನ್ನು ಅಂದಾಜಿಸುತ್ತಿದ್ದದ್ದು. ಈಗ

ಪ್ರಪಂಚದ ವೈದ್ಯರೆಲ್ಲ ಲೆನೆಕ್‌ನನ್ನು ಅದೆಷ್ಟು ಶಪಿಸುತ್ತಿದ್ದಾರೇನೋ' ಎಂಬೊಂದು ಟಂಗ್-ಇನ್-ಚೀಕ್ ಜೋಕು ಇದೆ. ಸಂಸ್ಕೃತದಲ್ಲೂ ಇಂಥವು ಇವೆ. ಇಲ್ಲಿ ನೋಡಿ: 'ಮುದ್ಗದಾಲೀ ಗದವ್ಯಾಲೀ ಕವೀಂದ್ರ ವಿತುಷಾ ಕಥಮ್। ಭಕ್ತವಲ್ಲಭಸಂಯೋಗೇ ಜಾತಾ ವಿಗತಕಂಚುಕೀ॥' ಪ್ರಶ್ನೆ: ಎಲೈ ಕವಿಶ್ರೇಷ್ಠನೇ, ರೋಗಕ್ಕೆ ಸರ್ಪದಂತಿರುವ ಅಂದರೆ ರೋಗನಾಶಕವಾದ ಹೆಸರುಕಾಳಿನ ಬೇಳೆಯು ಹೊಟ್ಟಿಲ್ಲದ್ದಾಗಿ ಹೇಗಾಯ್ತು? ಉತ್ತರ: ಪ್ರೀತಿಯ ಪ್ರಿಯಕರನ ಸಮಾಗಮವಾದಾಗ ಪ್ರಿಯತಮೆಯು ತನ್ನ ಕವಚವನ್ನು ಕಳಚಿಕೊಳ್ಳುವಂತೆ, ಬೇಯಿಸಲ್ಪಡುತ್ತಿರುವ ಅಕ್ಕಿಯ ಸಂಪರ್ಕದಿಂದ ಈ ಹೆಸರುಕಾಳು ತನ್ನ ಹೊಟ್ಟನ್ನು ದೂರಮಾಡಿಕೊಂಡಿತು! ಆಹಾ, ಎಂಥ ರಸಿಕತನ! ಇದು ಅಶ್ಲೀಲವೇ? ಖಂಡಿತ ಅಲ್ಲ. ಲಿಂಗಭೇದ ವಯೋಭೇದವಿಲ್ಲದೆ ಇಷ್ಟು ರಸಿಕತನ, ತುಂಟತನ ಮನಸ್ಸಿನ ಮತ್ತು ದೇಹದ ಆರೋಗ್ಯಕ್ಕೆ ಒಳ್ಳೆಯದೇ. ಸರಿ, ವಿಷಯಾಂತರ ಬೇಡ. ಅಲ್ಲದೇ ಪ್ರಸ್ತುತ ಈ ವೈದ್ಯಕೀಯ ಸುಭಾಷಿತ ಗ್ರಂಥದಲ್ಲಿಯೂ ಬರೀ ತಮಾಷೆ ಉತ್ಪ್ರೇಕ್ಷೆಗಳೇ ಇರುವುದೇನಲ್ಲ. ಗಂಭೀರವಾದ ಮಾಹಿತಿ ಪ್ರಸ್ತುತಿಯೂ ಇದೆ. ಮಜ್ಜಿಗೆ ಪದ್ಯಗಳಲ್ಲೇ ನಾವದನ್ನು ಕಂಡುಕೊಳ್ಳಬಹುದು. ಉದಾಹರಣೆಗೆ- ವಾತ, ಪಿತ್ತ, ಕಫ ಅಸಮತೋಲವಾದಾಗ ಮಜ್ಜಿಗೆಯನ್ನು ಯಾವ ರೀತಿ ಸೇವಿಸಬೇಕು ಎಂದು ತಿಳಿಸುವ ಈ ಸುಭಾಷಿತ: 'ವಾತೇಽಮ್ಲಂ ಸೈಂಧವೋಪೇತಂ ಸ್ವಾದಿ ಪಿತ್ತೇ ಸಶರ್ಕರಮ್। ಪಿಬೇತ್ತಕ್ರಂ ಕಫೇ ಚಾಪಿ ವ್ಯೋಷಕ್ಷಾರಸಮನ್ವಿತಮ್॥' ವಾತವಿಕಾರ ಆಗಿದ್ದರೆ ಹುಳಿಯಾದ ಮಜ್ಜಿಗೆಯನ್ನು ಚಿಟಿಕೆಯಷ್ಟು ಸೈಂಧವಲವಣ ಸೇರಿಸಿ ಕುಡಿಯಬೇಕು. ಪಿತ್ತ ಜಾಸ್ತಿಯಾಗಿದ್ದರೆ ಸ್ವಲ್ಪ ಸಕ್ಕರೆ ಸೇರಿಸಿದ ಸಿಹಿ ಮಜ್ಜಿಗೆ ಕುಡಿಯಬೇಕು. ಕಫ ಆಗಿದ್ದರೂ ಮಜ್ಜಿಗೆಯೇ ಒಳ್ಳೆಯದು, ಅದಕ್ಕೆ ತ್ರಿಕಟು ಚೂರ್ಣ(ಹಿಪ್ಪಲಿ ಮತ್ತು ಕಾಳುಮೆಣಸಿನ ಪುಡಿ) ಉದುರಿಸಿಕೊಂಡು ಕುಡಿಯಬೇಕಷ್ಟೇ.

ಯಾವ್ಯಾವ ವ್ಯಾಧಿಗಳು ಮಜ್ಜಿಗೆಯಿಂದ ಶಮನಗೊಳ್ಳುತ್ತವೆಂದು ತಿಳಿಸುವ ಶ್ಲೋಕಗಳೂ ಇವೆ: 'ತಕ್ರಂ ರುಚಿಕರಂ ವಹ್ನಿದೀಪನಂ ಪಾಚನಂ ಪರಮ್। ಉದರೇ ಯೇ ಗದಾಸ್ತೇಷಾಂ ನಾಶನಂ ತೃಪ್ತಿಕಾರಕಮ್॥' ಮಜ್ಜಿಗೆಯು ಬಾಯಿರುಚಿಯನ್ನು ಹೆಚ್ಚಿಸುತ್ತದೆ, ಜಠರಾಗ್ನಿಯನ್ನು ಉದ್ದೀಪಿಸುತ್ತದೆ, ಜೀರ್ಣಶಕ್ತಿಯನ್ನು ವೃದ್ಧಿಸುತ್ತದೆ, ಹೊಟ್ಟೆಯೊಳಗಿನ ರೋಗಗಳಿಗೆಲ್ಲ ರಾಮಬಾಣವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಮನಸ್ಸಿಗೆ ತೃಪ್ತಿ ತಂದುಕೊಡುತ್ತದೆ. ಇನ್ನೊಂದು- 'ತಕ್ರಂ ವಾತಹರಂ ರುಚ್ಯಂ ಶೂಲಾಘ್ನಾನಾರ್ಶಸಾಂ ಹಿತಮ್। ಅಗ್ನಿಸಂಜನನಂ ಶ್ರೇಷ್ಠಂ ಕಫಪಿತ್ತನಿವರ್ಹಣಮ್॥' ಮಜ್ಜಿಗೆಯು ವಾತ-ಪಿತ್ತ-ಕಫಗಳ ವೈಪರೀತ್ಯವನ್ನು ಹತೋಟಿಯಲ್ಲಿಡುತ್ತದೆ. ಹೊಟ್ಟೆನೋವಿಗಷ್ಟೇ ಅಲ್ಲ, ಕಿವಿತಮಟೆ ನೋವು, ಮೂಲವ್ಯಾಧಿ ಮುಂತಾದುವಕ್ಕೂ ಮಜ್ಜಿಗೆ ದಿವ್ಯೌಷಧವೇ. ಆದರೆ ಮಜ್ಜಿಗೆಯನ್ನು ಯಾರಿಗೆ ಯಾವಾಗ ಕೊಡಬಹುದು ಕೊಡಬಾರದು ಎಂದು ಗೊತ್ತಿರಬೇಕು. 'ತಕ್ರಂ ನೈವ ಕ್ಷತೇ ದದ್ಯಾನ್ನೋಷ್ಣಕಾಲೇ ನ ದುರ್ಬಲೇ। ನ ಮೂರ್ಛಾಭ್ರಮದಾಹೇಷು ನ ರೋಗೇ ರಕ್ತಪೈತ್ತಿಕೇ। ಶೀತಕಾಲೇಽಗ್ನಿಮಾಂದ್ಯೇ ಚ ಕಫೋತ್ಥೇಷ್ವಾಮಯೇಷು ಚ। ಮಾರ್ಗಾವರೋಧೇ ದುಷ್ಟೇ ಚ ವಾಯೌ ತಕ್ರಂ ಪ್ರಶಸ್ಯತೇ॥' ನಿತ್ರಾಣವುಳ್ಳವನಿಗೆ, ಗಾಯಗೊಂಡವನಿಗೆ, ಮೂರ್ಛೆ, ತಲೆಸುತ್ತು, ಉರಿ ಮತ್ತು ರಕ್ತಪಿತ್ತವುಳ್ಳವನಿಗೆ ಮಜ್ಜಿಗೆ ಕೊಡುವುದು ತರವಲ್ಲ. ಆದರೆ ಶೀತಕಾಲದಲ್ಲಿ, ಅಗ್ನಿಮಂದ ಆದಾಗ, ಕಫದಿಂದ ಹುಟ್ಟಿದ ವ್ಯಾಧಿಗಳಿಗೆ, ಸ್ರೋತಸ್ಸುಗಳ ಮಾರ್ಗದ ತಡೆಯಲ್ಲಿ, ಮತ್ತು ವಾಯು ಕೆಟ್ಟದಾದಾಗ ಮಜ್ಜಿಗೆ ಅತ್ಯಂತ ಪ್ರಶಸ್ತ.

ಈ ಗ್ರಂಥದಲ್ಲಿ ಸಿಕ್ಕಿದ ಮಜ್ಜಿಗೆ ಪದ್ಯಗಳಲ್ಲೆಲ್ಲ ನನಗೆ ತುಂಬ ಇಷ್ಟವೆನಿಸಿದ್ದು, ಆದ್ದರಿಂದ ಇಂದಿನ ಅಂಕಣಬರಹದ ಉಪಸಂಹಾರಕ್ಕೆಂದು ವಿಶೇಷವಾಗಿ ಗುರುತಿಸಿಟ್ಟುಕೊಂಡದ್ದು ಇದು: 'ಶಶಿಕುಂದಸಮುಜ್ಜ್ವಲ ಶಂಖನಿಭಂ ಯುವತೀಕರನಿರ್ಮಿತನಿರ್ಮಥಿತಮ್। ಘೃತಸೈಂಧವಹಿಂಗುಯುತಂ ಮಧುರಂ ಪಿಬ ತಕ್ರಮಹೋ ನೃಪ ರೋಗಹರಮ್॥' ಇದರ ಭಾವಾರ್ಥ ಹೀಗಿದೆ: 'ಹುಣ್ಣಿಮೆಯ ಚಂದ್ರ, ಮಲ್ಲಿಗೆ ಹೂವು, ಮತ್ತು ಶಂಖದಂತೆ ಅಚ್ಚಬಿಳುಪು ಶೋಭೆ ಇರುವ, ತರುಣಿಯರ ಕೈಗಳಿಂದ ಕಡೆಯಲ್ಪಟ್ಟು ತಯಾರಾದ, ಒಂಚೂರು ತುಪ್ಪ, ಸೈಂಧವ ಉಪ್ಪು, ಮತ್ತು ಚಿಟಿಕೆ ಹಿಂಗು ಸೇರಿ ರುಚಿ ಹೆಚ್ಚಿಸಲ್ಪಟ್ಟ, ಸರ್ವರೋಗಪರಿಹಾರಕವಾದ ಮಜ್ಜಿಗೆಯನ್ನು ಸೇವಿಸುವಂಥವನಾಗು ಮಹಾರಾಜನೇ!' ಒಂದುವೇಳೆ ಲಂಕೆಯಲ್ಲಿ ರಾವಣನ ಆಸ್ಥಾನದಲ್ಲಿ ರಸಿಕಶಿಖಾಮಣಿ ಕವಿಯೊಬ್ಬನು ಈ ಶ್ಲೋಕವನ್ನು ಹೇಳಿ ರಾವಣನಿಗೆ ಕುಡಿಯಲಿಕ್ಕೆ ಒಂದೇಒಂದು ಲೋಟದಷ್ಟು ಮಜ್ಜಿಗೆ ಕೊಟ್ಟರೆ ಹೇಗಾಗಬಹುದು? ಅವನ ಹತ್ತು ಬಾಯಿಗಳಿಗೆ ಅದು ಒಂದೊಂದು ಹನಿಯೂ ಸಿಗಲಿಕ್ಕಿಲ್ಲ. ಮತ್ತೆ, ನಮ್ಮ ಕನ್ನಡದ ಗಾದೆ 'ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಎಂದು ಇರುವುದು ಸುಮ್ಮನೆಯಾ?

ತೀರ್ಥಸ್ನಾನ, ಕ್ಷೇತ್ರಯಾತ್ರೆ ಮತ್ತು ಅಲೌಕಿಕತೆ...

ಭಾರತೀಯ ಸನಾತನ ಪರಂಪರೆಯಲ್ಲಿ, ಆಧ್ಯಾತ್ಮಿಕ ಉನ್ನತಿಯನ್ನು ತಲುಪಲು ಮತ್ತು ಮೋಕ್ಷವನ್ನು ಸಾಧಿಸಲು ತ್ರಿಕರಣಗಳ ಶುದ್ಧತೆಯ ಅಗತ್ಯವನ್ನು ಒತ್ತಿಹೇಳಲಾಗಿದೆ. ತ್ರಿಕರಣವೆಂದರೆ ಶರೀರ, ಮಾತು ಮತ್ತು ಮನಸ್ಸು . ಹಾಗೆ, ತ್ರಿಕರಣಗಳ ಶುದ್ಧತೆಯೇ ಪ್ರಮುಖ ಉದ್ದೇಶವಾಗಿ ತೀರ್ಥಯಾತ್ರೆಗಳನ್ನು ಮತ್ತು ಮಹಾನದಿಗಳಲ್ಲಿನ ಪುಣ್ಯಸ್ನಾನವನ್ನು 'ನೇಮ'ವಾಗಿ ವಿಧಿಸಲಾಗಿದೆ.



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಬರೋಬ್ಬರಿ 12 ವರ್ಷಗಳ ದೀರ್ಘಾವಧಿಯ ನಂತರ, ನಾಳೆಯಿಂದ (ಜ.13) ಮಹಾ ಕುಂಭಮೇಳವು ಆರಂಭವಾಗಲಿದ್ದು, ಇದು ಫೆಬ್ರವರಿ 26ರ ಶಿವರಾತ್ರಿಯಂದು ಮುಕ್ತಾಯಗೊಳ್ಳಲಿದೆ. ಉತ್ತರಪ್ರದೇಶ ಸರಕಾರದ ಪ್ರಯತ್ನದ ಫಲವಾಗಿ ಪ್ರಯಾಗ್ ರಾಜ್‌ನಲ್ಲಿ ಈ ಮಹಾ ಕುಂಭಮೇಳವು ವ್ಯವಸ್ಥಿತವಾಗಿ ಮತ್ತು ಅದ್ದೂರಿಯಾಗಿ ನಡೆಯಲಿದೆ. ವಿಶ್ವದ ಅತಿದೊಡ್ಡ ಧಾರ್ಮಿಕ ಆಚರಣೆ ಮತ್ತು ಆಧ್ಯಾತ್ಮಿಕ ಮೇಳ ಎಂದು ಪರಿಗಣಿಸಲ್ಪಟ್ಟಿರುವ ಈ ಮಹಾ ಕುಂಭಮೇಳದ ಸಂದರ್ಭದಲ್ಲಿ ದೇಶ-ವಿದೇಶಗಳ ಕೋಟ್ಯಂತರ ಜನರು, 'ತೀರ್ಥರಾಜ' ಎಂದೇ ಕರೆಯಲ್ಪಡುವ ಪ್ರಯಾಗ್‌ರಾಜ್‌ಗೆ ಬಂದು ಪವಿತ್ರಸ್ನಾನವನ್ನು ಮಾಡುತ್ತಾರೆ.

ಮಹಾ ಕುಂಭಮೇಳವು ಜಗತ್ತಿನ ಅತ್ಯಂತ ಹಳೆಯ ಧಾರ್ಮಿಕ ಆಚರಣೆ ಎಂದೂ ಹೇಳಲಾಗುತ್ತದೆ. ಎಷ್ಟು ಹಳೆಯದೆಂದರೆ, ಪುರಾಣಗಳಲ್ಲಿ ಹೇಳಿರುವ ಸಮುದ್ರಮಥನ ಕಾಲದಷ್ಟು ಹಿಂದಕ್ಕೆ ಇದು ನಮ್ಮನ್ನು ಕರೆದೊಯ್ಯುತ್ತದೆ. ಇದಕ್ಕಿಂತ ಪ್ರಾಚೀನವಾದ ಮತ್ತಾವುದೇ ಧಾರ್ಮಿಕ ಆಚರಣೆಯು ಇನ್ನೂ ಎಲ್ಲಿಯೂ ಲಿಖಿತ ರೂಪದಲ್ಲಿ ಕಂಡುಬಂದಿಲ್ಲವಂತೆ. ಮಹಾ ಕುಂಭಮೇಳದಲ್ಲಿನ 'ಸ್ನಾನ-ಧ್ಯಾನ'ಕ್ಕೆ ಅವುಗಳದೇ ಆದ ಮಹತ್ವವಿದೆ.

ಪ್ರತಿ 12 ವರ್ಷಗಳಿಗೊಮ್ಮೆ, ದೇಶದ ಪ್ರಯಾಗ್‌ರಾಜ್, ಹರಿದ್ವಾರ, ಉಜ್ಜಯನಿ ಮತ್ತು ನಾಸಿಕ್‌ನಲ್ಲಿ ಮಾತ್ರವೇ ನಡೆಸಲ್ಪಡುವ ಮಹಾ ಕುಂಭಮೇಳವು ಕೋಟ್ಯಂತರ ಜನರ ಶ್ರದ್ಧಾ-ಭಕ್ತಿ, ಭಾವಪರವಶತೆಗಳ ಅಭಿವ್ಯಕ್ತಿಗೊಂದು ಪರ್ವಕಾಲ. ಈ ಪೈಕಿ ಹರಿದ್ವಾರ, ಉಜ್ಜಯನಿ ಮತ್ತು ನಾಸಿಕ್ ಗಳಲ್ಲಿ ತಲಾ ಒಂದು ನದಿ ಮಾತ್ರ ಇದ್ದರೆ, ಪ್ರಯಾಗ್‌ರಾಜ್‌ನಲ್ಲಿ ಮೂರು ನದಿಗಳ ಸಂಗಮವಿದೆ. ಅಂದರೆ, ಹರಿದ್ವಾರದಲ್ಲಿ ಗಂಗಾ, ಉಜ್ಜಯನಿಯಲ್ಲಿ ಕ್ಷಿಪ್ರಾ ಮತ್ತು ನಾಸಿಕ್‌ನಲ್ಲಿ ಗೋದಾವರಿ ನದಿ ಇದ್ದರೆ, ಗಂಗಾ-ಯಮುನಾ-ಸರಸ್ವತಿ ನದಿಗಳ ತ್ರಿವೇಣಿ ಸಂಗಮದ ನೆಲೆ ಪ್ರಯಾಗ್ ರಾಜ್. ಆದ್ದರಿಂದ, ಪ್ರಯಾಗ್‌ರಾಜ್‌ಗೆ ಯಾತ್ರಾಸ್ಥಳಗಳ ಪೈಕಿ ಉನ್ನತ ಸ್ಥಾನವನ್ನು ನೀಡಲಾಗಿದೆ ಹಾಗೂ ಇಲ್ಲಿನ ಮಹಾ ಕುಂಭಮೇಳದಲ್ಲಿ ಮಾಡುವ ಪುಣ್ಯಸ್ನಾನಕ್ಕೆ ಹೆಚ್ಚಿನ ಮಹತ್ವವಿದೆ.

ಭಾರತೀಯ ಸನಾತನ ಪರಂಪರೆಯಲ್ಲಿ, ಆಧ್ಯಾತ್ಮಿಕ ಉನ್ನತಿಯನ್ನು ತಲುಪಲು ಮತ್ತು ಮೋಕ್ಷವನ್ನು ಸಾಧಿಸಲು ತ್ರಿಕರಣಗಳ ಶುದ್ಧತೆಯ ಅಗತ್ಯವನ್ನು ಒತ್ತಿಹೇಳಲಾಗಿದೆ. ತ್ರಿಕರಣವೆಂದರೆ ಶರೀರ, ಮಾತು ಮತ್ತು ಮನಸ್ಸು (ಕಾಯಾ, ವಾಚಾ, ಮನಸಾ). ಹಾಗೆ, ತ್ರಿಕರಣಗಳ ಶುದ್ಧತೆಯೇ ಪ್ರಮುಖ ಉದ್ದೇಶವಾಗಿ ತೀರ್ಥಯಾತ್ರೆಗಳನ್ನು ಮತ್ತು ಮಹಾನದಿಗಳಲ್ಲಿನ ಪುಣ್ಯಸ್ನಾನವನ್ನು 'ನೇಮ'ವಾಗಿ ವಿಧಿಸಲಾಗಿದೆ. ಹಾಗೆ ದೂರದೂರಿಗೆ ಯಾತ್ರೆಗೆ ತೆರಳಲಾಗದವರು ಮನೆಯಲ್ಲೇ ಸ್ನಾನ ಮಾಡುವಾಗ ಗಂಗಾ, ಯಮುನಾ, ಗೋದಾವರಿ, ಸರಸ್ವತಿ, ನರ್ಮದಾ, ಸಿಂಧೂ ಮತ್ತು ಕಾವೇರಿ ಎಂಬ 7 ನದಿಗಳನ್ನು ಸ್ಮರಣೆ ಮಾಡುವುದೂ ರೂಢಿಯಲ್ಲಿದೆ. ಕಾಶೀಯಾತ್ರೆಯನ್ನು ಕಾರಣಾಂತರಗಳಿಂದ ಕೈಗೊಳ್ಳಲಾಗದವರು 'ನಾನು ಕಾಶಿಗೆ ಹೋಗುತ್ತೇನೆ ಮತ್ತು ಕೆಲಕಾಲ ಅಲ್ಲಿ ವಾಸವಿರುತ್ತೇನೆ' (ಅಹಂ ಕಾಶೀಂ ಗಮಿಷ್ಯಾಮಿ ತತ್ರೈವ ನಿವಸಾಮ್ಯಹಂ' ಎಂದು ತಮ್ಮಷ್ಟಕ್ಕೆ ತಾವು ಹೇಳಿಕೊಂಡರೂ ಸಾಕು, ಅವರಿಗೆ ಯಾತ್ರೆಯ ಫಲ ದೊರಕುವುದು ಎಂದು ನಂಬಲಾಗಿದೆ. ಸ್ಕಂದ ಪುರಾಣದ ಕಾಶೀ ಖಂಡದಲ್ಲಿ, 'ಮರಣಂ ಮಂಗಲಂ ಯತ್ರ, ವಿಭೂತಿಶ್ಚ ವಿಭೂಷಣಂ. ಕೌಪೀನಂ ಯತ್ರ ಕೌಶೇಯಂ, ಸಾ ಕಾಶೀ ಕೇನಮೀಯತೇ?' ಎನ್ನುವ ಕಾಶೀಕ್ಷೇತ್ರ ವರ್ಣನೆಯ ಮಾತಿದೆ. ಯಾವ ಊರಿನಲ್ಲಿ ಮರಣವನ್ನೂ ಮಂಗಲವೆಂದು ಆಚರಿಸುತ್ತಾರೋ, ಭಸ್ಮವನ್ನೇ ಅಲಂಕಾರವೆಂದು ಭಾವಿಸುತ್ತಾರೋ ಮತ್ತು ಲಂಗೋಟಿಯನ್ನು ಪೀತಾಂಬರದಷ್ಟೇ ಗೌರವಿಸುತ್ತಾರೋ ಅಂಥಾ ಕಾಶೀಕ್ಷೇತ್ರ ಯಾರಿಗೆ ತಾನೇ ಬೇಡ? ಎನ್ನುವುದು ಈ ಶ್ಲೋಕದ ಅರ್ಥ.

ಹಿಂದೂ ಧರ್ಮದಲ್ಲಿ, ಒಂದು ಪವಿತ್ರನದಿ ಅಥವಾ ನದಿಗಳ ಸಂಗಮಸ್ಥಾನ, ಪರ್ವತ ಅಥವಾ ಇತರ ಸ್ಥಳವನ್ನು ದೇವತೆಗಳು ಅಥವಾ ಸಾಧು-ಸಂತರ ಜತೆಗಿನ ಬೆಸುಗೆಯ ಆಧಾರದಲ್ಲಿ 'ಪವಿತ್ರ ಸ್ಥಳ' ಎಂದು ಗುರುತಿಸುತ್ತಾರೆ. ಏಳು ಪವಿತ್ರ ಹಿಂದೂ ನಗರಗಳು, ಪೌರಾಣಿಕ ಗ್ರಂಥದಲ್ಲಿ ವಿವರಿಸಲಾದ ಘಟನೆಗಳ ಮೂಲತಾಣಗಳಾಗಿವೆ ಎನ್ನಲಾಗುತ್ತದೆ (ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಅವಂತಿಕಾ, ಪುರಿ ದ್ವಾರಾವತೀ ಚೈವ ಸಪ್ತೈತೇ ಮೋಕ್ಷದಾಯಿನಃ). ಕಾಶಿ (ಶಿವನ ಅವಿಮುಕ್ತ ಕ್ಷೇತ್ರ), ಔಧ್ ಅಥವಾ ಅಯೋಧ್ಯೆ (ಶ್ರೀರಾಮನ ಜನ್ಮಸ್ಥಳ), ಮಥುರಾ (ಶ್ರೀಕೃಷ್ಣನ ಜನ್ಮಸ್ಥಾನ), ದ್ವಾರಕಾ (ಅಲ್ಲಿ ವಯಸ್ಕ ಕೃಷ್ಣನು ರಾಜನಾಗಿ ಆಳಿದನು), ಕಾಂಚೀಪುರಂ, ಮಾಯಾ (ಅಂದರೆ ಹರಿದ್ವಾರ) ಮತ್ತು ಆವಂತಿಕಾ (ಅಂದರೆ ಉಜ್ಜಯಿನಿ) ಇವುಗಳನ್ನು 'ಮೋಕ್ಷಪ್ರದ ಕ್ಷೇತ್ರಗಳು' ಎಂದು ಗುರುತಿಸಲಾಗಿದೆ. ಹಾಗಾಗಿ, ಈ ಏಳೂ ಕ್ಷೇತ್ರಗಳ ಪ್ರವಾಸವನ್ನು 'ತೀರ್ಥಯಾತ್ರೆ' ಎನ್ನುವುದು ವಾಡಿಕೆ. ಅಷ್ಟೇ ಅಲ್ಲದೆ, ಮೇಲೆ ಉಲ್ಲೇಖಿಸಲಾಗಿರುವ ಏಳು ಪವಿತ್ರ ನದಿಗಳಲ್ಲಿನ ಅಥವಾ ನದಿಗಳ ಸಂಗಮದಲ್ಲಿನ ಸ್ನಾನವನ್ನು ವಿಶೇಷವಾಗಿ ಪಾಪದ ಶುದ್ಧೀಕರಣಕ್ಕಾಗಿ ಮತ್ತು ಮೋಕ್ಷಾರ್ಥವಾಗಿ ಆಚರಿಸುವುದೂ ಇದೆ.

ಹಿಂದೂಗಳು ಭಕ್ತಿಯ ಕ್ರಿಯೆಯಾಗಿ, ಸಂಕಲ್ಪವನ್ನು ಕೈಗೊಳ್ಳಲು, ದೇವತೆಗಳನ್ನು ಪ್ರಸನ್ನಗೊಳಿಸಲು ಅಥವಾ ಧರ್ಮಾರ್ಥಗಳ ಸಮೃದ್ಧಿಯನ್ನು ಬಯಸಿ ತೀರ್ಥಯಾತ್ರೆಯನ್ನು ನಡೆಸುತ್ತಾರೆ. ತೀರ್ಥವನ್ನು ತಲುಪಿದ ನಂತರ ಯಾತ್ರಿಕರು ಸಾಮಾನ್ಯವಾಗಿ ಸ್ನಾನ, ಅರ್ಘ್ಯಪ್ರದಾನ, ಅಲ್ಲಿನ ದೇವಾಲಯ ಅಥವಾ ಪವಿತ್ರಸ್ಥಳದ ಪ್ರದಕ್ಷಿಣೆ, ನೈವೇದ್ಯ ಸಮರ್ಪಣೆ ಮತ್ತು ಸತ್ತ ಪೂರ್ವಜರ ಗೌರವಾರ್ಥವಾಗಿ ಶ್ರಾದ್ಧಾದಿ ಕರ್ಮಗಳಂಥ ವಿಧಿಗಳನ್ನು ಕೈಗೊಳ್ಳುತ್ತಾರೆ. 'ಬ್ರಹ್ಮಚರ್ಯ-ಗೃಹಸ್ಥ-ವಾನಪ್ರಸ್ಥ-ಸನ್ಯಾಸ' ಹೀಗೆ ಎಲ್ಲಾ ಆಶ್ರಮದವರೂ ತೀರ್ಥಯಾತ್ರೆ ಮಾಡುವ ಸಂಪ್ರದಾಯವು ನಮ್ಮ ದೇಶದಲ್ಲಿ ಅನಾದಿ ಕಾಲದಿಂದಲೂ ನಡೆದುಕೊಂಡುಬಂದಿದೆ. ಪ್ರಾಯಶಃ ಇನ್ನಾವ ದೇಶದ ಸಂಸ್ಕೃತಿಯಲ್ಲೂ ಅಥವಾ ಧರ್ಮದಲ್ಲೂ ತೀರ್ಥಯಾತ್ರೆಯ ನೇಮವನ್ನು ವಿಧಿಸಿಲ್ಲವೇನೋ!

ಇರಲಿ, 'ತೀರ್ಥ' ಎಂದರೇನು ಎಂಬುದನ್ನು ಈಗ ನೋಡೋಣ. ಎಷ್ಟೋ ಮಹಾತ್ಮರ ಹೆಸರುಗಳಲ್ಲೂ 'ತೀರ್ಥ' ಎಂಬ ಶಬ್ದವಿರುವುದನ್ನು ಕಾಣುತ್ತೇವೆ. ಉದಾಹರಣೆಗೆ, ವಿದ್ಯಾತೀರ್ಥರು, ಭಾರತೀತೀರ್ಥರು, ಆನಂದತೀರ್ಥರು ಇತ್ಯಾದಿ. 'ತೀರ್ಥರೂಪರಾದ ತಂದೆಯವರು' ಎಂದೆಲ್ಲಾ ಕರೆಯುವುದು ನಮಗೆ ತಿಳಿದೇ ಇದೆ. ಶ್ರೀ ವಿಷ್ಣು ಸಹಸ್ರನಾಮದಲ್ಲಿ ಭಗವಂತನನ್ನು 'ಮನೋಜವಃ ತೀರ್ಥಕರಃ' ಎಂದೇ ಕರೆಯಲಾಗಿದೆ. ಇನ್ನು ಪ್ರಯಾಗಕ್ಕೆ 'ತೀರ್ಥರಾಜ' ಎಂಬ ಹೆಸರಿದೆ. ಸಾಲು ಸಾಲು ತೀರ್ಥಗಳು ಇರುವುದರಿಂದ ಕಾಶ ಕ್ಷೇತ್ರವನ್ನು 'ತೀರ್ಥರಾಜಿ' ಎಂದೇ ಕರೆಯಲಾಗಿದೆ ('ರಾಜಿ' ಎಂದರೆ 'ಸಾಲು' ಎಂದರ್ಥ). ಹಾಗಾದರೆ, 'ತೀರ್ಥ'ವೆಂಬ ಸಂಸ್ಕೃತ ಪದವು ಹೇಗೆ ಬಂದಿತೆಂದು ನೋಡೋಣ. ಇದು ಬಂದಿರುವುದು 'ತೃ ಪ್ಲವನ-ತರಣಯೋಃ' ಎಂಬ ಧಾತುವಿನಿಂದ. ತರಣವೆಂದರೆ ದಾಟುವುದು. 'ಸಂಸಾರಸಾಗರಂ ಘೋರಂ' ಎನ್ನುತ್ತಾರಲ್ಲವೇ? ಆ ಘೋರವಾದ ಸಾಗರವನ್ನೂ ಸುಲಭವಾಗಿ ತರಣ ಮಾಡಿಸಬಲ್ಲದ್ದು ಅಥವಾ ದಾಟಿಸಬಹುದಾದದ್ದು ಎಂದರ್ಥ.

"ಕಾಶೀಕ್ಷೇತ್ರಂ ಶರೀರಂ ತ್ರಿಭುವನ-ಜನನೀ ವ್ಯಾಪಿನೀ ಜ್ಞಾನಗಂಗಾ, ಭಕ್ತಿಃ ಶ್ರದ್ಧಾಗಯೇಯಂ ನಿಜಗುರು-ಚರಣಾಧ್ಯಾನಯೋಗಾಃ ಪ್ರಯಾಗಾಃ । ವಿಶ್ವೇಶೋಯಂ ತುರೀಯಃ ಸಕಲಜನ ಮನಃಸಾಕ್ಷಿಭೂತೋಂತರಾತ್ಮಾ, ದೇಹೇ ಸರ್ವಂ ಮದೀಯೇ ಯದಿ ವಸತಿ ಪುನಸ್ತೀರ್ಥಮನ್ಯಃ ಕಿಮಸ್ತಿ?"- ಶ್ರೀ ಶಂಕರ ಭಗವತ್ಪಾದಾಚಾರ್ಯರ 'ಕಾಶೀ ಪಂಚಕ'ದ ಈ ಶ್ಲೋಕವು, ಸಂಪೂರ್ಣ ಕಾಶೀಕ್ಷೇತ್ರವನ್ನು ವರ್ಣಿಸುವುದರ ಪರಾಕಾಷ್ಠೆಯಾಗಿದೆ. ಇದು, 'ಸ್ವಯಂ-ಸಾಕ್ಷಾತ್ಕಾರವಾದ ವ್ಯಕ್ತಿಯ ದೇಹವು ಸ್ವತಃ ಕಾಶಿಯೇ ಆಗಿರುತ್ತದೆ ಮತ್ತು ಅವನು ಬೇರಾವುದೇ ದೇವಾಲಯ ಅಥವಾ ತೀರ್ಥಕ್ಷೇತ್ರಕ್ಕೆ ಹೋಗುವ ಅಗತ್ಯವಿರುವುದಿಲ್ಲ' ಎಂದು ಘೋಷಿಸುತ್ತದೆ. ಬ್ರಹ್ಮಾನಂದದ ಅಮೃತವನ್ನು ಕುಡಿಯುವುದರಿಂದ ಜೀವನ್ಮುಕ್ತರುಗಳ ಉಪಸ್ಥಿತಿಯು ಪುಣ್ಯಕ್ಷೇತ್ರದಂತಿದೆ ಮತ್ತು ಸಾಕ್ಷಾತ್ಕಾರಗೊಂಡ ಆತ್ಮಗಳ ಸಹವಾಸಕ್ಕಿಂತ ಬೇರಾವುದೇ ದೇವಾಲಯವು ಉತ್ತಮವಾಗಿರುವುದಿಲ್ಲ ಎಂಬ ಸಂದೇಶವನ್ನು ಆಚಾರ್ಯರು ಈ ಸ್ತೋತ್ರದಲ್ಲಿ ಸಾರುತ್ತಾರೆ. ಕಾಶಿ ವಿಶ್ವನಾಥನ ದೇವಾಲಯವು ದೇಹವೇ ಆಗಿದೆ ಮತ್ತು ಮೂರು ಲೋಕಗಳ ತಾಯಿಯಾದ ಗಂಗೆಯು, ಮೂರು ಲೋಕಗಳಲ್ಲಿ ಸಂಚರಿಸುವ ಬುದ್ಧಿ, ಭಕ್ತಿ ಮತ್ತು ಶ್ರದ್ಧೆಗಳು ಗಯಾ ಕ್ಷೇತ್ರ ಮತ್ತು ಒಬ್ಬರ (ನಿಜ) ಧ್ಯಾನಸ್ಥಾನ, ಗುರುವಿನ ಪಾದವೇ ಪುಣ್ಯ ಪ್ರಯಾಗ ಎನ್ನುತ್ತಾ ಆಚಾರ್ಯರು ಮೂರು ಪುಣ್ಯನದಿಗಳ ಸಂಗಮವಾದ ಪ್ರಯಾಗವನ್ನು ಗುರುವಿನ ಪಾದಗಳೊಂದಿಗೆ ಸಮೀಕರಿಸುತ್ತಾರೆ.

ಪುಷ್ಕರ-ನೈಮಿಷಾರಣ್ಯ-ಪ್ರಯಾಗ ಮೊದಲಾದವುಗಳನ್ನು 'ಸ್ಥಾವರತೀರ್ಥ'ಗಳೆಂದು ಕರೆಯಲಾಗಿದೆ. ಅಂದರೆ, ಸ್ಥಿರವಾಗಿ ನಿಂತಿರುವಂಥವು ಎಂದರ್ಥ. ಸತ್ಯ-ಕ್ಷಮೆ-ಇಂದ್ರಿಯನಿಗ್ರಹಗಳನ್ನು 'ಅಂತಃಸ್ತೀರ್ಥ'ವೆಂದು ಕರೆಯಲಾಗಿದೆ. ಶರೀರವೇ ಕಾಶಿ, ಜ್ಞಾನವೇ ಗಂಗೆ, ಭಕ್ತಿ-ಶ್ರದ್ಧೆಗಳೇ ಗಯೆ ಹಾಗೂ ಗುರುಚರಣ ಧ್ಯಾನವೇ ಪ್ರಯಾಗ! ಈ ರೀತಿಯಲ್ಲಿ ವಿಚಾರ ಮಾಡಿದರೆ ಪಾಪಾತ್ಮರೂ ತೀರ್ಥಕ್ಷೇತ್ರ ಪ್ರವಾಸ ಮಾಡಬೇಕಾಗಿ ಬರುವುದಿಲ್ಲ ಎಂದಂತಾಯಿತು. ಅದರಲ್ಲೂ, ಪಾಪದ ಲವಲೇಶವೂ ಇಲ್ಲದ ಅವಧೂತರು, ಪರಮಹಂಸರು ಮತ್ತು ಭಗವಂತನ ನಿತ್ಯಸೂರಿಗಳು ಏಕೆ ತೀರ್ಥಯಾತ್ರೆ ಮಾಡಬೇಕು? ಕಾಶೀ-ಗಂಗೆಗಳು, ಗಯಾ-ಪ್ರಯಾಗಗಳು ನಮ್ಮ ಶರೀರದಲ್ಲಿಯೇ ಇವೆಯೆಂದು ಶಂಕರ ಭಗವತ್ಪಾದರ ಕಾಶೀಪಂಚಕವು ಹೇಳಿದ ಮೇಲೆ, ತೀರ್ಥಪರ್ಯಟನೆಯ ಅಗತ್ಯವೆಂತು? ಅದರಲ್ಲೂ, ಸ್ವಯಂ ಮಹಾತ್ಮರಾದವರಿಗೆ, ನಿತ್ಯಮುಕ್ತರಾದವರಿಗೆ ಹಾಗೂ ಸಿದ್ಧರಾದವರಿಗೆ ತೀರ್ಥಯಾತ್ರೆಯಿಂದ ಆಗುವುದೇನು? ಎನ್ನುವ ಪ್ರಶ್ನೆ ಏಳುವುದು ಸ್ವಾಭಾವಿಕವೇ. ಸ್ಥಾವರತೀರ್ಥಗಳಿಗೆ ಅಥವಾ ಸದಾ ಚಲನಶೀಲವಾದ ನದಿಗಳಿಗೆ 'ತೀರ್ಥತ್ವ'ವು ಎಲ್ಲಿಂದ ಬಂತು ಎನ್ನುವುದನ್ನು ತಿಳಿದರೆ ನಮ್ಮ ಸಂಶಯಕ್ಕೆ ಪರಿಹಾರ ಸಿಗುತ್ತದೆ.

'ತೀರ್ಥೀಕುರ್ವಂತಿ ತೀರ್ಥಾನಿ, ತೀರ್ಥಭೂತಾ ಹಿ ಸಾಧವಃ'- ಅಂದರೆ ಸಾಧುಗಳೇ ತೀರ್ಥಭೂತರಾದವರು. ಆ ಜಂಗಮತೀರ್ಥರು ಹಾಗೂ ತೀರ್ಥಪಾದರುಗಳು ಈ ಸ್ಥಾವರತೀರ್ಥಗಳ ಬಳಿ ಸಾಗಿ ನದಿಗಳಲ್ಲಿ ಪಾದಸ್ಪರ್ಶ ಮಾಡಿದಾಗ, ಅವರ ಈ ಪಾದಸ್ಪರ್ಶದಿಂದಲೇ ಅವಕ್ಕೆ ತೀರ್ಥತ್ವ ಉಂಟಾಗುತ್ತದೆ ಎಂದಿದ್ದಾರೆ ನಮ್ಮ ಪ್ರಾಚೀನರು. ಅಲ್ಲದೆ, ಗಂಗಾವತರಣದ ಕಾಲದಲ್ಲಿ ಗಂಗಾಮಾತೆಯು ಭಗವಂತನಲ್ಲಿ ಪ್ರಾರ್ಥಿಸುತ್ತಾಳೆ- "ಜಗದ ಕೊಳೆಯನ್ನೆಲ್ಲಾ ಕಳೆಯುವ ಕರ್ತವ್ಯವನ್ನು ನನಗೆ ಕೊಟ್ಟೆ! ಆದರೆ ಜಗದ ಜನರ ಪಾಪರಾಶಿಗಳಿಂದಲೇ ತುಂಬಿಕೊಂಡ ನನ್ನ ಉದ್ಧಾರವೆಂತು?'. ಅದಕ್ಕೆ ಭಗವಂತ, "ನೀನು ಉಗಮಿಸಿ ಸಂಚರಿಸುವ ಭೂಭಾಗಗಳಲ್ಲಿ, ನನ್ನ ಹೃದಯಸ್ಥಾನದಲ್ಲಿರುವ ಅಥವಾ ನನ್ನದೇ ವಿಭೂತಿಗಳಿಂದ ತುಂಬಿರುವ ಭಾಗವತ ಜನರು ಅವತರಿಸಿರುತ್ತಾರೆ. ಅವರು ಜಗತ್ತಿನ ಕಲ್ಯಾಣದ ಕಾರ್ಯತತ್ಪರತೆಯಿಂದ ಸಂಚರಿಸುತ್ತಿರುವಾಗ ನಿನ್ನಲ್ಲೂ ಬರುತ್ತಾರೆ. ಅವರ ಪಾದಸ್ಪರ್ಶದಿಂದಲೇ ನಿಮ್ಮ ಪಾಪರಾಶಿಗಳು ಕರಗುವುದಷ್ಟೇ ಅಲ್ಲದೇ, ನಿನಗೆ ತೀರ್ಥತ್ವ ಪ್ರಾಪ್ತಿಯಾಗುತ್ತದೆ" ಎಂದನಂತೆ. ಸನ್ಯಾಸಿಗಳು, ತಪಸ್ವಿಗಳು, ಅವಧೂತರುಗಳು, ಪರಮಹಂಸರುಗಳು ಸ್ವತಃ ತೀರ್ಥಪಾದರುಗಳೇ ಆಗಿದ್ದರೂ ತೀರ್ಥಯಾತ್ರೆಯನ್ನು ಕೈಗೊಳ್ಳುವ ಉದ್ದೇಶ ಇದುವೇ ಆಗಿದೆ!

ಈ ಎಲ್ಲ ಕಾರಣಗಳಿಗಾಗಿ, ಇಂದಿನ ಆಧುನಿಕ ಯುಗದಲ್ಲೂ ಭಾರತೀಯರು ತೀರ್ಥಕ್ಷೇತ್ರಗಳಿಗೆ ಭೇಟಿನೀಡುವುದನ್ನು, ಪುಣ್ಯನದಿಗಳಲ್ಲಿ ಸ್ನಾನ ಮಾಡುವುದನ್ನು ಜೀವನದ ಗುರಿ ಮತ್ತು ಮಹತ್ವಾಕಾಂಕ್ಷೆ ಎಂದೇ ಪರಿಗಣಿಸುತ್ತಾರೆ ಮತ್ತು ಹಾಗೆ ಯಾತ್ರೆಯನ್ನು ಕೈಗೊಂಡಾಗ ಮಾನಸಿಕವಾಗಿ ಒಂದು ತರಹದ ದಿವ್ಯಭಾವವನ್ನು ಹೊಂದುತ್ತಾರೆ. ಅಂಥ ಅಲೌಕಿಕ ಅನುಭೂತಿಯ ಖಾತ್ರಿಯಿಲ್ಲದೇ ಕೋಟ್ಯಂತರ ಭಾರತೀಯರು ಸುಮ್ಮನೇ ಪ್ರಯಾಗ್‌ರಾಜ್‌ನತ್ತ ಹರಿದುಬರಲು ಸಾಧ್ಯವೇ?

ಋತುಮತಿಯಿಂದ ಋಷಿಪಂಚಮಿಯವರೆಗೆ...!

ರಸದೌತಣ
ಯಗಟಿ ರಘು ನಾಡಿಗ್
naadigru@gmail.com

ಗೆಳತಿ ಜಾನಕಿ,

ಹೇಗಿದ್ದೀಯ? ನಿನ್ನ ಸಂಪರ್ಕ ತಪ್ಪಿಹೋಗಿ ವರ್ಷಗಳೇ ಆಗಿಬಿಟ್ಟವಲ್ಲೇ? ನಿನ್ನ ನಂಬರ್ ಇರಲಿಲ್ಲ. ಮೊನ್ನೆ ಅದ್ಯಾವುದೋ ಲೇಖನದ ಜತೆ ಪ್ರಕಟವಾಗಿತ್ತು, ಸೇವ್ ಮಾಡಿಕೊಂಡೆ. ಕರೆಗೆ ಯತ್ನಿಸಿದರೂ ನೆಟ್‌ವರ್ಕ್ ಸಮಸ್ಯೆಯಿಂದಾಗಿ ಸಾಧ್ಯವಾಗಲಿಲ್ಲ. ಈಗ ಈ ಸಂದೇಶ ಕಳಿಸಿದ್ದರ ಕಾರಣ ಹೇಳ್ತೀನಿ. ನಾವಿಬ್ಬರೂ ಬಹಳ ಹಿಂದೆ ಜತೆಯಲ್ಲಿ ಓದುತ್ತಿದ್ದಾಗ, 'ಸೀತೆಯ ಸಂಕಷ್ಟಗಳು' ಎಂಬ ಪಾಠವಿತ್ತು. ಶಾಲಾ ಪರೀಕ್ಷೆಯಲ್ಲಿ, 'ಶ್ರೀರಾಮನ ಪತ್ನಿ ಸೀತೆ ತನ್ನ ಜೀವಿತಾವಧಿಯಲ್ಲಿ ಅನುಭವಿಸಿದ ಸಂಕಷ್ಟಗಳನ್ನು ಸ್ವಂತವಾಕ್ಯದಲ್ಲಿ ಬರೆಯಿರಿ' ಎಂಬ ಪ್ರಶ್ನೆಗೆ ನೀನು ಬರೆದಿದ್ದ ಉತ್ತರ ಮೇಷ್ಟ್ರಿಗೆ ತುಂಬಾ ಇಷ್ಟವಾಗಿತ್ತು. "ಪ್ರಶ್ನೆಗೆ ಉತ್ತರಿಸೋದು ಅಂದ್ರೆ ಪುಸ್ತಕದಲ್ಲಿರೋದನ್ನ ಭಟ್ಟಿ ಇಳಿಸಿಬಿಡೋದಲ್ಲ; ಇಲ್ಲಿ ನೋಡಿ, ಸೀತೆಯ ಸಂಕಷ್ಟಗಳನ್ನ ಜಾನಕಿ ಎಷ್ಟು ಚೆಂದಾಗಿ ತನ್ನದೇ ವಾಕ್ಯಗಳಲ್ಲಿ ವಿಶ್ಲೇಷಿಸಿದ್ದಾಳೆ. ನಿರೂಪಣೆ ಅಂದ್ರೆ ಇದು!" ಅಂತ ಮೇಷ್ಟ್ರು ಹೊಗಳಿ, ಉತ್ತರ ಪತ್ರಿಕೆಯನ್ನು ಎಲ್ಲರಿಗೂ ತೋರಿಸಿ, ನಂತರ ನಿನಗೇ ಕೊಟ್ಟಿದ್ದರು. ಆ ಘಟನೆಯಿನ್ನೂ ನನ್ನಲ್ಲಿ ಹಸಿರು. ಏಯ್ ಹುಡುಗಿ, ತಮಾಷೆ ಗೊತ್ತಾ? ಅದೇ ಬರಹ ಈಗ ಮತ್ತೊಮ್ಮೆ ಪಠ್ಯವಾಗಿದೆ. ಅದನ್ನು ನೋಡ್ತಿದ್ದಂತೆ ನಿನ್ನ ನೆನಪಾಯ್ತು. 'ಸೀತೆಯ ಸಂಕಷ್ಟಗಳು' ಕುರಿತಾದ ನಿನ್ನ ಆ ಪ್ರಬಂಧವನ್ನು ವಾಟ್ಸಾಪ್ ಮಾಡಿದ್ರೆ ನಮ್ಮ 'ಲವ-ಕುಶ'ರಿಗೆ ಉಪಯೋಗವಾಗುತ್ತೆ. ನೆಟ್‌ವರ್ಕ್ ಸಿಗುತ್ತಿದ್ದಂತೆ ಕರೆಮಾಡುವೆ...

ಇಂತು ನಿನ್ನ ಬಾಲ್ಯಸ್ನೇಹಿತ,
ರಘುರಾಮ.

• • •

ಗೆಳೆಯ ರಘುರಾಮಾ,

ನಿನ್ನ ವಾಟ್ಸಾಪ್ ಸಂದೇಶ 'ಮರುಭೂಮಿಯ ಓಯಸಿಸ್' ನಂತೆ ಮುದನೀಡಿತು ಕಣೋ. ಲೇಯ್ ಕಳ್ಳಾ, ನನಗೆ ತಿಳಿಸದೆ ಮದುವೆಯಾಗಿದ್ದಲ್ಲದೆ 'ಲವ-ಕುಶ' ಎಂಬ ಮಕ್ಕಳನ್ನೂ ಮಾಡ್ಕೊಂಡಿದ್ದೀಯಾ? ನಿನ್ನ ಹೆಂಡತಿ ಹೆಸರೇನು? ಅಯ್ಯೋ ದೇವರೇ... ನಿಂಗೆ 'ಸೀತೆಯ ಸಂಕಷ್ಟಗಳು' ಪ್ರಬಂಧ ಬೇಕಲ್ವಾ... ಮೊದಲು 'ಸಂಕಷ್ಟಗಳನ್ನು' ವಿವರಿಸುವೆ, ನಂತರ 'ಕ್ಷೇಮ ಸಮಾಚಾರ'...

"ಹಳ್ಳಿಯಲ್ಲಿ ಪ್ರೌಢಶಾಲೆ ಮುಗಿಸಿದ ನಂತರ ಬೆಂಗಳೂರಿನಲ್ಲಿ ಕಾಲೇಜಿಗೆ ಸೇರಬೇಕು ಅಂದ್ಕೊಂಡಿದ್ದೆ; ಆದರೆ ಅಪ್ಪ ಸಂಕಷ್ಟದಲ್ಲಿದ್ದರು, ಹಾಸ್ಟೆಲ್‌ಗೆ ಸೇರಿಸೋಕೂ ಅವರಿಗಿಷ್ಟವಿರಲಿಲ್ಲ. ಹೀಗಾಗಿ ಚಿಕ್ಕಪ್ಪ ಇರುವ ಊರಿನ ಕಾಲೇಜಿಗೆ ಸೇರಿಸಿ ಅವನ ಮನೆಯಲ್ಲೇ ನನ್ನನ್ನು ಬಿಡಲು ನಿರ್ಧರಿಸಿದರು. ಆ ಊರು ಅಪರಿಚಿತವಾಗಿದ್ದರೂ, 'ಅಮ್ಮನಿಲ್ಲದ ನಿನ್ನನ್ನು ಚಿಕ್ಕಪ್ಪ-ಚಿಕ್ಕಮ್ಮ ಮಗಳಂತೆಯೇ ನೋಡ್ಕೋತಾರೆ' ಅಂತ ಅಪ್ಪ ಭರವಸೆ ತುಂಬಿದರು. ಹೀಗಾಗಿ ಚಿಕ್ಕಪ್ಪನ ಮನೆಪಾಲಾದೆ. ಆದರೆ, ಚಿಕ್ಕಮ್ಮ ಎಲ್ಲಿಗಾದರೂ ಹೋಗಿದ್ದು ಚಿಕ್ಕಪ್ಪ ಒಬ್ಬನೇ ಇರುವಾಗ ಮನೆಯಲ್ಲಿರಲು ನನಗೆ ಅದ್ಯಾಕೋ ಅಸುರಕ್ಷಿತ ಭಾವನೆ ಕಾಡುತ್ತಿತ್ತು. ಇದು 'ಹೋಮ್ ಸಿಕ್‌ನೆಸ್' ಇರಬೇಕು, ಅದಕ್ಕೇ ಹೀಗಾಗುತ್ತಿದೆ ಅಂದುಕೊಂಡಿದ್ದೆ. ಆದರೆ, ಆತ್ಮೀಯತೆಯ ನೆಪದಲ್ಲಿ ಚಿಕ್ಕಪ್ಪ ನನ್ನ ಮೈಮೇಲೆ ಕೈಯಾಡಿಸುವಾಗ, 'ಇದು ಅಸಹಜವಾಗಿದೆಯಲ್ಲಾ?' ಎನಿಸುತ್ತಿತ್ತು. ಕ್ರಮೇಣ 'ಗುಡ್ ಟಚ್, ಬ್ಯಾಡ್ ಟಚ್' ನಡುವಿನ ವ್ಯತ್ಯಾಸ ಅರಿವಾಗತೊಡಗಿ ಅವನಿಂದ ಅಂತರ ಕಾಯ್ದುಕೊಳ್ಳತೊಡಗಿದೆ. ಆದರೆ ವಿದ್ಯಾಭ್ಯಾಸಕ್ಕೆಂದು ಆ ಮನೆಯಲ್ಲೇ ಇರಬೇಕಾಗಿದ್ದರಿಂದ ಮತ್ತು ತಮ್ಮನಲ್ಲಿ ಅಪ್ಪನಿಗೆ ಅಪಾರ ನಂಬಿಕೆಯಿದ್ದುದರಿಂದ, ಮುಜುಗರವನ್ನು ಒಳಗೇ ಅವಿಸಿಟ್ಟುಕೊಳ್ಳುತ್ತಿದ್ದೆ. ನಾನು ನಗುತ್ತಿದ್ದುದು ಕಾಲೇಜಿನಲ್ಲಿ ಗೆಳತಿಯರ ಸಂಗಡ ಮಾತ್ರವೇ. ಒಮ್ಮೆ ಚಿಕ್ಕಮ್ಮ ಆಸ್ಪತ್ರೆಯ ಪಾಲಾದ್ದರಿಂದ, ನಾನು ಅಡುಗೆ ಮಾಡಿಟ್ಟು ಕಾಲೇಜಿಗೆ ತೆರಳಬೇಕಾಗುತ್ತಿತ್ತು. ಅಂದು ಭಾನುವಾರವಾದ್ದರಿಂದ ಮನೆಯಲ್ಲೇ ಇದ್ದೆ. ಆಸ್ಪತ್ರೆಯಲ್ಲಿದ್ದ ಸಂಬಂಧಿಗಳಿಗೆ 'ಊಟ ತರುವೆ' ಎಂದು ನೆಪಹೇಳಿ ಮನೆಗೆ ಬಂದ ಚಿಕ್ಕಪ್ಪ, ವರಸೆಯಲ್ಲಿ ಮಗಳಾಗಿದ್ದ ನನ್ನ ಮೇಲೇ ಎರಗಿ ಕಾಮವಾಂಛೆ ತೀರಿಸಿಕೊಳ್ಳಲು ಹಾತೊರೆದ. 'ಗಿಡುಗ'ನ ಕ್ರೌರ್ಯ ಮತ್ತು ದೇಹಬಲಕ್ಕೆ 'ಗಿಣಿ' ಇನ್ನೇನು ಬಲಿಯಾಗುವ ದುಸ್ಥಿತಿ ಒದಗಿತ್ತು. ಅಷ್ಟರಲ್ಲಿ ಹೊರಗೆ ಕೇಳಿದ ಆ್ಯಂಬುಲೆನ್ಸ್ ಸೈರನ್, 'ದಬದಬ' ಬಾಗಿಲು ಬಡಿದ ಶಬ್ದ ನನ್ನನ್ನು ಉಳಿಸಿತು. ನನ್ನನ್ನು ಇದ್ದ ಸ್ಥಿತಿಯಲ್ಲೇ ಬಿಟ್ಟು ಚಿಕ್ಕಪ್ಪ ಮುಂಬಾಗಿಲೆಡೆಗೆ ತೆರಳಿದ. ಬಾಗಿಲು ತೆರೆದು ನೋಡಿದರೆ, ಚಿಕ್ಕಮ್ಮ ಆಸ್ಪತ್ರೆಯಿಂದ ಹೆಣವಾಗಿ ಬಂದಿದ್ದಳು! ಅವಳನ್ನು ಹಾಗೆ ತಂದಿದ್ದು ಸಂಬಂಧಿಕರು. ಅವಳಿದ್ದಾಗಲೇ ನನ್ನ ಮೇಲೆರಗಿದ್ದ ಚಿಕ್ಕಪ್ಪ, ಅವಳು ಸತ್ತ ಮೇಲೆ ಬಿಟ್ಟಾನಾ? ಎಂಬ ತಲ್ಲಣದಲ್ಲಿದ್ದೆ, ಅದೇ ನಿಜವಾಗಬೇಕೇ! ಅವಳನ್ನು ವೈಕುಂಠಕ್ಕೆ ಕಳಿಸಿ, ಬಂಧುಗಳು ಖಾಲಿಯಾದ ನಂತರ, ನಾನು ಅಡುಗೆ ಮನೆಯಲ್ಲಿರುವಾಗ ಗಿಡುಗ ಇನ್ನೊಮ್ಮೆ ಎರಗಿತು! ಅದೆಲ್ಲಿತ್ತೋ ಧೈರ್ಯ, ಈಳಿಗೆಮಣೆ ಎತ್ತಿಕೊಂಡು ಬೀಸಿಬಿಟ್ಟೆ, ಗಿಡುಗನ ಎದೆಯಲ್ಲಿ ಆಳಗೆರೆ ಮೂಡಿ ರಕ್ತ ಚಿಮ್ಮಿತು. 'ಅಮ್ಮಾ...' ಎಂದು ಚೀರುತ್ತಾ ಬಿದ್ದ. ಅಕ್ಕಪಕ್ಕದವರೆಲ್ಲಾ ಓಡಿಬಂದಾಗ, 'ಎಣ್ಣೆ ಮೇಲೆ ಕಾಲಿಟ್ಟು ಜಾರಿಬಿದ್ದು, ಈಳಿಗೆಮಣೆ ಚುಚ್ಚಿಕೊಂಡೆ' ಎಂದು ಕಥೆಕಟ್ಟಿದ, ನನ್ನನ್ನು ಕೆಂಗಣ್ಣಿಂದ ನೋಡುತ್ತಲೇ! ಮರುದಿನ ಕಾಲೇಜು ಮುಗಿಸಿಕೊಂಡು ಬರುವ ಹೊತ್ತಿಗೆ, ಊರಿಂದ ಬಂದಿದ್ದ ಅಪ್ಪ ಹಜಾರದಲ್ಲಿ ಕೂತಿದ್ದರು, ಅವರ ಕಂಗಳು ಕೆಂಡವಾಗಿದ್ದವು. ತತ್ತರಿಸಿಕೊಂಡು ಎದ್ದುಬಂದವರೇ, 'ಅಯ್ಯೋ ನಾಯಿ, ಇದಕ್ಕೇನೇ ನಿನ್ನನ್ನು ಪಟ್ಟಣಕ್ಕೆ ಕಳಿಸಿದ್ದೂ...?' ಎನ್ನುತ್ತ ನನ್ನ ಕೆನ್ನೆಗೆ ರಪರಪ ಬಾರಿಸಿದರು. ನಾನು ದಿಗ್ಭ್ರಾಂತಳಾಗಿದ್ದೆ. ಹಿಂದಿನಿಂದ ಬಂದ ಚಿಕ್ಕಪ್ಪ, 'ಖರ್ಚಿಗೆ ದುಡ್ಡು ಬೇಕು ಅಂದಿದ್ರೆ, ನಾನು ಕೊಡ್ತಾ ಇರಲಿಲ್ಲವೇನಣ್ಣಾ? ಇಲ್ನೋಡು, ಹೆಂಡತಿಯ ವೈಕುಂಠ ಸಮಾರಾಧನೆ ಖರ್ಚಿಗೆಂದು ಒಟ್ಟುಮಾಡಿದ್ದ ದುಡ್ಡಲ್ಲಿ 10,000 ರೂಪಾಯಿ ಎಗರಿಸಿಬಿಟ್ಟಿದ್ದಾಳೆ...' ಎಂದು ದೂರಿ, ನನ್ನ ವ್ಯಾನಿಟಿ ಬ್ಯಾಗ್ ತೋರಿಸಿದ. ಅದರಲ್ಲಿ ನೋಟಿನ ಕಂತೆ ಕುಣಿಯುತ್ತಿತ್ತು! ನನ್ನ ಮೇಲಿನ ಆತನ ಆಕ್ರಮಣ, ಅದಕ್ಕೆ ದಕ್ಕಿದ 'ಈಳಿಗೆಮಣೆ ಸೇವೆ'ಯ ಘಟನೆಗೆ ಆತ ಹಚ್ಚಿದ್ದ ತೇಪೆಯಾಗಿತ್ತು ಅದು! ಅಪ್ಪನ ಕಣ್ಣಲ್ಲಿ ನಾನು ಮಾಲುಸಮೇತ ಸಿಕ್ಕಿಕೊಂಡ ಕಳ್ಳಿ. 'ನೀನು ಓದಿ ಕಡಿದು ಕಟ್ಟೆಹಾಕಿದ್ದು ಸಾಕು, ನಡೀ ಹಳ್ಳಿಗೆ' ಎಂದು ಅಬ್ಬರಿಸಿ ದರದರನೆ ಎಳೆದೊಯ್ದರು ಅಪ್ಪ. ಅವರಿಗೆ ಏನನ್ನೂ ಹೇಳಲು ಅಶಕ್ಯಳಾಗಿದ್ದೆ. ನನ್ನದೇನೂ ತಪ್ಪಿಲ್ಲದಿದ್ದರೂ, ವೃಥಾ ಅಪವಾದ ಹೊರಬೇಕಾಗಿ ಬಂದಿದ್ದರೂ, 'ಮೊದಲು ಈ ನರಕದಿಂದ ತೊಲಗಿದರೆ ಸಾಕು' ಎಂಬ ಎಣಿಕೆಯಲ್ಲಿ ಅಪ್ಪನೊಂದಿಗೆ ಹಳ್ಳಿಗೆ ಮರಳಿದೆ. ಅದೇನು ಗ್ರಹಚಾರವೋ, ಕೆಲ ದಿನಗಳಲ್ಲೇ ಅಪ್ಪ ಸತ್ತರು. ತತ್ಸಂಬಂಧಿತ ಕಾರ್ಯಗಳನ್ನೆಲ್ಲಾ ಮುಗಿಸಿದ ನಂತರ ನನ್ನೆದುರು ದೊಡ್ಡ ಶೂನ್ಯ. 'ಮುಂದೇನು?' ಎಂಬ ಗೊಂದಲ, ಗಾಢಾಂಧಕಾರ. ಹಾಗಂತ ಎಷ್ಟು ದಿನ ಕೂರಲಾದೀತು? ಯಾರದ್ದೋ ಉಸಿರಾಟ ನಿಂತ ಮಾತ್ರಕ್ಕೆ ನಮ್ಮ ಬದುಕು ನಿಲ್ಲುವುದಿಲ್ಲವಲ್ಲಾ! ಪಕ್ಕದೂರಿನ ಒಂದು ಗಾರ್ಮೆಂಟ್ ಫ್ಯಾಕ್ಟರಿಗೆ ಕೆಲಸಕ್ಕೆ ಸೇರಿಕೊಂಡೆ. ಆ ಕೆಲಸಕ್ಕೆ ಮತ್ತು ಅದನ್ನು ನಿರ್ವಹಿಸುವ ನನ್ನ ವಾರಗೆಯವರಿಗೆ ಕೊಡಲಾಗುವ ಸಂಬಳಕ್ಕಿಂತ ಹೆಚ್ಚು ಮೊತ್ತವೇ ನನಗೆ ನಿಗದಿಯಾದಾಗ, 'ಅಬ್ಬಾ ದೇವರೇ, ಅಂತೂ ಕಣ್ಣು ಬಿಟ್ಯಲ್ಲಾ!' ಎಂದು ಮನದಲ್ಲೇ ನಮಿಸಿದೆ. ತಿಂಗಳ ಸಂಬಳದ ದಿನ ಬಂತು. ಅದನ್ನು ಪಡೆದವರು ಸಂಜೆ ಒಬ್ಬೊಬ್ಬರಾಗೇ ಮನೆಗೆ ತೆರಳಿದರು. ಕೊನೆಯಲ್ಲಿ ನನಗೆ ಬಾಸ್‌ನಿಂದ ಕರೆಬಂತು- ಮೊದಲ ಸಂಬಳ ತೆಗೆದುಕೊಳ್ಳಲು. ಬಾಸ್‌ನ ಕ್ಯಾಬಿನ್‌ಗೆ ತೆರಳಿದರೆ, ಕುರ್ಚಿಯಲ್ಲಿರುವ ಬದಲು ಪಕ್ಕದ ಸೋಫಾ ಮೇಲೆ ಕಾಲುಚಾಚಿ ಮಲಗಿದ್ದರು. ಬಂದು ಸೋಫಾದಲ್ಲಿ ಕೂರುವಂತೆ ಸನ್ನೆಮಾಡಿದರು. 'ಪರವಾಗಿಲ್ಲ, ಇಲ್ಲೇ ಇರ್ತೀನಿ, ಅಲ್ಲಿಂದಲೇ ಹೇಳಿ ಸರ್' ಎಂದೆ. ಸಿಗರೇಟು ಹಚ್ಚಿ ಒಮ್ಮೆ ಹೊಗೆಬಿಟ್ಟು ಸಂಬಳ ಎಣಿಸಿಕೊಟ್ಟ ಅವರು, 'ನಿನ್ನ ವಾರಗೆಯವರಿಗೆ ಕೊಡುತ್ತಿರೋದಕ್ಕಿಂತ 5 ಸಾವಿರ ಹೆಚ್ಚು ಸಂಬಳ ನಿನಗೆ ಫಿಕ್ಸ್ ಮಾಡಿದ್ದೇಕೆ ಗೊತ್ತೇ? ಅದು ನಿನ್ನ ಕೆಲಸಕ್ಕಲ್ಲ, ನಿನ್ನ ಸೌಂದರ್ಯಕ್ಕೆ, ಯೌವನಕ್ಕೆ...' ಎಂದು ಪೀಠಿಕೆ ಹಾಕಿದರು ಬಾಸ್ ಎಂಬ 'ಅನ್ನದಾತ'! ಅಷ್ಟುಹೊತ್ತಿಗಾಗಲೇ ಚಿಕ್ಕಪ್ಪ ಎಂಬ ಗಿಡುಗನ 'ದೇಹಭಾಷೆ' ಅರಿತಿದ್ದ ನನಗೆ ಈ 'ಅನ್ನದಾತನ ಆಡುಭಾಷೆ'ಯನ್ನು ಡಿಕೋಡ್ ಮಾಡುವುದು ಕಷ್ಟವೇನಾಗಲಿಲ್ಲ. ಎಡಗಾಲಿನ ಚಪ್ಪಲಿ ಬಿಚ್ಚಿ, ಬಾಸ್ ಎಂಬ ಮುಖ-ಮೂತಿ ನೋಡದೆ ರೊಯ್ಯನೆ ತೂರಿ, ಅಲ್ಲಿಂದ ಹೊರಟೆ. ನಡೆದೆ... ನಡೆದೆ... ನಡೆಯುತ್ತಲೇ ಇದ್ದೆ. 'ಪೋಂ... ಪೋಂ..' ಎಂಬ ಸದ್ದು ಕೇಳಿದಾಗಲೇ ನನಗೆ ಗೊತ್ತಾಗಿದ್ದು ರೈಲುನಿಲ್ದಾಣಕ್ಕೆ ಬಂದಿರುವೆ ಅಂತ. ಅಯೋಧ್ಯೆಯಲ್ಲಿ ಶ್ರೀರಾಮನ ಪ್ರಾಣಪ್ರತಿಷ್ಠೆ ಸಮಾರಂಭದ ನಿಮಿತ್ತ ಆಯೋಜಿಸಲಾಗಿದ್ದ ವಿಶೇಷ ರೈಲು ನಿಂತಿತ್ತು. ಜ್ಞಾನದ ಹಸಿವು ಮತ್ತು ಹೊಟ್ಟೆಯ ಹಸಿವು ನೀಗುವ ಹವಣಿಕೆಯಲ್ಲಿ 'ಮರ್ಯಾದೆಗೇಡಿ ರಾವಣ'ರನ್ನು ನೋಡಿದ್ದಾಯ್ತು, ಈಗ 'ಮರ್ಯಾದಾ ಪುರುಷೋತ್ತಮ ರಾಮ'ನನ್ನಾದರೂ ದರ್ಶಿಸಿ ಧನ್ಯಳಾಗೋಣ ಎಂದುಕೊಂಡು ರೈಲು ಹತ್ತಿ ಅಯೋಧ್ಯೆ ಸೇರಿ ರಾಮನನ್ನು ಕಣ್ತುಂಬಿಕೊಂಡೆ. ನಂತರ ಮುಂದೇನು ಮಾಡೋದು ಅಂತ ತೋಚದೆ ಸರಯೂ ನದಿಯ ಬಳಿಗೆ ಬಂದೆ. ಆ ನದಿಯಲ್ಲೇ ಜಲಸಮಾಧಿಯಾಗುವ ಮೂಲಕ ಶ್ರೀರಾಮನ 'ಅವತಾರ ಸಮಾಪ್ತಿ'ಯಾಯಿತಂತೆ, ಸೀತೆಗಂತೂ ಅವಳಿಗೆ ಜನ್ಮವಿತ್ತಿದ್ದ ಭೂಮಿಯೇ ಬಾಯ್ತೆರೆದು ಒಳಕರೆದುಕೊಂಡಿತಂತೆ. ಈ 'ಜಾನಕಿ' ಕಾಲವಾಗುವುದಕ್ಕೂ ಇದೇ ಸಕಾಲವಿರಬಹುದು ಅಂದುಕೊಂಡು ಮೊಬೈಲನ್ನು ಇನ್ನೇನು ದಡಕ್ಕೆ ಎಸೆಯುವವಳಿದ್ದೆ. 'ಟಿಂಗ್' ಎಂದು ಅದು ಸದ್ದುಮಾಡಿತು. ನೋಡಿದರೆ ನಿನ್ನ ವಾಟ್ಸಾಪ್....!"



ಗೆಳೆಯ ರಘುರಾಮಾ, 'ಸೀತೆಯ ಸಂಕಷ್ಟಗಳು' ಪ್ರಬಂಧ ಕಳಿಸುವಂತೆ ನೀನು ಕೇಳಿದ್ದೆ, ಆದರೆ ನಾನೀಗ ಹಂಚಿಕೊಂಡಿರೋದು ಈ 'ಜಾನಕಿ'ಯ ಸಂಕಷ್ಟಗಳನ್ನು! ಇಷ್ಟೂ ವರ್ಷ ಯಾರಲ್ಲೂ ಹೇಳಿಕೊಳ್ಳದಿದ್ದ ಅಳಲು ಇದು. 'ಹೆಣ್ಣಿನ ಸಂಕಷ್ಟದ ಆದಿ ಮತ್ತು ಅಂತ್ಯ ಯಾವಾಗ?' ಅಂತ ಕೇಳಿದ್ದಕ್ಕೆ, 'ಋತುಮತಿಯಾಗುವುದರಿಂದ ಹಿಡಿದು ಋಷಿ ಪಂಚಮಿಯವರೆಗೆ' ಅಂತ ಅದ್ಯಾರೋ ಉತ್ತರಿಸಿದ್ರಂತೆ! ಅದೆಂಥಾ 'ನಿಷ್ಠುರ ಉತ್ತರ' ಎಂಬುದೀಗ ಅರಿವಾಗಿದೆ. ಶಾಲೆಯಲ್ಲಿರುವಷ್ಟು ದಿನವೂ, ಮನೆಯಿಂದ ತಂದ ಊಟವನ್ನು ನನ್ನೊಂದಿಗೆ ಹಂಚಿಕೊಂಡ ಆಪ್ತಮಿತ್ರನಾದ ನಿನ್ನಲ್ಲಿ ನನ್ನ ಸಂಕಷ್ಟ ಹಂಚಿಕೊಳ್ಳಬೇಕೆನ್ನಿಸಿತು.... ತಪ್ಪು ತಿಳೀಬೇಡ.

ಸದ್ಯಕ್ಕೆ ಅಯೋಧ್ಯೆಯಲ್ಲಿರುವೆ, ನೆಟ್‌ವರ್ಕ್ ಸಮಸ್ಯೆ. ಹೀಗಾಗಿ ಮಾತಿಲ್ಲ, ಬರೀ ಕಥೆ! ಊರಿಗೆ ಮರಳಿದ ಮೇಲೆ ಫೋನ್ ಮಾಡುವೆ, ಪ್ರಬಂಧವನ್ನೂ ಸ್ಕ್ಯಾನ್ ಮಾಡಿ ವಾಟ್ಸಾಪ್ ಮಾಡುವೆ...

• • •

ನಲ್ಮೆಯ ಗೆಳತಿ,

'ಜಾನಕಿಯ ಸಂಕಷ್ಟ' ಕರುಳು ಕತ್ತರಿಸುವಂತಿದೆ. ಅಂದಹಾಗೆ, ನೀನಂದುಕೊಂಡಂತೆ ನಾನು ಮದುವೆಯಾಗಿಲ್ಲ, 'ಲವ-ಕುಶ'ರು ನಾನು ಅನಾಥಾಶ್ರಮದಿಂದ ಕರೆತಂದ ಮಕ್ಕಳು. ಅಪ್ಪ ಅನ್ನೋನು ಸಿಕ್ಕಿದ್ದರೂ ಅಮ್ಮನ ವಾತ್ಸಲ್ಯದಿಂದ ಅವು ವಂಚಿತ. 'ಲವ-ಕುಶ'ರಿಗೆ 'ಜಾನಕಿ'ಯಮ್ಮನ ವಾತ್ಸಲ್ಯದ ಧಾರೆ ಸಿಗಬಹುದೇ? ಯೋಚಿಸಿನೋಡು. ಹಾಗಾದಲ್ಲಿ, ಈ ರಘು'ರಾಮ'ನ ಬಾಳೂ ಬೆಳಗುತ್ತದೆ. ಇದಕ್ಕೆ ನಿನಗೊಪ್ಪಿಗೆಯಿದ್ದರೆ, 'ಸೀತೆಯ ಸಂಕಷ್ಟಗಳು' ಪ್ರಬಂಧವನ್ನು ನೀನು ವಾಟ್ಸಾಪ್ ಮಾಡೋದು ಬೇಡ; ನಿನ್ನನ್ನು ನಮ್ಮ ಮನೆ ತುಂಬಿಸಿಕೊಳ್ಳುವಾಗ ಅದರ 'ಹಸ್ತಪ್ರತಿ' ಕೊಟ್ಟರೂ ಸಾಕು...

ಇಂತು, 'ಜಾನಕಿ'ಯ ನಿರೀಕ್ಷೆಯಲ್ಲಿರುವ,
ರಘು'ರಾಮ'.

ಆಫೀಸಿಗೆ ರಜಾ ಹಾಕಿದವ- ಕೆಲಸಕ್ಕೆ ಬರದೇ ಇರೋನು

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಬೆಂಗಳೂರು ಇಂಟರ್ ನ್ಯಾಷನಲ್ ಫಿಲ್ಮ್ ಫೆಸ್ಟಿವಲ್ ಮತ್ತೆ ಶುರುವಾಗಲಿದೆ. ಹಾಗೆ ನೋಡಿದ್ರೆ, ಈ ಫಿಲ್ಮ್ ಫೆಸ್ಟಿವಲ್‌ಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಂಥ ಮನ್ನಣೆ ಏನೂ ಇಲ್ಲ ಅನ್ನೋದು ಅದನ್ನು ಹತ್ತಿರದಿಂದ ನೋಡಿದ ವರಿಗೆ ಮಾತ್ರ ಅಲ್ಲ, ದೂರದಿಂದ ಬಂದ ವಿದೇಶಿಗರಿಗೂ ಗೊತ್ತು. ನಮ್ಮ ಕನ್ನಡ ಚಿತ್ರರಂಗದಿಂದ ಈ ಫಿಲ್ಮ್ ಫೆಸ್ಟಿವಲ್‌ಗೆ ಒಂದಷ್ಟು ಸಿನಿಮಾಗಳನ್ನು ಸೆಲೆಕ್ಟ್ ಮಾಡ್ತಾರೆ. ಅವುಗಳ ಗುಣಮಟ್ಟ ನೋಡಿಯೇ, 'ಇಲ್ಲೇ ಇಂಥ ಸಿನಿಮಾಗಳನ್ನ ಆಯ್ಕೆ ಮಾಡ್ತಾರೆ ಅಂದ್ರೆ, ಇನ್ನು ಫಾರಿನ್ ಭಾಷೆಯ ಇನ್ನೆಷ್ಟು ಒಳ್ಳೆಯ ಸಿನಿಮಾಗಳನ್ನ ತೋರಿಸ್ತಾರೆ ಇವರು?' ಅನ್ನೋ ಅಸಡ್ಡೆ ನಮ್ಮವರಿಗೆ ಇದ್ದೇ ಇದೆ. ಈ ಬಾರಿ ಕೂಡ ಅಂಥ ಕೆಲಸಕ್ಕೆ ಬಾರದ ಮಾಮೂಲಿ ಕನ್ನಡ ಚಿತ್ರಗಳು ಅಂತಾ ರಾಷ್ಟ್ರೀಯ ವೇದಿಕೆಯಲ್ಲಿ ತಮ್ಮ ಯೋಗ್ಯತೆ ತೋರಿಸಲು ಸಿದ್ಧವಾಗಿರುವ ಎಲ್ಲ ಸಾಧ್ಯತೆಗಳೂ ಇವೆ ಅನ್ನೋದು ವಿಪರ್ಯಾಸ, ಇನ್ನು ಈ ಫಿಲ್ಮ್ ಫೆಸ್ಟಿವಲ್‌ನಲ್ಲಿ ಸಿನಿಮಾಗಿಂತ ರಾಜಕೀಯನೇ ಜಾಸ್ತಿ. ಹಾಗಂತ ಪೊಲಿಟಿಕಲ್ ಸಿನಿಮಾ ಹಾಕ್ತಾರೆ ಅಂದ್ಕೊಬೇಡಿ. ನಮ್ಮ ಸಿನಿಮಾ ಮಂದಿಯ ರಾಜಕಾರಣ ಜಾಸ್ತಿ ಅಂತ ಅದರ ಅರ್ಥ. ಹಿಂದೊಮ್ಮೆ, ನಮ್ಮ ಹಿರಿಯ ನಿರ್ದೇಶಕ ರಾಜೇಂದ್ರಸಿಂಗ್ ಬಾಬು, 'ಅಯ್ಯೋ, ಈ ಫಿಲ್ಮ್ ಫೆಸ್ಟಿವಲ್ ಯಾಕ್ರೀ ಮಾಡ್ತಾರೆ, ಇವತ್ತು ಜಾಗತಿಕ ಸಿನಿಮಾ ಗಳೆಲ್ಲ ಆನ್‌ಲೈನ್‌ನಲ್ಲಿ, ಡಿವಿಡಿಯಲ್ಲಿ ಲಭ್ಯವಿವೆ. ಅಲ್ಯಾಕೆ ಹೋಗಿ ನೋಡಬೇಕು' ಅಂತ ಕಾಲೆಳೆದಿದ್ದರು. ಆದರೆ ನಂತರ ಅದೇ ಸಿಂಗ್ ಬಾಬು ತಾವೇ ಅಕಾಡೆಮಿ ಅಧ್ಯಕ್ಷರಾಗಿ ತಮ್ಮ ಆಳ್ವಿಕೆಯಲ್ಲೂ ಇದೇ ಫಿಲ್ಮ್ ಫೆಸ್ಟಿವಲ್ ಆಯೋಜಿಸಿ ಅದೇ ಕೆಲಸ ಮಾಡಿದ್ದರು. ಒಟ್ಟಿನಲ್ಲಿ ಬೆಂಗಳೂರು ಫಿಲ್ಮ್ ಫೆಸ್ಟಿವಲ್‌ನ ಗುಣಮಟ್ಟ ಹೆಚ್ಚಾಗಲಿ, ಬ್ರಿಗೇಡ್ ರೋಡಲ್ಲಿ ಓಡಾಡೋ ಫಾರಿನರ್ಸ್‌ನ ತೋರಿಸಿ, 'ಇವರೆಲ್ಲ ನಮ್ಮ ಇಂಟರ್‌ನ್ಯಾಷನಲ್ ಫಿಲ್ಮ್ ಫೆಸ್ಟಿವಲ್‌ಗೆ ಬಂದೋರು' ಅಂತ ಸುಳ್ಳು ಹೇಳ್ಕೊಂಡ್ ತಿರುಗೋ ಪರಿಸ್ಥಿತಿ ಬಾರದೇ ಇರಲಿ ಅನ್ನೋದು ಸಿನಿಪ್ರೇಮಿಗಳ ಆಶಯ.

ಲೂಸ್ ಟಾಕ್

ಎಲ್ ಆ್ಯಂಡ್ ಟಿ ಉದ್ಯೋಗಿ

- **ಏನ್ ಸರ್, ನಾರಾಯಣಮೂರ್ತಿ ಸರದಿ ಆಯ್ತು ಈಗ ನಿಮ್ಮೋರು 'ಉದ್ಯೋಗಿಗಳು ವಾರಕ್ಕೆ 90 ಗಂಟೆ ಕೆಲಸ ಮಾಡಬೇಕು' ಅಂತ ಕರೆ ಕೊಟ್ಟಿದ್ದಾರಲ್ಲ?**
- ಹೌದೌದು, ನಾವು ಜಾಸ್ತಿ ಕೆಲಸ ಮಾಡಿದ್ರೆ ಇವ್ರು ಇನ್ನೊಂದಷ್ಟು ಹೊಸ ಕಾರುಗಳನ್ನ ತಗೊಂಡು, ಮನೆಗಳನ್ನ ಕಟ್ಟಿಸಿಕೊಂಡು ಬ್ಯಾಂಕ್ ಬ್ಯಾಲೆನ್ಸ್ ಜಾಸ್ತಿ ಮಾಡಿಕೊಳ್ಳಬಹುದಲ್ಲ ಅದಕ್ಕೇ..
- **ಈ ಬಿಟ್ಟಿ ಉಪದೇಶದ ಹಿಂದಿನ ಉದ್ದೇಶ ಏನಿರಬಹುದು?**
- ಅದು ಅವ್ರಿಗೇ ಗೊತ್ತು. ಆದ್ರೆ, ಈಗ್ಲೇ ಸಿಕ್ಕಾಪಟ್ಟೆ ಕಷ್ಟದಲ್ಲಿ 'ನಾಮ್ -ಕೇ-ವಾಸ್ತೇ' ಬದುಕ್ತಾ ಇರೋ ಮಿಡ್ಲ್‌ಕ್ಲಾಸ್ ಜನ ನಾವು, ಇವ್ರ್ ನೋಡಿದ್ರೆ ನಮ್ಮನ್ನ 'ಕಾಮ್ -ಕೇ-ವಾಸ್ತೇ' ಬದುಕಿ ಅಂತ ಹೇಳ್ತಿದ್ದಾರೆ.
- **ಕೆಲಸವೇ ಕೈಲಾಸ ಅನ್ನೋ ಹೇಳಿಕೆ ಬಗ್ಗೆ ನಿಮ್ಮ ಅಭಿಪ್ರಾಯ ಏನು?**
- ಕೆಲಸಕ್ಕೆ ಬಾರದೇ ಇರೋರು ಹೇಳೋ ಕೆಲಸಕ್ಕೆ ಬಾರದ ವಿಷಯಕ್ಕೆ ಜಾಸ್ತಿ ಪ್ರಾಮುಖ್ಯ ಕೊಡಬೇಕಾಗಿಲ್ಲ.
- **ಹಾಗಾದ್ರೆ ನೀವು ಅವರ ಮಾತು ಕೇಳಲ್ವಾ? ಯಾವುದಕ್ಕೂ ಒಂದಷ್ಟು ದಿನ ರಜಾ ಹಾಕಿಬಿಡಿ**
- ಹಂಗೆ ಮಾಡಿದರೆ ನನ್ನನ್ನ 'ಕೆಲಸಕ್ಕೆ ಬರದೇ ಇರೋನು' ಅಂತ ಹೇಳಿ ಕೆಲಸದಿಂದ ತೆಗೆದುಬಿಡ್ತಾರೆ ಅಷ್ಟೇ.
- **ಮನೇಲಿ ಹೆಂಡ್ತಿ ಮುಖ ಎಷ್ಟೊಂತ ನೋಡ್ತೀರಾ, ಆಫೀಸಿಗೆ ಬನ್ನಿ ಅಂದಿದ್ದರ ಬಗ್ಗೆ ನಿಮ್ಮ ಅನಿಸಿಕೆ?**
- ಅವರ ಹೆಂಡ್ತಿ ಮುಖ ನೋಡೋಕೆ ಚೆನ್ನಾಗಿಲ್ಲ ಅಂದ್ರೆ ನಾವೇನ್ ಮಾಡೋಕಾಗುತ್ತೆ. ಅದನ್ನ ಅವರು ಮದುವೆ ಆಗೋ ಟೈಮಲ್ಲಿ ಯೋಚನೆ ಮಾಡಬೇಕಾಗಿತ್ತು.

ನೆಟ್ ಪಿಕ್ಸ್

ಖೇಮುಗೆ ವಿಮಾನದಲ್ಲಿ ಪ್ರಯಾಣ ಮಾಡಲೇಬೇಕಾದ ಅನಿವಾರ್ಯತೆ ಎದುರಾಗಿತ್ತು. ಹಾಗಾಗಿ ಖೇಮು ತನ್ನ ಮೊದಲ ವಿಮಾನ ಪ್ರಯಾಣಕ್ಕೆ ಸಿದ್ಧನಾದ. ಮನೆಯಲ್ಲಿ ಹೆಂಡತಿ ಅವನಿಗೆ ಸಾಕಷ್ಟು ಧೈರ್ಯ ತುಂಬಿ ಕಳಿಸಿದಳು. 'ಚಿಕ್ಕಮಕ್ಕಳೆಲ್ಲಾ ಹೋಗ್ತಾರೆ, ನೀವ್ಯಾಕ್ರೀ ಹೆದರ್ತೀರಾ?' ಅಂತ ಗಂಡನಿಗೆ ಬುದ್ಧಿ ಹೇಳಿದಳು. ಸರಿ ಖೇಮು ಪ್ರಯಾಣದ ದಿನ ಧೈರ್ಯ ಮಾಡಿ ವಿಮಾನ ನಿಲ್ದಾಣಕ್ಕೆ ತೆರಳಿ, ಬೋರ್ಡಿಂಗ್ ಪಾಸ್ ತಗೊಂಡು ಹೋಗಿ ತನ್ನ ಸೀಟಿನಲ್ಲಿ ಕೂತು ಬೆಲ್ಟ್ ಹಾಕಿಕೊಂಡು ದೇವರನ್ನು ಸ್ಮರಿಸುತ್ತಾ ಕುಳಿತ. ಪ್ರಯಾಣ ಶುರುವಾಯಿತು. ಪೈಲಟ್ ಪ್ಲೇನ್ ಚಾಲೂ ಮಾಡಿದ. 'ನಾವು ಈಗ ಟೇಕಾಫ್ ಆಗುತ್ತಿದ್ದೇವೆ' ಅಂತ ಅನೌನ್ಸ್‌ಮೆಂಟ್ ಆಯ್ತು. ಪ್ರಯಾಣ ಮುಗಿತಾ ಬಂತು. ಖೇಮು, ಅಯ್ಯೋ ಇಷ್ಟಕ್ಕೆಲ್ಲಾ ಎಷ್ಟೊಂದು ಹೆದರಿಕೊಂಡಿದ್ದೆ ಎಂದುಕೊಂಡು ತನ್ನಷ್ಟಕ್ಕೇ ತಾನೇ ನಗುತ್ತಿದ್ದ. ಅಷ್ಟರಲ್ಲಿ ಪೈಲಟ್ ಕಡೆಯಿಂದ ಅನೌನ್ಸ್‌ಮೆಂಟ್ ಬಂತು- 'ಈಗ ನಾವು ಲ್ಯಾಂಡ್ ಆಗ್ತಾ ಇದ್ದೀವಿ. ರಿಲ್ಯಾಕ್ಸ್..' ಎನ್ನುತ್ತಿದ್ದಂತೆ, ಅದರ ಜತೆಯಲ್ಲೇ ಪೈಲಟ್, 'ಓ ಮೈ ಗಾಡ್, ಓ ಮೈ ಗಾಡ್' ಅಂತ ಕೂಗಿದ್ದು ಕೇಳಿಸಿತು. ಪ್ಲೇನ್‌ನಲ್ಲಿ ಇದ್ದವರೆಲ್ಲಾ ಗಾಬರಿಯಾದರು. ಆದರೆ ಸ್ವಲ್ಪ ಹೊತ್ತಿನಲ್ಲಿ ಪ್ಲೇನ್ ಸೇಫ್ ಆಗಿ ಲ್ಯಾಂಡ್ ಆಯ್ತು. ಕಾಕ್‌ಪಿಟ್‌ನಿಂದ ಹೊರಬಂದ ಪೈಲಟ್, 'ನಿಮ್ಮನ್ನೆಲ್ಲಾ ಹೆದರಿಸಿದ್ದಕ್ಕೆ ಸಾರಿ, ಅದೇನಾಯ್ತು ಅಂದ್ರೆ ಏರ್ ಹೋಸ್ಟೆಸ್ ನನ್ನ ಪ್ಯಾಂಟ್ ಮೇಲೆ ಕಾಫಿ ಚೆಲ್ಲಿಬಿಟ್ಟಳು. ಅದಕ್ಕೆ ಕೂಗಿಕೊಂಡೆ, ನನ್ನ ಪ್ಯಾಂಟ್‌ನ ಮುಂಭಾಗ ನೋಡಬೇಕಿತ್ತು ನೀವು' ಅಂದ. ಅದಕ್ಕೆ ಖೇಮು ಹೇಳಿದ 'ಅದೇನ್ ಮಹಾ, ನಿಮ್ಮ ಅನೌನ್ಸ್‌ಮೆಂಟ್ ಬಂದಕೂಡ್ಲೇ, ನೀವು ನನ್ನ ಪ್ಯಾಂಟ್‌ನ ಹಿಂಭಾಗ ನೋಡಬೇಕಿತ್ತು'.

ಲೈನ್ ಮ್ಯಾನ್

- **ತುಂಬಾ ಕುಡಿಯೋ ಚಟ ಇರೋ ವ್ಯಕ್ತಿ**
- 'Spirit'ual man
- **ಡೈಲಾಗ್‌ನ ಎಳೆದೂ ಎಳೆದೂ ಹೇಳೋ ವಿಲನ್**
- 'ರಬ್ಬರ್' ಸಿಂಗ್
- **ಕತ್ತಲಲ್ಲಿ ಮಾಡೋ ಮೋಸ**
- ಇರುಳು ಮರುಳು
- **ಆಶ್ಚರ್ಯ ಮತ್ತು ಅಸಹ್ಯಗಳ ನಡುವಿನ ವ್ಯತ್ಯಾಸ**
- ಒಂದು ಮೂಗಿನ ಮೇಲೆ ಬೆರಳಿಟ್ಟುಕೊಳ್ಳೋದು, ಇನ್ನೊಂದು ಮೂಗಿನ ಒಳಗೆ ಬೆರಳಿಟ್ಟುಕೊಳ್ಳೋದು.
- **ವಿಪರ್ಯಾಸ**
- ರಸ್ತೆಯಲ್ಲಿ ಗಾಡಿ ಟಚ್ ಆಯ್ತು ಅಂದ್ರೆ ಓವರ್ ಎಮೋಷನಲ್ ಆಗಿ ರಿಯಾಕ್ಟ್ ಮಾಡ್ತೀವಿ. ಬದುಕಿನ ಪಥದಲ್ಲಿ ಹೃದಯಕ್ಕೆ ಟಚ್ ಆಗಬೇಕಾದ ವಿಷಯಗಳಲ್ಲಿ ಮಾತ್ರ ನಿರ್ಭಾವುಕವಾಗಿ ಇದ್ದುಬಿಡ್ತೀವಿ
- **ಹೊಸ ವರ್ಷ ಬಂತು ಅಂತ ಮನೆ ತುಂಬಾ ಎಲ್ಲಾ ಕಡೆ ಕ್ಯಾಲೆಂಡರ್ಸ್ ತಗಲಾಕೋದು**
- 'ತಗಲಾಕ್' ದರ್ಬಾರ್
- **ಕಲಿಯುಗ ಅಂದ್ರೆ ಯಾವುದು?**
- ಜನ ಪ್ರೀತಿ ವಾಪಸ್ ಕೊಟ್ಟಷ್ಟೇ ನಿಯತ್ತಾಗಿ ಸಾಲನೂ ವಾಪಸ್ ಕೊಡೋ ಕಾಲ
- **ಶಾಲಾ ಕಾಲೇಜು ದಿನಗಳನ್ನು ಏನೆನ್ನಬಹುದು?**
- 'ಕಲಿ'ಯುಗ
- **ಭಯಾನಕವಾಗಿ ಗೊರಕೆ ಹೊಡೆಯುವವನು**
- 'ಖರ್ರಾಟೆ' ಕಿಂಗ್
- **ಎಂಬಿಎ ಮಾಡಿದವರು ಬುಕ್ ಮಾಡೋ ಫ್ಲೈಟ್ ಟಿಕೆಟ್**
- 'ಬ್ಯುಸಿನೆಸ್' ಕ್ಲಾಸ್

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 248

ಸಮಾಚಾರ ಸಣ್ಣದಲ್ಲ

ಕಾಲೇಜಿಗೆ ಗೈರು: ಜೆಇಇ ಅಡ್ವಾನ್ಸ್‌ಗೆ ಅವಕಾಶ

ದೆಹಲಿ: 2024ರ ನ.5ರಿಂದ ನ.18ರ ನಡುವೆ ಕಾಲೇಜುಗಳಿಂದ ಹೊರಗುಳಿದವರಿಗೂ ಜೆಇಇ ಅಡ್ವಾನ್ಸ್ಡ್ ಪರೀಕ್ಷೆಗೆ ಹಾಜರಾಗುವುದಕ್ಕೆ ಸುಪ್ರೀಂ ಕೋರ್ಟ್ ಅನುಮತಿ ನೀಡಿ ಆದೇಶ ಹೊರಡಿಸಿದೆ.

2023 ಹಾಗೂ 2024 ಮತ್ತು 2025ರಲ್ಲಿ ಕಾಲೇಜು ಶಿಕ್ಷಣ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಜೆಇಇ ಅಡ್ವಾನ್ಸ್ಡ್ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ ಎಂದು ಜಂಟಿ ಪ್ರವೇಶಾತಿ ಮಂಡಳಿ(ಜೆಎಬಿ) ನ.5ರಂದು ಘೋಷಿಸಿತ್ತು. ಬಳಿಕ 13 ದಿನಗಳ ನಂತರ ಪರೀಕ್ಷೆಗೆ ಹಾಜರಾಗುವವರ ಅರ್ಹತೆಯನ್ನು ಪರಿಷ್ಕರಿಸಿತು. 2024 ಮತ್ತು 2025ರ ಬ್ಯಾಚ್‌ನವರಿಗೆ ಮಾತ್ರವೇ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಎಂದಿತು. ಇದರಿಂದ 2023ರ ತಂಡದ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅರ್ಹತೆ ಸಿಕ್ಕಿರಲಿಲ್ಲ. ಈ ನಿರ್ಧಾರ ಪ್ರಶ್ನಿಸಿ ಪರೀಕ್ಷಾರ್ಥಿಗಳು ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು. ಕಡೆಗೆ ಅವರಿಗೂ ಜೆಇಇಗೆ ಅವಕಾಶವಿದೆ ಎಂದು ಹೇಳಿ ಕೋರ್ಟ್ ಆದೇಶ ನೀಡಿದೆ.

ಎಐನಿಂದ ಬ್ಯಾಂಕಿಂಗ್ 2 ಲಕ್ಷದಷ್ಟು ನೌಕರಿ ಕಡಿತ!

ನ್ಯೂಯಾರ್ಕ್: ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೃತಕ ಬುದ್ಧಿಮತ್ತೆ(ಎಐ) ಬಳಸಲಾಗುತ್ತಿರುವುದರಿಂದ ಮುಂದಿನ 4-5 ವರ್ಷಗಳಲ್ಲಿ 2 ಲಕ್ಷಕ್ಕೂ ಅಧಿಕ ಬ್ಯಾಂಕ್ ಉದ್ಯೋಗಿಗಳು ಕೆಲಸ ಕಳೆದುಕೊಳ್ಳಲಿದ್ದಾರೆ ಎಂದು ಬ್ಲೂಮ್‌ಬರ್ಗ್ ವರದಿ ಕಳವಳ ವ್ಯಕ್ತಪಡಿಸಿದೆ. ಪ್ರಸ್ತುತ ಬ್ಯಾಂಕ್ ಉದ್ಯೋಗಿಗಳು ಮಾಡುತ್ತಿರುವ ಕೆಲಸವನ್ನೆಲ್ಲಾ 'ಕೃತಕ ಬುದ್ಧಿಮತ್ತೆ' ಮೂಲಕವೇ ನಿರ್ವಹಿಸಲಾಗುತ್ತಿದೆ. ಈ ಕ್ರಮ ಹೀಗೆ ಮುಂದುವರಿದರೆ ಪ್ರತಿವರ್ಷ ಶೇ.3ರಷ್ಟು ಬ್ಯಾಂಕ್ ಉದ್ಯೋಗಿಗಳು ಕೆಲಸ ಕಳೆದುಕೊಳ್ಳಲಿದ್ದಾರೆ ಎಂದು ಸಮೀಕ್ಷಾ ವರದಿ ತಿಳಿಸಿದೆ. ಬ್ಯಾಂಕ್‌ಗಳ ಹಲವು ಸೇವೆಗಳಿಗೆ ಸದ್ಯ ಬಾಟ್‌ಗಳನ್ನು ನಿಯೋಜಿಸಲಾಗಿದೆ. ಮುಂದಿನ ದಿನಗಳಲ್ಲಿ ಉಳಿದ ಕೆಲಸಗಳನ್ನು ಎಐಗಳು ಮಾಡಲಿವೆ. ಹೀಗಾಗಿ ಹೆಚ್ಚಿನ ಉದ್ಯೋಗ ಕಡಿತವಾಗಬಹುದು ಎಂದು ವರದಿ ಎಚ್ಚರಿಸಿದೆ.

ನೀಲಿಚಿತ್ರ ನಟಿಗೆ ಹಣ ಕೇಸ್: ಟ್ರಂಪ್ ನಿರಾಳ

ವಾಷಿಂಗ್ಟನ್: ಕಳೆದ ಬಾರಿ ಅಧ್ಯಕ್ಷೀಯ ಚುನಾವಣೆ ವೇಳೆ ತಮ್ಮ ನಡುವಿನ ಲೈಂಗಿಕ ಸಂಬಂಧ ಕುರಿತು ಮಾತನಾಡದಂತೆ ನೀಲಿಚಿತ್ರಗಳ ನಟಿಗೆ ಹಣ ನೀಡಿದ ಪ್ರಕರಣದಲ್ಲಿ ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಿರಾಳವಾಗುವಂತಹ ಆದೇಶವನ್ನು ಮ್ಯಾನ್‌ಹಟನ್ ಕ್ರಿಮಿನಲ್ ಕೋರ್ಟ್ ಹೊರಡಿಸಿದೆ. ನ್ಯಾಯಾಧೀಶರು, ಟ್ರಂಪ್ ಬೇಷರತ್ ಬಿಡುಗಡೆ ಘೋಷಣೆ ಮಾಡಿದ್ದಾರೆ. ಅಂದರೆ ಟ್ರಂಪ್ ಜೈಲಿಗೆ ಹೋಗಬೇಕಾಗಿಲ್ಲ, ದಂಡವನ್ನೂ ಪಾವತಿಸಬೇಕಾಗಿಲ್ಲ ಎಂಬುದೇ ತೀರ್ಪಿನ ಸಾರಾಂಶವಾಗಿದೆ. ಇದರಿಂದಾಗಿ, ಜ.20ರಂದು ಟ್ರಂಪ್ ಅಮೆರಿಕ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುವುದಕ್ಕೆ ಹಾದಿ ಸುಗಮವಾದಂತಾಗಿದೆ. ಕೋರ್ಟ್ ಶಿಕ್ಷೆ ಪ್ರಕಟಿಸುವ ವೇಳೆ, ಆರೋಪಿ ಟ್ರಂಪ್ ಫ್ಲೋರಿಡಾ ಕ್ಲಬ್‌ನಿಂದಲೇ ವಿಡಿಯೋ ಕಾನ್ಫರೆನ್ಸ್ ಕೋರ್ಟ್‌ಗೆ ಹಾಜರಾಗಿದ್ದರು.

ಕುಸಿದ ರೈಲು ನಿಲ್ದಾಣ ಛಾವಣಿಯಡಿ 20 ಮಂದಿ

ಲಖನೌ: ಉತ್ತರ ಪ್ರದೇಶದ ಕನೌಜ್‌ನ ರೈಲು ನಿಲ್ದಾಣದಲ್ಲಿ ನಿರ್ಮಾಣ ಹಂತದ ಛಾವಣಿ ಶನಿವಾರ ಮಧ್ಯಾಹ್ನ 2.30ರಲ್ಲಿ ಕುಸಿದಿದ್ದು, ಅವಶೇಷಗಳಡಿ 20 ಕಾರ್ಮಿಕರು ಸಿಲುಕಿದ್ದು, ರಕ್ಷಣಾ ಕಾರ್ಯಾಚರಣೆ ನಡೆಸಲಾಗುತ್ತಿದೆ. ನಿಲ್ದಾಣದ ಸೌಂದರ್ಯೀಕರಣ ಕಾಮಗಾರಿ ನಡೆದಿದ್ದು, 35 ಕಾರ್ಮಿಕರು ಸ್ಥಳದಲ್ಲಿದ್ದರು. ಶನಿವಾರ ಸಂಜೆವರೆಗೆ 15 ಕಾರ್ಮಿಕರನ್ನು ರಕ್ಷಿಸಲಾಗಿದೆ, ಅವರಲ್ಲಿ ಇಬ್ಬರ ಸ್ಥಿತಿ ಗಂಭೀರವಾಗಿದೆ. ಗಾಯಾಳುಗಳನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಕಾಲ್ತುಳಿತ: ನಟ ಅಲ್ಲು ಅರ್ಜುನ್‌ಗೆ ರಿಲೀಫ್

ಹೈದರಾಬಾದ್: ಪುಷ್ಪ-2 ಸಿನಿಮಾ ವೀಕ್ಷಣೆ ವೇಳೆ ಕಾಲ್ತುಳಿತ ನಡೆದು ಮಹಿಳೆ ಸಾವಿಗೀಡಾಗಿ, ಆಕೆಯ ಪುತ್ರ ಗಂಭೀರವಾಗಿ ಗಾಯಗೊಂಡ ಪ್ರಕರಣದಲ್ಲಿ ಚಿತ್ರನಟ ಅಲ್ಲು ಅರ್ಜುನ್ ಆರೋಪಿಯಾಗಿದ್ದು, ಪ್ರತಿ ಭಾನುವಾರ ಪೊಲೀಸ್ ಠಾಣೆಗೆ ತೆರಳಿ ತನಿಖಾಧಿಕಾರಿ ಮುಂದೆ ಹಾಜರಾಗಬೇಕಿತ್ತು. ಸ್ಥಳೀಯ ನ್ಯಾಯಾಲಯ ಜಾಮೀನು ಷರತ್ತು ಸಡಿಲಿ ಶನಿವಾರ ಆದೇಶ ಹೊರಡಿಸಿದ್ದು, ಪೊಲೀಸ್ ಠಾಣೆಗೆ ಪ್ರತಿ ಭಾನುವಾರದ ಕಡ್ಡಾಯ ಹಾಜರಾತಿಯಿಂದ ವಿನಾಯಿತಿ ನೀಡಿದೆ. ತನಿಖಾಧಿಕಾರಿ ಕರೆದಾಗ ಚಿಕ್ಕಡಪಲ್ಲಿ ಪೊಲೀಸ್ ಠಾಣೆ ಎಸ್‌ಎಚ್‌ಒ ಮುಂದೆ ಹಾಜರಾಗುವಂತೆ ಸೂಚನೆ ನೀಡಿದೆ. ಜತೆಗೆ ವಿದೇಶ ಪ್ರಯಾಣಕ್ಕೆ ಅನುಮತಿ ನೀಡಿದೆ.

{ ದೇವೇಂದ್ರ ಫಡ್ನವೀಸ್ } ಮಹಾರಾಷ್ಟ್ರ ಸಿಎಂ

ಸಂವಿಧಾನ ಬದಲಿಸಲು, ಮೀಸಲು ರದ್ದುಗೊಳಿಸಲು ಬಿಜೆಪಿ 400 ಸ್ಥಾನ ಗೆಲ್ಲಲು ಬಯಸಿದೆ ಎಂದು ಪ್ರತಿಪಕ್ಷಗಳು 2024ರ ಲೋಕಸಭಾ ಚುನಾವಣೆ ವೇಳೆ ಸುಳ್ಳು ಹರಡಿದ್ದವು. ಅದನ್ನು ವಿಧಾನಸಭೆ ಚುನಾವಣೆ ವೇಳೆ ಆರ್‌ಎಸ್‌ಎಸ್ ಸೋಲಿಸಿದ್ದನ್ನು ಅರಿತ ನಂತರ ಎನ್‌ಸಿಪಿ(ಶರದ್ ಬಣ) ಮುಖ್ಯಸ್ಥ ಶರದ್ ಪವಾರ್ ಸಂಘವನ್ನು ಪ್ರಶಂಸಿಸಿದರು.

13 ಲಕ್ಷ ಕೋಟಿ ರು. ಆಸ್ತಿಹಾನಿ | 2 ಲಕ್ಷಕ್ಕೂ ಅಧಿಕ ಜನ ಸಂತ್ರಸ್ತ | 38 ಸಾವಿರ ಎಕರೆ ಪ್ರದೇಶ ಭಸ್ಮ | ಬೂದಿಯಾದ 12 ಸಾವಿರ ಕಟ್ಟಡ

ಆರದ ಅಮೆರಿಕ ಕಾಡ್ಗಿಚ್ಚು: ಸಾವಿನ ಸಂಖ್ಯೆ 11ಕ್ಕೆ

ಲಾಸ್‌ಏಂಜಲೀಸ್: ಅಮೆರಿಕ ಈವರೆಗೂ ಕಂಡುಕೇಳರಿಯದಂತಹ ಅಗ್ನಿ ಅವಘಡಕ್ಕೆ ತುತ್ತಾಗಿದೆ. ಲಾಸ್‌ಏಂಜಲೀಸ್ ಮತ್ತು ದಕ್ಷಿಣ ಕ್ಯಾಲಿಫೋರ್ನಿಯಾ ಭಾಗದಲ್ಲಿ ಕಳೆದ 4 ದಿನಗಳಿಂದ ಹಬ್ಬುತ್ತಲೇ ಇರುವ ಕಾಡ್ಗಿಚ್ಚು, ಈವರೆಗೆ 11 ಜೀವಗಳನ್ನು ಬಲಿತೆಗೆದುಕೊಂಡಿದೆ. ಲಾಸ್‌ಏಂಜಲೀಸ್ ರಾಜ್ಯವೊಂದರಲ್ಲೆ 12 ಸಾವಿರಕ್ಕೂ ಅಧಿಕ ಕಟ್ಟಡಗಳು ಭಸ್ಮವಾಗಿವೆ. ಹಾನಿ ಪ್ರಮಾಣ 13 ಲಕ್ಷ ಕೋಟಿ ರು. ತಲುಪಿದೆ ಎಂದ ಅಂದಾಜಿಸಲಾಗಿದೆ.



ವಿಕ್ಟರ್ ಷಾ

ಸತತ ಬೆಂಕಿಯಲ್ಲಿ ಬೇಯುತ್ತಿರುವ ಲಾಸ್‌ಏಂಜಲೀಸ್ ರಾಜ್ಯದಲ್ಲಿ ಗುರುವಾರ ಸಂಜೆ 7ರ ವೇಳೆಗೆಲ್ಲಾ ಒಟ್ಟಾರೆ 38 ಸಾವಿರ ಎಕರೆಗಳಿಗೂ ಅಧಿಕ ವಿಸ್ತಾರದ ಪ್ರದೇಶ ಕಾಡ್ಗಿಚ್ಚಿನ ಆರ್ಭಟಕ್ಕೆ ಸಿಲುಕಿ ಅಕ್ಷರಶಃ ಭಸ್ಮವಾಗಿದೆ. ಲಾಸ್ ಏಂಜಲೀಸ್ ಭಾಗದಲ್ಲಿಯೇ ಈವರೆಗೆ 11 ಮಂದಿ ಸಾವಿಗೀಡಾಗಿದ್ದಾರೆ ಎಂಬುದು ದೃಢಪಟ್ಟಿದೆ. ಪ್ಯಾಲಿಸೇಡ್ಸ್ ಫೈರ್‌ನಲ್ಲಿ ಐವರು, ಈಟನ್ ಫೈರ್‌ನಲ್ಲಿ ಆರು ಮಂದಿ ದಹಿಸಿಹೋಗಿದ್ದಾರೆ. ಆದರೆ, ಪ್ಯಾಲಿಸೇಡ್ಸ್ ಫೈರ್‌ನಲ್ಲಿ ಮಡಿದವರಲ್ಲಿ ನಾಲ್ವರ ಗುರುತು ಪತ್ತೆಯಾಗಿದ್ದು, ಆನೆಟ್ ರೋಸಿಲ್ಲಿ(86), ರಾಡ್ನಿ ನಿಕರ್ಸನ್(82), ವಿಕ್ಟರ್ ಶಾ(66), ವಿಶೇಷಚೇತನ ವ್ಯಕ್ತಿ ಆಂಥೋಣಿ ಮಿಷೆಲ್(67) ಮತ್ತು ಅವರ ಪುತ್ರ ಜಸ್ಟಿನ್ ಎಂದು ಗುರುತಿಸಲಾಗಿದೆ. ಉಳಿದವರ ಮೃತದೇಹಗಳನ್ನು ಗುರುತಿಸುವುದೇ ದೊಡ್ಡ ಸವಾಲಾಗಿದೆ ಎಂದು ಲಾಸ್ ಏಂಜಲೀಸ್ ಕೌಂಟಿಯ ಮೆಡಿಕಲ್ ಎಕ್ಸಾಮಿನರ್ ಕಚೇರಿ ಶನಿವಾರ ತಿಳಿಸಿದೆ.

ಕಾಡ್ಗಿಚ್ಚಿಗೆ ಬಲಿಯಾದವರ ಸಂಖ್ಯೆ ಇನ್ನೂ ಹೆಚ್ಚುವ ಸಾಧ್ಯತೆ ಇದೆ. ಕಾಡ್ಗಿಚ್ಚು ಹಾನಿ ಮಾಡಿ ಮುಂದಕ್ಕೆ ಹೋಗಿರುವ ಪ್ರದೇಶಗಳಲ್ಲಿ ಶ್ವಾನಪಡೆಯ ನೆರವು ಪಡೆದು ಶೋಧ ಮತ್ತು ರಕ್ಷಣಾ ಕಾರ್ಯ ನಡೆಸಲಾಗುತ್ತಿದೆ ಎಂದೂ ಅಧಿಕಾರಿಗಳು ಹೇಳಿದ್ದಾರೆ. ವೃದ್ಧೆ ರೋಸಿಲ್ಲಿ ಅವರಿಗೆ ಕಾಡ್ಗಿಚ್ಚು ಹರುಡುತ್ತಿರುವ ಬಗ್ಗೆ ಎಚ್ಚರಿಸಿದೆವು. ತಕ್ಷಣವೇ ಮನೆ ಖಾಲಿ ಮಾಡಿ ನಮ್ಮೊಡನೆ ಸುರಕ್ಷಿತ ಸ್ಥಳಕ್ಕೆ ಬರುವಂತೆ ಒತ್ತಾಯಿಸಿದೆವು. ಆದರೆ, ಆಕೆ ಸಾಕು ಪ್ರಾಣಿಗಳ ರಕ್ಷಣೆ ಮಾಡಬೇಕು ಎಂದು ಹೇಳಿ ನಮ್ಮೊಡನೆ ಬರಲು ನಿರಾಕರಿಸಿದರು. ಆಕೆ, 1 ನಾಯಿ, 1 ಆಮೆ, ಹಳದಿ ಬಣ್ಣದ ಪುಟ್ಟ ಪಕ್ಷಿಗಳು, 2 ಗಿಳಿಗಳನ್ನು ಸಾಕಿದ್ದರು ಎಂದು ನೆರೆಮನೆಯವರು 'ಸಿಎನ್‌ಎನ್' ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ವೃದ್ಧೆ ರೋಸಿಲ್ಲಿ ಅವರ ಮೃತದೇಹ ಕಾರಿನೊಳಗೆ ಪತ್ತೆಯಾಗಿದ್ದರೆ, ವಿಕ್ಟರ್ ಶಾ ಕಳೇಬರ ರಸ್ತೆಮೇಲೆ ಬಹುತೇಕ ದಹಿಸಿಹೋದ ಸ್ಥಿತಿಯಲ್ಲಿ ರಕ್ಷಣಾ ಕಾರ್ಯಕರ್ತರ ಕಣ್ಣಿಗೆ ಬಿದ್ದಿದೆ.

ದುರುಳರಿಂದ ಲೂಟಿ: ಕಾಡ್ಗಿಚ್ಚಿಗೆ ಸಿಲುಕಿದವರು ಜೀವ ಉಳಿಸಿಕೊಳ್ಳಲು ಹೆಣಗುತ್ತಿದ್ದರೆ, ಮತ್ತೊಂದಡೆ ಕಳ್ಳರು, ಲೂಟಿಕೋರರ ಹಾವಳಿ ಶುರುವಾಗಿದೆ. ಕಾಡ್ಗಿಚ್ಚಿನ ಕಾರಣ ಸ್ಥಳಾಂತರಗೊಂಡವರ ಸಾಂಟಾ ಮೋನಿಕಾ ನಗರದಲ್ಲಿನ ಮನೆಗಳಿಗೆ ನುಗ್ಗುತ್ತಿರುವ ಲೂಟಿಕೋರರು ಕೈಗೆ ಸಿಕ್ಕಿದ್ದನ್ನೆಲ್ಲಾ ಬಾಚಿಕೊಂಡು ಹೋಗುತ್ತಿದ್ದಾರೆ. ಈ ಬಗ್ಗೆ ಮನೆ ಮಾಲೀಕರು ದೂರಿದ ಬಳಿಕ ಕಾರ್ಯಾಚರಣೆ ಅರಂಭಿಸಿದ ಪೊಲೀಸರು, ಈವರೆಗೆ ಲೂಟಿಯಲ್ಲಿ ತೊಡಗಿದ್ದ 20 ಜನರನ್ನು ಬಂಧಿಸಿದ್ದಾರೆ. ಸಾಂಟಾ ಮೋನಿಕಾ ನಗರದಲ್ಲಿ ಕರ್ಫ್ಯೂ ಘೋಷಿಸಲಾಗಿದೆ. ಜನರ ಆಸ್ತಿ ರಕ್ಷಣೆಗೆ ನ್ಯಾಷನಲ್ ಗಾರ್ಡ್‌ಗಳನ್ನು ನಿಯೋಜಿಸಲಾಗಿದೆ.

ಕಾಡ್ಗಿಚ್ಚು ನಂದಿಸಲು ಹೆಲಿಕಾಪ್ಟರ್‌ನಲ್ಲಿ ನೀರು ಸಿಂಪಡಣೆ

ಕಾಡ್ಗಿಚ್ಚಿಗೆ ಬೆಂದು ಭಸ್ಮವಾದ ಬಳಿಕ ಉಳಿದುಳಿದ ಕಟ್ಟಡ

ಹರಡುತ್ತಲೇ ಇರುವ ಬೆಂಕಿ

ಒಂದೆಡೆ ಬೆಂಕಿ ನಂದಿಸುವ ಕಾರ್ಯ ನಡೆಯುತ್ತಿದ್ದರೆ, ಇನ್ನೊಂದೆಡೆ, ಕಾಡ್ಗಿಚ್ಚು ವಿಸ್ತಾರಗೊಳ್ಳುತ್ತಲೇ ಸಾಗಿದೆ. ಶುಕ್ರವಾರ ಸಂಜೆಯ ವೇಳೆಗೆ ಬೆಂಕಿ ಮತ್ತಷ್ಟು ವ್ಯಾಪಿಸಿದೆ. ಹೊಸದಾಗಿ ವೆಸ್ಟ್‌ಹಿಲ್ಸ್ ಪ್ರದೇಶದಲ್ಲಿ ಕಾಣಿಸಿಕೊಂಡಿದೆ. ಲಾಸ್ ಏಂಜಲೀಸ್ ನಗರದಿಂದ 40 ಕಿ.ಮೀ. ದೂರದಲ್ಲಿ ಕಾಡ್ಗಿಚ್ಚು ಹರಡುತ್ತಿದೆ. ಕಳೆದೆರಡು ದಶಕಗಳಿಂದ ಮಳೆಯಿಲ್ಲದೆ ಗಿಡಮರಗಳೆಲ್ಲಾ ಒಣಗಿದ್ದರಿಂದ ಬೆಂಕಿ ಹೊತ್ತಿಕೊಂಡು ಗಾಳಿಯಿಂದಾಗಿ ಹರಡುತ್ತಿದೆ ಎನ್ನಲಾಗಿದೆಯಾದರೂ, ಕಾಡಿಚ್ಚು ಸೃಷ್ಟಿಗೆ ಮೂಲ ಕಾರಣ ತಿಳಿಯಲು ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಾಲಿವುಡ್‌ಗೆ ಬೆಂಕಿ: ಹಾಲಿವುಡ್ ಹಿಲ್ ಹಾಗೂ ಸ್ಟುಡಿಯೋ ಸಿಟಿಗೆ ಹೊತ್ತಿಕೊಂಡಿದ್ದ ಬೆಂಕಿಯನ್ನು ವಿಮಾನ, ಹೆಲಿಕಾಪ್ಟರ್‌ಗಳ ಮೂಲಕ ನೀರು ಸಿಂಪಡಿಸಿ ನಂದಿಸಲಾಗಿತ್ತು. ಆದರೆ ಬಿರುಗಾಳಿ ವೇಗವಾಗಿ ಬೀಸತೊಡಗಿದ ಕಾರಣ ಮತ್ತೆ ಬೆಂಕಿ ಹರಡಲಾರಂಭಿಸಿತು.

ಕಾಳ್ಗಿಚ್ಚಿನ ನಡುವೆಯೇ ಮೊಲದ ರಕ್ಷಣೆ ಮಾಡಿದ 'ಹೀರೋ

ಅಮೆರಿಕದ ಲಾಸ್ ಏಂಜಲಿಸ್‌ನ ಹಾಲಿವುಡ್ ಬೆಟ್ಟದಲ್ಲಿ ನಡೆದ ಶತಮಾನದ ಭೀಕರ ಕಾಳ್ಗಿಚ್ಚು ಇನ್ನೂ ಸಂಪೂರ್ಣ ನಿಯಂತ್ರಣಕ್ಕೆ ಬಂದಿಲ್ಲ. . ಎಂದರೆ ಅದರ ಭಯಾನಕತೆ ಅರ್ಥವಾದೀತು. ಈ ಭಾಗದಲ್ಲಿ ಮಳೆಯ ಅಭಾವ ಈ ವರ್ಷ ಉಂಟಾಗಿದ್ದ ಕಾರಣದಿಂದಲೂ ಇದು ಕಷ್ಟಸಾಧ್ಯವಾಯಿತು. ಲಾಸ್ ಏಂಜಲಿಸ್ನಲ್ಲಿ ನೀರಿನ ಅಭಾವದಿಂದಾಗಿ ಅಗ್ನಿಶಾಮಕ ದಳದವರು ಸಾಕಷ್ಟು ಸವಾಲು ಎದುರಿಸಬೇಕಾಗುತ್ತಿದೆ. ಸುತ್ತಲಿನ ಈಜುಕೊಳಗಳು ಮತ್ತು ಕೊಳಗಳಿಂದ ನೀರು ಸಂಗ್ರಹಿಸಿ ಕಾರ್ಯಾಚರಣೆ ನಡೆಸಲಾಗಿದೆ. ಫೈ ಎಂದು ಕರೆಯಲ್ಪಡುವ ಅಗ್ನಿ ಹಾಲಿವುಡ್ ಹಿಲ್ಸ್‌ನಲ್ಲಿ ಕಾಣಿಸಿಕೊಂಡಿದೆ. 20ಕ್ಕೂ ಅಧಿಕ ಎಕರೆಗೆ ಆರಂಭದಲ್ಲಿ ವ್ಯಾಪಿಸಿರುವ ಈ ಬೆಂಕಿ, ರನ್ಯಾನ್ ಕ್ಯಾನ್ಯನ್ ಮತ್ತು ವಾಟಲ್ಸ್ ಪಾರ್ಕ್‌ಗಳನ್ನು ಸಂಪೂರ್ಣವಾಗಿ ಆಹುತಿ ಪಡೆದಿದೆ.

ಅಗ್ನಿ ಶಮನಕ್ಕೆ ನೀರಿನ ಕೊರತೆ

ಕಾಡ್ಗಿಚ್ಚು ನಂದಿಸುವ ಕಾರ್ಯ ಒಂದೆಡೆ ಸಮರೋಪಾದಿ ಯಲ್ಲಿ ಸಾಗುತ್ತಿದ್ದರೆ, ಮತ್ತೊಂದೆಡೆ ಬೆಂಕಿ ನಂದಿಸುವುದಕ್ಕೆ ಅತ್ಯಗತ್ಯವಾದ ನೀರು ಲಭ್ಯವಾಗುವುದು ಕಡಿಮೆಯಾಗಿದೆ. ನೀರಿನ ಕೊರತೆ ಎದುರಾಗಿದೆ. ಈ ಬಗ್ಗೆ ಲಾಸ್‌ಏಂಜಲೀಸ್‌ನ ಅಗ್ನಿಶಾಮಕ ದಳ ಮುಖ್ಯಸ್ಥ ಕ್ರಿಸ್ಟೀನ್‌ಕ್ರೌಲೆ, ಲಾಸ್ ಏಂಜಲೀಸ್ ನಗರದ ಅಧಿಕಾರಿಗಳ ವಿರುದ್ಧ ಕಿಡಿಕಾರಿದ್ದಾರೆ. ಲಾಸ್ ಏಂಜಲೀಸ್ ರಾಜ್ಯದ ಮ್ಯಾಂಡೆವಿಲ್ಲೆ ಕೆನ್ಯಾನ್ ಭಾಗದಲ್ಲಿನ ಪ್ಯಾಲಿಸೇಡ್ಸ್ ಫೈರ್ (ಕಾಡ್ಗಿಚ್ಚು) ನಂದಿಸಲು ಅಗ್ನಿಶಾಮಕ ದಳದ ಹೆಲಿಕಾಪ್ಟರ್‌ಗಳು ಶ್ರಮಿಸುತ್ತಿವೆ. ನೀರು ಲಭ್ಯವಿರುವೆಡೆಗೆಲ್ಲಾ ಹೋಗಿ ನೀರು ತುಂಬಿಕೊಂಡು ಬಂದು ಎತ್ತರದಿಂದ ಕಾಡ್ಗಿಚ್ಚು ಮುಂದೆ ಸಾಗುತ್ತಿರುವ ಮಾರ್ಗದಲ್ಲಿ ಸುರಿಯುತ್ತಿವೆ. ಆದರೆ, ವ್ಯಾಪಕ ಪ್ರಮಾಣದಲ್ಲಿರುವ ಹಾಗೂ ಬಿರುಗಾಳಿಯೂ ಜತೆಯಾಗಿರುವುದರಿಂದ ಸಿಕ್ಕಸಿಕ್ಕ ಕಡೆಗೆಲ್ಲಾ ಹರಡುತ್ತಲೇ ಇರುವ ಕಾಡ್ಗಿಚ್ಚಿನ ಮುಂದೆ ಅಗ್ನಿಶಾಮಕ ದಳದ ಶ್ರಮ, ಆನೆಯ ಮೇಲೆ ಇರುವೆ ಯುದ್ಧ ಸಾರಿದಂತಿದೆ. 7500 ಅಗ್ನಿಶಾಮಕ ದಳ, 1162 ಅಗ್ನಿಶಾಮಕ ವಾಹನ, 23 ನೀರು ಸರಬರಾಜುದಾರರು, 31 ಹೆಲಿಕಾಪ್ಟರ್, 53 ಬುಲ್ಡೋಜರ್‌ಗಳು ಬಂದರೂ ಅಗ್ನಿಯನ್ನು ನಂದಿಸಲು ಸಾಧ್ಯವಾಗದಂಥ ಸ್ಥಿತಿ ನಿರ್ಮಾಣವಾಗಿದೆ.

ಕಾಡ್ಗಿಚ್ಚಿಗೆ ದಹಿಸಿದ ಪ್ರದೇಶ

ಪ್ಯಾಲಿಸೇಡ್ಸ್ ಫೈರ್	ಈಟನ್ ಫೈರ್
21,317 ಎಕರೆ(ಶೇ.8)	13,690 ಎಕರೆ(ಶೇ.3)
ಕೆನ್ನೆತ್ ಫೈರ್	ಹರ್ಸ್ಟ್ ಫೈರ್
1,052 ಎಕರೆ(ಶೇ.50)	771 ಎಕರೆ(ಶೇ.37)
ಲಿಡಿಯಾ ಫೈರ್	ಆರ್ಚರ್ ಫೈರ್
395 ಎಕರೆ(ಶೇ.98)	19 ಎಕರೆ



ಕಾಡ್ಗಿಚ್ಚು ಹರಡುತ್ತಿರುವ ಲಾಸ್‌ಏಂಜಲೀಸ್‌ನ ನಕ್ಷೆ

ಇಂಡೋನೇಷ್ಯಾ ಅಧ್ಯಕ್ಷ ಪ್ರಬೊವೊ ಸುಬೈಂತೊಗೆ ಕರೆ ಸಾಧ್ಯತೆ

ಗಣರಾಜ್ಯ ಅತಿಥಿ ಆಯ್ಕೆ ಗೊಂದಲ

ದೆಹಲಿ: ರಾಜಧಾನಿ ದೆಹಲಿಯಲ್ಲಿ ಜ.26ರಂದು ನಡೆಯಲಿರುವ ದೇಶದ 'ಗಣರಾಜ್ಯೋತ್ಸವ' ಕಾರ್ಯಕ್ರಮಕ್ಕೆ ಎರಡು ವಾರಗಳಷ್ಟೇ ಬಾಕಿ ಇವೆ. ಆದರೆ, ಮುಖ್ಯ ಅತಿಥಿಯಾಗಿ ಈ ಬಾರಿ ಯಾರು ಆಗಮಿಸಲಿದ್ದಾರೆ? ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ. ಈ ಕುರಿತ ಕುತೂಹಲದ ಜತೆಗೇ ಸರಕಾರದ ಮಟ್ಟದಲ್ಲಿಯೂ ಗೊಂದಲ ಇರುವುದು ತಿಳಿದುಬಂದಿದೆ.

ಗಣರಾಜ್ಯೋತ್ಸವಕ್ಕೆ ಭಾರತದ ಮಿತ್ರ ರಾಷ್ಟ್ರಗಳ ಅಧ್ಯಕ್ಷರನ್ನೇ ಅತಿಥಿಯಾಗಿ ಆಹ್ವಾನಿಸುವುದು ವಾಡಿಕೆ. ಅದಕ್ಕೆ ತಿಂಗಳು ಮೊದಲೇ ತಯಾರಿ ನಡೆದು, 2 ವಾರ ಮುಂಚೆ ಅತಿಥಿ ಹೆಸರು ಘೋಷಣೆಯಾಗುತ್ತದೆ. ಈ ಬಾರಿ ಸರಕಾರ ಮುಸ್ಲಿಂ ದೇಶವಾದ ಇಂಡೋನೇಷ್ಯಾದ ಅಧ್ಯಕ್ಷ ಪ್ರಬೊವೊ ಸುಬೈಂತೊ ಅವರನ್ನು ಆಹ್ವಾನಿಸಲು ನಿರ್ಧರಿಸಿದೆ ಎನ್ನಲಾಗಿದ

'ಆದರೆ, ಕೇಂದ್ರ ಸರಕಾರದಿಂದ ಈ ಬಗ್ಗೆ ಅಧಿಕೃತ ಪ್ರಕಟಣೆ ಇನ್ನೂ ಹೊರಬಿದ್ದಿಲ್ಲ. ಕಾರಣ, ಭಾರತ ಸರಕಾರದ ಆಹ್ವಾನದಡಿ ಜ.25ರಂದು ದೆಹಲಿಗೆ ಬರಬೇಕಿರುವ ಅಧ್ಯಕ್ಷ ಸುಬೈಂತೊ, ಗಣರಾಜ್ಯೋತ್ಸವ ಕಾರ್ಯಕ್ರಮ ಬಳಿಕ 3 ದಿನಗಳ ಪಾಕಿಸ್ತಾನ ಪ್ರವಾಸ ಕೈಗೊಳ್ಳಲಿದ್ದಾರೆ. ಪಾಕ್ ಸರಕಾರ ಸುಬೈಂತೊ ಸ್ವಾಗತಕ್ಕೆ ಸಿದ್ಧತೆ ಮಾಡಿಕೊಂಡಿದೆ ಎಂಬುದು ತಿಳಿದುಬಂದಿದೆ. ಹಾಗಾಗಿಯೇ ಭಾರತ ಸರಕಾರ ಅತಿಥಿ ಹೆಸರು ಪ್ರಕಟಣೆ ತಡೆಹಿಡಿದಿದೆ. ತನ್ನ ಆಹ್ವಾನದ ಮೇರೆಗೆ ದೇಶಕ್ಕೆ ಅತಿಥಿಯಾಗಿ ಬಂದವರು ಅದರ ಬೆನ್ನಲ್ಲೇ ಶತ್ರುದೇಶ ಪಾಕ್‌ಗೆ ತೆರಳುವುದಕ್ಕೆ ಭಾರತದ ಆಕ್ಷೇಪವಿದೆ. ಪಾಕ್ ಪ್ರೇರಿತ ಭಯೋತ್ಪಾದನೆ ಕೊನೆಗೊಳ್ಳದ ಹೊರತು ನೆರೆಯ ದೇಶ ಮತ್ತು ಅದರ ಮಿತ್ರ ದೇಶಗಳ ಜತೆ ಅಂತರ ಕಾಯ್ದುಕೊಳ್ಳಲು ಭಾರತ ನಿರ್ಧರಿಸಿದೆ ಎನ್ನಲಾಗಿದೆ.

ಕೋಲ್ಕತ್ತ ಪ್ರಕರಣ | ಆರೋಪಿ ಚಿರಾಗ್ ಕಪೂರ್ ಬೆಂಗಳೂರಿನಲ್ಲಿ ಸೆರೆ

930 ಡಿಜಿಟಲ್ ಅರೆಸ್ಟ್ ಆರೋಪಿ ಬಂಧನ

ಕೋಲ್ಕತ್ತ: ಮಾದಕ ದ್ರವ್ಯ ಕೊರಿಯರ್ ಹೆಸರಲ್ಲಿ ಜನರನ್ನು ಬೆದರಿಸಿ, ಪೊಲೀಸರ ಸಮವಸ್ತ್ರ ಧರಿಸಿ ವಿಡಿಯೋ ಕಾಲ್ ಮಾಡಿ 'ಡಿಜಿಟಲ್ ಅರೆಸ್ಟ್' ಮಾಡಿರುವುದಾಗಿ ಹೆದರಿಸಿ ಲಕ್ಷಾಂತರ ರು. ದೋಚುತ್ತಿದ್ದ 930 ಸೈಬರ್ ಕ್ರೈಂ ಪ್ರಕರಣಗಳ ಸೂತ್ರಧಾರನನ್ನು ಕೋಲ್ಕತ್ತ ಪೊಲೀಸರು ಬೆಂಗಳೂರಲ್ಲಿ ಬಂಧಿಸಿದ್ದಾರೆ.

ಬೆಂಗಳೂರಿನ ಜೆ.ಪಿ.ನಗರದಲ್ಲಿ ವಾಸವಿದ್ದ ಚಿರಾಗ್ ಕಪೂರ್ ಅಲಿಯಾಸ್ ಚಿಂತಕ ರಾಜ್ ಎಂಬಾತನನ್ನು ಕೋಲ್ಕತ್ತ ಪೊಲೀಸರ ತಂಡ ಶುಕ್ರವಾರ ನಸುಕಿನಲ್ಲೇ ಬಂಧಿಸಿ ಕರೆದೊಯ್ದಿದೆ. ಚಿರಾಗ್ ಏಳು ತಿಂಗಳಿಂದ ಪೊಲೀಸರ ಕಣ್ತಪ್ಪಿಸಿದ್ದ. ದೇಶದ ವಿವಿಧೆಡೆ ನಡೆದಿದ್ದ 930 ಡಿಜಿಟಲ್ ಅರೆಸ್ಟ್ ಪ್ರಕರಣಗಳಿಗೂ ಚಿರಾಗ್ ಸೂತ್ರಧಾರ. ಈ ಪ್ರಕರಣಗಳಲ್ಲಿ ಒಟ್ಟು 11 ಮಂದಿ ಬಂಧಿಸಲಾಗಿದೆ ಎಂದು ಕೋಲ್ಕತ್ತ ಪೊಲೀಸರು ಮಾಹಿತಿ ನೀಡಿದ್ದಾರೆ.

ಚಿರಾಗ್ ಮನೆ ಮೇಲೆ ಪೊಲೀಸರು ಶುಕ್ರವಾರ ನಸುಕಿನಲ್ಲೆ ದಾಳಿ ಮಾಡಿದ್ದಾರೆ. ಆಗ, ಆತ ತಾನೊಬ್ಬ ಸಾಫ್ಟ್‌ವೇರ್ ಎಂಜಿನಿಯರ್ ಎಂದೇ ವಾದಿಸಿದ್ದಾನೆ. ಈತನ ಕಚೇರಿಯಿಂದ 104 ನಕಲಿ ಪಾಸ್‌ಬುಕ್, ನಕಲಿ ಚೆಕ್‌ಬುಕ್, 33 ಡೆಬಿಟ್ ಕಾರ್ಡ್, 2 ಕ್ಯುಆರ್ ಕೋಡ್ ಯಂತ್ರ, 61 ಮೊಬೈಲ್, 140 ಸಿಮ್ ಕಾರ್ಡ್, 40 ಸೀಲ್, ಕೆಲವು ಪತ್ರಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಚಿರಾಗ್ ಬೆಂಗಳೂರಿನಿಂದಲೇ ದೇಶಾದ್ಯಂತದ ವಂಚನೆ ಜಾಲ ನಡೆಸುತ್ತಿದ್ದ. ಹಲವು ತಂಡಗಳನ್ನು ನಿರ್ವಹಿಸುತ್ತಿದ್ದ. ಕಚೇರಿಯಲ್ಲಿ ನಕಲಿ ಖಾತೆಗಳನ್ನು ಸೃಷ್ಟಿಸಿ ಸೈಬರ್ ವಂಚಕರಿಗೆ ಏಜೆಂಟ್‌ಗಳ ಮೂಲಕ ಮಾರುತ್ತಿದ್ದ. ಈತನ ಏಜೆಂಟ್ ಅ.26ರಂದೇ ಬಂಧನಕ್ಕೊಳಗಾದ.

ಕೋಲ್ಕತ್ತ ಪ್ರಕರಣ

2024ರ ಜೂ.17ರಂದು ಕೋಲ್ಕತ್ತದಲ್ಲಿ ದೇಬಶ್ರೀ ದತ್ತಾ ಎಂಬವರು ಚಿರಾಗ್ ತಂಡದಿಂದಲೇ ಡಿಜಿಟಲ್ ಅರೆಸ್ಟ್‌ಗೆ ಒಳಗಾಗಿ 47 ಲಕ್ಷ ರು. ಕಳೆದುಕೊಂಡಿದ್ದು, ಕೋಲ್ಕತ್ತ ಸೈಬರ್ ಕ್ರೈಂ ಪೊಲೀಸರಲ್ಲಿ ದೂರು ದಾಖಲಿಸಿದ್ದರು.

ಅಯೋಧ್ಯೆ ವಾರ್ಷಿಕೋತ್ಸವ: ರಾಮಲಲ್ಲಾಗೆ ಅಭಿಷೇಕ

ಅಯೋಧ್ಯೆ: ಉತ್ತರ ಪ್ರದೇಶದ ಅಯೋಧ್ಯೆಯಲ್ಲಿನ ರಾಮಮಂದಿರದಲ್ಲಿ ಶ್ರೀ ರಾಮಲಲ್ಲಾ ಪ್ರತಿಷ್ಠಾಪನೆಯಾಗಿ ವರ್ಷ ಪೂರ್ಣಗೊಂಡಿದೆ. ಈ ಹಿನ್ನೆಲೆ ಶ್ರೀರಾಮ ಜನ್ಮಭೂಮಿ ನಗರದಲ್ಲಿ ಮೊದಲ ವಾರ್ಷಿಕೋತ್ಸವದ ಸಂಭ್ರಮ ಮನೆ ಮಾಡಿದೆ. ರಾಮಲಲ್ಲಾನ ಮಂದಿರದಲ್ಲಿ ಹಲವು ಧಾರ್ಮಿಕ ಕಾರ್ಯಗಳು ಶನಿವಾರ ಜರುಗಿವೆ.

ಪ್ರತಿಷ್ಠಾ ದ್ವಾದಶಿಯ ದಿನವಾದ ಶನಿವಾರ ಬಾಲರಾಮನ ಮೂರ್ತಿಗೆ ಮಹಾ ಅಭಿಷೇಕ ಮಾಡಲಾಯಿತು. ನಂತರ ಭಕ್ತರಿಗೆ ಮಂಗಲ ದರ್ಶನ ನಡೆಯಿತು. ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ರಾಮಲಲ್ಲಾನ ದರ್ಶನ ಪಡೆದರು. ರಾಮಮಂದಿರವನ್ನು 50 ಕ್ವಿಂಟಲ್ ಪುಷ್ಪಗಳಿಂದ ಭವ್ಯವಾಗಿ ಅಲಂಕರಿಸಲಾಗಿತ್ತು. ಅಯೋಧ್ಯೆಯಲ್ಲಿ ಹಬ್ಬದ ವಾತಾವರಣವಿತ್ತು. ಭಕ್ತರು ನೃತ್ಯ, ಹಾಡುಗಳೊಂದಿಗೆ ಮೆರವಣಿಗೆಯಲ್ಲಿ ಸಾಗಿದರು. ಶನಿವಾರ ರಾಜಭೋಗ್ ಪ್ರಕ್ರಿಯೆ ಪೂರ್ಣಗೊಂಡ ನಂತರ, ರಾಮಲಲ್ಲಾ ವಿರಾಜಮಾನನಾಗಿರುವ ಗರ್ಭಗುಡಿಯ ಬಾಗಿಲು ತೆರೆಯಲಾಯಿತು. ಪ್ರಧಾನ ಅರ್ಚಕ ಆಚಾರ್ಯ ಸತ್ಯೇಂದ್ರ ದಾಸ್ ಅವರ ನೇತೃತ್ವದಲ್ಲಿ ಮಹಾ ಆರತಿ ನೆರವೇರಿತು. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ರಾಮಮಂದಿರ ಸಂಕೀರ್ಣದ ಅಂಗದ್ ತಿಲಾದಲ್ಲಿ ಪ್ರತಿಷ್ಠಾ ದ್ವಾದಶಿ ಸಮಾರಂಭ ಉದ್ಘಾಟಿಸಿದರು. ಬಳಿಕ ರಾಮ ಜನ್ಮಭೂಮಿ ಸಂಕೀರ್ಣದಲ್ಲಿ ಸಂತರು ಮತ್ತು ಮಹಾಂತರೊಂದಿಗೆ ಅನ್ನ ಪ್ರಸಾದ ಸ್ವೀಕರಿಸಿದರು.

ರಾಜ್ಯದ 8 ವಿದ್ಯಾರ್ಥಿಗಳಿಗೆ ಪ್ರಶಸ್ತಿ

ದೆಹಲಿ: ದೆಹಲಿಯಲ್ಲಿ ಜ.26ರಂದು ನಡೆಯಲಿರುವ ಗ್ಯಾಲಂಟ್ರಿ ಅವಾರ್ಡ್ಸ್ ಪೋರ್ಟಲ್ ಆಫ್ ಇಂಡಿಯ ಆಯೋಜಿಸಿದ್ದ ವೀರಗಾಥಾ 4.0 ಸ್ಪರ್ಧೆಯಲ್ಲಿ ಕರ್ನಾಟಕದ 8 ಮಕ್ಕಳು ಪ್ರಶಸ್ತಿ ಗೆದ್ದಿದ್ದಾರೆ. ರಕ್ಷಣಾ ಸಚಿವಾಲಯ ಮತ್ತು ಶಿಕ್ಷಣ ಸಚಿವಾಲಯ ಸಹಯೋಗದಲ್ಲಿ ವಿದ್ಯಾರ್ಥಿಗಳಲ್ಲಿನ ದೇಶಪ್ರೇಮ ಮತ್ತು ದೇಶಭಕ್ತರ ಕುರಿತು ಅಭಿಮಾನ ಮೂಡಿಸುವ ನಿಟ್ಟಿನಲ್ಲಿ ಪ್ರಾಥಮಿಕ, ಪ್ರೌಢ, ಪದವಿ ಪೂರ್ವ ವಿದ್ಯಾರ್ಥಿಗಳಿಗೆ ವೀರಗಾಥಾ ಸ್ಪರ್ಧೆ ಆಯೋಜಿಸಲಾಗಿತ್ತು.

ಪ್ರಶಸ್ತಿ ಗೆದ್ದವರು: ಚಿತ್ರಕಲೆ ವಿಭಾಗದಲ್ಲಿ 6ರಿಂದ 8ನೇ ತರಗತಿಯ ವಿಭಾಗದಲ್ಲಿ ಉಡುಪಿ ಹೆಬ್ರಿಯ ಎಸ್‌ಆರ್ ಪಬ್ಲಿಕ್ ಶಾಲೆಯ ವಿನೀಶ್ ಆಚಾರ್ಯ, 9-10ನೇ ತರಗತಿ ವಿಭಾಗದಲ್ಲಿ ಹುಬ್ಬಳ್ಳಿ ಎನ್‌ಎಲ್‌ಇ ಸೊಸೈಟಿ ಡಾ ವಿಜಿ ಜೋಶಿ ರೋಟರಿ ಇಂಗ್ಲಿಷ್ ಶಾಲೆಯ ಸೃಷ್ಟಿ ಎಸ್.ವಡ್ಡರ, ಉಜಿರೆಯ ಶ್ರಿ ಎಸ್‌ಡಿಎಂ ಇಂಗ್ಲಿಷ್ ಶಾಲೆಯ ಸಾತ್ವಿಕ್ ಭಟ್ ಪ್ರಶಸ್ತಿ ಗಳಿಸಿದ್ದಾರೆ. ಕವನ ರಚನೆ ವಿಭಾಗದಲ್ಲಿ ಉಡುಪಿ ಜಿಲ್ಲೆ ಕಾರ್ಕಳದ ಶ್ರೀಭುವನೇಂದ್ರ ವಸತಿ ಶಾಲೆಯ ಸ್ನಿಗ್ಧಾ, ಹುಬ್ಬಳ್ಳಿ ಚಿನ್ಮಯ ಶಾಲೆಯ ಸಾಕ್ಷಿ ಕುಲಕರ್ಣಿ ಪ್ರಶಸ್ತಿ ಗಳಿಸಿದ್ದಾರೆ. 11-12ನೇ ತರಗತಿ ವಿಭಾಗದಲ್ಲಿ ಬೆಂಗಳೂರಿನ ಕೆಆರ್ ರಸ್ತೆ ಮಹಿಳಾ ಸೇವಾ ಸಮಾಜದ ರಮಿತಾ ಮೂರ್ತಿ(ಕವನ ರಚನೆ), ಮೌಂಟ್ ಕಾರ್ಮೆಲ್ ಪಿಯು ಕಾಲೇಜಿನ ವರ್ಷ ಶೆಟ್ಟಿ(ಚಿತ್ರಕಲೆ), ಬಳ್ಳಾರಿ ಕೇಂದ್ರೀಯ ವಿದ್ಯಾಲಯದ ಆಫ್ಕಿನ್ (ಚಿತ್ರಕಲೆ) ಪ್ರಶಸ್ತಿ ಗಳಿಸಿದ್ದಾರೆ.

ಪಿಎಂ ಕಿಸಾನ್ ಸಮ್ಮಾನ್: ರೈತರ ಐ.ಡಿ. ಕಡ್ಡಾಯ

ದೆಹಲಿ: ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ(ಪಿಎಂ-ಕಿಸಾನ್) ಯೋಜನೆಗೆ ಹೊಸದಾಗಿ ಸೇರುವವರು, ಫಲಾನುಭವಿಯಾಗಲು ಬಯಸುವವರು 'ಕೃಷಿಕರ ಗುರುತಿನ ಚೀಟಿ' ಹೊಂದುವುದು ಕಡ್ಡಾಯವಾಗಿದೆ. ಈ ಬಗ್ಗೆ ಕೇಂದ್ರ ಕೃಷಿ ಮತ್ತು ರೈತರ ಕ್ಷೇಮಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಅರ್ಜಿದಾರರು ಕೃಷಿ ಭೂಮಿ ಹೊಂದಿದ್ದಾರೆ ಎಂಬುದನ್ನು ರೈತರ ಗುರು ತಿನ ಚೀಟಿ ದೃಢಪಡಿಸುತ್ತದೆ. ಆದ ಕಾರಣ, ಹೊಸದಾಗಿ ಅರ್ಜಿ ಸಲ್ಲಿಸುವವರು ಕೃಷಿಕರ ಗುರುತಿನ ಚೀಟಿ ಹೊಂದಬೇಕಿದೆ. ಗುರುತಿನ ಚೀಟಿ ಇದ್ದಲ್ಲಿ ನೋಂದಣಿ ಪ್ರಕ್ರಿಯೆ ಸುಲಭ. ಹಾಗಾಗಿ, ಹೊಸ ಅರ್ಜಿದಾರರೆಲ್ಲರೂ 'ಫಾರ್ಮರ್ಸ್ ರಿಜಿಸ್ಟ್ರಿ'ಯಲ್ಲಿ ನೋಂದಣಿ ಮಾಡಿಕೊಳ್ಳಬೇಕು. 10 ರಾಜ್ಯಗಳಲ್ಲಿ ಈ ವ್ಯವಸ್ಥೆ ಜ.1ರಿಂದಲೇ ಜಾರಿಗೆ ಬಂದಿದೆ. ಮುಂಬರುವ ದಿನಗಳಲ್ಲಿ ಉಳಿದ ರಾಜ್ಯಗಳಿಗೂ ಇದು ವಿಸ್ತರಣೆಯಾಗಲಿದೆ ಎಂದು ಇಲಾಖೆ ಪ್ರಕಟಣೆಯಲ್ಲಿ ಹೇಳಲಾಗಿದೆ. 'ಕಿಸಾನ್ ಪೆಹಚಾನ್ ಪತ್ರ' ಅಥವಾ 'ರೈತ ಗುರುತಿನ ಚೀಟಿ' ಎನ್ನುವುದು ರಾಜ್ಯಗಳ ಭೂದಾಖಲೆಗಳ ಜತೆಗೆ ಲಿಂಕ್ ಆಗಿರುವ ಆಧಾರ್ ರೀತಿಯ ವಿಶಿಷ್ಟ ಡಿಜಿಟಲ್ ಗುರುತಿನ ಸಂಖ್ಯೆಯಾಗಿದೆ. ಇದರಲ್ಲಿ ರೈತನ ಹೆಸರು, ಕೃಷಿಭೂಮಿ ಮಾಹಿತಿ, ಆ ಭೂಮಿಯಲ್ಲಿ ಬೆಳೆಯುತ್ತಿರುವ ಬೆಳೆಗಳ ವಿವರಗಳಿರುತ್ತವೆ.

ತಲೆಗೆ ಹೊಕ್ಕ ಗುಂಡು: ಎಎಪಿ ಶಾಸಕ ಸಾವು

ಲೂದಿಯಾನ: ಪಂಜಾಬ್ ರಾಜ್ಯದ ಲೂಧಿಯಾನ ಪಶ್ಚಿಮ ಕ್ಷೇತ್ರದ 'ಆಮ್ ಆದ್ಮಿ ಪಕ್ಷ'(ಎಎಪಿ) ಶಾಸಕ ಗುರುಪ್ರೀತ್ ಗೋಗಿ ತಲೆಗೆ ಗುಂಡು ಹೊಕ್ಕು ಸಾವಿಗೀಡಾಗಿದ್ದಾರೆ.

ಕುಟುಂಬದವರ ಹೇಳಿಕೆ ಪ್ರಕಾರ ಶುಕ್ರವಾರ ತಡರಾತ್ರಿ ಗೋಗಿ ಅವರು ಮನೆಯಲ್ಲಿ ಬಂದೂಕು ಸ್ವಚ್ಛಗೊಳಿಸುತ್ತಿದ್ದರು. ಈ ಸಂದರ್ಭ ಆಕಸ್ಮಿಕವಾಗಿ ಗುಂಡು ಸಿಡಿದಿದ್ದು, ನೇರವಾಗಿ ತಲೆಗೇ ಹೊಕ್ಕಿತು. ರಕ್ತದ ಮಡುವಿನಲ್ಲಿ ಬಿದ್ದಿದ್ದ ಗೋಗಿ ಅವರನ್ನು ತಕ್ಷಣವೇ ಸಮೀಪದ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಆದರೆ ಆಸ್ಪತ್ರೆಯ ವೈದ್ಯರು, ಗೋಗಿ ಅವರು ಅದಾಗಲೇ ಮೃತಪಟ್ಟಿದ್ದಾರೆ ಎಂದು ಹೇಳಿದರು. ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿರುವ ಲೂದಿಯಾನ ಪೊಲೀಸರು, ಗೋಗಿ ಅವರ ತಲೆಗೆ ಆಕಸ್ಮಿಕವಾಗಿ ಗುಂಡು ಹೊಕ್ಕಿದೆ. ಅದರಿಂದಾಗಿಯೇ ಮೃತಪಟ್ಟಿದ್ದಾರೆ ಎಂದು ಕುಟುಂಬದವರು ಹೇಳಿದ್ದಾರೆ. ಗೋಗಿ ಆತ್ಮಹತ್ಯೆ ಮಾಡಿಕೊಂಡರೋ ಅಥವಾ ಆಕಸ್ಮಿಕವಾಗಿ ಗುಂಡು ತಗುಲಿತೋ ಎಂಬ ಪ್ರಶ್ನೆ ಎದುರಾಗಿದೆ. ಮರಣೋತ್ತರ ಪರೀಕ್ಷೆ ಬಳಿಕ ಸಾವಿಗೆ ಕಾರಣ ತಿಳಿಯಲಿದೆ. ತನಿಖೆ ಆರಂಭಿಸಲಾಗಿದೆ ಎಂದು ಹೇಳಿದ್ದಾರೆ. ಗೋಗಿ 2022ರಲ್ಲಿ 'ಎಎಪಿ' ಸೇರಿ ಲೂಧಿಯಾನ (ಪಶ್ಚಿಮ) ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಭರತ್ ಭೂಷಣ್ ಆಶು ಅವರನ್ನು 7500 ಮತಗಳ ಅಂತರದಿಂದ ಸೋಲಿಸಿದ್ದರು.

ಪಾಕ್‌ನ 18 ಮಂದಿ ಅಣು ವಿದ್ಯುತ್ ಸಿಬ್ಬಂದಿ ಕಿಡ್ನ್ಯಾಪ್

ಇಸ್ಲಾಮಾಬಾದ್: ಪಾಕಿಸ್ತಾನದ ಪರಮಾಣು ಇಂಧನ ಆಯೋಗದ 18 ಉದ್ಯೋಗಿಗಳನ್ನು ತೆಹ್ರೀಕ್-ಎ-ತಾಲಿಬಾನ್ ಪಾಕಿಸ್ತಾನ್(ಟಿಟಿಪಿ) ಉಗ್ರರು ಪಾಕ್‌ನ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಶನಿವಾರ ಅಪಹರಿಸಿ ದ್ದಾರೆ. ಸುದ್ದಿ ತಿಳಿಯುತ್ತಲೇ ಸ್ಥಳೀಯ ಪೊಲೀಸರು ಶೋಧ ಕಾರ್ಯಾಚರಣೆ ಆರಂಭಿಸಿದ್ದರಿಂದ ಎಂಟು ಸಿಬ್ಬಂದಿಯನ್ನು ರಕ್ಷಿಸಲು ಸಾಧ್ಯವಾಗಿದೆ.

ಕಾಬೂಲ್ ಖೇಲ್ ಪರಮಾಣು ವಿದ್ಯುತ್ ಗಣಿ ಯೋಜನೆಯ ಕೆಲಸಕ್ಕೆ ಹೋಗುತ್ತಿದ್ದ ಸಿಬ್ಬಂದಿಗಳಿದ್ದ ವಾಹನದ ಮೇಲೆ ಶಸ್ತ್ರಸಜ್ಜಿತ ಭಯೋತ್ಪಾದಕರ ತಂಡ ಹೊಂಚು ದಾಳಿ ನಡೆಸಿದೆ. ಬಂದೂಕು ತೋರಿಸಿ ಬೆದರಿಸಿ ಸಿಬ್ಬಂದಿಗಳನ್ನು ಒತ್ತೆಯಾಳಾಗಿರಿಸಿಕೊಂಡ ಉಗ್ರರು, ಗಣಿ ಇಲಾಖೆ ವಾಹನಕ್ಕೆ ಬೆಂಕಿ ಹಚ್ಚಿದ್ದರು. ತಕ್ಷಣವೇ ಕಾರ್ಯಪ್ರವೃತ್ತರಾದ ಪೊಲೀಸರು 8 ಒತ್ತೆಯಾಳುಗಳನ್ನು ರಕ್ಷಿಸಿದರು. ಅವರಲ್ಲಿ ಮೂವರು ಗಾಯಗೊಂಡಿದ್ದಾರೆ. ಒಬ್ಬನ ಸ್ಥಿತಿ ಗಂಭೀರವಾಗಿದೆ. ಉಳಿದ ಒತ್ತೆಯಾಳುಗಳನ್ನು ರಕ್ಷಿಸಲು ಪ್ರಯತ್ನಗಳು ನಡೆಯುತ್ತಿವೆ. ತಾನೇ ಅಣು ಆಯೋಗದ ಸಿಬ್ಬಂದಿಗಳನ್ನು ಅಪಹರಣ ಮಾಡಿರುವುದಾಗಿ 'ಟಿಟಿಪಿ' ಉಗ್ರರ ಸಂಘಟನೆ ಹೊಣೆ ಹೊತ್ತುಕೊಂಡಿದೆ. ಅಪಹರಣ ಸಂದರ್ಭದ ವಿಡಿಯೊವನ್ನು ಬಿಡುಗಡೆ ಮಾಡಿದೆ. 'ನಮ್ಮನ್ನು ರಕ್ಷಿಸಿ' ಎಂದು ಒತ್ತೆಯಾಳುಗಳು ಪಾಕ್ ಸರಕಾರಕ್ಕೆ ಮನವಿ ಮಾಡುತ್ತಿರುವುದೂ ವಿಡಿಯೊದಲ್ಲಿದೆ.

ಗುಜರಾತ್ 9 ತಿಂಗಳ ಶಿಶುವಿಗೆ ಎಚ್‌ಎಂಪಿವಿ

ಅಹಮದಾಬಾದ್: ಗುಜರಾತ್ ರಾಜ್ಯದ ಅಹಮದಾಬಾದ್‌ನಲ್ಲಿ 9 ತಿಂಗಳ ಹಸುಗೂಸಿಗೆ ಎಚ್‌ಎಂಪಿ ವೈರಸ್ ಸೋಂಕು ತಗುಲಿರುವುದು ಶನಿವಾರ ದೃಢಪಟ್ಟಿದೆ. ಇದು ಗುಜರಾತ್ ರಾಜ್ಯದಲ್ಲಿ ವರದಿಯಾದ 4ನೇ ಪ್ರಕರಣ. ಎಲ್ಲಾ 4 ಪ್ರಕರಣಗಳು ಒಂದು ವಾರದ ಅವಧಿಯಲ್ಲೇ ವರದಿಯಾಗಿವೆ. ಜ.6ರಂದು ಕೆಮ್ಮು-ಶೀತ ಮತ್ತು ಉಸಿರಾಟ ತೊಂದರೆಯಿಂದ ಖಾಸಗಿ ಆಸ್ಪತ್ರೆಗೆ ದಾಖಲಾದ ಗಂಡು ಮಗುವಿಗೆ ಎಚ್‌ಎಂಪಿವಿ ಸೋಂಕು ತಗುಲಿರುವುದು ಪ್ರಯೋಗಾಲಯ ವರದಿಯಿಂದ ದೃಢಪಟ್ಟಿದೆ. ಶಿಶು ವಿದೇಶಕ್ಕೆ ಹೋಗಿದ್ದ ಅಥವಾ ಇತರ ಯಾವುದೇ ಪ್ರಯಾಣದ ಇತಿಹಾಸ ಹೊಂದಿಲ್ಲ ಎಂದು ಅಹಮದಾಬಾದ್ ಮುನ್ಸಿಪಲ್ ಕಾರ್ಪೊರೇಷನ್ ಅಧಿಕಾರಿಗಳು ಹೇಳಿದ್ದಾರೆ. 2 ದಿನದ ಹಿಂದೆ ಅಹಮದಾಬಾದ್‌ನಲ್ಲಿ 80 ವರ್ಷದ ವೃದ್ಧರೊಬ್ಬರಿಗೆ ಸೋಂಕು ತಗಲಿತ್ತು. ಆಸ್ತಮಾದಿಂದ ಬಳಲುತ್ತಿರುವ ವೃದ್ಧರು ಸದ್ಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಜ.1ರಂದು ರಾಜಸ್ಥಾನದಿಂದ ಬಂದ 2 ತಿಂಗಳ ಶಿಶುವಿನಲ್ಲಿ ಸೋಂಕು ದೃಢಪಟ್ಟಿತ್ತು. ಇದು ಗುಜರಾತಿನ ಮೊದಲ ಪ್ರಕರಣವಾಗಿದೆ. ಶುಕ್ರವಾರ ಸಬರಕಾಂತ ಜಿಲ್ಲೆಯ 8 ವರ್ಷದ ಬಾಲಕನಲ್ಲಿಯೂ ಸೋಂಕು ದೃಢಪಟ್ಟಿತ್ತು. ಜ್ವರ, ನೆಗಡಿ. ಕೆಮ್ಮುವಿನಂತಹ ಲಕ್ಷಣ ಕಾಣಿಸಿಕೊಂಡ ಶಿಶುವಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ಬಳಿಕ ಡಿಸ್ಚಾರ್ಜ್ ಮಾಡಲಾಗಿತ್ತು.

ಸಮಾಚಾರ ಸಣ್ಣದಲ್ಲ

ರೈತರೊಂದಿಗೆ ಸಂವಾದ ಇಂದು

ವಿಜಯಪುರ: ಸ್ವಾಮಿ ವಿವೇಕಾನಂದರ ಜಯಂತಿ ನಿಮಿತ್ತ ರೈತರೊಂದಿಗೆ ಸಂವಾದ ಸಂಕ್ರಮಣ ಸೀತನಿ ಕಾರ್ಯಕ್ರಮ ಜ.12 ರಂದು ಸಂಜೆ 4.30 ಕ್ಕೆ ಜಿಲ್ಲೆಯ ತಿಕೋಟಾ ತಾಲೂಕಿನ ರತ್ನಾಪುರ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಜರುಗಲಿದೆ. ಸಂವಾದಕರಾಗಿ ಕೃಷಿ ಆಯೋಗದ ಅಧ್ಯಕ್ಷ ಅಶೋಕ ದಳವಾಯಿ, ಕೃಷಿ ಇಲಾಖೆ ಜಂಟಿ ನಿರ್ದೇಶಕಿ ಎಲ್. ರೂಪಾ, ಪಶು ಸಂಗೋಪನಾ ಇಲಾಖೆ ಉಪನಿರ್ದೇಶಕ ಅಶೋಕ ಘೋಣಸಗಿ ವಹಿಸುವರು ಎಂದು ಕೃಷಿ ಇಲಾಖೆ ಹಾಗೂ ಸಮಾಜ ವಿಜ್ಞಾನ ವೇದಿಕೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಹಿತ್ಯಕ್ಕೆ ಹಲಸಂಗಿ ಗೆಳೆಯರ ಕೊಡುಗೆ

ವಿಜಯಪುರ: ಹಲಸಂಗಿಯ ಮಧುರ ಚೆನ್ನರ ಗೆಳೆಯರ ಬಳಗವು ವಿಜಯಪುರದ ಮಣ್ಣಿನ ಸೊಗಡು, ಮಾನವೀಯತೆಗಾಗಿ ಮಿಡಿಯುವ ಹಾಗೂ ಸಾಮಾಜಿಕ ಕಾಳಜಿಯನ್ನು ಹೊಂದಿದ ಜಾನಪದ ಸಾಹಿತ್ಯವನ್ನು ನಾಡಿಗೆ ನೀಡಿರುವುದು ಸಾಹಿತ್ಯ ಕ್ಷೇತ್ರದಲ್ಲಿ ಬಹುದೊಡ್ಡ ಕೊಡುಗೆಯಾಗಿದೆ ಎಂದು ಸಾಹಿತಿ ಗುರುರಾಜ್ ಲೂತಿ ಹೇಳಿದರು. ವಿಜಯಪುರದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕು. ಮೋನಿಕಾ ಬಸವರಾಜ ಕಣ್ಣಿ ಬಿ. ಇಡಿ ಕಾಲೇಜಿನಲ್ಲಿ ಹಮ್ಮಿಕೊಂಡ ಚಕೋರ ಸಾಹಿತ್ಯ ವೇದಿಕೆಯ ಉದ್ಘಾಟನೆ ಕಾರ್ಯಕ್ರಮದಲ್ಲಿ ಅವರು ನವೋದಯ ಕಾವ್ಯದ ಕೇಂದ್ರ, ಹಲಸಂಗಿ ಎಂಬ ವಿಷಯದ ಕುರಿತು ಉಪನ್ಯಾಸವನ್ನು ನೀಡಿ, ಹಲಸಂಗಿ ಗೆಳೆಯರ ಬಳಗ ಜನಸಾಮಾನ್ಯರಿಂದ ಹಿಡಿದು ಸಮಾಜದ ಎಲ್ಲ ಸ್ತರದ ಜನರ ಬದುಕಿನ ನೈಜ ಚಿತ್ರಣವನ್ನು ವೈವಿಧ್ಯಮಯವಾಗಿ ನಾಡಿಗೆ ಪರಿಚಯಿಸುವ ಮಹತ್ತರ ಕೆಲಸವನ್ನು ಮಾಡಿದೆ. ನವೋದಯ ಸಾಹಿತ್ಯಕ್ಕೆ ಅಪಾರವಾದ ಶ್ರೇಷ್ಠತೆಯನ್ನು ತಂದುಕೊಟ್ಟಿದೆ ಎಂದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ಮಹಾದೇವ ಬಸರಕೋಡ ಮಾತನಾಡಿದರು. ಹಿರಿಯ ಸಾಹಿತಿ ವಿ.ಡಿ. ಐಹೊಳ್ಳಿ ಕಾರ್ಯಕ್ರಮ ಉದ್ಘಾಟಿಸಿದರು. ಬಸವರಾಜ ಕಣ್ಣಿ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಜನಪದ ತಜ್ಞ ಶಂಕರ್ ಬೈಚಬಾಳ, ಕಡಣಿ ಬೆರಗು ಪ್ರಕಾಶನದ ವಿಜಯಲಕ್ಷ್ಮಿ ಕತ್ತಿ, ಸಾಹಿತಿ ಮೋಹನ್ ಕಟ್ಟಿಮನಿ, ರಾಮಚಂದ್ರ ಮೋರೆ, ಎಂ ಎಸ್ ಖೋದನಾಪುರ, ಶಿವಕುಮಾರ ಕಣ್ಣಿ, ರಮೇಶ್ ಕತ್ತಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ತೇಜಶ್ವಿನಿ ಸಚೇಂದ್ರ ಲಂಬುಗೆ ಪಿಎಚ್.ಡಿ

ವಿಜಯಪುರ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಗುರುವಾರ ನಡೆದ 16ನೇ ಘಟಿಕೋತ್ಸವದಲ್ಲಿ ಸ್ನಾತ್ತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಸಂಶೋಧನಾ ವಿದ್ಯಾರ್ಥಿನಿಯಾದ ತೇಜಶ್ವಿನಿ ಸಚೇಂದ್ರ ಲಂಬು ಅವರು ಪ್ರೊ. ಶಾಂತಾದೇವಿ ಟಿ. ಅವರ ಮಾರ್ಗದರ್ಶನದಲ್ಲಿ ಸಲ್ಲಿಸಿದ ''ಇನ್ಫಮೇಷನ್ ಲಿಟರೆಸಿ ಸ್ಕಿಲ್ಸ್ ಅಮಂಗ್ ಡಿಸೇಬಲ್ಡ್ ಪೀಪಲ್: ಎ ಸ್ಟಡಿ ಆಫ್ ವಿಜಯಪುರ ಡಿಸ್ಟ್ರಿಕ್ಟ್'' ಕುರಿತು ಸಲ್ಲಿಸಿದ ಮಹಾಪ್ರಬಂಧಕ್ಕೆ ಪಿಎಚ್.ಡಿ ಪದವಿ ನೀಡಲಾಗಿದೆ. ಇವರಿಗೆ ಕುಲಪತಿ ಪ್ರೊ. ಬಿ.ಕೆ. ತುಳಸಿಮಾಲಾ, ಕುಲಸಚಿವ ಪ್ರೊ. ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಎಚ್.ಎಂ. ಚಂದ್ರಶೇಖರ ಅವರು ಅಭಿನಂದಿಸಿದ್ದಾರೆ.

ಬ್ಯಾಂಕ್ ಚುನಾವಣೆಗೆ ನಾಮಪತ್ರ ಸಲ್ಲಿಕೆ

ತಾಳಿಕೋಟಿ: ಪಟ್ಟಣದ ಪ್ರತಿಷ್ಠಿತ ಸಹಕಾರಿ ಕೋ-ಆಪರೇಟಿವ್ ಬ್ಯಾಂಕ್ ಇದರ ಆಡಳಿತ ಮಂಡಳಿ ನಿರ್ದೇಶಕರ 13 ಸ್ಥಾನಗಳಿಗೆ ಜನವರಿ 19ರಂದು ಜರಗುವ ಚುನಾವಣೆಗೆ ಓಲ್ಡ್ ಈಸ್ ಗೋಲ್ಡ್ (ಹಳೆಯ)ಪೆನಲ್ ನ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು. ನಾಮಪತ್ರ ಸಲ್ಲಿಸಲು ಕೊನೆಯ ದಿನವಾದ ಶನಿವಾರ(ಜ.11)ರಂದು ಪಟ್ಟಣದ ಶ್ರೀಖಾಸ್ಗತೇಶ್ವರ ಮಠಕ್ಕೆ ತಮ್ಮ ಅಪಾರ ಬೆಂಬಲಿಗರೊಂದಿಗೆ ಭೇಟಿ ನೀಡಿ ಲಿಂಗೈಕ್ಯ ಉಭಯ ಶ್ರೀಗಳ ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿದ 13 ಜನ ಅಭ್ಯರ್ಥಿಗಳು ಯಾವ ಕಾರಣಕ್ಕೂ ಚುನಾವಣೆಯಲ್ಲಿ ವ್ಯಕ್ತಿಗತವಾಗಿ ಮತಯಾಚನೆ ಮಾಡದೆ ಪೆನೆಲ್ ದಿಂದ ಮತಯಾಚನೆ ಮಾಡುತ್ತೇವೆ ಎಂದು ಪ್ರಮಾಣ ಮಾಡಿದರು. ನಂತರ ಅಲ್ಲಿಂದ ತಮ್ಮ ನೂರಾರು ಬೆಂಬಲಿಗರೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬೃಹತ್ ಮೆರವಣಿಗೆಯನ್ನು ನಡೆಸಿ ಪಟಾಕಿ ಸಿಡಿಸಿ ತಮ್ಮ ಪೆನಲ್ ಗೆ ಗೆಲ್ಲಿಸಲು ಮತಯಾಚನೆ ಮಾಡುತ್ತಾ ಬ್ಯಾಂಕಿನ ಕಛೇರಿಗೆ ತಲುಪಿ ಅಲ್ಲಿ ಚುನಾವಣಾ ಧಿಕಾರಿ ಚೇತನ ಭಾವಿಕಟ್ಟಿ ಇವರಿಗೆ ತಮ್ಮ ನಾಮಪತ್ರ ಸಲ್ಲಿಸಿದರು. ಹಳೆಯ ಪೆನಲ್ ನ ಅಭ್ಯರ್ಥಿ ಕಾಶಿನಾಥ ಸಜ್ಜನ ಅವರು ಮಾತನಾಡಿದರು. ಈ ಸಮಯದಲ್ಲಿ ಪೆನಲ್ ನ ಅಭ್ಯರ್ಥಿಗಳಾದ ಡಿ.ಎಸ್. ಹೆಬಸೂರ, ಕೆ.ಸಿ.ಸಜ್ಜನ,ಐ.ಬಿ.ಬಿಳೇಭಾವಿ,ಎಂ. ಎಸ್. ಸರಶೆಟ್ಟಿ,ಸಿ.ಎಸ್.ಯಾಳಗಿ ಎನ್.ಆಯ್.ಚಿನಗುಡಿ,ಡಿ.ಕೆ. ಪಾಟೀಲ,ಎ.ವಿ.ಹಜೇರಿ,ಎಸ್.ಸಿ. ಪಾಟೀಲ, ಸಹಾಯಕ ಚುನಾವಣಾಧಿಕಾರಿ ಆರ್.ಬಿ.ಧಮ್ಮೂರ 'ಮಠ, ವ್ಯವಸ್ಥಾಪಕಿ ಮಣೂರ ಹಾಗೂ ಬ್ಯಾಂಕಿನ ಸಿಬ್ಬಂದಿಗಳು ಇದ್ದರು.

{ಬಸವಜಯ ಮೃತ್ಯುಂಜಯಶ್ರೀ} ಕೂಡಲಸಂಗಮ ಪೀಠ

ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ವಿಧಾನಮಂಡಲ ಚಳಿಗಾಲದ ಅಧಿವೇಶನ ನಡೆದಾಗ, ಸರಕಾರದ ಕುಮ್ಮಕ್ಕಿನಿಂದ ಪೊಲೀಸರು ನಮ್ಮ ಮೇಲೆ ಲಾಠಿಚಾರ್ಜ್ ಮಾಡಿದರು. ಲಾಠಿಚಾರ್ಜ್ ವೇಳೆ ಗಾಯಗೊಂಡ ಹೋರಾಟಗಾರರಿಗೆ ಪಂಚಮಸಾಲಿ ಮೀಸಲಾತಿ ವೀರ ಎಂಬ ಬಸವರಕ್ಷೆ ಕೊಡುತ್ತೇವೆ. ರಾಜ್ಯಾದ್ಯಂತ ಪಂಚಮಸಾಲಿ ಪ್ರತಿಜ್ಞಾ ಕ್ರಾಂತಿ ಅಭಿಯಾನ ಮಾಡುತ್ತೇವೆ.

ಮೈಸೂರು ಸ್ಯಾಂಡಲ್ ಸಾಬೂನು ಮೇಳ | ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಚಾಲನೆ

ಕೆಎಸ್ಡಿಎಲ್ ಘಟಕ ಸ್ಥಾಪನೆಗೆ ಜಮೀನು ಮಂಜೂರು

ವಿಜಯಪುರ: ನಗರದ ಹೊರವಲಯದ ಇಟ್ಟಂಗಿಹಾಳ ಬಳಿ ಮೈಸೂರು ಸ್ಯಾಂಡಲ್ ಸೋಪ್ ಉತ್ಪಾದನೆ ಘಟಕ ಸ್ಥಾಪಿಸಲು 10 ಎಕರೆ ಜಮೀನು ನೀಡುವುದಾಗಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಘೋಷಿಸಿದ್ದಾರೆ.

ನಗರದಲ್ಲಿ ಶನಿವಾರ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಆಯೋಜಿಸಿರುವ ಮೈಸೂರು ಸ್ಯಾಂಡಲ್ ಸಾಬೂನು ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಮಾತನಾಡಿದ ನಾಗಠಾಣ ಶಾಸಕ ವಿಠ್ಠಲ ಕಟಕದೊಂಡ, ಮುಂದಿನ ಸಂಕ್ರಾಂತಿಯೊಳಗೆ ವಿಜಯಪುರ ಜಿಲ್ಲೆಯಲ್ಲಿಯೇ ಒಂದು ಸಾಬೂನು ಕಾರ್ಖಾನೆ ಘಟಕ ಪ್ರಾರಂಭಿಸಬೇಕು. ಇದರಿಂದ ನೂರಾರು ಯುವಕರಿಗೆ ಉದ್ಯೋಗ ಸಿಗಲಿದೆ ಎಂದು ಕೋರಿದರು. ಆಗ ತಕ್ಷಣ ಸ್ಪಂದಿಸಿದ ಸಚಿವ ಎಂ. ಬಿ. ಪಾಟೀಲ ಅವರು, ಇಟ್ಟಂಗಿಹಾಳ ಬಳಿ 10 ಎಕರೆ ಜಮೀನು ನೀಡಲಾಗುವುದು. ಒಂದೆರಡು ದಿನಗಳಲ್ಲಿ ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಘೋಷಿಸಿದರು.

ಮೈಸೂರು ಮಹಾರಾಜರು ನೀರಾವರಿಗಾಗಿ ಕೆ.ಆರ್.ಎಸ್. ಡ್ಯಾಂ, ಕೈಗಾರಿಕೆಗಾಗಿ ಕೆ.ಎಸ್.ಡಿ.ಎಲ್. ಮತ್ತು ಶಿಕ್ಷಣಕ್ಕಾಗಿ ನಾನಾ ಸಂಸ್ಥೆಗಳನ್ನು ಪ್ರಾರಂಭಿಸಿ ರಾಜ್ಯದ ಅಭಿ ವೃದ್ಧಿಗೆ ಮುನ್ನುಡಿ ಬರೆದಿದ್ದಾರೆ. ಅವರು ಪ್ರಾರಂಭಿ ಸಿರುವ ಮೈಸೂರು ಸ್ಯಾಂಡಲ್ ಸೋಪ್ ಜಗತ್ತಿನಾದ್ಯಂತ ಅದರದೇ ಜನಪ್ರಿಯತೆ ಹೊಂದಿದೆ. ಈ ಹಿಂದೆ ರಾಜ್ಯದ ಜನರ ಮನಗಳಲ್ಲಿ ಸ್ಥಾನ ಪಡೆದಿದ್ದ ಸಾಬೂನು ಇತ್ತೀಚೆಗೆ ಗೊಂದಲದಿಂದ ಕೂಡಿ ಅಪಖ್ಯಾತಿ ಪಡೆದಿತ್ತು. ನಾನು ಸಚಿವ ನಾದ ನಂತರ ಸೂಕ್ತ ಕ್ರಮ ಕೈಗೊಂಡು ಡಿಎಫ್ಓ ಪ್ರಶಾಂತ ಅವರನ್ನು ಎಂಡಿ ಮಾಡಿ ಪುನಶ್ಚೇತನಕ್ಕೆ ಕ್ರಮ ಕೈಗೊಂಡು ಸುಮಾರು 20 ಹೊಸ ಉತ್ಪನ್ನಗಳನ್ನು ಹೊರ ತಂದು ಸಂಸ್ಥೆಯನ್ನು ಗತವೈಭವಕ್ಕೆ ತರಲು ಪ್ರಯತ್ನಿ ಸುತ್ತಿದ್ದೇವೆ.

ರಾಜ್ಯದ ಕಿರಾಣಿ ಅಂಗಡಿಗಳಿಂದ ಹಿಡಿದ ದೇಶ, ವಿದೇಶಗಳಲ್ಲಿ ನಮ್ಮ ಮಳಿಗೆ ಸ್ಥಾಪಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪರಿಚಯಿಸಲು ಕ್ರಮ ಕೈಗೊಳ್ಳಲಾಗಿದೆ. ನಮ್ಮ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಕಲಾ ಲೋಕ ಸ್ಥಾಪಿಸಿ ಅಲ್ಲಿ ಈ ಉತ್ಪನ್ನಗಳನ್ನು ಪರಿಚಯಿಸಲಾಗುವುದು. ನಮ್ಮ ಉತ್ಪನ್ನಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕೆ.ಎಸ್.ಡಿ.ಎಲ್ ಅಧ್ಯಕ್ಷ ಸಿ. ಎಸ್ ನಾಡಗೌಡ ಕೂಡ ಈಗ ಕಂಪನಿಯ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದು ಅವರು ಹೇಳಿದರು.

ಸಾಬೂನು ಮೇಳವನ್ನು ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಉದ್ಘಾಟಿಸಿದರು.

> ಸಚಿವ ಎಂ.ಬಿ. ಪಾಟೀಲ ಅವರು ಕೈಗಾರಿಕೆ ಸಚಿವರಾಗಿ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಸಾಕಷ್ಟು ಒತ್ತು ನೀಡಿದ್ದು, ನಷ್ಟದಲ್ಲಿದ್ದ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿ ತವನ್ನು ಲಾಭಕ್ಕೆ ತಂದಿದ್ದಾರೆ.
>
> ವಿಠ್ಠಲ ಕಟಕದೊಂಡ, ಶಾಸಕ

ಕೆ.ಎಸ್.ಡಿ.ಎಲ್ ಸಂಸ್ಥೆಯ ಅಧ್ಯಕ್ಷ ಸಿ. ಎಸ್. ನಾಡಗೌಡ ಮಾತನಾಡಿ, ಇಂದಿನ ಪೈಪೋಟಿಯ ಯುಗದಲ್ಲಿ ನಾವೂ ಕೂಡ ನಮ್ಮ ಗುಣಮುಟ್ಟದ ಉತ್ಪನ್ನಗಳನ್ನು ಪರಿಚಯಿಸಿ, ಪ್ರಚಾರ ಮಾಡಿ, ಮನೆಮನೆಗೆ ತಲುಪಿಸುವ ಮೂಲಕ ಇತರ ಕಂಪನಿಗಳಿಗೆ ಸ್ಪರ್ಧೆಗಿಳಿಯಬೇಕು. ಜಾತ್ರೆ, ಉತ್ಸವ ಮತ್ತೀತರ ಕಾರ್ಯಕ್ರಮಗಳಲ್ಲಿ ಸಾಬೂನು ಮೇಳ ಆಯೋಜಿಸಿ ರಿಯಾಯಿತಿ ದರದಲ್ಲಿ ಸಾಬೂನು ಮಾರಾಟ ಮಾಡಬೇಕು. ಈ ಮೂಲಕ ಬಹುರಾಷ್ಟ್ರೀಯ ಕಂಪನಿಗಳ ಪ್ರಚಾರಕ್ಕೆ ಪ್ರತಿಯಾಗಿ ನಮ್ಮ ವಸ್ತುಗಳ ಪ್ರಚಾರ ಕೈಗೊಳ್ಳಲಾಗುತ್ತಿದೆ. ಮೈಸೂರು ಸ್ಯಾಂಡಲ್ ಸೋಪಿನ ಗುಣಮಟ್ಟ ಎಂದೂ ಬದಲಾಗಿಲ್ಲ. ಅಗರಬತ್ತಿ, ಸೌಂದರ್ಯವರ್ಧಕ ವಸ್ತುಗಳು, ಬಟ್ಟೆ ಒಗೆಯುವ ಸಾಬೂನುಗಳು, ಧೂಪ್, ಸಾಮ್ರಾಣಿ ಸೇರಿದಂತೆ ಇನ್ನೂ ಹೆಚ್ಚು ಹೊಸ ಉತ್ಪನ್ನಗಳ ಪರಿಚಯಕ್ಕೆ ಸಚಿವ ಎಂ. ಬಿ. ಪಾಟೀಲರು ಸಾಕಷ್ಟು ಸಹಕಾರ ನೀಡುತ್ತಿದ್ದಾರೆ. ಉತ್ಪನ್ನಗಳ ಜನಪ್ರಿಯತೆಯಾಗಲು ಸಂಸ್ಥೆಯ ಸಕಲ ಸಿಬ್ಬಂದಿ ಕೊಡುಗೆಯೂ ಸಾಕಷ್ಟಿದೆ. ವಿಜಯಪುರದಲ್ಲಿಯೂ ಒಂದು ಘಟಕ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಐದಾರು ತಿಂಗಳಲ್ಲಿ ಕಾರ್ಖಾನೆ ಪ್ರಾರಂಭಿಸಲು ಸಿದ್ಧತೆ ಮಾಡಲಾಗುವುದು ಎಂದು ತಿಳಿಸಿದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾತನಾಡಿ, ವಿಜಯಪುರದಲ್ಲಿ ಕೆ.ಎಸ್.ಡಿ.ಎಲ್ ಘಟಕ ಸ್ಥಾಪಿಸುವ ಸಚಿವ ಎಂ. ಬಿ. ಪಾಟೀಲರ ನಿರ್ಧಾರ ಸ್ವಾಗತಾರ್ಹ. ಇದರಿಂದ 400 ಯುವಕರಿಗೆ ಉದ್ಯೋಗ ಸಿಗಲಿದೆ. ಇಂದು ನೀರಾವರಿಯಿಂದಾಗಿ ಜಿಲ್ಲೆ ಅಭಿವೃದ್ಧಿಯಾಗಿದೆ. ಮುಂದಿನ ವರ್ಷದಲ್ಲಿ ವಿಜಯಪುರ ದಲ್ಲಿಯೇ ರಾಜ್ಯದಲ್ಲಿ ಅತೀ ಹೆಚ್ಚು ಮೈಸೂರು ಸ್ಯಾಂಡಲ್ ಸೋಪ್ ಮಾರಾಟದಲ್ಲಿ ಮುಂ ಚೂಣಿ ಯಲ್ಲಿರ ಲಿದೆ. ನಾವೂ ಕೂಡ ಈ ಉತ್ಪನ್ನಗಳ ಪ್ರಚಾರ ಮಾಡುತ್ತೇವೆ ಎಂದು ತಿಳಿಸಿದರು. ಕೆ.ಎಸ್.ಡಿ.ಎಲ್ ವ್ಯವಸ್ಥಾಪಕ ನಿರ್ದೇಶಕ ಡಾ. ಪ್ರಶಾಂತ ಪಿ. ಕೆ. ಎಂ ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಟಿ. ಭೂಬಾಲನ್, ಎಸ್ಪಿ ಲಕ್ಷ್ಮಣ ನಿಂಬರಗಿ, ಜಿ. ಪಂ. ಸಿಇಓ ರಿಷಿ ಆನಂದ, ಆಡಳಿತ ಮತ್ತು ಮಾರುಕಟ್ಟೆ ವಿಭಾಗದ ಜನರಲ್ ಮ್ಯಾನೇಜರ್ ಎಂ. ಗಂಗಪ್ಪ, ಬೆಂಗಳೂರು ಕಚೇರಿಯ ಅಕೌಂಟ್ಸ್ ಮ್ಯಾನೇಜರ್ ರುದ್ರೇಶ ಬಿ. ಕೆ., ಕಿರಿಯ ಅಧಿಕಾರಿ ವಿಜಯಮಹಾಂತೇಶ ಕಾಮತ, ಸಿದ್ಧೇಶ್ವರ ಸಂಸ್ಥೆಯ ಸಂಗು ಸಜ್ಜನ, ಗುರು ಗಚ್ಚಿನಮಠ, ಕಾರ್ಪೊರೇಟರ್ ರಾಜು ಮಗಿಮಠ, ಎಂ. ಎಸ್. ಕರಡಿ ಮುಂತಾದವರು ಉಪಸ್ಥಿತರಿದ್ದರು.

ರಸ್ತೆ ಸಂಚಾರ ನಿಯಮ ಅರಿತು ವಾಹನ ಚಲಾಯಿಸಿ

ಬಸವನಬಾಗೇವಾಡಿ: ಒಂದು ವರ್ಷದಲ್ಲಿ ಜಿಲ್ಲೆಯಲ್ಲಿ ರಸ್ತೆ ಅಪಘಾತದಿಂದ 420 ರಿಂದ 450 ಜನರು ಸಾವಿಗಿಡಾಗಿದ್ದಾರೆ 1350 ರಿಂದ 1400 ಜನರು ಗಾಯಗೊಂಡಿದ್ದಾರೆ. ಪ್ರತಿಯೊಬ್ಬರೂ ರಸ್ತೆ ಸಂಚಾರ ನಿಯಮ ಅರಿತು ವಾಹನ ಚಲಾಯಿಸಿದರೆ ಇಂತಹ ಅನಾಹುತಗಳನ್ನು ತಪ್ಪಿಸಬಹುದು ಎಂದು ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಂಕರ ಮಾರಿಹಾಳ ಹೇಳಿದರು.

ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ಶನಿವಾರ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹಕ್ಕೆ ಚಾಲನೆ ನೀಡಿದ ನಂತರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪ್ರತಿಯೊಬ್ಬರೂ ರಸ್ತೆ ಸಂಚಾರ ನಿಯಮ ಅರಿತುಕೊಳ್ಳಬೇಕು, ವಾಹನಗಳನ್ನು ವೇಗವಾಗಿ ಚಾಲನೆ ಮಾಡಬಾರದು. ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ನಡೆದುಕೊಂಡು ಹೋಗುವವರು ಪಾದಾಚಾರಿ ರಸ್ತೆಯಲ್ಲಿ ಹೋಗುವ ಮೂಲಕ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು. ವಿದ್ಯಾರ್ಥಿನಿಯರಿಗೆ ಯಾರಾದರೂ ತೊಂದರೆ ಕೊಟ್ಟರೆ 112 ಸಂಖ್ಯೆಗೆ ಕರೆಮಾಡಬೇಕು ಎಂದು ಹೇಳಿದರು.

ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮದಲ್ಲಿ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಂಕರ ಮಾರಿಹಾಳ ಮಾತನಾಡಿದರು.

ಡಿ.ವೈ.ಎಸ್.ಪಿ ಬಲ್ಲಪ್ಪ ನಂದಗಾವಿ ಮಾತನಾಡಿ, ಪಾಲಕರು 18 ವರ್ಷದ ಮಕ್ಕಳು ಬೈಕ್ ಇತರೆ ವಾಹನ ಚಾಲನೆ ಮಾಡದಂತೆ ನೋಡಿಕೊಳ್ಳಬೇಕು, ಬೈಕ್ ಆಟೋಗಳಲ್ಲಿ ನಿಗದಿಗಿಂತ ಹೆಚ್ಚಿನ ಸವಾರರು ಪ್ರಯಾಣಿಸಬಾರದು. ವಾಹನ ಚಾಲನೆ ಮಾಡುವವರು ಕಡ್ಡಾಯವಾಗಿ ಚಾಲನಾ ಪರವಾನಿಗೆ ಹೊಂದಿರಬೇಕು. ಪ್ರತಿಯೊಬ್ಬರ ಜೀವನ ಅಮೂಲ್ಯವಾಗಿದೆ ನಮ್ಮ ಜೀವನಕ್ಕಿರುವ ಮಹತ್ವ ಇತರರ ಜೀವನಕ್ಕೂ ಇದೆ ಎಂಬುದನ್ನು ಅರಿತುಕೊಳ್ಳಬೇಕು ನಮ್ಮ ಮನೆಯ ಸದಸ್ಯರಿಗೆ ಹಾಗೂ ಸುತ್ತಮುತ್ತಲಿನ ಜನರಿಗೆ ರಸ್ತೆ ಸಂಚಾರ ನಿಯಮಗಳನ್ನು ತಿಳಿಸಿಕೊಡಬೇಕು ಎಂದು ಹೇಳಿದರು.ವಕೀಲರ ಸಂಘದ ಅಧ್ಯಕ್ಷ ಎಚ್.ಎಸ್.ಗುರಡ್ಡಿ, ಪಿಐ ಗುರುಶಾಂತ ದಾಶ್ಯಾಳ, ಬಸ್ ಡಿಪೋ ವ್ಯವಸ್ಥಾಪಕ ಬಿ.ವಿ.ಚಿತ್ತವಾಡಗಿ, ಬಸಮ್ಮ ಹಂಜಗಿ ಮಾತನಾಡಿದರು. ಕಾರ್ಯಕ್ರಮಕ್ಕೂ ಮುನ್ನ ಬಸವೇಶ್ವರ ವೃತ್ತದಲ್ಲಿ ಹೆಚ್ಚುವರಿ ಎಸ್.ಪಿ ಜಾಗೃತಿ ಜಾಥಾಕ್ಕೆ ಚಾಲನೆ ನೀಡುದರು. ಜಾಥಾವು ಬಸ್ ನಿಲ್ದಾಣ, ತೆಲಗಿ ರಸ್ತೆ ಮಾರ್ಗವಾಗಿ ಪೊಲೀಸ್ ಠಾಣೆ ಆವರಣಕ್ಕೆ ತಲುಪಿತು. ತಹಶೀಲ್ದಾರ ವೈ.ಎಸ್. ಸೋಮನಕಟ್ಟಿ ಸೇರಿದಂತೆ ವಿವಿಧ ಕಾಲೇಜುಗಳ ಉಪನ್ಯಾಸಕರು, ವಿದ್ಯಾರ್ಥಿಗಳು ಜಾಥಾದಲ್ಲಿ ಭಾಗವಹಿಸಿದ್ದರು.

ಚುನಾವಣಾ ಪ್ರಕ್ರಿಯೆ ತನಿಖೆಗೆ ಆಗ್ರಹ

ವಿಜಯಪುರ: ಜನೇವರಿ 5ರಂದು ನಗರದಲ್ಲಿ ನಡೆದ ಜಿಓಸಿಸಿ ಬ್ಯಾಂಕ್ ನಿರ್ದೇಶಕರ ಸ್ಥಾನದ ಚುನಾವಣೆಯಲ್ಲಿ ನಕಲಿ ಮತದಾನ, ಚುನಾವಣೆ ನೀತಿನಿಯಮಗಳು, ಗೌಪ್ಯತೆ ಸೇರಿದಂತೆ ಹಲವು ಕಾನೂನುಗಳ ಉಲ್ಲಂಘನೆ ಮಾಡಲಾಗಿದೆ ಎಂದು ಆರೋಪಿಸಿ, ಚುನಾವಣಾ ಪ್ರಕ್ರಿಯೆ ತನಿಖೆ ನಡೆಸುವಂತೆ ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಸುರೇಶ ಶೇಡಶ್ಯಾಳ ಒತ್ತಾಯಿಸಿದರು.

ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಜಿಓಸಿಸಿ ಬೈಲಾ ಪ್ರಕಾರ ಮೃತರಾದವರ, ನಿವೃತ್ತರಾದವರ ಸದಸ್ಯತ್ವ ಒಂದೇ ವರ್ಷದಲ್ಲಿ ರದ್ದು ಮಾಡಬೇಕು, ಆದರೆ ನಾಲ್ಕೈದು ವರ್ಷವಾದರೂ ಮಾಡಿಲ್ಲ. ಮೃತರ ಹೆಸರಿನಲ್ಲಿ ಬೇರೆಯವರು ಮತ ಹಾಕಿದ್ದಾರೆ. ನಿವೃತ್ತ ನೌಕರರ ಓಟರ್ ಐಡಿ ನಕಲು ಮಾಡಿ ಓಟಿಂಗ್ ಮಾಡಲಾಗಿದೆ. ತಮಗೆ ಬೇಕಾದವರನ್ನು ಬೇಕಾದ ಕ್ಷೇತ್ರಗಳಲ್ಲಿ ಸೇರಿಸಿ ಓಟಿಂಗ್ ಮಾಡಿಸಿದ್ದಾರೆ. ಮತದಾನ ಕೇಂದ್ರದಲ್ಲಿ ಮೊಬೈಲ್ ಅನುಮತಿಸಿದ್ದಾರೆ. ಕೆಜಿಐಡಿ ನಂಬರ್ ಇಲ್ಲದವರೂ ಸಹ ಮತ ಹಾಕಿದ್ದಾರೆ. ಈ ಎಲ್ಲಾ ವಿಚಾರಗಳ ಕುರಿತು ದಾಖಲೆಗಳನ್ನು ಸಂಗ್ರಹಿಸಲಾಗಿದೆ. ಹೀಗಾಗಿ ಈ ಚುನಾವಣೆಯ ಕುರಿತು ಸಂಪೂರ್ಣ ತನಿಖೆ ಮಾಡಬೇಕು ಎಂದು ಅವರು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಶಿವಾನಂದ ಮಂಗಾನವರ, ಜಗದೀಶ ಗೋಳಸೂರ, ನೀಲಾ ಇಂಗಳೆ, ಜಯಶ್ರೀ ಬೆಣ್ಣಿ, ಎಸ್.ಆರ್.ಪಾಟೀಲ್, ಗಂಗಾಧರ ಗುಗ್ಗರಿ ಸೇರಿದಂತೆ ಇತರರು ಇದ್ದರು.

ಭೂ ಸುರಕ್ಷಾ ಯೋಜನೆಗೆ ಸಚಿವ ಚಾಲನೆ

ಕಂದಾಯ ದಾಖಲೆಗಳ ಗಣೀಕಿಕರಣಗೊಳಿಸುವ ಕಾರ್ಯಕ್ರಮಕ್ಕೆ ಸಚಿವ ಶಿವಾನಂದ ಪಾಟೀಲ ಚಾಲನೆ ನೀಡಿದರು.

ಬಸವನಬಾಗೇವಾಡಿ: ಹಳೆಯ ದಾಖಲೆಗಳನ್ನು ಶಾಶ್ವತವಾಗಿ ಡಿಜಿಟಲ್ ರೂಪದಲ್ಲಿ ಉಳಿಸಿಕೊಳ್ಳಲು ಹಾಗೂ ನಕಲಿ ದಾಖಲೆಗಳನ್ನು ತಡಗಟ್ಟಲು ಮತ್ತು ಅವುಗಳನ್ನು ಆನಲೈನಲ್ಲಿ ನಾಗರಿಕರಿಗೆ ಲಭ್ಯವಾಗುವಂತೆ ಮಾಡುವ ನಿಟ್ಟಿನಲ್ಲಿ ಭೂ ಸುರಕ್ಷಾ ಯೋಜನೆಯನ್ನ ಅನುಷ್ಠಾನಗೊಳಿಸಲಾಗಿದೆ ಸಾರ್ವಜನಿಕರು ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಕ್ಕರೆ, ಜವಳಿ, ಕೃಷಿ ಮಾರುಕಟ್ಟೆ, ಸಚಿವ ಶಿವಾನಂದ ಪಾಟೀಲ ಹೇಳಿದರು.

ಪಟ್ಟಣದ ತಹಶೀಲ್ದಾರ ಕಾರ್ಯಾಲಯದ ಮೇಲ್ಮಹಡಿಯಲ್ಲಿ ಶನಿವಾರ ಭೂ-ಸುರಕ್ಷಾ ಯೋಜನೆಯಡಿಯಲ್ಲಿ ಕಂದಾಯ ದಾಖಲೆಗಳ ಗಣೀಕಿಕರಣಗೊಳಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಸದರಿ ಭೂ ಸುರಕ್ಷಾ ಯೋಜನೆಯಿಂದ ತಾಲೂಕಾ ಕಛೇರಿಗಳ ಭೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲ್ ರೂಪಕ್ಕೆ ಪರಿವರ್ತಿಸಿ ಶಾಶ್ವತವಾಗಿ ಸಂಗ್ರಹಿಸಿ ಸಾರ್ವಜನಿಕರಿಗೆ ಸುಲಭ ಮತ್ತು ಶಿಘ್ರವಾಗಿ ಲಭ್ಯವಾಗುವಂತೆ ಮಾಡಲು ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ತಾಲೂಕು ಕಛೇರಿಗಳ ಅಭಿಲೇಖಾಲಯದ ಬೂ ದಾಖಲೆಗಳ ಡಿಜೀಟಲಿಕರಣಕ್ಕಾಗಿ ಕರ್ನಾಟಕ ಸರ್ಕಾರ ಆರಂಭಿಸಿರುವ ಮಹಾತ್ವಾಕಾಂಕ್ಷೆಯ ಯೋಜನೆ ಇದಾಗಿದ್ದು ಸದರಿ ಈ ಯೋಜನೆಯಿಂದ ಹಳೆಯ ದುಸ್ಥಿಯಲ್ಲಿರುವ ದಾಖಲೆಗಳ ಸಂರಕ್ಷಣೆ ಮಾಡುವುದರ ಜೊತೆಗೆ ಅಭಿಲೇಖಾಲಯದಿಂದ ಪಡೆದುಕೊಳ್ಳಲು ಇರುವ ತೊಂದರೆಗಳ ನಿವಾರನೆಯಾಗಲಿದೆ ಎಂದರು.

> ರಾಜ್ಯದ ಉಳಿದ 209 ತಾಲೂಕು ಕಚೇರಿಗಳಲ್ಲಿ ಭೂ ದಾಖಲೆಗಳ ಗಣಕೀಕರಣ ಕಾರ್ಯವನ್ನು ಜನೆವರಿ-2025 ರಿಂದ ಪ್ರಾರಂಭಿಸಲಾಗಿದೆ ಇಂದು ಬಸವನಬಾಗೇವಾಡಿ, ನಿಡಗುಂದಿ, ಹಾಗೂ ಕೊಲ್ಹಾರ ತಾಲೂಕಿನ ಅಭಿಲೇಖಾಲಯದ ದಾಖಲೆಗಳ ಗಣಕೀಕರಣ ಕಾರ್ಯವನ್ನು ಉದ್ಘಾಟಿಸಲಾಗಿದ್ದು ಸದರಿ ಕಚೇರಿಗಳಿಗೆ ತಲಾ 6 ಡೆಸ್ಕಟಾಪ್ ಕಂಪ್ಯೂಟರ್‌ಗಳು 3 ಸ್ಕ್ಯಾನರ್‌ಗಳು ಮತ್ತು 6 ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಈಗಾಗಲೇ ಒದಗಿಸಲಾಗಿದೆ ತಂತ್ರಾಂಶದ ಬಳಕೆಯ ಕುರಿತಂತೆ ಸಂಬಂಧ ಪಟ್ಟ ಅಧಿಕಾರಿ, ಸಿಬ್ಬಂದಿಗಳಿಗೆ ಅಗತ್ಯ ತರಬೇತಿ ನೀಡಲಾಗಿದೆ.
>
> ಶಿವಾನಂದ ಪಾಟೀಲ ಸಚಿವ

ಈ ಸಂಧರ್ಬದಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಮಹಮಂಡಳ ನಿರ್ದೇಶಕ ಈರಣ್ಣ ಪಟ್ಟಣಶೆಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಹಾರಿವಾಳ, ಬಸವೇಶ್ವರ ಬ್ಯಾಂಕ್ ನಿರ್ದೇಶಕ ಶಂಕರಗೌಡ ಬಿರಾದಾರ, ಮುಖಂಡರಾದ ಸಂಗಮೇಶ ಒಲೇಕಾರ, ಚಂದ್ರಶೇಖರಗೌಡ ಪಾಟೀಲ, ಜಟ್ಟಿಂಗರಾಯ ಮಾಲಗಾರ, ಪ್ರವೀಣ ಪೂಜಾರಿ, ಶೇಖರ ಗೊಳಸಂಗಿ, ಎಸಿ ಗುರನಾಥ ದಡ್ಡಿ, ತಹಶೀಲ್ದಾರ ವೈ ಎಸ್ ಸೋಮನಕಟ್ಟಿ, ಎಸ್ ಎಸ್ ನಾಯಕಲಮಠ, ಕೃಷಿ ಸಹಾಯಕ ನಿರ್ದೇಶಕ ಎಮ್ ಎಚ್ ಯರಝರ್ರಿ, ಬಿ ಬಿ ವಗ್ಗನ್ನವರ, ಎಂ, ಎಸ್ ಜಾಗೀರದಾರ, ಮಹೇಶ ಬಳಗಾನೂರ, ಜಗದೀಶ ಹಾರಿವಾಳ, ಮುಖ್ಯಧಿಕಾರಿ ಎಚ್ ಎಸ್ ಚಿತ್ತರಗಿ ಸೇರಿದಂತೆ ಮುಂತಾದವರು ಇದ್ದರು.

ಗ್ರಾಮಾಭಿವೃದ್ಧಿಯಿಂದ ದೇಶದ ಪ್ರಗತಿ ಸಾಧ್ಯ

ವಿಜಯಪುರ: ಗ್ರಾಮಗಳ ಅಭಿವೃದ್ಧಿ ಹೊಂದಿದಾಗ ಮಾತ್ರ ದೇಶವು ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ ಪಾಟೀಲ ಹೇಳಿದರು.

ನಗರದ ಕೃಷಿ ಮಹಾವಿದ್ಯಾಲಯ ಆವರಣದಲ್ಲಿ ಕೃಷಿ ವಿಶ್ವವಿದ್ಯಾಲಯ ಧಾರವಾಡ ಹಾಗೂ ಕೃಷಿ ಸಂಬಂಧಿತ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಆಹಾರ ಮತ್ತು ಪೌಷ್ಠಿಕ ಭದ್ರತೆಗಾಗಿ ಸುಸ್ಥಿರ ಕೃಷಿ ಎಂಬ ಶೀರ್ಷಿಕೆಯೊಂದಿಗೆ ಕೃಷಿ ಮೇಳ 2024-25 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸುಮಾರು 14 ಸಾವಿರ ಕೋಟಿ ರೂಗಳನ್ನು ವ್ಯಯಿಸಿ ಜಿಲ್ಲೆಯ ಬಹುತೇಕ ಭೂಮಿಯನ್ನು ನೀರಾವರಿಗೆ ಒಳಪಡಿಸಿದ್ದೇವೆ. ಜಿಲ್ಲೆಯಲ್ಲಿರುವ ಕರೆಗಳನ್ನು ತುಂಬಿಸಿ ಭೂಮಿಗಳಲ್ಲಿ ಅಂತರ್ಜಲಮಟ್ಟ ವೃದ್ಧಿಯಾಗಿ ಬೋರವೆಲ್ ಹಾಗೂ ಬಾವಿಗಳಲ್ಲಿ ನೀರಿನಮಟ್ಟ ಹೆಚ್ಚಾಗಿದ್ದು ಕಾಣಹುದಾಗಿದೆ. ಇದರಿಂದ ಜಿಲ್ಲೆಯಲ್ಲಿ 10 ಕಾರ್ಖಾನೆಗಳು ನಡೆಯುವಷ್ಟು ಕಬ್ಬನ್ನು ಜಿಲ್ಲೆಯ ರೈತರು ಬೆಳೆಯುತ್ತಿದ್ದಾರೆ. ಜಿಲ್ಲೆಯು ನೀರಾವರಿಗೆ ಒಳಪಟ್ಟ ನಂತರ ಕೃಷಿ ಕಾರ್ಮಿಕರು ಗುಳೆ ಹೋಗುವುದು ಕೂಡ ಕಡಿಮೆಯಾಗಿದೆ. ಪ್ರತಿ ವರ್ಷ ಒಂದು ಬೆಳೆಯನ್ನು ಬೆಳೆಯುತ್ತಿದ್ದ ರೈತರು ಇಂದು ವರ್ಷದಲ್ಲಿ ಎರಡು ಬೆಳೆಗಳನ್ನು ಬೆಳೆಯುತ್ತಿದ್ದಾರೆ ಇದರಿಂದ ರೈತರ ಆದಾಯವೂ ಕೂಡ ವೃದ್ಧಿಯಾಗಿದೆ. ಜಿಲ್ಲೆ ನೀರಾವರಿ ಹೊಂದಿದ ಮೇಲೆ ಸಾಕಷ್ಟು ಬದಲಾವಣೆಗಳಾಗಿವೆ ಈ ಕೃಷಿ ಮೇಳ ಹೊಸ ಹೊಸ ಆವಿಷ್ಕಾರ, ಪ್ರಯೋಗಗಳು, ನೂತನ ತಂತ್ರಜ್ಞಾನದಿಂದ ಕೂಡಿದೆ ರೈತರು ಸಮಗ್ರವಾದ ಮಾಹಿತಿ ಪಡೆದುಕೊಂಡು ಲಾಭದಾಯಕ ಬೆಳೆಗಳನ್ನು ಬೆಳೆಯುವಂತೆ ಅವರು ಕರೆ ನೀಡಿದರು.

ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್.ಪಾಟೀಲ ಅವರು ಕೃಷಿ ಮೇಳದಲ್ಲಿ ರೈತರ ಮಾಹಿತಿಗಾಗಿ ಕೃಷಿ ಉತ್ಪನ್ನ ಹಾಗೂ ಮಾರಾಟಗಳ ಮಳಿಗೆಗಳನ್ನು ಉದ್ಘಾಟಿಸಿ ಚಾಲನೆ ನೀಡಿದರು.

ಕೆಎಸ್ಡಿಎಲ್ ಅಧ್ಯಕ್ಷರಾಗಿರುವ ಶಾಸಕ ಅಪ್ಪಾಜಿ ನಾಡಗೌಡ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ನಾಗಠಾಣ ಮತಕ್ಷೇತದ ಶಾಸಕರಾದ ವಿಠ್ಠಲ ಕಟಕಧೋಂಡ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದರು. ಕೃಷಿ ಮೇಳದಲ್ಲಿ ರಾಜ್ಯಮಟ್ಟದ ಜಿಲ್ಲೆಯ 7 ಜನ ಕೃಷಿಕರನ್ನು, ಕೃಷಿ ಪಂಡಿತ ಪ್ರಶಸ್ತಿ ವಿಜೇತರನ್ನು ಸನ್ಮಾನಿಸಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಕೃಷಿ ಪ್ರಕಟಣೆಗಳ ಕೈಪಿಡಿಗಳನ್ನು ಬಿಡುಗಡೆಗೊಳಿಸಲಾಯಿತು.

ಕಾರ್ಯಕ್ರಮದಲ್ಲಿ ಧಾರವಾಡ ಕೃಷಿ ವಿವಿ ಕುಲಪತಿ ಡಾ.ಪಿ.ಎಲ್ ಪಾಟೀಲ, ಜಿಲ್ಲಾಧಿಕಾರಿ ಟಿ.ಭೂಬಾಲನ್, ಜಿ.ಪಂ ಸಿಇಓ ರಿಷಿ ಆನಂದ, ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಶ್ರೀನಿವಾಸ ಕೋಟ್ಯಾನ, ಪಾರ್ವತಿ ಕುರ್ಲೇ, ಬಸವರಾಜ ಕುಂದಗೋಳಮಠ, ರವಿಕುಮಾರ ಮಳಿಗೆರೆ, ಡಾ.ಅಶೋಕ ಸಜ್ಜನ, ಡಾ.ಬಿ.ಡಿ. ಬಿರಾದಾರ, ಡಾ.ಆರ್ ಬಸವರಾಜಪ್ಪ, ಡಾ.ಆರ್.ಬಿ. ಬೆಳ್ಳಿ, ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ರೂಪ್.ಎಲ್, ಶಿಕ್ಷಕರು ಸಿಬ್ಬಂದಿ ಹಾಗೂ ಇತರರು ಉಪಸ್ಥಿತರಿದ್ದರು.

ಕೃಷಿ ಮೇಳ 2024-25 ಕಾರ್ಯಕ್ರಮವನ್ನು ಸಚಿವ ಎಂ.ಬಿ ಪಾಟೀಲ ಅವರು ಉದ್ಘಾಟಿಸಿದರು.

> ಕೃಷಿ ಪ್ರಕಟಣೆಗಳ ಬಿಡುಗಡೆಗೊಳಿಸಿ ಮಾತನಾಡಿ, ಪುರಾತನ ಕಾಲದಿಂದ ಬಂದ ಕೃಷಿ ಪದ್ದತಿಗಳನ್ನು ನಾವು ಮರೆಯಬಾರದು ಪ್ರತಿಯೊಬ್ಬ ರೈತರು ಗೋವುಗಳನ್ನು ಸಾಕಣೆ ಮಾಡಬೇಕು ಗೋವು ರೈತರ ವರದಾನವಾಗಿದೆ ಹೊಸ ಹೊಸ ಸಂಶೋದನೆ ಕೈಗೊಳ್ಳುಲು ಸರಕಾರ ಹಾಗೂ ನಾವು ನೀವೆಲ್ಲರೂ ಬೆಂಬಲಿಸಬೇಕು.
>
> ಬಸನಗೌಡ ಪಾಟೀಲ ಯತ್ನಾಳ, ಶಾಸಕ

ಪೂಜೆಯೊಂದಿಗೆ ಸಿದ್ದೇಶ್ವರ ಜಾತ್ರೆ ಆರಂಭ

ವಿಜಯಪುರ: ಶ್ರೀ ಸಿದ್ಧೇಶ್ವರ ಸಂಕ್ರಮಣದ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀ ಸಿದ್ಧೇಶ್ವರ ದೇವಾಲಯದಲ್ಲಿ ನಮ್ಮೂರ ಜಾತ್ರೆಯ ಗೋ ಪೂಜೆಯೊಂದಿಗೆ ನಂದಿಕೊಲ ಪೂಜೆಗಳನ್ನು ಶ್ರೀ ಸಿದ್ಧೇಶ್ವರ ಸಂಸ್ಥೆಯ ಅಧ್ಯಕ್ಷರಾದ ವಿಜಯಪುರ ನಗರದ ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇರವೇರಿಸಿದರು.

ಗೋ ಮಾತೆ ಪೂಜೆಯನ್ನು ಮುರಗಯ್ಯಾ ಗಚ್ಚಿನಮಠ ನಂದಿಕೋಲ ಪೂಜೆಯನ್ನು ಅರ್ಚಕರಾದ ಸಿದ್ದಯ್ಯ ಹಿರೇಮಠ, ಶಿವಾನಂದಯ್ಯ ಹಿರೇಮಠ, ನೀಲಕಂಠಯ್ಯಾ ಪೂಜಾರಿ ನೇರವೇರಿಸಿದರು. ನಂದಿಕೋಲಗಳನ್ನು ಹಿಡಿಯುವ ಪಟುಗಳು ನೀಲುವಂಗಿ ದೋತ್ರ, ಪಟ್ಟವಡಿ, ಹಾಕಿಕೊಂಡು ಭಕ್ತಿ ಶ್ರದ್ದೆಯಿಂದ ನಂದಿಕೋಲಗಳನ್ನು ಹಿಡಿದರು. ಅಟಲ್ ಬಿಹಾರಿ ವಾಜಪೇಯಿ ರಸ್ತೆಯಲ್ಲಿರುವ ಚತುರ್ಮುಖ ಗಣೇಶನಿಗೆ ವಿಶೇಷ ಪೂಜೆ ಮಾಡಲಾಯಿತು.

ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪಾಧ್ಯಕ್ಷರಾದ ಸಂಗು ಸಜ್ಜನ, ಚೇರಮನರಾದ ಬಸಯ್ಯಾ ಎಸ್. ಹಿರೇಮಠ ಕಾರ್ಯದರ್ಶಿಗಳಾದ ಸದಾನಂದ ದೇಸಾಯಿ, ಜಂಟಿ ಕಾರ್ಯದರ್ಶಿ ಎಂ.ಎಂ. ಸಜ್ಜನ, ಕಾರ್ಯದರ್ಶಿಗಳು ಬಿ.ಎಸ್. ಸುಗೂರ, ಸದಾನಂದ ಎಚ್. ದೇಸಾಯಿ, ಶಿವಾನಂದ ನೀಲಾ ಜಾತ್ರಾ ಸಮಿತಿಯ ಗುರು ಗಚ್ಚಿನಮಠ, ಶಿವರುದ್ರ ಬಾಗಲಕೋಟ, ರಾಹುಲ ಜಾಧವ, ಎಸ್. ಎಮ್. ಪಾಟೀಲ, ರಾಜಶೇಖರ ಮಗಿಮಠ, ಪ್ರೇಮಾನಂದ ಬಿರಾದಾರ, ಎಸ್.ಸಿ. ಉಪ್ಪಿನ, ಎಸ್.ಎಚ್.ನಾಡಗೌಡ, ಎಮ್.ಎಸ್. ಕರಡಿ, ಬಸವರಾಜ ಗಣಿ ಸೇರಿ ಮುಂತಾದ ಪ್ರಮುಖರು ಹಾಗೂ ಭಕ್ತಾದಿಗಳು ಹಾಜರಿದ್ದರು.

ಮುತ್ತು ಕೊಡುವ ಗೃಹಮಂತ್ರಿಗಳಾಗಿ:ಯತ್ನಾಳ

ವಿಜಯಪುರ : ಪಂಚಮಸಾಲಿಗಳ ಮೇಲೆ ಲಾಠಿ ಚಾರ್ಜ್ ಮಾಡದೆ ಮುತ್ತು ಕೊಡಬೇಕಾ ಎಂದಿದ್ದ ಜಿ. ಪರಮೇಶ್ವರ ಅವರ ವಿರುದ್ಧ, ನೀವು ಸಾಬರಿಗೆ ಮುತ್ತು ಕೊಡಿ. ಕೆ.ಜಿ ಹಳ್ಳಿಗೆ ಮುತ್ತು ಕೊಡಿ, ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದವರಿಗೆ ಮುತ್ತು ಕೊಡಿ. ದಿನಾ ಮುತ್ತು ಕೊಡ್ತಾ ಹೋಗಿ. ಮುತ್ತು ಕೊಡುವ ಗೃಹ ಮಂತ್ರಿಗಳಾಗಿ ಎಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ವ್ಯಂಗ್ಯವಾಡಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಸಿಟಿ ರವಿಗೆ ಬೆದರಿಕೆ ಪತ್ರ ವಿಚಾರವಾಗಿ ಮಾತನಾಡಿ, ಗೃಹ ಮಂತ್ರಿಗಳಿಗೆ ಸುವರ್ಣಸೌಧದಲ್ಲಿ ಸಿ ಟಿ ರವಿ ಅರೆಸ್ಟ್ ಬಗ್ಗೆ ಗೊತ್ತಿಲ್ಲ ಎಂದಿದ್ದರು. ಅಮಾಯಕ ಪಂಚಮಸಾಲಿ ಮೇಲೆ ಲಾಠಿ ಚಾರ್ಜ್ ಮಾಡೋರಿಗೆ ಇದೆಲ್ಲ ಗೊತ್ತಾಗಲ್ಲ. ಗೃಹ ಸಚಿವರಿಗೆ ಮತ್ತೇನು ಗೊತ್ತಿದೆ ಎಂದು ಹೇಳಿ, ನೀವು ಸಾಬರಿಗೆ ಮುತ್ತು ಕೊಡಿ, ಉಳಿದವರಿಗೆ ಲಾಠಿ ಏಟು ಕೊಡಿ ಎಂದು ವ್ಯಂಗ್ಯಭರಿತ ಮಾತುಗಳಾಡಿ ಆಕ್ರೋಶ ವ್ಯಕ್ತಪಡಿಸಿದರು.

ಯತ್ನಾಳ ಬಣದ ವಿರುದ್ಧ ವಿಜಯೇಂದ್ರ ಶಕ್ತಿಪ್ರದರ್ಶನ ವಿಚಾರ ಕುರಿತ ಪ್ರಶ್ನೆಗೆ ಮಾಧ್ಯಮಗಳ ವಿರುದ್ಧ ಗರಂ ಆದ ಶಾಸಕ ಯತ್ನಾಳ, ನಾನು ಮಾಧ್ಯಮಗಳಲ್ಲಿ ನೋಡಿ ಅಂಜಿ ಹೋದೆ ! ನಡುಗಿ ಹೋದೆ..! ಅಖಾಡಕ್ಕಿಳಿದ ಯಡಿಯೂರಪ್ಪ.. ಯತ್ನಾಳ್ ಗೆ ಭಾರೀ ಹಿನ್ನಡೆ.. ವಾಹ್ ರೇ ವಾಹ್ ಮಾಧ್ಯಮಗಳೇ ಎಂದು ಗರಂ ಆಗಿ, ಯಾರು ಅಖಾಡಕ್ಕಿಳಿದರೆ ಆಗೋದೆನಿದೆ. ಯತ್ನಾಳಗೆ ಯಾರು ಏನು ಮಾಡೋಕಾಗಲ್ಲ. ನೀವು ಎರಡು ದಿನ ಸುದ್ದಿ ಹೊಡಿರಿ ಎಂದರು.

ವಿಜಯೇಂದ್ರ ಅವರಿಗೆ ಸಚಿವ ಪ್ರಿಯಾಂಕ ಖರ್ಗೆ ಬೆದರಿಕೆ ಹಾಕಿದ್ದಾರೆ ಎಂದು ಯತ್ನಾಳ ಗಂಭೀರ ಆರೋಪ ಮಾಡಿದರು. ಕಲಬುರಗಿಯಲ್ಲಿ ನನ್ನ ವಿರುದ್ಧ ಪ್ರತಿಭಟನೆಗೆ ಬರಬೇಡಿ. ಬಂದರೆ ನಿಮ್ಮ ತಂದೆಯ ಬಂಡವಾಳ ಬಯಲು ಮಾಡುತ್ತೇನೆ ಎಂದು ವಿಜಯೇಂದ್ರಗೆ ಪ್ರಿಯಾಂಕ ಖರ್ಗೆ ಬೆದರಿಕೆ ಹಾಕಿದ್ದಾರೆ. ಇದೇ ಕಾರಣಕ್ಕಾಗಿ ವಿಜಯೇಂದ್ರ ಕಲಬುರಗಿಯಲ್ಲಿ ಪ್ರತಿಭಟನೆಗೆ ಹೋಗಿಲ್ಲ. ವಿಜಯೇಂದ್ರ ನೇತೃತ್ವದಲ್ಲಿ ಪ್ರತಿಭಟನೆ ಎಂದಿದ್ದರು, ಆದರೆ ಹೋಗಲಿಲ್ಲ. ಪ್ರಿಯಾಂಕ ಖರ್ಗೆ ಬೆದರಿಕೆಯಿಂದಾಗಿ ವಿಜಯೇಂದ್ರ ಬಂದಿಲ್ಲ ಎಂದರು.

ಸಿಟಿ ರವಿ, ಚಕ್ರವರ್ತಿ ಸೂಲಿಬೆಲೆ ಅವರನ್ನ ಕೆಲವರು ಟಾರ್ಗೆಟ್ ಮಾಡಿದ್ದಾರೆ. ಸಿಟಿ ರವಿ ಅವರನ್ನು ಇಡೀ ರಾತ್ರಿ ಪೊಲೀಸರು ಸುತ್ತಾಡಿಸುತ್ತಾರೆ. ಇಡೀ ರಾತ್ರಿ ಪೊಲೀಸ್ ಅಧಿಕಾರಿಗಳು ಯಾರ ಜೊತೆ ಫೋನ ನಲ್ಲಿ ಮಾತನಾಡುತ್ತಿದ್ದರು. ರಾಜ್ಯದಲ್ಲಿ ಜನಪ್ರತಿನಿಧಿಗಳಿಗೆ ರಕ್ಷಣೆ ಇಲ್ಲದಂತಾಗಿದೆ ಎಂದು ಯತ್ನಾಳ ಆರೋಪಿಸಿದರು. ಇದೇ ವೇಳೆ ವಿಜಯೆಂದ್ರ ನೇತೃತ್ವದಲ್ಲಿ ಮಾಜಿ ಶಾಸಕರ ಸಭೆಯ ಬಗ್ಗೆ ವ್ಯಂಗ್ಯವಾಡಿದ ಯತ್ನಾಳ, ಸೋತ ಎರಡು ವರ್ಷದ ಬಳಿಕ ಸಭೆ ಮಾಡಿದರೆ ಏನು ಪ್ರಯೋಜನ. ಬಿಜೆಪಿ ಸೋಲಲು ಕಾರಣ ಕೈ ಯಾವುದು ಎಂದು ಆತ್ಮಾವಲೋಕನ ಮಾಡಿಕೊಳ್ಳಲಿ. ನಮ್ಮ ಕಡೆಯವರು ಕೆಲವರು ಸಭೆಗೆ ಹೋಗಿದ್ದರು. ಸಭೆಗೆ ಹೋಗಿದ್ದವರು ನನಗೆ ಮಾಹಿತಿ ನೀಡಿದ್ದಾರೆ ಎಂದರು.

ಸಮಾಚಾರ ಸಣ್ಣದಲ್ಲ

ಸಾತ್ವಿಕ್-ಚಿರಾಗ್ ಸೆಮಿಫೈನಲ್‌ಗೆ

ಕೌಲಾಲಂಪುರ: ಗೆಲುವಿನ ಓಟವನ್ನು ಮುಂದುವರಿಸಿರುವ ಭಾರತದ ಅಗ್ರಮಾನ್ಯ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಮ್ ರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಮಲೇಷ್ಯಾ ಸೂಪರ್ 10000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸೆಮಿಫೈನಲ್‌ಗೆ ಲಗ್ಗೆ ಹಾಕಿದರು. ಏಳನೇ ಶ್ರೇಯಾಂಕದ ಭಾರತದ ಜೋಡಿಯು ಕ್ವಾರ್ಟರ್ ಫೈನಲ್ ರೋಚಕ ಹಣಾಹಣಿಯಲ್ಲಿ 26-24, 21-15ರಿಂದ ಅತಿಥೇಯ ಮಲೇಷ್ಯಾದ ಯು.ಸಿನ್. ಒಂಗ್‌ಯೆ ಇ ಟಿಯೊ ಅವರನ್ನು ಹಿಮ್ಮೆಟ್ಟಿಸಿತು. 49ನೇ ನಿಮಿಷದಲ್ಲಿ ಪಂದ್ಯವನ್ನು ಗೆದ್ದ ಸಾತ್ವಿಕ್-ಚಿರಾಗ್ ಇಲ್ಲಿ ಸತತ ಮೂರನೇ ಬಾರಿ ನಾಲ್ಕರ ಘಟ್ಟ ಪ್ರವೇಶಿಸಿದರು. ಕಳೆದ ಬಾರಿಯ ರನ್ನರ್ಸ್ ಆಫ್ ಸಾತ್ವಿಕ್-ಚಿರಾಗ್ ಸೆಮಿಫೈನಲ್‌ನಲ್ಲಿ ದಕ್ಷಿಣ ಕೊರಿಯಾದ ವೊನ್ ಹೊ ಕಿಮ್ ಮತ್ತು ಸೆಯುಂಗ್ ಜೆ. ಸಿಯೊ ಅವರ ಸವಾಲನ್ನು ಎದುರಿಸಲಿದ್ದಾರೆ.

ತಮೀಮ್ ಇಕ್ಬಾಲ್ ಕ್ರಿಕೆಟ್‌ಗೆ ವಿದಾಯ

ಢಾಕ್ಕಾ: ಬಾಂಗ್ಲಾದೇಶ ತಂಡದ ಮಾಜಿ ನಾಯಕ ತಮೀಮ್ ಇಕ್ಬಾಲ್ ಎರಡನೇ ಬಾರಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಎರಡನೇ ಬಾರಿ ವಿದಾಯ ಹೇಳಿದ್ದಾರೆ. ಇದಕ್ಕೂ ಮುನ್ನ 2023ರ ಜುಲೈನಲ್ಲಿ ಭಾವನಾತ್ಮಕ ಸುದ್ದಿಗೋಷ್ಠಿಯಲ್ಲಿ ಮೊದಲ ಬಾರಿ ಅವರು ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು, ಆದರೂ ತದನಂತರ ಅವರು ನಿವೃತ್ತಿಯಿಂದ ಹೊರ ಬಂದಿದ್ದರು. 2007ರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ತಮೀಮ್ ಇಕ್ಬಾಲ್ ಇಲ್ಲಿಯವರೆಗೂ ಬಾಂಗ್ಲಾದೇಶ ಪರ 70 ಟೆಸ್ಟ್ ಪಂದ್ಯಗಳು, 243 ಏಕದಿನ ಪಂದ್ಯಗಳು ಹಾಗೂ 78 ಟಿ20ಐ ಪಂದ್ಯಗಳನ್ನು ಆಡಿದ್ದಾರೆ. 2023ರಲ್ಲಿ ತಮೀಮ್ ಇಕ್ಬಾಲ್ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದ ವೇಳೆ ಆಗ ಬಾಂಗ್ಲಾದೇಶದ ಪ್ರಧಾನ ಮಂತ್ರಿ ಆಗಿದ್ದ ಶೇಖ್ ಹಸೀನಾ ಮನವೊಲಿಸಿದ್ದರು. ಮುಂಬರುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯ ನಿಮಿತ್ತ ಬಾಂಗ್ಲಾದೇಶ ತಂಡಕ್ಕೆ ಮರಳಬೇಕೆಂದು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಯ ಆಯ್ಕೆದಾರ ಗಝಿ ಅಶ್ರಫ್ ಅವರು ತಮೀಮ್ ಇಕ್ಬಾಲ್ ಅವರನ್ನು ಮನವೊಲಿಸಿದ್ದರು. ಆದರೆ ತಮೀಮ್ ಈ ಸಲ ವಿದಾಯ ಹೇಳಿದ್ದಾರೆ.

ವಿಜಯ್ ಹಜಾರೆ ಕ್ರಿಕೆಟ್ ಕ್ವಾರ್ಟರ್ ಫೈನಲ್ | ದೇವದತ್ ಪಡಿಕ್ಕಲ್ ಭರ್ಜರಿ ಶತಕ

ಬರೋಡಾ ಮಣಿಸಿ ಕರ್ನಾಟಕ ಸೆಮಿಗೆ

ವಡೋದರ: ದೇವದತ್ ಪಡಿಕ್ಕಲ್ (102 ರನ್) ಶತಕ ಹಾಗೂ ಬೌಲರ್‌ಗಳ ಶಿಸ್ತುಬದ್ಧ ಬೌಲಿಂಗ್ ದಾಳಿಯ ನೆರವಿನಿಂದ ಕರ್ನಾಟಕ ತಂಡವು, ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಬರೋಡ ಎದುರು 5 ರನ್‌ಗಳ ರೋಚಕ ಗೆಲುವು ಸಾಧಿಸಿತು. ಆ ಮೂಲಕ 2024-25ರ ವಿಜಯ್ ಹಝಾರೆ ಟ್ರೋಫಿ ಟೂರ್ನಿಯ ಸೆಮಿಫೈನಲ್‌ಗೆ ಪ್ರವೇಶ ಮಾಡಿದೆ.

ಇಲ್ಲಿನ ಮೋಟಿಬಾಗ್ ಮೈದಾನದಲ್ಲಿ ನಡೆದಿದ್ದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಕರ್ನಾಟಕ ನೀಡಿದ್ದ 282 ರನ್‌ಗಳ ಗುರಿಯನ್ನು ಹಿಂಬಾಲಿಸಿದ್ದ ಬರೋಡಾ ತಂಡಕ್ಕೆ ಕೊನೆಯ ಓವರ್‌ನಲ್ಲಿ 13 ರನ್‌ಗಳ ಅಗತ್ಯವಿತ್ತು. ಆದರೆ ಕೊನೆಯ ಓವರ್‌ನಲ್ಲಿ ಅಭಿಲಾಷ್ ಶೆಟ್ಟಿ ಎರಡು ವಿಕೆಟ್ ಕಿತ್ತು ಕೇವಲ 6 ರನ್‌ಗಳಿಗೆ ಬರೋಡಾ ತಂಡವನ್ನು ಕಟ್ಟಿಹಾಕಿ ಕರ್ನಾಟಕವನ್ನು ಗೆಲುವಿನ ದಡ ಸೇರಿಸಿದರು.

ಬರೋಡಾ ತಂಡದ ಪರ ಶಾಶ್ವತ್ ರಾವತ್ ಹಾಗೂ ಅತಿತ್ ಸೆಠ್ ಬ್ಯಾಟಿಂಗ್‌ನಲ್ಲಿ ಗಮನ ಸೆಳೆದರು. ಶಾಶ್ವತ್ ರಾವತ್ 126 ಎಸೆತಗಳಲ್ಲಿ 104 ರನ್ ಗಳಿಸಿ ಕೊನೆಯ ಹಂತದಲ್ಲಿ ಪ್ರಸಿದ್ಧ ಕೃಷ್ಣ ಎಸೆತದಲ್ಲಿ ವಿಕೆಟ್ ಒಪ್ಪಿಸಿದ್ದರೆ, ಇದಕ್ಕೂ ಮುನ್ನ ಅತಿತ್ ಸೆಠ್ ಅವರು 59 ಎಸೆತಗಳಲ್ಲಿ 56 ರನ್‌ಗಳನ್ನು ಗಳಿಸಿ ಶ್ರೇಯಸ್ ಗೋಪಾಲ್‌ಗೆ ಔಟ್ ಆಗಿದ್ದರು. ಕೃಣಾಲ್ ಪಾಂಡ್ಯ 30 ರನ್ ಗಳಿಸಿದರೆ, ಕೊನೆಯಲ್ಲಿ ಭಾರ್ಗವ್ ಭಟ್ 22 ರನ್ ಗಳಿಸಿ ಬರೋಡಾಗೆ ಆಸರೆಯಾಗುವ ಪ್ರಯತ್ನ ನಡೆಸಿದರೂ, ಕೊನೆಯ ಓವರ್‌ನಲ್ಲಿ ಇವರು ರನ್ ಔಟ್ ಆದರು.

ಅಂತಿಮವಾಗಿ ಬರೋಡಾ ತಂಡ 49.5 ಓವರ್‌ಗಳಿಗೆ 276 ರನ್‌ಗಳಿಗೆ ಆಲ್‌ಔಟ್ ಆಯಿತು. ಕರ್ನಾಟಕ ಪರ ವಿ. ಕೌಶಿಕ್, ಅಭಿಲಾಷ್ ಶೆಟ್ಟಿ, ಪ್ರಸಿದ್ಧ ಕೃಷ್ಣ ಹಾಗೂ ಶ್ರೇಯಸ್ ಗೋಪಾಲ್ ತಲಾ ಎರಡೆರಡು ವಿಕೆಟ್‌ಗಳನ್ನು ಕಬಳಿಸಿದ್ದರು.

281 ರನ್ ಕಲೆ ಹಾಕಿದ್ದ ಕರ್ನಾಟಕ: ಇದಕ್ಕೂ ಮುನ್ನ ಟಾಸ್ ಸೋತು ಮೊದಲು ಬ್ಯಾಟ್ ಮಾಡುವಂತಾಗಿದ್ದ ಕರ್ನಾಟಕ ತಂಡ, ದೇವದತ್ ಪಡಿಕ್ಕಲ್ ಶತಕ ಹಾಗೂ ಕೆ.ವಿ ಅನೀಶ್ ಅವರ ಅರ್ಧಶತಕದ ನೆರವಿನಿಂದ 50 ಓವರ್‌ಗಳಲ್ಲಿ 8 ವಿಕೆಟ್‌ಗಳ ನಷ್ಟಕ್ಕೆ 281 ರನ್‌ಗಳನ್ನು ಕಲೆ ಹಾಕಿ ಎದುರಾಳಿ ಬರೋಡಾ ತಂಡಕ್ಕೆ 282 ರನ್‌ಗಳ ಸ್ಪರ್ಧಾತ್ಮಕ ಗುರಿಯನ್ನು ನೀಡಿತ್ತು.

ಪಡಿಕ್ಕಲ್-ಅನೀಷ್ ಜುಗಲ್‌ಬಂದಿ: ಮೊದಲು ಬ್ಯಾಟ್ ಮಾಡಿದ್ದ ಕರ್ನಾಟಕ ತಂಡ ಆರಂಭಿಕ ಆಘಾತ ಅನುಭವಿಸಿತ್ತು. ಕಳೆದ ಪಂದ್ಯಗಳಲ್ಲಿ ಸತತ ಶತಕಗಳನ್ನು ಸಿಡಿಸಿದ್ದ ಮಯಾಂಕ್ ಅಗರ್ವಾಲ್ ಈ ಪಂದ್ಯದಲ್ಲಿ 15 ಎಸೆತಗಳಲ್ಲಿ ಕೇವಲ 6 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಆದರೆ ಎರಡನೇ ವಿಕೆಟ್‌ಗೆ ಜೊತೆಯಾದ ದೇವದತ್ ಪಡಿಕ್ಕಲ್ ಮತ್ತು ಅನೀಷ್ ಕೆ.ವಿ ಉತ್ತಮ ಬ್ಯಾಟಿಂಗ್ ಪ್ರದರ್ಶನ ತೋರಿ 133 ರನ್‌ಗಳ ಜೊತೆಯಾಟವನ್ನು ಆಡಿ, ಕರ್ನಾಟಕ ತಂಡದ ಮೊತ್ತವನ್ನು 160ರ ಗಡಿಯನ್ನು ದಾಟಿಸಲು ನೆರವು ನೀಡಿದರು.

ದೇವದತ್ ಪಡಿಕ್ಕಲ್ ಭರ್ಜರಿ ಶತಕ: ಕರ್ನಾಟಕ ಪರ ಬ್ಯಾಟಿಂಗ್‌ನಲ್ಲಿ ಗಮನ ಸೆಳೆದ ದೇವದತ್ ಪಡಿಕ್ಕಲ್ ಭರ್ಜರಿ ಶತಕವನ್ನು ಸಿಡಿಸಿದರು. ಅವರು ಎದುರಿಸಿದ 99 ಎಸೆತಗಳಲ್ಲಿ ಎರಡು ಸಿಕ್ಸರ್ ಹಾಗೂ 15 ಮನಮೋಹಕ ಬೌಂಡರಿಗಳೊಂದಿಗೆ 102 ರನ್‌ಗಳನ್ನು ಬಾರಿಸಿದರು. ಆದರೆ, ಅವರನ್ನು ರಾಜ್ ಲಿಂಬಾಣಿ ಔಟ್ ಮಾಡಿದರು. ಇದಕ್ಕೂ ಮುನ್ನ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶನ ತೋರಿದ್ದ ಅನೀಷ್ ಕೆ.ವಿ, 64 ಎಸೆತಗಳಲ್ಲಿ ಒಂದು ಸಿಕ್ಸರ್ ಹಾಗೂ 4 ಬೌಂಡರಿಗಳೊಂದಿಗೆ 52 ರನ್‌ಗಳನ್ನು ಕಲೆ ಹಾಕಿದ್ದರು. ಸ್ಮರಣ್ ರವಿಚಂದ್ರನ್ ಮತ್ತು ಕೆ. ಶ್ರೀಜಿತ್ ತಲಾ 28 ರನ್‌ಗಳನ್ನು ನಿರ್ಣಾಯಕ ರನ್‌ಗಳನ್ನು ಕಲೆ ಹಾಕಿದರು. ಬರೋಡಾ ಪರ ರಾಜ್ ಲಿಂಬಾಣಿ ಮತ್ತು ಅತಿತ್ ಸೇಠ್ ತಲಾ ಮೂರು ವಿಕೆಟ್‌ಗಳನ್ನು ಕಬಳಿಸಿದರು.

ಸ್ಕೋರ್ ವಿವರ

ಕರ್ನಾಟಕ: 50 ಓವರ್‌ಗಳಿಗೆ 281-8 (ದೇವದತ್ ಪಡಿಕ್ಕಲ್ 102, ಅನೀಷ್ ಕೆ.ವಿ 54; ಅತಿತ್ ಸೇಠ್ 41ಕ್ಕೆ 3, ರಾಜ್ ಲಿಂಬಾಣಿ 47ಕ್ಕೆ 3)
ಬರೋಡಾ: 49.5 ಓವರ್‌ಗಳಿಗೆ 276-10 (ಶಾಶ್ವತ್ ರಾವತ್ 104, ಅತಿತ್ ಸೇಠ್ 52 ರನ್; ವಿ ಕೌಶಿಕ್ 39ಕ್ಕೆ 2, ಪ್ರಸಿದ್ಧ ಕೃಷ್ಣ 60 ಕ್ಕೆ 2, ಶ್ರೇಯಸ್ ಗೋಪಾಲ್ 38ಕ್ಕೆ 2, ಅಭಿಲಾಷ್ ಶೆಟ್ಟಿ 70ಕ್ಕೆ 2)

ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಗೆ ಟೀಂ ಇಂಡಿಯಾ ಪ್ರಕಟ

ಟೀಂ ಇಂಡಿಯಾ: ಬೌಲರ್ ಮೊಹಮ್ಮದ್ ಶಮಿ ಕಂಬ್ಯಾಕ್

ದೆಹಲಿ: ನಿರೀಕ್ಷೆಯಂತೆ ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಗೆ ಟೀಂ ಇಂಡಿಯಾವನ್ನು ಶನಿವಾರ ಪ್ರಕಟಿಸಲಾಗಿದೆ. ಬಿಸಿಸಿಐನ ಹಿರಿಯ ಆಯ್ಕೆ ಸಮಿತಿಯು ನಾಯಕ ಸೂರ್ಯ ಕುಮಾರ್ ಯಾದವ್ ನೇತೃತ್ವದಲ್ಲಿ ಈ ತಿಂಗಳ ಕೊನೆಯಲ್ಲಿ ನಡೆಯಲ್ಲಿ ರುವ ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಗೆ 15 ಸದಸ್ಯರ ತಂಡವನ್ನು ಪ್ರಕಟಿಸಿದೆ.

ಸ್ಟಾರ್ ವೇಗಿ ಮೊಹಮ್ಮದ್ ಶಮಿಗೆ ತಂಡದಲ್ಲಿ ಸ್ಥಾನ ನೀಡುವ ಮೂಲಕ ಆಯ್ಕೆ ಸಮಿತಿ ಎಲ್ಲರಲ್ಲೂ ಅಚ್ಚರಿ ಮೂಡಿಸಿದೆ. ಒಂದು ವರ್ಷಕ್ಕೂ ಹೆಚ್ಚು ಕಾಲ ಆಟದಿಂದ ಹೊರಗುಳಿದಿದ್ದ ಶಮಿ ಟಿ20 ಕ್ರಿಕೆಟ್‌ನಿಂದ ತಂಡದ ಮೂಲಕ ಮರಳುತ್ತಿದ್ದಾರೆ. ಶಮಿಯನ್ನು ಹೊರತುಪಡಿಸಿ ಉಳಿದ ಭಾಗಶಃ ಆಟಗಾರರು ಬಾಂಗ್ಲಾದೇಶ ವಿರುದ್ಧದ ಟಿ20 ಸರಣಿಯಲ್ಲಿ ಆಡಿದವರೇ ಆಗಿದ್ದಾರೆ. ಈ ಮೊದಲೇ ಹೇಳಿದಂತೆ ಟಿ20 ಸರಣಿಗೆ ಮಾತ್ರ ತಂಡವನ್ನು ಆಯ್ಕೆ ಮಾಡಲಾಗಿದ್ದು, ಏಕದಿನ ಸರಣಿ ಹಾಗೂ ಚಾಂಪಿಯನ್ಸ್ ಟ್ರೋಫಿಗೆ ತಂಡವನ್ನು ತಡವಾಗಿ ಪ್ರಕಟಿಸುವ ಸಾಧ್ಯತೆಗಳಿವೆ.

ತಂಡದ ವಿಕೆಟ್ ಕೀಪರ್ ಆಗಿ ಸಂಜು ಸ್ಯಾಮ್ಸನ್ ಕಾರ್ಯ ನಿರ್ವಹಿಸಲಿದ್ದಾರೆ. ಉಪ ನಾಯಕರಾಗಿ ಅಕ್ಷರ್ ಪಟೇಲ್ ಆಯ್ಕೆಯಾಗಿದ್ದಾರೆ.

ಟಿ20 ಸರಣಿಗೆ ಭಾರತ ತಂಡ

ಸೂರ್ಯಕುಮಾರ್ ಯಾದವ್ (ನಾಯಕ), ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ, ರಿಂಕು ಸಿಂಗ್, ನಿತೀಶ್ ಕುಮಾರ್ ರೆಡ್ಡಿ, ಅಕ್ಷರ್ ಪಟೇಲ್ (ಉಪ ನಾಯಕ), ಹರ್ಷಿತ್ ರಾಣಾ, ಅರ್ಷದೀಪ್ ಸಿಂಗ್, ಮೊಹಮ್ಮದ್ ಶಮಿ, ವರುಣ್ ಚಕ್ರವರ್ತಿ, ರವಿ ಬಿಷ್ಣೋಯ್ , ವಾಷಿಂಗ್ಟನ್ ಸುಂದರ್, ಧ್ರುವ್ ಜುರೆಲ್ (ವಿಕೆಟ್ ಕೀಪರ್).

ಪದಾರ್ಪಣೆ ಪಂದ್ಯದಲ್ಲಿಯೇ ಶತಕ ಬಾರಿಸಿದ ಅರ್ಶಿನ್ ಕುಲಕರ್ಣಿ

ಸೆಮಿಫೈನಲ್‌ಗೇರಿದ ಮಹಾರಾಷ್ಟ್ರ

ವಡೋದರ: ಮಹಾರಾಷ್ಟ್ರದ ಯುವ ಬ್ಯಾಟ್ಸ್‌ಮನ್ ಅರ್ಶಿನ್ ಕುಲಕರ್ಣಿ ಲಿಸ್ಟ್ ಎ ಕ್ರಿಕೆಟ್‌ನಲ್ಲಿ ತಮ್ಮ ಚೊಚ್ಚಲ ಪಂದ್ಯದಲ್ಲೇ ಅದ್ಭುತ ಪ್ರದರ್ಶನ ತೋರಿ ವಿಜಯ್ ಹಝಾರೆ ಟ್ರೋಫಿ ಟೂರ್ನಿಯ ತಮ್ಮ ಪದಾರ್ಪಣೆ ಪಂದ್ಯದಲ್ಲಿಯೇ ಶತಕವನ್ನು ಸಿಡಿಸಿದ್ದಾರೆ. ಶನಿವಾರ ಇಲ್ಲಿನ ಕೊಟಂಬಿ ಕ್ರೀಡಾಂಗಣದಲ್ಲಿ ಪಂಜಾಬ್ ವಿರುದ್ಧದ ಕ್ವಾರ್ಟರ್ ಫೈನಲ್‌ನಲ್ಲಿ 19ನೇ ವಯಸ್ಸಿನ ಅರ್ಶಿನ್ ಈ ಸಾಧನೆಯನ್ನು ಮಾಡಿದ್ದು, ಆ ಮೂಲಕ ಪಂಜಾಬ್ ತಂಡ ಕ್ವಾಟರ್ ಫೈನಲ್‌ನಲ್ಲಿ ಸೋಲುವಂತಾ ಯಿತು.

ಈ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡುವಂತಾಗಿದ್ದ ಮಹಾರಾಷ್ಟ್ರ ತಂಡದ ಪರ ಇನ್ನಿಂಗ್ಸ್ ಆರಂಭಿಸಿ ಅರ್ಶಿನ್ ಕುಲಕರ್ಣಿ ಗಮನಾರ್ಹ ಪ್ರದರ್ಶನವನ್ನು ತೋರಿದರು. ಮತ್ತೊಂದು ತುದಿಯಲ್ಲಿ ನಾಯಕ ಋತುರಾಜ್ ಗಾಯಕ್ವಾಡ್ ಓಪನಿಂಗ್‌ಗೆ ಬಂದಿದ್ದರು. ಆದರೆ ಅರ್ಷದೀಪ್ ಸಿಂಗ್ ಆರಂಭಿಕ ಓವರ್‌ಗಳಲ್ಲಿ ತಮ್ಮ ಸ್ವಿಂಗ್ ಮತ್ತು ಸೀಮ್‌ನಿಂದ ಬ್ಯಾಟ್ಸ್‌ಮನ್‌ಗಳಿಗೆ ತೊಂದರೆ ನೀಡಿದ್ದರೂ ಎಡಗೈ ಬ್ಯಾಟ್ಸ್‌ಮನ್ ಅರ್ಶಿನ್ ನಿರಂತರವಾಗಿ ರನ್ ಗಳಿಸಿದರು.

ಋತುರಾಜ್ ಗಾಯಕ್ವಾಡ್ ಮತ್ತು ಸಿದ್ದೇಶ್ ವೀರ್ ಬಹುಬೇಗ ವಿಕೆಟ್ ಒಪ್ಪಿಸಿದರು. ಅವರು ಮೂರನೇ ವಿಕೆಟ್‌ಗೆ ಅಂಕಿತ್ ಬಾವ್ನೆ ಅವರೊಂದಿಗೆ 145 ರನ್‌ಗಳ ಜೊತೆಯಾಟವನ್ನು ಆಡಿದರು ಮತ್ತು 41ನೇ ಓವರ್‌ನಲ್ಲಿ ಅರ್ಷದೀಪ್ ಸಿಂಗ್ ಅವರ ಎಸೆತದಲ್ಲಿ ಒಂದು ರನ್ ಪಡೆಯುವ ಮೂಲಕ ತಮ್ಮ ಚೊಚ್ಚಲ ಶತಕವನ್ನು ಪೂರ್ಣಗೊಳಿಸಿದರು.

ಅರ್ಶಿನ್ ಜೊತೆಗೆ ಬಾವ್ನೆ ಕೂಡ ಉತ್ತಮ ಕೊಡುಗೆ ನೀಡಿ 85 ಎಸೆತಗಳಲ್ಲಿ 60 ರನ್ ಗಳಿಸಿದರು. ನಿಕಿಲ್ ನಾಯಕ್ ಮತ್ತು ಸತ್ಯಜಿತ್ ಬಚಾವ್ ಕೆಲವು ನಿರ್ಣಾಯಕ ರನ್‌ಗಳನ್ನು ಗಳಿಸಿ ಮಹಾರಾಷ್ಟ್ರ ತಂಡವನ್ನು 270ರ ಗಡಿ ದಾಟಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು.

ಭಾರತ ತಂಡದ ಆಯ್ಕೆ ಪ್ರಕ್ರಿಯೆ ಸರಿ ಇಲ್ಲ | ಸೋಲಿನ ಬೆನ್ನಲ್ಲೇ ಆರೋಪ

ಗಂಭೀರ್ ಒಬ್ಬ ಮೋಸಗಾರ: ಮನೋಜ್ ತಿವಾರಿ

ಕೊಲ್ಕತ್ತಾ: ಟೀಂ ಇಂಡಿಯಾ ಮುಖ್ಯ ಕೋಚ್ ಗೌತಮ್ ಗಂಭೀರ್ ವಿರುದ್ಧ ಕೆ.ಕೆ.ಆರ್ ತಂಡದ ಮಾಜಿ ಬ್ಯಾಟ್ಸ್‌ಮನ್ ಮನೋಜ್ ತಿವಾರಿ ಆರೋಪ ಮಾಡಿದ್ದಾರೆ. ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್‌ನಲ್ಲಿ ಸೋತ ನಂತರ ಕೋಚ್‌ಗಾಗಿ ತೀವ್ರ ಟೀಕೆಗೆ ಗುರಿಯಾಗಿರುವ ಗಂಭೀರ್ ಅವರನ್ನು ಮನೋಜ್ ತಿವಾರಿ ತೀವ್ರವಾಗಿ ಟೀಕಿಸಿದ್ದಾರೆ. ಗಂಭೀರ್ ಒಬ್ಬ ಕಪಟ ಎಂದು ಹೇಳಿದ್ದು, ಸದ್ಯ ಈ ಕಾಮೆಂಟ್‌ಗಳು ಕ್ರಿಕೆಟ್ ವಲಯದಲ್ಲಿ ಸಂಚಲನ ಮೂಡಿಸಿವೆ.

ಈ ಹಿಂದೆಯೂ ಗಂಭೀರ್ ತಮ್ಮ ಕುಟುಂಬದ ಬಗ್ಗೆ ಅಸಭ್ಯವಾಗಿ ಮಾತನಾಡಿದ್ದರು ಎಂದು ತಿವಾರಿ ಹೇಳಿಕೊಂಡಿದ್ದಾರೆ. ಮಾಜಿ ನಾಯಕ ಗಂಗೂಲಿ ಬಗ್ಗೆ ಗಂಭೀರ್ ತಪ್ಪಾಗಿ ಮಾತನಾಡಿದ್ದಾರೆ ಎಂದೂ ಅವರು ಹೇಳಿದ್ದಾರೆ.

ದೆಹಲಿ ರಣಜಿ ಟ್ರೋಫಿಯಲ್ಲಿ ನಾವು ಒಟ್ಟಿಗೆ ಆಡಿದಾಗ, ಅಲ್ಲಿದ್ದವರೆಲ್ಲರೂ ಗಂಭೀರ್ ಅವರ ಮಾತುಗಳನ್ನು ಕೇಳಿದ್ದಾರೆ. ಅವರು ನನ್ನ ಕುಟುಂಬ ಮತ್ತು ಗಂಗೂಲಿ ಬಗ್ಗೆ ತಪ್ಪಾಗಿ ಮಾತನಾಡಿದ್ದಾರೆ, ಅಲ್ಲಿದ್ದ ಕೆಲವರು ಗಂಭೀರ್ ಅವರನ್ನು ಬೆಂಬಲಿಸಿದ್ದಾರೆ ಎಂದು ತಿವಾರಿ ಹೇಳಿದರು.

ಅಂತಿಮ ತಂಡದ ಆಯ್ಕೆ ಪ್ರಕ್ರಿಯೆಯೂ ಸರಿಯಾಗಿ ನಡೆದಿಲ್ಲ. ಹರ್ಷಿತ್ ರಾಣಾಗೆ ಆಕಾಶ್ ದೀಪ್ ಹೊರಗುಳಿದಿದ್ದಾರೆ. ಪರ್ತ್ ಟೆಸ್ಟ್‌ನಲ್ಲಿ ಆಕಾಶ್ ದೀಪ್ ಬದಲಿಗೆ ಹರ್ಷಿತ್ ರಾಣಾ ಆಡಿದ್ದಾರೆ. ಅದು ಹೇಗೆ ಸಾಧ್ಯ? ಆಕಾಶ್ ಮಾಡಿದ್ದೇನು? ಅವರಿಗೆ ಹೆಚ್ಚಿನ ಪ್ರಥಮ ದರ್ಜೆ ಅನುಭವವೂ ಇಲ್ಲ. ಆಕಾಶ್ ಅತ್ಯುತ್ತಮ ದಾಖಲೆಗಳನ್ನು ಹೊಂದಿದ್ದಾರೆ. ದೇವದತ್ ಪಡಿಕ್ಕಲ್ ಟೆಸ್ಟ್ ತಂಡಕ್ಕೆ ಹೇಗೆ ಬಂದರು? ಅಭಿಮನ್ಯು ಈಶ್ವರನ್‌ರವರನ್ನು ಯಾಕೆ ಆಯ್ಕೆ ಮಾಡಲಿಲ್ಲ? ತಂಡದ ಆಯ್ಕೆ ಪ್ರಕ್ರಿಯೆಯಲ್ಲಿ ಇಂತಹ ಹಲವು ಸಂಗತಿಗಳು ನಡೆಯುತ್ತಿವೆ.

ಇದರಿಂದ ಆಗುವ ಹಾನಿಯನ್ನು ಎಲ್ಲರೂ ನೋಡುತ್ತಿದ್ದಾರೆ, ಇದು ಖಂಡಿತಾ ಪಕ್ಷಪಾತ ಧೋರಣೆ. ಅದಕ್ಕಾಗಿಯೇ ಕೆಲವು ಆಟಗಾರರು ಗಂಭೀರ್‌ಗೆ ಬೆಂಬಲ ನೀಡಿದ್ದಾರೆ ಎಂದು ಮನೋಜ್ ತಿವಾರಿ ಟೀಕಿಸಿದ್ದಾರೆ.

ವಿಟಾಕೀಸ್

ಶಿವರಾತ್ರಿಗೆ ರಾಕ್ಷಸನ ದರ್ಶನ

ನಟ ಪ್ರಜ್ವಲ್ ಭಿನ್ನ ವಿಭಿನ್ನ ಪಾತ್ರಗಳಲ್ಲಿ ನಟಿಸುವ ಮೂಲಕ ಪ್ರೇಕ್ಷಕರ ಮನಗೆದ್ದಿದ್ದಾರೆ. ಈ ವರ್ಷದಲ್ಲಿ ಪ್ರಜ್ವಲ್ ರಾಕ್ಷಸನ ಅವತಾರ ತಾಳಿದ್ದು, ತೆರೆಯಲ್ಲಿ ಅಬ್ಬರಿಸಲು ಸಿದ್ಧವಾಗಿದ್ದಾರೆ. ಈ ಹಿಂದೆಯೇ ಬಿಡುಗಡೆಯಾದ ರಾಕ್ಷಸನ ಫಸ್ಟ್ ಲುಕ್ ನೋಡಿ ಸಿನಿಪ್ರಿಯರು ಖುಷಿಯಾಗಿದ್ದಾರೆ. ವಿಶೇಷ ಎಂದರೆ ರಾಕ್ಷಸ ಬಿಡುಗಡೆಗೂ ಮೊದಲೇ ದಾಖಲೆ ಬರೆದಿದೆ. ಚಿತ್ರದ ತೆಲುಗು ಭಾಷೆಯ ವಿತರಣೆಯ ಹಕ್ಕು ಭಾರೀ ಮೊತ್ತಕ್ಕೆ ಮಾರಾಟವಾಗಿದೆ. ಕಂಚಿ ಕಾಮಾಕ್ಷಿ ಕೋಲ್ಕತಾ ಕಾಳಿ ಕ್ರಿಯೇಷನ್ಸ್ ಉತ್ತಮ ಮೊತ್ತ ನೀಡಿ ವಿತರಣೆಯ ಹಕ್ಕು ಖರೀದಿಸಿದೆ.

ಥ್ರಿಲ್ಲರ್ ಕಥನಾ

ರಾಕ್ಷಸ ಶೀರ್ಷಿಕೆಯಂತೆಯೇ ಸಿನಿಮಾ ಕೂಡ ಅದ್ದೂರಿಯಾಗಿ ಮೂಡಿಬಂದಿದೆ. ಇಲ್ಲಿ ಟೈಮ್ ಲೂಪ್ ಕಾನ್ಸೆಪ್ಟ್ ಇದ್ದು, ಇದು ಕನ್ನಡದಲ್ಲಿಯೇ ಹೊಸ ಕಾನ್ಸೆಪ್ಟ್ ಎನ್ನಲಾಗುತ್ತಿದೆ. ಅದಕ್ಕೆ ಥ್ರಿಲ್ಲರ್ ಅಂಶಗಳನ್ನು ಬೆರೆಸಿರುವ ನಿರ್ದೇಶಕರು ಎಲ್ಲರಿಗೂ ಹಿಡಿಸುವಂತೆ ತೆರೆಯಕ್ಕಿ ಕಟ್ಟಿಕೊಟ್ಟಿದ್ದಾರೆ. ಈ ಹಿಂದೆ ಮಮ್ಮಿ, ದೇವಕಿ ಚಿತ್ರಗಳನ್ನು ನಿರ್ದೇಶಿಸಿ ಸೈ ಎನಿಸಿಕೊಂಡಿರುವ ನಿರ್ದೇಶಕ ಲೋಹಿತ್, ರಾಕ್ಷಸನಿಗೂ ಆ್ಯಕ್ಷನ್ ಕಟ್ ಹೇಳಿದ್ದಾರೆ. ಹಾಗಾಗಿಯೇ ಸಿನಿಮಾದ ಬಗ್ಗೆ ಕುತೂಹಲ ಹೆಚ್ಚಿದೆ.

ವಿಭಿನ್ನ ಅವತಾರ

ಪ್ರಜ್ವಲ್ ಈ ಹಿಂದೆಂದೂ ಕಂಡಿರದ ಡಿಫರೆಂಟ್ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ತಂದೆ ಮಗಳ ಬಾಂಧವ್ಯದ ಎಳೆಯೂ ಇಲ್ಲಿದೆ. ಅದು ಟ್ರೇಲರ್‌ನಲ್ಲಿ ಸ್ಪಷ್ಟವಾಗುತ್ತದೆ. ಶೋಭಾರಾಜ್, ವತ್ಸಲಾ ಮೋಹನ್, ಅರ್ನಾ ರಾಥೋಡ್, ಸಿದ್ಲಿಂಗು ಶ್ರೀಸಧರ್ ಮುಂತಾದವರು ಸಿನಿಮಾದಲ್ಲಿ ಅಭಿನಯಿಸಿದ್ದಾರೆ. ಹೈದರಾಬಾದ್‌ನ ರಾಮೋಜಿ ಫಿಲ್ಮ್ ಸಿಟಿಯಲ್ಲಿ ಚಿತ್ರದ ಬಹುತೇಕ ಚಿತ್ರೀಕರಣ ನಡೆಸಲಾಗಿದೆ. ರಾಮೇಶ್ವರಂ, ಗೋವಾ ಹಾಗೂ ಬೆಂಗಳೂರಿನಲ್ಲಿಯೂ ಚಿತ್ರದ ಸನ್ನಿವೇಶಗಳನ್ನು ಸೆರೆಹಿಡಿಯಲಾಗಿದೆ.

ಶಾನ್ವಿ ಎಂಟರ್‌ಟೇನ್‌ಮೆಂಟ್ ಬ್ಯಾನರ್‌ನಲ್ಲಿ ಬಿ.ಎಸ್.ದೀಪು ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಜೇಬಿನ್ ಪಿ. ಜೇಕಬ್ ಛಾಯಾಗ್ರಹಣ, ವಿನೋದ್ ಸಾಹಸ ನಿರ್ದೇಶನ, ವರುಣ್ ಉನ್ನಿ ಸಂಗೀತ ನಿರ್ದೇಶನ, ಅವಿನಾಶ್ ಬಸುತ್ಕರ್ ಹಿನ್ನಲೆ ಸಂಗೀತ ಹಾಗೂ ಸಿ. ರವಿಚಂದ್ರನ್ ಸಂಕಲನ ಈ ಚಿತ್ರಕ್ಕಿದೆ. ಶಿರಾತ್ರಿಯ ಹಬ್ಬದಂದು ರಾಕ್ಷಸನ ದರ್ಶನವಾಗಲಿದೆ.

> **ಇತ್ತೀಚೆಗೆ ಕನ್ನಡ ಸಿನಿಮಾಗಳು ಪರಭಾಷೆಯಲ್ಲಿ ರಿಲೀಸ್ ಆಗುವುದು ಕಷ್ಟವಾಗಿದೆ. ಆದರೂ ಕೇಳಿದಮೊತ್ತಕ್ಕೆ ಸೇಲ್ ಆಗುವುದು ಇನ್ನು ಕಷ್ಟ. ಅಂತದರಲ್ಲಿ ನಮ್ಮ ಚಿತ್ರದ ವಿತರಣೆಯ ಹಕ್ಕು ಹೆಚ್ಚಿನ ಮೊತ್ತಕ್ಕೆ ಮಾರಾಟವಾಗಿದೆ. ತೆಲುಗಿನ ಕಂಚಿ ಕಾಮಾಕ್ಷಿ ಕೋಲ್ಕತಾ ಕಾಳಿ ಕ್ರಿಯೇಷನ್ಸ್ ಭಾರೀ ಮೊತ್ತ ನೀಡಿ ವಿತರಣೆಯ ಹಕ್ಕು ಪಡೆದಿದೆ. ಇದು ನಮಗೆ ಖುಷಿ ನೀಡಿದ್ದು ಚಿತ್ರದ ಬಗ್ಗೆ ನಿರೀಕ್ಷೆ ದುಪ್ಪಟ್ಟಾಗಿದೆ. ಟ್ರೇಲರ್, ಟೀಸರ್‌ನಲ್ಲಿ ಇರುವುದಕ್ಕಿಂತಲೂ ಹೆಚ್ಚಿನ ಮನರಂಜನೆ ಚಿತ್ರದಲ್ಲಿದೆ.**
>
> -ಬಿ.ಎಸ್.ದೀಪು ನಿರ್ಮಾಪಕ

ಕಾಡಿನಲ್ಲ ಖಜಾನೆಯ ಹುಡುಕಾಟ

ಅಡ್ವೆಂಚರ್ಸ್ ಕಾಮಿಡಿ ಕಥಾಹಂದರ ಒಳಗೊಂಡಿರುವ ಆರಂಭದಿಂದಲೂ ಸದ್ದು ಮಾಡುತ್ತಿರುವ ಫಾರೆಸ್ಟ್ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು, ಚಿತ್ರದ ಬಗೆಗಿನ ಕುತೂಹಲವನ್ನು ಮತ್ತಷ್ಟು ಹೆಚ್ಚಿಸಿದೆ. ಟ್ರೇಲರ್ ನೋಡಿದಾಗ ಚಿತ್ರದ ಶೀರ್ಷಿಕೆಯೇ ಹೇಳುವಂತೆ ಕಾಡಿನೊಳಗೆ ನಡೆಯುವ ವಿಭಿನ್ನ ಕಥಾಹಂದರ ಹೊಂದಿರುವ ಚಿತ್ರ ಎಂದು ತಿಳಿಯುತ್ತದೆ. ಕಾಡಿನ ಟ್ರೇಲರ್ ನೋಡಿ ನಾಡಿನ ಜನ ಫಿದಾ ಆಗಿದ್ದಾರೆ. ಕಾಡಿನಲ್ಲಿ ಅಡಗಿರುವ ಚಿನ್ನದ ಗಣಿಯನ್ನು ಹುಡುಕಲು ಹೊರಟ ತಂಡವೊಂದು ಯಾವೆಲ್ಲಾ ಸಮಸ್ಯೆಗಳನ್ನು ಎದಿರಿಸುತ್ತದೆ ಎಂಬುದನ್ನು ಸಿನಿಮಾದಲ್ಲಿ ಹೇಳಲಾಗಿದೆ. ಅದನ್ನು ಥ್ರಿಲ್ಲರ್, ಕಾಮಿಡಿಯನ್ನು ಬೆರೆಸಿ ತೆರೆಯಲ್ಲಿ ಮನರಂಜನಾತ್ಮಕವಾಗಿ ಕಟ್ಟಿಕೊಡಲಾಗಿದೆ.

ರಂಗಾಯಣ ರಘು, ಚಿಕ್ಕಣ್ಣ, ಗುರುನಂದನ್, ಅನೀಶ್, ಅರ್ಚನಾ ಕೊಟ್ಟಿಗೆ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಉಳಿದಂತೆ ಶರಣ್ಯಾ ಶೆಟ್ಟಿ, ಅವಿನಾಶ್, ಪ್ರಕಾಶ್ ತುಮ್ಮಿನಾಡು, ದೀಪಕ್ ರೈ, ಸೂರಜ್ ಪಾಪ್ಸ್, ಸುನೀಲ್ ಕುಮಾರ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಚಿಕ್ಕಣ್ಣ ಹಾಗೂ ರಂಗಾಯಣ ರಘು ಕಾಂಬಿನೇಷನ್‌ನ ಕಾಮಿಡಿ ದೃಶ್ಯಗಳು ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸುತ್ತವೆ. ಸತ್ಯಶೌರ್ಯ ಸಾಗರ್ ಹಾಗೂ ಚಂದ್ರಮೋಹನ್ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ರಚಿಸಿದ್ದು, ಚಂದ್ರಮೋಹನ್ ನಿರ್ದೇಶನದಲ್ಲಿ ಫಾರೆಸ್ಟ್ ಸಿದ್ಧವಾಗಿದೆ. ಎನ್.ಎಂ.ಕೆ ಸಿನಿಮಾಸ್ ಲಾಂಛನದಲ್ಲಿ ಎನ್.ಎಂ. ಕಾಂತರಾಜ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಧರ್ಮವಿಶ್ ಸಂಗೀತ ನಿರ್ದೇಶನ, ಆನಂದ್ ರಾಜಾ ವಿಕ್ರಮ್ ಹಿನ್ನೆಲೆ ಸಂಗೀತ, ರವಿಕುಮಾರ್ ಛಾಯಾಗ್ರಹಣ, ಅರ್ಜುನ್ ಕಿಟ್ಟು ಸಂಕಲನ, ಅಮರ್ ಕಲಾ ನಿರ್ದೇಶನ ಹಾಗೂ ರವಿವರ್ಮ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಫಾರೆಸ್ಟ್ ಇದೇ ತಿಂಗಳ 24 ರಂದು ರಾಜ್ಯಾದ್ಯಂತ ತೆರೆಗೆ ಬರಲಿದೆ.

ಜಸ್ಟ್ ಮ್ಯಾರಿಡ್‌ನ ಕೇಳೋ ಮಚ್ಚಾ

ಜಸ್ಟ್ ಮ್ಯಾರೀಡ್ ಚಿತ್ರತಂಡ ಮತ್ತೊಂದು ಹೊಸ ಹಾಡನ್ನು ಬಿಡುಗಡೆ ಮಾಡಿದೆ. ಅಭಿಮಾನಿಯಾಗಿ ಹೋದೆ.. ಎಂಬ ಮಾಧುರ್ಯ ತುಂಬಿದ ಗೀತೆ ಇದಾಗಿದ್ದು, ಸಂಗೀತ ಪ್ರಿಯರ ಮನಗೆದ್ದಿದೆ. ನಾಗಾರ್ಜುನ ಶರ್ಮಾ ಸಾಹಿತ್ಯ ರಚಿಸಿರುವ ಈ ಗೀತೆಗೆ ನಕಾಶ್ ಅಜೀಜ್ ದನಿಯಾಗಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ಹಾಡಿಗೆ ಹೊಸತನ ತುಂಬಿದೆ. ಸಿ.ಆರ್.ಬಾಬಿ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಜಸ್ಟ್ ಮ್ಯಾರೀಡ್ ಲವ್ ಸ್ಟೋರಿಯ ಜತೆಗೆ ಕೌಟುಂಬಿಕ ಕಥೆಯನ್ನು ಒಳಗೊಂಡಿದೆ. ಕೌಟುಂಬಿಕ ಬಾಂಧವ್ಯಗಳ ಮೌಲ್ಯವನ್ನು ಸಾರುವ ಚಿತ್ರ ಇದಾಗಿದ್ದು, ಶೈನ್ ಶೆಟ್ಟಿ ನಾಯಕನಾಗಿ ನಟಿಸಿದ್ದು, ಅಂಕಿತಾ ಅಮರ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಶೃತಿ ಹರಿಹರನ್, ದೇವರಾಜ್, ಶ್ರುತಿ, ಅನೂಪ್ ಭಂಡಾರಿ, ಅಚ್ಯುತ್ ಕುಮಾರ್ ಮುಂತಾದವರು ತಾರಾಗಣದಲ್ಲಿದ್ದಾರೆ. ಆಬ್ಸ್ ಸ್ಟುಡಿಯೋಸ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಸಿ.ಆರ್ ಬಾಬಿ ಮತ್ತು ಬಿ.ಅಜನೀಶ್ ಲೋಕ್‌ನಾಥ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

ರುದ್ರ ಗರುಡ ಪುರಾಣದ ಮನಮೋಹಕ ಗಾನ

ಕವಲು ದಾರಿ ಖ್ಯಾತಿಯ ರಿಷಿ ಗರುಡ ಪುರಾಣ ಹೇಳಲು ಬರುತ್ತಿದ್ದಾರೆ. ಈ ವರ್ಷದ ನಿರೀಕ್ಷಿತ ಚಿತ್ರಗಳಲ್ಲಿ ಒಂದಾಗಿರುವ ಈ ಚಿತ್ರದ ಮತ್ತೊಂದು ಹಾಡು ಬಿಡುಗಡೆಯಾಗಿದೆ. ಪ್ರಮೋದ್ ಮರವಂತೆ ಸಾಹಿತ್ಯ ರಚಿಸಿರುವ ಅದೇನೇನೋ ಖುಷಿ ತಂದೆ.. ಅದೇನೇನೋ ನಶೇ ತಂದೆ... ಎಂಬ ಹಾಡು ಇದಾಗಿದ್ದು, ಸಂಜಿತ್ ಹೆಗ್ಡೆ ಹಾಗೂ ದೀಪಿಕಾ ವರದರಾಜನ್ ದನಿಯಲ್ಲಿ ಮಧುರವಾಗಿ ಮೂಡಿಬಂದಿದೆ. ಈ ಹಾಡಿಗೆ ಕೃಷ್ಣ ಪ್ರಸಾದ್ ಸಂಗೀತ ಸಂಯೋಜಿಸಿದ್ದಾರೆ. ರಿಷಿ ಹಾಗೂ ಪ್ರಿಯಾಂಕಾ ಕುಮಾರ್ ಹಾಡಿನಲ್ಲಿ ಹೆಜ್ಜೆ ಹಾಕಿದ್ದಾರೆ. ಥ್ರಿಲ್ಲರ್ ಮಿಸ್ಟ್ರಿ ಕಥೆಯ ರುದ್ರ ಗರುಡ ಪುರಾಣದಲ್ಲಿ ಅಪರೂಪದ ಪ್ರೇಮ ಕಥೆಯೂ ಅಡಕವಾಗಿದೆ.

ನಿರ್ದೇಶಕ ಜೇಕಬ್ ವರ್ಗೀಸ್ ಅವರ ಜತೆಗೆ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುವ ನಂದೀಶ್ ರುದ್ರ ಗರುಡ ಪುರಾಣ ಚಿತ್ರವನ್ನು ನಿರ್ದೇಶಿಸಿದ್ದಾರೆ. ಅಶ್ವಿನಿ ಆರ್ಟ್ಸ್ ಲಾಂಛನದಲ್ಲಿ ಅಶ್ವಿನಿ ವಿಜಯ್ ಲೋಹಿತ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ರಿಷಿ ನಾಯಕನಾಗಿ ನಟಿಸಿದ್ದು, ಪ್ರಿಯಾಂಕಾ ಕುಮಾರ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಉಳಿದಂತೆ ವಿನೋದ್ ಆಳ್ವಾ, ಅವಿನಾಶ್, ಶಿವರಾಜ್ ಕೆ.ಆರ್ ಪೇಟೆ, ಗಿರೀಶ್ ಶಿವಣ್ಣ ಮುಂತಾದವರು ತಾರಾಬಳಗದಲ್ಲಿದ್ದಾರೆ. ಸಂದೀಪ್ ಕುಮಾರ್ ಛಾಯಾಗ್ರಹಣ, ಮನು ಶೇಡ್ಗಾರ್ ಸಂಕಲನ ಹಾಗೂ ಕೃಷ್ಣ ಪ್ರಸಾದ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ಇದೇ 24ರಂದು ರುದ್ರ ಗರುಡ ಪುರಾಣದ ದರ್ಶನವಾಗಲಿದೆ.

ವಿಶ್ವವಾಣಿ 12.01.2025 ಭಾನುವಾರ
ವಿರಾಮ
ಓಡುವ ಲೋಕಕ್ಕೆ ಓದುವ ನಿಲ್ದಾಣ

ದ್ವೀಪ, ಮುಳುಗಡೆ, ಕುಂಜಾಲು ಕಣಿವೆಯ ಕೆಂಪು ಹೂವು ಮೊದಲಾದ ಹಲವು ಮನೋಜ್ಞ ಕಾದಂಬರಿಗಳನ್ನು ರಚಿಸಿದ ನಾ. ಡಿಸೋಜ ಅವರು ನೂರಾರು ಸಣ್ಣ ಕಥೆಗಳನ್ನೂ ಬರೆದಿದ್ದಾರೆ. ನಿರಂತರವಾಗಿ ವಿಪುಲ ಸಾಹಿತ್ಯ ರಚಿಸುತ್ತಿರುವಾಗಲೇ, ತಮ್ಮ ಸುತ್ತಲಿನ ಸಮಸ್ಯೆಗಳಿಗೆ ಸಕ್ರಿಯವಾಗಿ ಸ್ಪಂದಿಸುತ್ತಿದ್ದುದು ನಾ.ಡಿಸೋಜ ಅವರ ಗುಣ. ಮುಖ್ಯವಾಗಿ ಮಲೆನಾಡಿನ ಪರಿಸರದ ಕುರಿತು, ಬದುಕಿನ ಕುರಿತು ಅಪಾರ ಕಾಳಜಿ ಹೊಂದಿದ್ದರು. ಶರಾವತಿ ನದಿಯ ನೀರನ್ನು ಅವೈಜ್ಞಾನಿಕ ಕಾಮಗಾರಿಯ ಮೂಲಕ ಬೆಂಗಳೂರಿಗೆ ತರಬೇಕು ಎಂಬ ಪ್ರಸ್ತಾಪವನ್ನು ತೀವ್ರವಾಗಿ ವಿರೋಧಿಸಿದ ನಾ.ಡಿಸೋಜ ಅವರು, ಆ ಕುರಿತು ಒಂದು ಪುಸ್ತಕವನ್ನೇ ಸಂಪಾದಿಸಿ ಪ್ರಕಟಿಸಿದರು ಮತ್ತು ಆ ಯೋಜನೆಯು ಹೇಗೆ ಅವೈಜ್ಞಾನಿಕ ಮತ್ತು ಭವಿಷ್ಯದಲ್ಲಿ ದುಷ್ಪರಿಣಾಮಗಳನ್ನು ತರಬಲ್ಲದು ಎಂಬುದನ್ನು ಎತ್ತಿ ತೋರಿಸಿದರು. ನಮ್ಮ ರಾಜ್ಯಕ್ಕೆ ಬೆಳಕನ್ನು ನೀಡಿದ ಲಿಂಗನಮಕ್ಕಿ ಜಲವಿದ್ಯುತ್ ಯೋಜನೆಯಲ್ಲಿ ಜಮೀನು ಕಳೆದುಕೊಂಡು, ಮನೆಯನ್ನು ಕಳೆದುಕೊಂಡು ನಿರಾಶ್ರಿತರಾದ ಸಾವಿರಾರು ಕುಟುಂಬಗಳನ್ನು ಹತ್ತಿರದಿಂದ ನೋಡಿದ್ದ ಡಿಸೋಜ ಅವರು, ಅವರಿಗೆ ತಮ್ಮ ಕೈಲಾದ ಸಹಾಯ ಮಾಡಿದರು; ಅವರ ನೋವನ್ನು ತಮ್ಮ ಕೃತಿಗಳಲ್ಲಿ ಕಟ್ಟಿಕೊಟ್ಟು, ಅವರ ಸಂಕಷ್ಟಕ್ಕೆ ದನಿಯಾದರು, ಮಾನವೀಯತೆಯನ್ನು ತೋರಿದರು. ತಾವು ರಚಿಸಿದ ಹಲವು ಕಾದಂಬರಿಗಳ ಮೂಲಕ ಕನ್ನಡಿಗರ ಮನ ಗೆದ್ದಿದ್ದರು. ನಾ.ಡಿಸೋಜ ಅವರಿಗೆ 'ವಿಶ್ವವಾಣಿ' ಬಳಗವು ನುಡಿನಮನಗಳನ್ನು ಅರ್ಪಿಸುತ್ತಿದೆ.



ಮರೆಯಾದ ಮಲೆನಾಡಿನ ಸಾಕ್ಷಿಪ್ರಜ್ಞೆ

ಕನ್ನಡದಲ್ಲಿ ಕರೆದರೆ ಓ ಎನ್ನನೆ ಕ್ರಿಸ್ತ!

ಸಾಂಪ್ರದಾಯಿಕವಾಗಿ ಕ್ರೈಸ್ತ ಕ್ಯಾಥೋಲಿಕ್ ಕುಟುಂಬಕ್ಕೆ ಸೇರಿದ್ದರೂ ಅವರು ನಿಯಮಿತವಾಗಿ ಚರ್ಚಿಗೆ ಹೋದವರಲ್ಲ. ಆದರೆ ತಮ್ಮ ಕುಟುಂಬದ ಸದಸ್ಯರ ಧಾರ್ಮಿಕ ಆಚರಣೆಗಳಿಗೆ ಅಡ್ಡಿಪಡಿಸಿದವರಲ್ಲ. ಚರ್ಚ್‌ಗಳಲ್ಲಿ ಕನ್ನಡ ಪ್ರಾರ್ಥನೆ ನಡೆಯ ಬೇಕು ಎಂಬ ಬೇಡಿಕೆ ಬಂದಾಗ ಈ ಹೋರಾಟದ ಮುಂಚೂಣಿಯಲ್ಲಿ ಡಿಸೋಜ ಇದ್ದರು. 'ಕನ್ನಡದಲ್ಲಿ ಕರೆದರೆ ಓ ಎನ್ನನೆ ಕ್ರಿಸ್ತ!' ಎನ್ನುವ ಚಾರಿತ್ರಿಕ ದಾಖಲೆಗಳುಳ್ಳ ಅಗ್ರಲೇಖನವನ್ನು ಬರೆದಿದ್ದರು.

ಪ್ರಶಸ್ತಿ ಗೌರವಗಳು

- ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ • ಗುಲ್ವಾಡಿ ವೆಂಕಟರಾವ ಪ್ರಶಸ್ತಿ
- ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ • ನಿರಂಜನ ಸಾಹಿತ್ಯ ಪ್ರಶಸ್ತಿ
- ಭಟ್ಕಳ ತಾಲೂಕು ಸಾಹಿತ್ಯಸಮ್ಮೇಳನಾಧ್ಯಕ್ಷತೆ
- ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ (ಕೊಡಗು)
- ಕುವೆಂಪು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್
- ಮಾಸ್ತಿ ಪ್ರಶಸ್ತಿ • ಕೇಂದ್ರಸಾಹಿತ್ಯ ಅಕಾಡೆಮಿಯ ಬಾಲ ಸಾಹಿತ್ಯ ಪುರಸ್ಕಾರ
- ಪಂಪ ಪ್ರಶಸ್ತಿ ಮೊದಲಾದವು

ಪಠ್ಯಪುಸ್ತಕಗಳಾಗಿ ಆಯ್ಕೆ

ನಾ. ಡಿಸೋಜ ರಚಿಸಿದ ಮುಳುಗಡೆ, ಕೊಳಗ, ಒಳಿತನ್ನು ಮಾಡಲು ಬಂದವರು, ಬಣ್ಣ, ಪಾದರಿಯಾಗುವ ಹುಡುಗ, ಇಬ್ಬರು ಮಾಜಿಗಳು ಮೊದಲಾದ ಕಾದಂಬರಿಗಳು ಕರ್ನಾಟಕದ ಹಲವು ವಿಶ್ವವಿದ್ಯಾಲಯಗಳಲ್ಲಿ ವಿವಿಧ ಪದವಿ ತರಗತಿಗಳಿಗೆ ಪಠ್ಯಪುಸ್ತಕಗಳಾಗಿ ಆಯ್ಕೆಯಾಗಿವೆ. ಇವರು ರಚಿಸಿದ ಸಣ್ಣಕಥೆಗಳು ಮತ್ತು ಕಾದಂಬರಿಗಳು ಕೊಂಕಣಿ, ಮಳಯಾಳಂ, ತೆಲುಗು, ಸಂಸ್ಕೃತ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗೆ ಅನುವಾದಗೊಂಡಿವೆ.

ರೈಲು ಸೇವೆ ನಿಲ್ಲದಂತೆ ಹೋರಾಟ!



ಹೋರಾಟಗಳಿಗೂ ಡಿಸೋಜ ಅವರಿಗೂ ವಿಶಿಷ್ಟವಾದ ನಂಟು. ಮಲೆನಾಡಿನ ಬಹುತೇಕ ಎಲ್ಲಾ ಹೋರಾಟಗಳಲ್ಲಿಯೂ ಅವರಿದ್ದರು. ಕಾಗೋಡು ಸತ್ಯಾಗ್ರಹದ ಹಿನ್ನೆಲೆಯಲ್ಲಿ ಬಂದ ಅವರ 'ಕೊಳಗ' ಚಾರಿತ್ರಿಕ ಮಹತ್ವವನ್ನು ಹೊಂದಿದಂತಹ ಕೃತಿ. ಬ್ರಿಟೀಷರ ಕಾಲದಲ್ಲಿ ಮಲೆನಾಡು ಭಾಗಕ್ಕೆ ಬಂದಿದ್ದ ರೈಲ್ವೇ ಸೌಲಭ್ಯವನ್ನು ಸ್ವಾತಂತ್ರ್ಯನಂತರದ ಸರ್ಕಾರ ನಿಲ್ಲಿಸಲು ಮುಂದಾದಾಗ ಬಹುಮಟ್ಟಿಗೆ ಏಕಾಂಗಿಯಾಗಿಯೇ ಸಿಡಿದೆದ್ದವರು ಡಿಸೋಜ. ಇಕ್ಕೇರಿಯಲ್ಲಿ ಗಣಿಗಾರಿಕೆ ಆರಂಭವಾದಾಗ ಅದನ್ನು ನಿಲ್ಲಿಸಿದ್ದು ಅವರ ಹೋರಾಟವೇ. ಸ್ಥಳೀಯರಿಗೆ ಉದ್ಯೋಗ ದೊರಕಬೇಕು ಎಂದು ದೊಡ್ಡ ಆಂದೋಲನವನ್ನೇ ರೂಪಿಸಿದ್ದರು. ಶರಾವತಿ ನೀರನ್ನು ಬೆಂಗಳೂರಿಗೆ ಸಾಗಿಸುವ ಅವೈಜ್ಞಾನಿಕ ಯೋಜನೆಯೊಂದು ರೂಪುಗೊಂಡಾಗ ಡಿಸೋಜ ಅದನ್ನು ಕಟುವಾಗಿ ವಿರೋಧಿಸಿದರು. ಆ ಕುರಿತು ಒಂದು ಪುಸ್ತಕವನ್ನೇ ಸಂಪಾದಿಸಿ, ಹೊರತಂದರು.

• ಎನ್.ಎಸ್.ಶ್ರೀಧರ ಮೂರ್ತಿ

ಸಜ್ಜನಿಕೆಯ ಮೂರ್ತರೂಪದಂತೆ ಇದ್ದ ಸಾಹಿತಿ, ಕಾದಂಬರಿಕಾರ ನಾ.ಡಿಸೋಜ ಅವರು, ಬದ್ಧತೆಯ ವಿಷಯದಲ್ಲಿ ಮಾದರಿ. ಒಂದು ಕಡೆಯಿಂದ ನಿರಂತರವಾಗಿ ಸಾಹಿತ್ಯ ರಚನೆ ಮಾಡುತ್ತಿರುವಾಗಲೇ, ಅತ್ತ ಮಲೆನಾಡಿನ ಸಮಸ್ಯೆಗಳಿಗೆ ಅವರು ಜೀವ ಕೊಟ್ಟಿದ್ದರು. ಶರಾವತಿ ಜಲವಿದ್ಯುತ್ ಯೋಜನೆಯಿಂದ ಸ್ಥಳಾಂತರವಾಗೊಂಡಿದ್ದ ಸಾವಿರಾರು ಜನರ ಸಂಕಟವನ್ನು ಹತ್ತಿರದಿಂದ ಬಲ್ಲ ಅವರು ಅದಕ್ಕೆ ತಮ್ಮ ಸೃಜನಶೀಲ ಕೃತಿಗಳ ಮೂಲಕ ಧ್ವನಿ ನೀಡಿದರು. ಸ್ಥಳೀಯ ಸಮಸ್ಯೆಯನ್ನು ಜಾಗತಿಕ ನೆಲೆಗೆ ವಿಸ್ತರಿಸಿದ್ದು ಅವರ ಬಹು ದೊಡ್ಡ ಸಾಧನೆ.

ನಾನಂತೂ ಡಿಸೋಜರ ಕತೆ-ಕಾದಂಬರಿಗಳನ್ನು ಓದುತ್ತಲೇ ಬೆಳೆದವನು. ಅವರ 'ಕುಂಜಾಲು ಕಣಿವೆಯ ಕೆಂಪು ಹೂವು' ಕಾದಂಬರಿಯನ್ನು ಬಾಲ್ಯದಲ್ಲಿ ಎಷ್ಟು ಸಲ ಓದಿದ್ದೆನೋ ಗೊತ್ತಿಲ್ಲ. ಅದು ಬೇರೆ ಬೇರೆ ವಯಸ್ಸಿನಲ್ಲಿ ಓದಿದಾಗ ಬೇರೆ ಬೇರೆ ಅರ್ಥಗಳನ್ನು ನನ್ನ ಪಾಲಿಗೆ ನೀಡುತ್ತಾ ಹೋಗಿದ್ದು ವಿಶೇಷವೆಂದೇ ಹೇಳ ಬೇಕು.

ಮುಂದೆ ನಾನು ಪತ್ರಿಕೋದ್ಯಮಕ್ಕೆ ಬಂದ ನಂತರ ನನ್ನ ಪ್ರೀತಿಯ ಬರಹಗಾರರ ಬಳಿಯೆಲ್ಲ ಬರೆಸಿದೆ. ಅದರಲ್ಲಿ ನಾ. ಡಿಸೋಜ ಅವರು ಮುಖ್ಯವಾದವರು. ಡಿಸೋಜ ಯಾವುದೇ ಸಂಪಾದಕರು ಇಷ್ಟಪಡುವ ಲೇಖಕರು. ನಾವು ಹೇಳಿದ ಡೆಡ್‌ಲೈನ್ ನಲ್ಲಿ ಕೊಂಚವೂ ತಪ್ಪದಂತೆ ನಾವು ಬಯಸಿದ ಸ್ವರೂಪಕ್ಕೆ ಅನುಗುಣವಾಗಿ ಕತೆ-ಕಾದಂಬರಿಗಳನ್ನು ಕಳುಹಿಸುತ್ತಿದ್ದರು. ಇಲ್ಲ ಎನ್ನುವ ಮಾತೇ ಅವರ ಬಳಿ ಬರುತ್ತಿರಲಿಲ್ಲ. ಒಮ್ಮೆ ಡಿಸೋಜರು ಫೋನ್ ಮಾಡಿ 'ಒಂದು ಮುಜುಗರ ಆಗುವ ವಿಷಯವನ್ನು ನಿಮ್ಮ ಬಳಿ ಹೇಳಬೇಕಿತ್ತು' ಎಂದರು. ನನಗೆ ಒಂದು ರೀತಿಯಲ್ಲಿ ಆತಂಕ. ಏನು ಎಂದು ಕೇಳಿದೆ.

'ನಿಮ್ಮ ವಿರೋಧಿ ಪತ್ರಿಕೆಗೆ ಒಂದು ಕತೆ ಕೊಡ ಬೇಕಿದೆ. ಆದರೆ ನಿಮ್ಮ ಸಲಹೆ ಅದರ ಕುರಿತು ನನಗೆ ಬೇಕು' ಎಂದರು. ನನಗೆ ಅವರ ಮುಜುಗರ ಅರ್ಥವಾಯಿತು. 'ಸರ್.. ವಿರೋಧಿ ಪತ್ರಿಕೆ ಎಂದಿಲ್ಲ, ನಾವೆಲ್ಲ ಒಂದೇ ಮರದ ಬೇರೆ ಬೇರೆ ರಂಬೆಗಳು ಅಷ್ಟೇ' ಎಂದೆ. ಮರುದಿನ ಡಿಸೋಜರು ನಮ್ಮ ಪತ್ರಿಕಾ ಕಚೇರಿಗೆ ಬಂದರು. ಕತೆ ನೋಡಿದಾಗ ನನ್ನ ಸಹಾಯ ಏಕೆ ಎಂದು ತಿಳಿಯಿತು. ಅದರಲ್ಲಿ ಚಿತ್ರ ನಿರ್ಮಾಣದ ವಿವರಗಳಿದ್ದವು. ನನಗೆ ತಿಳಿದಿದ್ದು ಹೇಳಿದೆ. ಅಲ್ಲಿಯೇ ಕುಳಿತು ಕತೆ ಸರಿ ಪಡಿಸಿ ಹೊರಟರು. ಹೊರಡುವಾಗ ಕೂಡ 'ಮುಂದಿನ ಕತೆ ನಿಮಗೇ ಕೊಡುವೆ' ಎಂದು ಒತ್ತಿ ಒತ್ತಿ ಹೇಳಿದರು. ಅದರಂತೆ ಮುಂದಿನ ಕತೆಯನ್ನು ನಮಗೇ ಕೊಟ್ಟರು.

ಇನ್ನೊಂದು ಸಂದರ್ಭ: ನಮ್ಮ ಪತ್ರಿಕೆಯಲ್ಲಿ ಅವರ ಕಾದಂಬರಿಯು ಧಾರಾವಾಹಿಯಾಗಿ ಪ್ರಕಟವಾಗುತ್ತಿತ್ತು. ಸಾಮಾನ್ಯವಾಗಿ ಕಾದಂಬರಿ ಮುಗಿದ ಮೇಲೆ ಗೌರವಧನ ಕೊಡುವುದು ವಾಡಿಕೆ. ಡಿಸೋಜರು ಹಿರಿಯರು ಎಂದು ನಾನು ಕಾದಂಬರಿ ಇನ್ನೂ ಎರಡು ಕಂತು ಬಂದಾಗಲೇ ಗೌರವಧನ ಕಳುಹಿಸಿದೆ. ಗೌರವಧನ ತಲುಪಿದ ಕೂಡಲೇ ಸೌಜನ್ಯದ ನಾಲ್ಕು ಸಾಲು ಬರೆಯುವುದು ಡಿಸೋಜರ ವಾಡಿಕೆ. ಈ ಸಲ ಅದು ಬರಲಿಲ್ಲ. ಇದೇ ಸಮಯಕ್ಕೆ ಡಿಸೋಜರು ನಮ್ಮ ಕಚೇರಿಗೂ ಬಂದರು. ನಾನೇ ಗೌರವ ಧನದ ಬಗ್ಗೆ ಕೇಳಿದರೆ ಇನ್ನೂ ಕಾದಂಬರಿ ಮುಗಿದಿಲ್ಲವಲ್ಲ ಎಂದರು. ಎಲ್ಲಿಯೋ ತಪ್ಪಾಗಿದೆ ಎನ್ನುವುದು ಅರ್ಥವಾಗಿ ನಮ್ಮ ಅಕೌಂಟ್ಸ್ ವಿಭಾಗದಲ್ಲಿ ಪರಿಶೀಲಿಸಿದರೆ ಈ ಮಹಾಶಯರು ಡಿಸೋಜರಿಗೆ ಕಳುಹಿಸುವ ಹಣವನ್ನು ತಪ್ಪಾಗಿ ಬೇರೆಯವರಿಗೆ ಕಳುಹಿಸಿದ್ದರು. ಅದನ್ನು ಸರಿ ಪಡಿಸಿ ಡಿಸೋಜರಿಗೆ ಹಣ ಪಾವತಿ ಮಾಡಿದೆವು. ಡಿಸೋಜರು ಎಂತಹ ಸಜ್ಜನರು ಎಂದರೆ ನಾನು ಒತ್ತಾಯಿಸಿ ಕೇಳದಿದ್ದರೆ ಗೌರವ ಧನ ತಲುಪದೇ ಇದ್ದ ವಿಷಯ ನಮಗೆ ಗೊತ್ತೇ ಆಗುತ್ತಿರಲಿಲ್ಲ. ನನ್ನ ಸುದೀರ್ಘ ಅನುಭವದಲ್ಲಿ ಅವರು ಒಂದೇ ಒಂದು ಸಲ ಗೌರವಧನ ಕೇಳಿದವರಲ್ಲ. ಕತೆ ಪ್ರಕಟವಾದ ಬಗ್ಗೆ ಪ್ರತಿಕ್ರಿಯೆಗಳ ಬಗ್ಗೆ ಮಾತನಾಡಿದವರಲ್ಲ.

ಓಡುವ ಕಾಲಚಕ್ರ

ಇನ್ನೊಂದು ಸಲ ಡಿಸೋಜರು ಮಧ್ಯಾಹ್ನ ನಮ್ಮ ಕಚೇರಿಗೆ ಬಂದರು. ಅವರು ಒಂದು ಕಾರ್ಯಕ್ರಮ ಮುಗಿಸಿ ಬಂದಿದ್ದರು. ಸಂಜೆ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಅವರು ಉಪನ್ಯಾಸವಿತ್ತು. ಇಡೀ ರಾತ್ರಿ ಪ್ರಯಾಣ. ಕೂಡಲೇ ಕಾರ್ಯಕ್ರಮ. ವಯೋ ಕಾರಣದ ಸುಸ್ತು ಕಾಣುತ್ತಿತ್ತು. 'ಸರ್.. ವಿಶ್ರಾಂತಿ ತೆಗೆದು ಕೊಳ್ಳ ಬಾರದೆ?' ಎಂದರೆ 'ಅದೆಲ್ಲ ಏನು ಬೇಡ' ಎಂದು ಮೆಲುದನಿಯಲ್ಲಿ ಹೇಳಿದರು. ನನಗೆ ಅವರ ಕಷ್ಟ ಅರಿವಾಯಿತು. 'ಸರ್. ನಮ್ಮ ಮನೆಗೆ ಬನ್ನಿ ಅಲ್ಲಿಯೇ ವಿಶ್ರಾಂತಿ ಪಡೆಯಬಹುದು' ಎಂದೆ. ಡಿಸೋಜರು ಬೇಡ ಎಂದರೂ ಅವರ ಹೆಂಡತಿ ಕೂಡಲೇ ಒಪ್ಪಿದರು. ಇಬ್ಬರೂ ನಮ್ಮ ಮನೆಗೆ ಬಂದು ಸ್ವಲ್ಪ ವಿಶ್ರಾಂತಿ ಪಡೆದು ಫ್ರೆಶ್ ಆಗಿ ಕಾಫಿ-ತಿಂಡಿ ಮುಗಿಸಿ ಕಾರ್ಯಕ್ರಮಕ್ಕೆ ಹೊರಟರು. ಹೊರಡುವಾಗ ಒಂದು ಹತ್ತು ಸಲವಾದರೂ ನನ್ನ ಹೆಂಡತಿ ಬಳಿ ನಮ್ಮಿಂದ ನಿಮಗೆ ತೊಂದರೆಯಾಯಿತು ಎಂದಿರಬೇಕು. ಆಗ ನನ್ನ ಮಗ ಇನ್ನೂ ಚಿಕ್ಕವನು. ಅವರ ಮಕ್ಕಳ ಕಾದಂಬರಿಗಳನ್ನು ತಪ್ಪದೇ ಓದುತ್ತಿದ್ದ. ಅವರ ಕೃತಿಯೊಂದಕ್ಕೆ ಸಹಿ ಪಡೆದು ಅವರ ಜೊತೆ ಫೋಟೋ

ತೆಗೆಸಿಕೊಳ್ಳಲು ಸಿದ್ಧನಾದ. ಡಿಸೋಜ ಬಲು ಪ್ರೀತಿಯಿಂದ ಬೆಳಕು ಜಾಸ್ತಿ ಇರುವ ಕಡೆ ಬಂದು ಫೋಟೋ ತೆಗೆಸಿ ಕೊಂಡರು.

ಕಳೆದ ವರ್ಷ ಅವರು ಫಾದರ್ ಚೆಸೆರಾ ಪ್ರಶಸ್ತಿಯನ್ನು ಸ್ವೀಕರಿಸಲು ಕನ್ನಡ ಸಾಹಿತ್ಯ ಪರಿಷತ್ತಿಗೆ ಬಂದಿದ್ದರು. ಆಗ ಬಹು ಪ್ರೀತಿಯಿಂದ ನನ್ನ ಮಗನ ಕುರಿತು ಅವರು ವಿಚಾರಿಸಿದರು. ಅವನಾಗಲೇ ಸಾಫ್ಟ್‌ವೇರ್ ಉದ್ಯೋಗಿ ಎಂದು ತಿಳಿದು 'ಕಾಲ ಎಷ್ಟು ಬೇಗ ಓಡಿ ಹೋಗುತ್ತದೆ ನೋಡಿ' ಎಂದು ಅಚ್ಚರಿ ವ್ಯಕ್ತ ಪಡಿಸಿದ್ದರು.

ಮುಳಗಡೆ ತೆರೆದಿಟ್ಟ ಸೃಜನಶೀಲತೆ

ನಾ. ಡಿಸೋಜ ಅವರು ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ 1937ರ ಜೂನ್ 6ರಂದು ಜನಿಸಿದರು. ಇವರ ತಂದೆ ಫಿಲಿಪ್ ಡಿಸೋಜ, ಮೂಲತಃ ಉತ್ತರ ಕನ್ನಡ ಜಿಲ್ಲೆ ಮುರ್ಡೇಶ್ವರದಿಂದ ಸಾಗರಕ್ಕೆ ಬಂದು ಶಿಕ್ಷಕ ವೃತ್ತಿ ಮಾಡಿಕೊಂಡಿದ್ದರು. ಅವರು ಶಾಲಾಮಕ್ಕಳಿಗೆ ಕಲಿಸಲು ಬರೆದುಕೊಂಡಿದ್ದ ಪುಸ್ತಕಗಳಲ್ಲಿನ ಪದ್ಯಗಳನ್ನು ಓದತೊಡಗಿದ ಬಾಲಕ ನಾ.ಡಿಸೋಜ ಅವರಲ್ಲಿ

ತಾನೇತಾನಾಗಿ ಸಾಹಿತದೊಲವು ಮೊಳೆಯಿತು. ಜೊತೆಗೆ ತಾಯಿ ರೂಪೀನಾ ಅವರು ಹೇಳುತ್ತಿದ್ದ ಜನಪದ ಹಾಡುಗಳು ಮತ್ತು ಕತೆಗಳು ಡಿಸೋಜ ಅವರ ಮನಸ್ಸಿನ ಮೇಲೆ ಮೋಡಿ ಮಾಡತೊಡಗಿದ್ದವು. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ತಮ್ಮ ಗೊರೂರು ನರಸಿಂಹಾಚಾರ್ ಅವರು ಅಕರ್ಷಕವಾಗಿ ಶಾಲೆಯಲ್ಲಿ ಬೋಧಿಸುತ್ತಿದ್ದ ರೀತಿ ಮತ್ತು ಸಹ್ಯಾದ್ರಿ ಕಾಲೇಜಿನಲ್ಲಿ ಗುರುಗಳಾಗಿದ್ದ ಡಾ. ಜಿ. ಎಸ್. ಶಿವರುದ್ರಪ್ಪನವರ ಪಾಂಡಿತ್ಯದ ಪ್ರಭಾವ ನಾ. ಡಿಸೋಜಾರ ಮೇಲೆ ಸಾಕಷ್ಟು ಪ್ರಭಾವ ಬೀರಿತ್ತು.

ಇಂಟರ್ ಮೀಡಿಯಟ್ ನಂತರ ಜೀವನದ ಅನಿವಾರ್ಯತೆಯಲ್ಲಿ ನಾ. ಡಿಸೋಜ ಅವರು ಲೋಕೋಪಯೋಗಿ ಇಲಾಖೆಯಲ್ಲಿ ಟೈಪಿಸ್ಟ್ ಆಗಿ ವೃತ್ತಿ ಜೀವನ ಆರಂಭಿಸಿ ದ್ವಿತೀಯ ದರ್ಜೆ, ಪ್ರಥಮ ದರ್ಜೆ ಗುಮಾಸ್ತರಾಗಿ ಶರಾವತಿ ಯೋಜನೆ, ಕಾರ್ಗಲ್, ಮಾಸ್ತಿಕಟ್ಟೆ, ತೀರ್ಥಹಳ್ಳಿ, ಸಾಗರಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದರು. ಲಿಂಗನ ಮಕ್ಕಿ ಆಣೆಕಟ್ಟು ನಿರ್ಮಾಣದ ವೇಳೆ ಮುಳುಗಡೆಯಿಂದ ಶರಾವತಿ ಕಣಿವೆಯಲ್ಲಿ ನಿರಾಶ್ರಿತರು ಎದುರಿಸಿದ ತಲ್ಲಣವನ್ನು ಸೂಕ್ಷ್ಮವಾಗಿ ಗಮಸುತ್ತಿದ್ದ ಅವರು ಅದನ್ನು ತಮ್ಮ ಕೃತಿಗಳಲ್ಲಿ ತಂದರು. 'ಹುಟ್ಟಿ ಬೆಳೆದ ಪ್ರದೇಶ ಬಿಟ್ಟು ಇನ್ನೊಂದೆಡೆ ನೆಲೆಸುವುದು ಸುಲಭವಲ್ಲ, ಹಸು-ಕರುಗಳೂ ಕೂಡ ಹೊಸ ಪ್ರದೇಶಕ್ಕೆ ಹೊಂದಿಕೊಳ್ಳದೆ ಹಿಂದೆ ಬಂದವು' ಎನ್ನುತ್ತಿದ್ದ ಡಿಸೋಜ ಅದರ ಹಿಂದಿನ ಕ್ರೌರ್ಯವನ್ನು ತಮ್ಮ ಕೃತಿಗಳಲ್ಲಿ ಹಿಡಿದಿಟ್ಟರು. ಹೀಗಾಗಿಯೇ ಮಲೆನಾಡಿನ ಸಾವಿರಾರು ಜನರ ನೋವಿಗೆ ಧ್ವನಿ ನೀಡುವುದು ಅವರಿಗೆ ಸಾಧ್ಯವಾಯಿತು.

ಡಿಸೋಜರ ಮೊದಲ ಕಾದಂಬರಿ 'ಬಂಜೆ ಬೆಂಕಿ' 1964ರಲ್ಲಿ ಬೆಳಕಿಗೆ ಬಂತು. ಮುಂದೆ ಕನ್ನಡದ ಪತ್ರಿಕೆಗಳ ಪಾಲಿಗೆ ಅವರು ಅಲ್ಲಾವುದ್ದೀನನ ಅದ್ಭುತ ದೀಪವಾದರು. ಅವರ ಕಥೆ-ಕಾದಂಬರಿಗಳನ್ನು ಪ್ರಕಟಿಸಿದ ಪತ್ರಿಕೆಯಾವುದೂ ಇರಲಿಲ್ಲ. ಸುರೇಶ್ ಹೆಬ್ಳೀಕರ್ ಅವರ ನಿರ್ದೇಶನದಲ್ಲಿ ಕಾಡಿನ ಬೆಂಕಿ, ಗಿರೀಶ್ ಕಾಸರವಳ್ಳಿಯವರ ನಿರ್ದೇಶನದಲ್ಲಿ ದ್ವೀಪ, ಸಿರಿಗಂದ ಶ್ರೀನಿವಾಸಮೂರ್ತಿಯವರ ನಿರ್ದೇಶನದಲ್ಲಿ ಬಳುವಳಿ, ಕೋಡ್ಲು ರಾಮಕೃಷ್ಣ ನಿರ್ದೇಶನದಲ್ಲಿ ಬೆಟ್ಟದಪುರದ ದಿಟ್ಟಮಕ್ಕಳು ಮತ್ತು ಮನು ಅವರ ನಿರ್ದೇಶನದಲ್ಲಿ ಆಂತರ್ಯ ಕಾದಂಬರಿಗಳು ಚಲನಚಿತ್ರಗಳಾಗಿವೆ.

ಜಾಗತೀಕರಣದ ವಿರುದ್ಧ ಎತ್ತಿದ ಧ್ವನಿ

ನಾ. ಡಿಸೋಜ ಅವರು 75 ಕಾದಂಬರಿಗಳು, 6 ಚಾರಿತ್ರಿಕ ಕಾದಂಬರಿ, ಮಕ್ಕಳಿಗಾಗಿ 25 ಕಾದಂಬರಿ, 9 ಕಥಾ ಸಂಕಲನ, ಸಮಗ್ರ ಕಥೆಗಳ ಎರಡು ಸಂಪುಟಗಳು, ಸುಮಾರು ಐದು ನೂರು ಕಥೆಗಳು, ಹತ್ತಾರು ನಾಟಕಗಳು, ರೇಡಿಯೋ ನಾಟಕಗಳು, ಅನೇಕ ಪತ್ರಿಕಾ ಲೇಖನಗಳು ಹೀಗೆ ವಿಶಾಲ ವ್ಯಾಪ್ತಿಯ ಬರಹ ಮಾಡಿದ್ದರು. ಇವರ 'ಮುಳುಗಡೆಯ ಊರಿಗೆ ಬಂದವರು' ಎಂಬ ಮಕ್ಕಳ ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ 'ಬಾಲ ಸಾಹಿತ್ಯ ಪುರಸ್ಕಾರ ಸಂದಿದೆ. 'ದ್ವೀಪ' ಮತ್ತು 'ಕಾಡಿನ ಬೆಂಕಿ' ಕಾದಂಬರಿಗಳು ಚಲನಚಿತ್ರಗಳಾಗಿ ರಾಷ್ಟ್ರೀಯ ಪ್ರಶಸ್ತಿಯನ್ನು ಗಳಿಸಿವೆ.

2014ರಲ್ಲಿ ಮಡಿಕೇರಿಯಲ್ಲಿ ನಡೆದ 80ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದ ಅವರು ಬಹಳ ಸ್ಪಷ್ಟವಾಗಿ ಜಾಗತೀಕರಣದ ಆತಂಕಗಳನ್ನು ತೆರೆದಿಟ್ಟಿದ್ದರು. 'ರೈತನನ್ನು ತಾನು ಬೆಳೆಯುತ್ತಿದ್ದ ಭೂಮಿಯ ಮೇಲಿನ ಕಾರ್ಖಾನೆಯ ಕಾವಲುಗಾರನನ್ನಾಗಿ ನಿಲ್ಲಿಸುವುದು ಇಂದಿನ ದುಃಸ್ಥಿತಿಯ ರೂಪಕವಾಗಿದೆ' ಎಂದು ಸ್ಪಷ್ಟಮಾತುಗಳಲ್ಲಿ ಹೇಳಿದ್ದರು. ಸರ್ಕಾರಿ ನೌಕರರು ಹೇಗಿರಬೇಕು ಎನ್ನುವುದಕ್ಕೆ ಡಿಸೋಜ ಮಾದರಿಯಾಗಿದ್ದಾರೆ. ಅವರು ಲಂಚ ಪಡೆದವರಲ್ಲ ಎನ್ನುವುದಕ್ಕಿಂತ ಮಿಗಿಲಾಗಿ, ತಮ್ಮ ಕೈಯಿಂದ ಹಣ ಹಾಕಿ ಸಾರ್ವಜನಿಕರ ಕೆಲಸಗಳನ್ನು ಮಾಡಿಕೊಡುತ್ತಿದ್ದರು ಎನ್ನುವುದು ನನಗೆ ಮಹತ್ವದ ಸಂಗತಿಯಾಗಿ ಕಾಣುತ್ತದೆ. 2012ರಲ್ಲಿ ಪ್ರಕಟವಾದ ಅವರ 'ಮಲೆನಾಡಿಗ' ಜೀವನ ಚರಿತ್ರೆಯಲ್ಲಿ ಇಂತಹ ಹತ್ತಾರು ಪ್ರಸಂಗಗಳು ಸಿಕ್ಕುತ್ತವೆ.

ಜನಪ್ರಿಯತೆಯ ಬಲೆಗೆ ಸಿಲುಕದವರು

ಜನಪ್ರಿಯ ಪತ್ರಿಕೆಗಳಿಗೆ ಬರೆದರೂ ಡಿಸೋಜ ಎಂದಿಗೂ ಜನಪ್ರಿಯತೆಯ ಬಲೆಗೆ ಸಿಲುಕಿ ಕೊಳ್ಳಲಿಲ್ಲ. ಅವರಿಗೆ ಬಹು ದೊಡ್ಡ ಓದುಗ ವಲಯವಿತ್ತು. ಹೀಗಿದ್ದರೂ ಅದರ ವ್ಯಾಮೋಹಕ್ಕೆ ಸಿಲುಕಲಿಲ್ಲ. ತಾವು ಹೇಳಬೇಕಿದ್ದನ್ನು ಖಚಿತವಾಗಿ ದಾಖಲೆಗಳ ಮೂಲಕ ಹೇಳುತ್ತಿದ್ದರು; ಅವರು ಕಥೆ-ಕಾದಂಬರಿಗಳಿಗೆ ಮಾಡಿ ಕೊಳ್ಳುತ್ತಿದ್ದ ಸಿದ್ಧತೆಯು, ಹೊಸ ಬರಹಗಾರರಿಗೆ ಆದರ್ಶದಂತಿದೆ. ಬಹಳ ಮುಖ್ಯವಾಗಿ ನಾಡಿನ ವಿವೇಕವನ್ನು ತಮ್ಮ ಕೃತಿಗಳ ಮೂಲಕ ಕಟ್ಟಿ ಕೊಟ್ಟರು. ಎಂದಿಗೂ ರಂಜನೆಯ ಸೆಳೆತಕ್ಕೆ ಸಿಕ್ಕಲಿಲ್ಲ. 'ಕಾಡಿನ ಬೆಂಕಿ' ಚಲನಚಿತ್ರವಾದಾಗ ಅದರ ಕೊನೆಯನ್ನು ಸುಖಾಂತ್ಯವನ್ನಾಗಿ ಬದಲಿಸಲಾಗಿತ್ತು. ಆದರೆ ಈ ಬದಲಾವಣೆ ಅವರಿಗೆ ಒಪ್ಪಿಗೆಯಾಗಲೇ ಇಲ್ಲ. ಇದು ವಾಸ್ತವಿಕತೆಗೆ ದೂರ ಎಂದು ನನ್ನ ಬಳಿ ಹತ್ತಾರು ಸಲ ಹೇಳಿದ್ದರು. ಆದರೆ 'ದ್ವೀಪ' ಚಲನಚಿತ್ರವಾದಾಗ ಮಾಡಿಕೊಂಡ ಬದಲಾವಣೆಗಳು ಅವರಿಗೆ ಒಪ್ಪಿತವಾಗಿದ್ದವು. ಅಲ್ಲಿ ಮಳೆ ಕೂಡ ಒಂದು ಪಾತ್ರವಾಗಿದೆ ಎಂದು ಅವರು ಮೆಚ್ಚಿಕೊಂಡಿದ್ದರು. ಡಿಸೋಜರ ಕುರಿತು ಬರೆಯತ್ತಾ ಹೋದರೆ ಅದು ಮುಗಿಯದ ಕಥಾನಕ. ಅವರು ಕೊಟ್ಟು ಹೋದ ಪ್ರೀತಿಗೆ, ಬಿಟ್ಟು ಹೋದ ನೆನಪುಗಳಿಗೆ ನಾನು ಸದಾ ಋಣಿ.

ಪುಸ್ತಕ ವಿಮಾನ

ಕುತೂಹಲ ಹುಟ್ಟಿಸುವ ಬರಹಗಳು

» ಎಂ.ಎಸ್.ಹೆಬ್ಬಾರ್

'ಸಂಪಾದಕರ ಸದ್ಯಶೋಧನೆ' ಸರಣಿಯ ಆರನೆಯ ಪುಸ್ತಕ ಈಗ ಹೊರಬಿದ್ದಿದೆ. ಈ ಸಂಕಲನದ ಮೊದಲ ಪುಸ್ತಕ ಪ್ರಕಟಗೊಂಡಾಗ, 'ಇದು ಸತ್ಯ ಶೋಧನೆಯೋ, ಸದ್ಯ ಶೋಧನೆಯೋ?' ಎಂದು ಕೆಲವು ಅಮಾಯಕ ಓದುಗರು ಕೇಳಿದ್ದುಂಟು. ನಿಜ ಹೇಳಬೇಕೆಂದರೆ, ಇದೊಂದು ಅನನ್ಯ ಪ್ರಕಾರದ ಬರಹ; ಪದಗಳ ಪನ್ ಹುಡುಕುವಲ್ಲಿ ನಿಷ್ಣಾತರಾಗಿರುವ ಪತ್ರಕರ್ತ ವಿಶ್ವೇಶ್ವರ ಭಟ್ ಅವರು ಮಾತ್ರ ಹುಡುಕಿ, ಬೆಳಕಿಗೆ ತರಬಹುದಾದ ಪದಗಳಲ್ಲಿ ಒಂದು ಎಂದರೆ 'ಸದ್ಯಶೋಧನೆ!' ಇದನ್ನು ಸದ್ಯದ ಶೋಧನೆ, ಅಂದರೆ ಪ್ರಸ್ತುತ ವಿಚಾರಗಳ ಶೋಧನೆ ಎಂದೂ ಓದುಗರು ತಿಳಿಯಬಹುದು; ಜತೆಗೆ, ಅಲ್ಲೆಲ್ಲೋ ಅಡಗಿರುವ ಅತಿ ಅಪರೂಪ ಎನಿಸುವ ವಿಚಾರಗಳನ್ನು ಶೋಧಿಸಿ ತರುವ ಪ್ರಯತ್ನ ಎಂದೂ ತಿಳಿಯಬಹುದು. ಇದರ ಕುರಿತು ಲೇಖಕರು ವ್ಯಕ್ತಪಡಿಸಿರುವ ಅಭಿಪ್ರಾಯವೂ ಬಹಳ ಸೂಕ್ತವಾಗಿದೆ : '. . . ಇದು ಒಂದರ್ಥದಲ್ಲಿ 'ಸತ್ಯಶೋಧನೆ'ಯೇ. ಸದ್ಯದ ಸಂದರ್ಭದಲ್ಲಿ ನಡೆಸುವ ಶೋಧನೆ ಆಗಿದ್ದರಿಂದ ಇದನ್ನು ಹಾಗೆಯೂ ಕರೆಯಬಹುದು. ಇಲ್ಲಿ ಯಾವ ವಿಷಯವನ್ನಾದರೂ ಚರ್ಚಿಸಬಹುದು. ಹಾಗಾಗಿ, ಈ ಬರಹದ ಕ್ಯಾನ್ವಾಸ್ ವಿಶಾಲವೂ ವಿಸ್ತಾರವೂ ಆಗಿದೆ. . .' ಅದೇನೇ ಆಗಿರಲಿ, ಈ ಸಂಕಲನದ ಬರಹಗಳು ಬಹಳ ಸ್ವಾರಸ್ಯಕರವಾಗಿರುತ್ತವೆ ಎಂಬ ಅಭಿಪ್ರಾಯಕ್ಕೆ ಎರಡು ಮಾತಿಲ್ಲ. ಇದು ಪ್ರತಿದಿನ ಪ್ರಕಟಗೊಂಡ ಅಂಕಣ ಬರಹಗಳ ಸಂಗ್ರಹ.

ಈ ಸಂಕಲನದಲ್ಲಿರುವ 100 ಬರಹಗಳ ವಿಶೇಷತೆ ಎಂದರೆ, ಆಕರ್ಷಕವಾಗಿ ಓದಿಸಿಕೊಂಡು ಹೋಗುವ ಶೈಲಿ.

'ಸಂಪಾದಕರ ಸದ್ಯಶೋಧನೆ' ಸರಣಿಯ ಪುಸ್ತಕಗಳು ಓದುಗರಿಗೆ ಅಚ್ಚುಮೆಚ್ಚು; ಆದ್ದರಿಂದಲೇ ಬಹಳ ಜನಪ್ರಿಯ; ಈ ಸರಣಿಯ ಐದು ಪುಸ್ತಕಗಳು ಈಗಾಗಲೇ ಮುದ್ರಣಗೊಂಡಿದ್ದು, ಈಗ ಆರನೆಯ ಪುಸ್ತಕ ಹೊರಬಿದ್ದಿದೆ. ಈ ಸರಣಿಯ ಬರಹಗಳು ಇಷ್ಟೊಂದು ಜನಪ್ರಿಯವಾಗಲು ಹಲವು ಕಾರಣಗಳಿವೆ. ಈ ಪುಸ್ತಕದ ಯಾವುದೇ ಪುಟದಿಂದ ಓದನ್ನು ಆರಂಭಿಸಿದರೂ, ಅಲ್ಲೊಂದು ಕುತೂಹಲಕಾರಿ ಮಾಹಿತಿ, ಓದು ಇರುತ್ತದೆ ಮತ್ತು ಅದನ್ನು ಪ್ರಸ್ತುತಪಡಿಸಿರುವ ರೀತಿಯು ಓದುಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ. ಪುಸ್ತಕವನ್ನು ಮನೆಯಲ್ಲಿ ಎಲ್ಲರಿಗೆ ಕಾಣಿಸುವ ಜಾಗದಲ್ಲಿಟ್ಟುಕೊಂಡು, ನೆನಪಾದಾಗಲೆಲ್ಲಾ ಅಥವಾ ಸವುಡು ಸಿಕ್ಕಾಗಲೆಲ್ಲಾ ಒಂದೆರಡು ಬರಹಗಳನ್ನು ಓದುತ್ತಾ, ಖುಷಿ ಪಡಬಹುದು; ಅಂದರೆ, ಒಮ್ಮೆ ಆರಂಭಿಸಿದರೆ ಒಂದೇ ಬಾರಿ ಕುಳಿತು ಓದಬೇಕಾದ ಅನಿವಾರ್ಯತೆ ಇಲ್ಲಿಲ್ಲ. ಈ ರೀತಿ ಓದಲು ಅನುಕೂಲ ಮಾಡಿಕೊಡುವ ಬರಹಗಳು ಈಗಿನ ತಲೆಮಾರಿನ ಜಾಯಮಾನಕ್ಕೆ ಮತ್ತು ಈಗಿನ ಕಾಲಮಾನಕ್ಕೆ ಸೂಕ್ತ ಎನಿಸಬಹುದು.

ಈ ಸಂಕಲನದ ಹೆಚ್ಚಿನ ಬರಹಗಳು ಎರಡು ಪುಟವನ್ನು ಮೀರುವುದಿಲ್ಲ; ಚುಟುಕಾಗಿ ಮಹತ್ತರ ವಿಚಾರ ಹೇಳುವ ಶೈಲಿ ಇಲ್ಲಿ ಸಿದ್ಧಿಸಿದೆ. ಇಲ್ಲಿನ ಹಲವು ಬರಹಗಳನ್ನು ವಿಸ್ತರಿಸಿ ಬರೆಯಬಹುದು ಮತ್ತು ಕೆಲವು ಬರಹಗಳಂತೂ ಸುದೀರ್ಘ ಲೇಖನಕ್ಕಾಗುವಷ್ಟು ಮಾಹಿತಿಯನ್ನೂ ಒಳಗೊಂಡಿವೆ. ಎಲ್ಲಾ ಬರಹಗಳೂ ಸಾಂದ್ರವಾಗಿರುವುದರಿಂದಲೇ, ಓದುಗರಿಗೆ ಬೇಸರ ಎನಿಸುವುದಿಲ್ಲ.

ಇಲ್ಲಿನ ಬರಹಗಳ ವೈವಿಧ್ಯತೆ ಮತ್ತು ವೈಶಿಷ್ಟ್ಯವನ್ನು ಬೇಗನೆ ತಿಳಿಯಲು, ಪರಿವಿಡಿಯ ಮೇಲೆ ಒಮ್ಮೆ ಕಣ್ಣಾಡಿಸಿದರೆ ಸಾಕು. 'ಜನರನ್ನು ಹೇಗೆ ಅರ್ಥಮಾಡಿಕೊಳ್ಳುವುದು?', 'ವೈಎನ್ಕೆ ಮತ್ತು ನಂಬರು', 'ಪತ್ರಕರ್ತರ ಕುಚೋದ್ಯ', 'ಅರುಣ್ ಶೌರಿ ಸಂಪಾದಕರಾದಾಗ', 'ರಾಜ್ಯಸಭೆ ಎಂಬ ಕೋಟ್ಯಧೀಶರ ಕ್ಲಬ್', 'ಅಂಟಾರ್ಟಿಕದಲ್ಲಿ ಕ್ರಿಕೆಟ್', 'ಬೆತ್ತಲಾಗುವುದು ಅಂದರೆ', 'ಸಂಪಾದಕರಾಗಿದ್ದರೂ ಅಜ್ಞಾತ'. . . ಆಕರ್ಷಕ ತಲೆಬರಹಗಳನ್ನು ಕೊಡುವುದು ಹೇಗೆ ಎಂಬುದಕ್ಕೆ ಈ ಪುಸ್ತಕವನ್ನು ನೋಡಬಹುದು. ಒಂದೊಂದು ತಲೆಬರಹವೂ ಆಕರ್ಷಕ ಮತ್ತು ಅದನ್ನು ಓದಿದವರು, ಬರಹದ ಹೂರಣವನ್ನು ಓದದೇ ಇರಲಾರರು!

ಈ ಸಂಕಲನದ ಹಲವು ಬರಹಗಳಲ್ಲಿ ಅತ್ಯಪರೂಪದ ಮಾಹಿತಿಯೂ ಇದೆ! ಉದಾಹರಣೆಗೆ 'ಲೈಫ್' ಪತ್ರಿಕೆಯ ಸಾಂಗತ್ಯದಲ್ಲಿ' (ಪುಟ 77) ನೋಡಬಹುದು. ಈಗಿನ ತಲೆಮಾರಿನ ಓದುಗರಿಗೆ ಅಷ್ಟೊಂದು ಪರಿಚಿತವಲ್ಲದ 'ಲೈಫ್' ಎಂಬ ಇಂಗ್ಲಿಷ್ ಪತ್ರಿಕೆಯನ್ನು ಈ ಪುಟ್ಟ ಬರಹ ಕಟ್ಟಿಕೊಟ್ಟಿರುವ ರೀತಿಯೇ ವಿಶಿಷ್ಟ. 1883ರಲ್ಲಿ ಆರಂಭಗೊಂಡ ಈ ಪತ್ರಿಕೆ, 2000ನೆಯ ಇಸವಿಯಲ್ಲಿ ತನ್ನ ಪ್ರಕಟಣೆಯನ್ನು ನಿಲ್ಲಿಸಿತು! ಹೊಸ ಶತಮಾನದ ಆರಂಭದ ವರ್ಷವೇ ಪ್ರಕಟಣೆಯನ್ನು ನಿಲ್ಲಿಸಿದ ಈ ವಿದ್ಯಮಾನವು, ಇಪ್ಪತ್ತೊಂದನೆಯ ಶತಮಾನದ ಓದುವ ಅಭ್ಯಾಸದ ದಿಕ್ಸೂಚಿಯೂ ಹೌದು. 'ಲೈಫ್' ಪತ್ರಿಕೆಯು, 1936ರಿಂದ 1972ರ ತನಕ ಸುವರ್ಣಯುಗವನ್ನು ಕಂಡಿತು ಎಂದು ಈ ಬರಹ ತಿಳಿಸುತ್ತಿದೆ. ತನ್ನ ಜನಪ್ರಿಯತೆಯ ಉತ್ತುಂಗದಲ್ಲಿ, ಆ ಪತ್ರಿಕೆಯು ಒಂದು ಕೋಟಿ ಮೂವತ್ತೈದು ಲಕ್ಷ ಪ್ರತಿಗಳನ್ನು ಮುದ್ರಿಸುತ್ತಿತ್ತು! ಛಾಯಾಚಿತ್ರಗಳನ್ನು ಪ್ರಧಾನವಾಗಿ ಮತ್ತು ಆಕರ್ಷಕವಾಗಿ ಮುದ್ರಿಸುವ ಪರಿಪಾಠ ಆರಂಭಿಸಿದ 'ಲೈಫ್', ಚಿತ್ರಗಳ ಮಹತ್ವವನ್ನು ಜಗತ್ತಿಗೆ ಸಾರಿತು. 'ಒಂದು ಚಿತ್ರವು ಸಾವಿರ ಪದಗಳಿಗೆ ಸಮ' ಎಂಬ ನಾಣ್ಣುಡಿಯ ಅರ್ಥವನ್ನು ಸಮರ್ಥವಾಗಿ ಬಿಂಬಿಸಿದ ಮೊದಲ ಪತ್ರಿಕೆ 'ಲೈಫ್' ಎನ್ನಬಹುದು. ಅಮೆರಿಕದ ಹಲವು ಅಧ್ಯಕ್ಷರುಗಳ ಸಂದರ್ಶನವನ್ನು ಅದು ಪ್ರಕಟಿಸಿದ ರೀತಿ ವಿಶೇಷವಾದುದು. ಮಾತ್ರವಲ್ಲ, ಜನರ ಆಸಕ್ತಿ ಕೆರಳಿಸಬಲ್ಲ ಎಲ್ಲಾ ವಿಷಯಗಳನ್ನೂ ಅದು ಪ್ರಕಟಿಸುತ್ತಿತ್ತು. ಅಮೆರಿಕದ ಲಾಸ್ ಏಂಜೆಲ್ಸ್‌ನಲ್ಲಿ ಒಂದೇ ದಿನ ಇಪ್ಪತ್ತೆರಡು ಮಹಿಳೆಯರು ಮತ್ತು ಇಬ್ಬರು ಪುರುಷರು ವಿಚ್ಛೇದನ ಪಡೆದಾಗ, ಅದೂ ಸಹ ಒಂದು ದೊಡ್ಡ ಸುದ್ದಿ ಎಂದು ಗುರುತಿಸಿ, ಅವರೆಲ್ಲರ ಫೋಟೋಗಳ ಜತೆಯಲ್ಲಿ ಲೇಖನವನ್ನು 'ಲೈಫ್' ಪ್ರಕಟಿಸಿತ್ತು! ಇಂತಹ ಅಪರೂಪದ ಪತ್ರಿಕೆಯ ಕುರಿತು ಇರುವ ಈ ಪುಟ್ಟ ಬರಹವು, ಓದುಗರಿಗೆ ನೀಡುವ ಮಾಹಿತಿಯು ಅಮೂಲ್ಯ ಎನಿಸಿದೆ. ಇಂತಹ ಹಲವು ಬರಹಗಳನ್ನು ಒಳಗೊಂಡಿರುವ 'ಸಂಪಾದಕರ ಸದ್ಯಶೋಧನೆ - 6', ತನ್ನ ಮುದ್ರಣ ವಿನ್ಯಾಸ ಮತ್ತು ಉತ್ತಮ ಮುಖಪುಟದಿಂದಲೂ ಗಮನ ಸೆಳೆಯುತ್ತದೆ.

'ಸಂಪಾದಕರ ಸದ್ಯಶೋಧನೆ' ಅಂಕಣವು ಈಗಲೂ ಪ್ರತಿದಿನ ಪ್ರಕಟಗೊಳ್ಳುತ್ತಿದೆ; ಆದ್ದರಿಂದ ಈ ಸರಣಿಯ ಇನ್ನಷ್ಟು ಸಂಕಲನಗಳನ್ನು ಓದುಗರು ನಿರೀಕ್ಷಿಸಬಹುದು.

ಸಂಪಾದಕರ ಸದ್ಯಶೋಧನೆ - 6
ಲೇ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ
8431007267
ಬೆಲೆ ರು.250/-

ವೇದೋಪನಿಷತ್ತುಗಳ ಸ್ವಾರಸ್ಯಗಳು

ವೇದೋಪನಿಷತ್ತುಗಳ ಸ್ವಾರಸ್ಯಗಳ ಜತೆಯಲ್ಲೇ, ನಮ್ಮ ದೇಶದ ಜ್ಞಾನ, ಪರಂಪರೆಯ ಕುರಿತು ಇಲ್ಲಿನ ಬರಹಗಳು ಬೆಳಕು ಚೆಲ್ಲುತ್ತವೆ.

» ಕೇಶವ ಪ್ರಸಾದ್ ಬಿ.

ಅಂಕಣಕಾರ ನಾರಾಯಣ ಯಾಜಿಯವರು ಬಹು ಮೂಲಗಳಿಂದ ಜ್ಞಾನವನ್ನು ಪಡೆಯುತ್ತಾ, ಅದನ್ನು ಓದುಗರಿಗೆ ಸಕಾಲಿಕವಾಗಿ ರಸವತ್ತಾಗಿ ನೀಡುತ್ತಾರೆ. ಬ್ಯಾಂಕಿಂಗ್, ಷೇರು, ಮ್ಯೂಚುವಲ್ ಫಂಡ್‌ಗಳಿಂದ ವೇದೋಪನಿಷತ್ತು, ಪುರಾಣಾದಿಗಳ ತನಕ ಅವರ ಲೇಖನಗಳು ವೈವಿಧ್ಯಮಯ. ಹಣಕಾಸು ಜಗತ್ತಿನಲ್ಲೊಂದು ಮಾತು ಹೀಗಿದೆ- ಎಲ್ಲ ಹಣ್ಣುಗಳನ್ನು ಒಂದೇ ಬುಟ್ಟಿಯಲ್ಲಿಡಬೇಡಿ, ಒಳ್ಳೆಯ ರಿಟರ್ನ್ ಸಿಗುವುದಿಲ್ಲ. ಅದೇ ರೀತಿ ನಾರಾಯಣ ಯಾಜಿಯವರ ಸಾಹಿತ್ಯ ಕೃಷಿ ಒಂದೇ ವಿಷಯಕ್ಕೆ ಸೀಮಿತವಾಗಿಲ್ಲ. ಅವರ ಜತೆಗಿನ ಮಾತುಕತೆಯೂ ಸ್ವಾರಸ್ಯಗಳ ಹೂರಣ.

ನಾರಾಯಣ ಯಾಜಿಯವರ ಅಂಕಣಗಳನ್ನು ಒಳಗೊಂಡಿರುವ ನೂತನ ಕೃತಿಯ ಹೆಸರು 'ಧವಳ ಧಾರಿಣಿ'. ಇದಕ್ಕೆ ಹರೀಶ್ ಕೇರ ಅವರ ಸೊಗಸಾದ ಮುನ್ನುಡಿಯಿದೆ. ಇದು ಅಂಕಣ ಬರಹಗಳಾದರೂ ಇದಕ್ಕೆ ಸಾಹಿತ್ಯದ ಸ್ಪರ್ಶವಿದೆ. ಇಲ್ಲಿ ಸಮಕಾಲೀನತೆಯನ್ನು ಮೀರಿ ನಿಲ್ಲಬಲ್ಲ ಸಾರ್ವತ್ರಿಕತೆಯನ್ನು ಗಮನಿಸಬಹುದು.

'ವೇದ, ಉಪನಿಷತ್ತು, ಪುರಾಣ, ಇತಿಹಾಸಗಳು ನನ್ನ ಪಾಲಿಗೆ ಹೊತ್ತು ಕಳೆಯುವ ಸಾಧನವಲ್ಲ. ಅದರಲ್ಲಿರುವ ತತ್ತ್ವಗಳು ಮನುಷ್ಯನ ಬದುಕಿಗೆ ತೋರುವ ದಾರಿ ದೀವಿಗೆಗಳು' ಎಂದು ನಂಬಿದವ ನಾನು ಎಂದು ನಾರಾಯಣ ಯಾಜಿಯವರು ವಿನಮ್ರತೆಯಿಂದ ಪ್ರಸ್ತಾಪಿಸುತ್ತಾರೆ. ಭಗವದ್ಗೀತೆ, ಉಪನಿಷತ್ತು, ಭಾಗವತಗಳನ್ನು ಓದಿದರೆ, ಅದರಲ್ಲಿ ಅಡಕವಾಗಿರುವ ಸಂದೇಶಗಳು ಎಂಥ ಮಾನವನನ್ನೂ ಉದ್ಧರಿಸಬಲ್ಲದು. ಚೈತನ್ಯಶಾಲಿ, ಕ್ರಿಯಾಶೀಲ ಮತ್ತು ಸಮಗ್ರ ವ್ಯಕ್ತಿತ್ವವನ್ನೇ ಕಡೆದು ನಿಲ್ಲಿಸಬಲ್ಲದು. ಅಂಥ ಪ್ರೇರಣೆಯನ್ನು ಸನಾತನ ಸಾಹಿತ್ಯ ನೀಡುವುದರಿಂದಲೇ ಅವುಗಳು ಸಾರ್ವಕಾಲಿಕವಾಗಿವೆ.

ನಿರ್ವಿಕಲ್ಪ ಉಪಾಸನೆಯ ಮಾರ್ಗ: ಗಣಪತಿ, ಅಳುವ ಇಳೆಯ ಉಳಿಸಿದ ಕೃಷ್ಣಾವತರಣ, ಜಗದ್ವಂದ್ವನನ್ನು ಹೆತ್ತೂ ತಬ್ಬಲಿಯಾದ ಮಹಾತಾಯಿ ದೇವಕಿ, ವೇದಾಂತ ಆಧಾರಿತ ಸಮಾಜವಾದವನ್ನು ಕೊಟ್ಟ ದಾರ್ಶನಿಕ, ದುಷ್ಟ ವಿನಾಶಿನಿ ದುರ್ಗೆ, ಮಾಗಿ ಮುಸುಕಿದ ಇಳೆಯ ಬೆಳಗುವ ನೀರಾಜನ: ದೀಪಾವಳಿ..ಹೀಗೆ ಇಪ್ಪತ್ತೈದು ಲೇಖನಗಳು ಒಂದೇ ಗುಕ್ಕಿಗೆ ಓದಿಸಿಕೊಂಡು ಹೋಗುತ್ತವೆ. ಶಂಕರಾಚಾರ್ಯರ ಜೀವನ ಮತ್ತು ಗಹನ ವಿಚಾರಗಳ ಬಗ್ಗೆ ಸರಳವಾಗಿ ಯಾಜಿಯವರು ವಿವರಿಸುತ್ತಾರೆ- ಸನಾತನ ಧರ್ಮವನ್ನು ಉಪನಿಷತ್ತು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಯ ತಳಹದಿಯ ಮೇಲೆ ಪುನಃ ಸ್ಥಾಪಿಸಿದವರು ಶಂಕರಾಚಾರ್ಯರು. ರಾಜಾಶ್ರಯ ತಪ್ಪಿದ ಧರ್ಮ ರಕ್ಷಣೆಯ ಹೊಣೆಯನ್ನು ನಾಲ್ಕು ಆಮ್ನಾಯಗಳ ಮೂಲಕ ಮಠಗಳಿಗೆ ನೀಡಿದರು.ಧರ್ಮಕ್ಕೆ ಒಂದು ಸಾಂಘಿಕ ರೂಪವನ್ನು ಕೊಟ್ಟಿರುವುದು ಶಂಕರರ ಹಿರಿಮೆ. ಬ್ರಹ್ಮವು ಸತ್ಯ, ಜಗತ್ತು ಮಿಥ್ಯಾ, ಜೀವವು ಬ್ರಹ್ಮಕ್ಕಿಂತ ಬೇರೆಯಲ್ಲ ಎಂಬುದನ್ನು ತೋರಿಸಿಕೊಟ್ಟವರು. ಮಾನವ ಪಾಪದ ಕೂಸು ಎನ್ನುವ ಕಲ್ಪನೆಯು ಗಾಢವಾಗಿದ್ದ ಪಾಶ್ಚಾತ್ಯ ಸಿದ್ಧಾಂತಿಗಳಿಗೆ ಅದ್ವೈತದ ತುರೀಯವಾದ ಜೀವವೇ ಬ್ರಹ್ಮ ಎಂಬುದು ಅರ್ಥವಾಗದ ಸಂಗತಿ ಎಂದು ಮನೋಜ್ಞವಾಗಿ ವಿವರಿಸಿದ್ದಾರೆ ನಾರಾಯಣ ಯಾಜಿ. ಪುಸ್ತಕದುದ್ದಕ್ಕೂ ಭಾರತದ ಭವ್ಯ ಇತಿಹಾಸ, ಸಂಸ್ಕೃತಿ, ಜ್ಞಾನ ಪರಂಪರೆ, ರಾಷ್ಟ್ರೀಯತೆಯ ಬಗ್ಗೆ ಲೇಖನಗಳು ಬೆಳಕು ಚೆಲ್ಲುತ್ತವೆ. ಅದನ್ನು ಓದಿಕೊಳ್ಳುವುದೇ ಸ್ಫೂರ್ತಿಯ ಸೆಲೆ.



ಧವಳ ಧಾರಿಣಿ
ಲೇ: ನಾರಾಯಣ ಯಾಜಿ
ಪ್ರ: ಯಾಜಿ ಪ್ರಕಾಶನ
ಹೊಸಪೇಟೆ
ಬೆಲೆ ರು.220/-

ಮಹತ್ವಪೂರ್ಣ ವಿಮರ್ಶೆಗಳು

ಕನ್ನಡದ ಹಲವು ಕೃತಿಗಳನ್ನು ವಿಮರ್ಶೆಗೆ ಒಳಪಡಿಸುವುದರ ಜತೆಯಲ್ಲೇ, ಕನ್ನಡ ಸಾಹಿತ್ಯದ ಸಮಕಾಲೀನ ವಿದ್ಯಮಾನಗಳನ್ನು ವಿಶ್ಲೇಷಣೆಗೆ ಒಳಪಡಿಸುವ ಈ ಕೃತಿಯು, ಬಹು ಮಹತ್ವದ ಅಂಶಗಳನ್ನು ಚರ್ಚೆಗೆ ಒಳಪಡಿಸಿರುವುದು ವಿಶೇಷ.

» ಶ.ಹಾ.

ಸುಮಾರು 68ಕ್ಕೂ ಹೆಚ್ಚು ಗಂಭೀರ ಸ್ವರೂಪದ ಬರಹಗಳನ್ನು ಹೊಂದಿರುವ 'ಕನ್ನಡ ವಿಮರ್ಶೆ: ಸಾಂಪ್ರತ ವಿದ್ಯಮಾನಗಳು ಹಾಗೂ ಕೆಲವು ಕೃತಿಗಳ ಪಕ್ಷಿನೋಟ' ಕೃತಿಯು, ಹಲವು ಕನ್ನಡ ಪುಸ್ತಕಗಳನ್ನು ವಿಮರ್ಶೆಗೆ ಒಳಪಡಿಸುತ್ತದೆ ಮತ್ತು ಪ್ರಚಲಿತ ವಿದ್ಯಮಾನಗಳನ್ನು ವಿಶ್ಲೇಷಣೆಗೆ ಒಳಪಡಿಸುತ್ತದೆ. ದೂರದ ಮುಂಬಯಿಯಲ್ಲಿ ವಾಸವಿರುವ ಪ್ರೊ. ಜಿ.ಎನ್. ಉಪಾಧ್ಯ ಅವರ ಈ ಕೃತಿಯು, ಒಂದರ್ಥದಲ್ಲಿ ಒಂದು ಕಾಲಘಟ್ಟದಲ್ಲಿ ಹೊರಬಂದ ಕನ್ನಡ ಪುಸ್ತಕಗಳ ವಿಮರ್ಶೆಯೂ ಹೌದು. ಹೊರನಾಡಿನ ನಿವಾಸಿಯಾಗಿರುವ ಲೇಖಕರು, ತಮ್ಮ ಪರಿಧಿಯ ವ್ಯಾಪ್ತಿಗೆ ಲಭ್ಯವಾದ ಪ್ರಮುಖ ಕೃತಿಗಳನ್ನು ವಿಮರ್ಶಿಸಿರುವುದು ಗಮನಾರ್ಹ ಎನಿಸಿದೆ.

ಈಗಾಗಲೇ ಸುಮಾರು 88 ಕನ್ನಡ ಪುಸ್ತಕಗಳನ್ನು ರಚಿಸಿರುವ ಪ್ರೊ. ಜಿ.ಎನ್.ಉಪಾಧ್ಯ ಅವರು, ಪ್ರಧಾನವಾಗಿ ಸಂಶೋಧನೆ ಮತ್ತು ವಿಮರ್ಶಾ ಕ್ಷೇತ್ರದಲ್ಲಿ ತೊಡಗಿಕೊಂಡಿರುವುದನ್ನು ಕಾಣಬಹುದು. ಜತೆಗೆ, ಅವರು ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರೂ ಆಗಿದ್ದು, ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮೂಲಕ 102 ಕನ್ನಡ ಪುಸ್ತಕಗಳು ಪ್ರಕಟಗೊಳ್ಳುವಲ್ಲಿಯೂ ಪ್ರಮುಖ ಪಾತ್ರ ವಹಿಸಿದ್ದಾರೆ. ಇದರ ಜತೆಗೆ, 26 ವಿದ್ಯಾರ್ಥಿಗಳಿಗೆ ಪಿಎಚ್‌ಡಿ ಪದವಿ ಪಡೆಯಲು ಮಾರ್ಗದರ್ಶನ ನೀಡಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಎಂಬತ್ತಕ್ಕೂ ಅಧಿಕ ವಿದ್ಯಾರ್ಥಿಗಳು ಎಂಫಿಲ್ ಸಂಪ್ರಬಂಧಗಳನ್ನು ಪ್ರಸ್ತುತಪಡಿಸಿದ್ದು, ಇವೆಲ್ಲವೂ ಕನ್ನಡ ಸಾಹಿತ್ಯಕ್ಕೆ ಕೊಡುಗೆಯಾಗಿ ಮೂಡಿಬಂದಿರುವುದು ಗಮನಾರ್ಹ. ಹೊರನಾಡಿನಲ್ಲಿ ವಾಸಿಸಿಯೂ, ಕನ್ನಡ ಸಾಹಿತ್ಯ, ಸಂಸ್ಕೃತಿ, ಕಲೆಗೆ ಮಹತ್ವದ ಕೊಡುಗೆಯನ್ನು ನೀಡಲು ಸಾಧ್ಯ ಎಂಬುದಕ್ಕೆ ಎಂಬುದಕ್ಕೆ ಡಾ. ಜಿ.ಎನ್. ಉಪಾಧ್ಯ ಅವರು ಪ್ರಮುಖ ಉದಾಹರಣೆಯಾಗಿ ಎದ್ದು ನಿಲ್ಲುತ್ತಾರೆ. ಕರ್ನಾಟಕದ ಕರಾವಳಿಯ ಪುಟ್ಟ ಹಳ್ಳಿಯಿಂದ ಬಂದ ಉಪಾಧ್ಯ ಅವರು, ಬಹು ಪರಿಶ್ರಮದಿಂದ ಮೇಲಕ್ಕೇರಿದವರು; ಉದ್ಯೋಗ ಅರಸಿ ಮುಂಬಯಿಗೆ ಹೋದ ಅವರು, ಅಲ್ಲಿ ಅಧ್ಯಯನ ಮತ್ತು ಸಂಶೋಧನೆಯನ್ನು ಮುಂದುವರಿಸಿ, ಇಂದು ಸಾಹಿತ್ಯ ಲೋಕಕ್ಕೆ ಹಲವು ಕೊಡುಗೆಗಳನ್ನು, ಕೃತಿಗಳನ್ನು ನೀಡಿದ್ದಾರೆ ಮತ್ತು ಕನ್ನಡ ಸಾಹಿತ್ಯದ ಬೆಳವಣಿಗೆಗೆ ತಮ್ಮ ಅಮೂಲ್ಯ ಕಾಣಿಕೆಯನ್ನು ಕೊಡುತ್ತಲೇ ಬಂದಿದ್ದಾರೆ. ಈ ನಿಟ್ಟಿನಲ್ಲಿ ಅವರ ಒಟ್ಟೂ ಸಾಹಿತ್ಯದ ಕೊಡುಗೆಯ ಮಹತ್ವವನ್ನು ಇನ್ನಷ್ಟು ಸ್ಪಷ್ಟವಾಗಿ ದಾಖಲಿಸಿ, ಗುರುತಿಸುವ ಅಗತ್ಯವಿದೆ.

ಸುಮಾರು 368 ಪುಟಗಳ ವ್ಯಾಪ್ತಿಯಲ್ಲಿ ಹರಡಿಕೊಂಡಿರುವ 'ಕನ್ನಡ ವಿಮರ್ಶೆ: ಸಾಂಪ್ರತ ವಿದ್ಯಮಾನಗಳು ಹಾಗೂ ಕೆಲವು ಕೃತಿಗಳ ಪಕ್ಷಿನೋಟ' ಕೃತಿಯು, ಪ್ರಚಲಿತ ಸಾಹಿತ್ಯಕ ವಿದ್ಯಮಾನಗಳನ್ನು ಚರ್ಚಿಸುವುದು ವಿಶೇಷ ಎನಿಸುತ್ತದೆ.



ಕನ್ನಡ ವಿಮರ್ಶೆ: ಸಾಂಪ್ರತ ವಿದ್ಯಮಾನಗಳು ಹಾಗೂ ಕೆಲವು ಕೃತಿಗಳ ಪಕ್ಷಿನೋಟ
ಲೇ: ಪ್ರೊ. ಜಿ.ಎನ್.ಉಪಾಧ್ಯ
ಪ್ರ: ಶ್ರೀ ರಾಮ ಪ್ರಕಾಶನ ಮಂಡ್ಯ,
9448930173
ಬೆಲೆ ರು.400/-

ಹಲವು ಆಯಾಮಗಳ ವಿಶ್ಲೇಷಣೆ

» ಶಶಿ

ಕನ್ನಡ ನಾಡಿಗೆ ಮತ್ತು ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯದ ಕುರಿತು ಕಳೆದ ಹಲವು ದಶಕಗಳಿಂದ ಹೋರಾಡುತ್ತಲೇ ಬಂದಿರುವ ರಾ.ನಂ. ಚಂದ್ರಶೇಖರ ಅವರ ಹೊಸ ಪುಸ್ತಕ ಬಂದಿದೆ. ಹೋರಾಟಗಾರರಾಗಿರುವ ರಾ.ನಂ. ಅವರು, ಬರಹದಲ್ಲೂ ತಮ್ಮ ಕಾಳಜಿಯನ್ನು ತೋರುತ್ತಾ ಬಂದಿರುವುದು ವಿಶೇಷ. ಕನ್ನಡದ ಅನುಷ್ಠಾನದ ಕುರಿತು ಸರಕಾರದ ಆದೇಶಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವ ಲೇಖಕರು, ಅದರ ಸಾಧಕಗಳೇನು, ಇನ್ನೂ ಏನೇನು ಆಗಬೇಕು ಎಂದು ಸೂಚಿಸುವಲ್ಲಿ ಸಿದ್ಧಹಸ್ತರು.

ಕನ್ನಡ, ಕನ್ನಡಿಗ ಮತ್ತು ಕರ್ನಾಟಕದ ಕುರಿತು ಹಲವು ಮಹತ್ವದ ಪುಸ್ತಕಗಳನ್ನು ಈಗಾಗಲೇ ರಚಿಸಿರುವ ರಾ.ನಂ.ಚಂದ್ರಶೇಖರ ಅವರ ಈ ಹೊಸ ಪುಸ್ತಕವು ಕನ್ನಡಿಗರಿಗೆ ಉದ್ಯೋಗ ದೊರಕಿಸುವ ಕುರಿತು ಹಲವು ಪ್ರಮುಖ ಅಂಶಗಳನ್ನು ಚರ್ಚಿಸುವುದರ ಜತೆಗೆ, ಉತ್ತಮ ಮಾಹಿತಿಯನ್ನೂ ನೀಡುತ್ತದೆ.

ರಾ.ನಂ.ಚಂದ್ರಶೇಖರ ಅವರ ಹೊಸ ಪುಸ್ತಕ 'ಕನ್ನಡ ಉದ್ಯೋಗ ಪುರಾಣ'ವು ಮುಖ್ಯವಾಗಿ, ಕನ್ನಡಿಗರಿಗೆ ಉದ್ಯೋಗಾವಕಾಶ ದೊರಕುವ ಕುರಿತು ವಿವಿಧ ಆಯಾಮಗಳಲ್ಲಿ ಚರ್ಚಿಸುತ್ತದೆ ಮತ್ತು ಹಲವು ಪ್ರಮುಖ ಮಾಹಿತಿಗಳನ್ನು ಒಳಗೊಂಡಿದೆ. ಈ ಪುಸ್ತಕದಲ್ಲಿ ಒಟ್ಟು ಏಳು ಅಧ್ಯಾಯಗಳಿವೆ. 'ಖಾಸಗಿ ವಲಯಗಳಲ್ಲಿ ಕನ್ನಡಿಗರಿಗೆ ಮೀಸಲಾತಿ', 'ರಾಷ್ಟ್ರೀಯ ಉದ್ಯೋಗ ನೀತಿ-ಪರಿಷ್ಕೃತ ಮಹಿಷಿ ವರದಿ', 'ಸ್ಥಳೀಯರಿಗೆ ಉದ್ಯೋಗ - ನನಸಾಗದ ಕನಸು','ಕನ್ನಡಿಗರೆ ಕೆಲಸ ಮುಗಿಯದ ಹೋರಾಟದ ಹಾದಿ', 'ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನ್ನಡ ಪರ ಸಂಘಟನೆ, ಹೋರಾಟ', 'ಅನುಸರಣೆಯಿಂದ 'ಕನ್ನಡಿಗ ಯಾರು?' ನಿರ್ಧಾರವಾಯಿತು' ಮತ್ತು 'ಕನ್ನಡಿಗರು ಏಕೆ ಉದ್ಯೋಗ ವಂಚಿತರಾಗುತ್ತಿದ್ದಾರೆ?' - ಇವೇ ಆ ಅಧ್ಯಾಯಗಳ ತಲೆಬರಹಗಳು. ಇವುಗಳ ಪೈಕಿ ಮೂರನೆಯ ಮತ್ತು ಏಳನೆಯ ಅಧ್ಯಾಯದ ಶೀರ್ಷಿಕೆಗಳು, ಕನ್ನಡಿಗರಿಗೆ ಉದ್ಯೋಗ ದೊರಕಲು ಆಗುತ್ತಿರುವ ತೊಡಕುಗಳ ಕುರಿತು ಕಹಿಸತ್ಯಗಳನ್ನು ಪ್ರಸ್ತುತಪಡಿಸಿದ್ದು, ನಮ್ಮ ರಾಜ್ಯದಲ್ಲಿ ಕನ್ನಡಿಗರು ಇನ್ನಷ್ಟು ಸಬಲರಾಗುವ ಅಗತ್ಯತೆಗಳನ್ನು ಚರ್ಚಿಸಿದೆ.

ಇಂದು ಹೊರ ರಾಜ್ಯದ ಹೆಚ್ಚು ಹೆಚ್ಚು ಜನರು ಕನ್ನಡನಾಡಿಗೆ ವಲಸೆ ಬರುತ್ತಿದ್ದಾರೆ; ಕೆಲಸ ಹುಡುಕಿಕೊಂಡು ಬರುವವರು ಇಲ್ಲೇ ನೆಲೆ ಕಂಡುಕೊಳ್ಳುತ್ತಿದ್ದಾರೆ. ವಿದ್ಯಾವಂತರು ಇಲ್ಲಿನ ಸಾಫ್ಟ್‌ವೇರ್ ಮತ್ತು ಇತರ ಕ್ಷೇತ್ರಗಳನ್ನು ನೆಲೆ ಕಂಡುಕೊಳ್ಳುವುದು ಒಂದು ಆಯಾಮವಾದರೆ, ಸಣ್ಣ ಪುಟ್ಟ ಎನಿಸಿಕೊಂಡಿರುವ ಕೆಲಸಗಳನ್ನೂ ಹುಡುಕಿಕೊಂಡು ಹೊರರಾಜ್ಯದವರು ನಮ್ಮ ರಾಜ್ಯಕ್ಕೆ ಬರುತ್ತಿರುವುದು ಸಾಮಾನ್ಯ ಎನಿಸಿದೆ. ಈಚಿನ ಒಂದು ದಶಕದಲ್ಲಿ ಕೂಲಿ ಕೆಲಸಕ್ಕೆ, ಗದ್ದೆ ಮತ್ತು ತೋಟಗಳಲ್ಲಿ ಕೆಲಸ ಮಾಡುವ ಕೃಷಿ ಕಾರ್ಮಿಕ ಕೆಲಸಕ್ಕೂ ಉತ್ತರದ ರಾಜ್ಯದವರು ಬರುತ್ತಿರುವುದು ಕಂಡುಬರುತ್ತಿದೆ. ಇದೇ ರೀತಿ ಹಲವು ದಶಕಗಳ ಕಾಲ ಮುಂದುವರಿದರೆ, ನಮ್ಮ ರಾಜ್ಯದಲ್ಲಿ ಕನ್ನಡಿಗರು ಕ್ರಮೇಣ ಸಂಕಷ್ಟಕ್ಕೆ ಒಳಗಾಗುವುದು ಸಹಜ. ಹೊರರಾಜ್ಯಗಳಿಂದ ನಮ್ಮ ರಾಜ್ಯಕ್ಕೆ ನಡೆಯುತ್ತಿರುವ ಇಂತಹ ವಲಸೆಯ ಕುರಿತು ಹಲವು ಚರ್ಚೆಗಳಾಗಿವೆ, ಆದರೆ ಕನ್ನಡಿಗರ ಹಿತ ಕಾಪಾಡುವ ಕೆಲಸ ಸಮರ್ಪಕವಾಗಿ ಆಗಿಲ್ಲ. ಈ ಹಿನ್ನೆಲೆಯಲ್ಲಿ, ರಾ.ನಂ.ಚಂದ್ರಶೇಖರ ಅವರು ಈ ಪುಸ್ತಕದಲ್ಲಿ ಚರ್ಚಿಸಿರುವ ವಿಚಾರಗಳು ಬಹಳ ಮಹತ್ವದ್ದು ಎನಿಸುತ್ತವೆ.

ಈ ನಿಟ್ಟಿನಲ್ಲಿ, ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಮೀಸಲಾತಿ ನೀಡುವ ಕುರಿತು ಮೊದಲ ಅಧ್ಯಾಯದಲ್ಲಿ ವಿವರವಾದ ವಿಶ್ಲೇಷಣೆಯನ್ನು ಮಾಡಲಾಗಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಸ್ಥಳೀಯರಿಗೆ ಉದ್ಯೋಗ ದೊರಕುವಂತೆ ಮಾಡಲಾಗಿರುವ ನಿಯಮ ಮತ್ತು ಕಾನೂನುಗಳನ್ನು ಚರ್ಚಿಸುತ್ತಾ, ತಮಿಳುನಾಡಿನ ಉದಾಹರಣೆ ನೀಡಿದ್ದಾರೆ ಮತ್ತು ಅಲ್ಲಿ ಈಗ ಇರುವ ಶೇ.50ರ ಮೀಸಲಾತಿ ಸಾಕಾಗುವುದಿಲ್ಲವೆಂದು, ಸ್ಥಳೀಯರಿಗೆ ಶೇ.80ರಷ್ಟು ಉದ್ಯೋಗ ಮೀಸಲಿರಿಸಬೇಕೆಂಬ ಬೇಡಿಕೆ ಬಂದಿರುವುದನ್ನು ಪ್ರಸ್ತಾಪಿಸಿದ್ದಾರೆ. ಈ ಹಿನ್ನೆಲೆಯಲ್ಲಿ, ನಮ್ಮ ರಾಜ್ಯದಲ್ಲೂ ಸ್ಥಳೀಯರಿಗೆ ಉದ್ಯೋಗ ದೊರಕುವಂತಾಗಲು, ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿಯನ್ನು ಜಾರಿಗೆ ತರುವ ಅವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ. ಜತೆಗೆ, ಪುಟ 14 ಮತ್ತು 15ರಲ್ಲಿ 'ಸರಕಾರ ಮಾಡಬೇಕಾದದ್ದು ಏನು?' ಎಂಬ ತಲೆಬರಹದ ಅಡಿ, ನಮ್ಮ ರಾಜ್ಯದಲ್ಲಿ ತುರ್ತಾಗಿ ಅನಿಷ್ಠಾನವಾಗಬೇಕಾಗಿರುವ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ಮತ್ತು ಇದನ್ನು ಸರಕಾರ ಮತ್ತು ಜನಪ್ರತಿನಿಧಿಗಳು ಸಲಹೆಯನ್ನಾಗಿ ಮತ್ತು ಗಂಭೀರವಾಗಿ ಸ್ವೀಕರಿಸಬೇಕಾದ ಅಗತ್ಯವನ್ನೂ ಪ್ರತಿಪಾದಿಸಲಾಗಿದೆ.

ಕನ್ನಡದ ಭವಿಷ್ಯ ಮತ್ತು ಕನ್ನಡಿಗರಿಗೆ ಕನ್ನಡನಾಡಿನಲ್ಲಿ ಉದ್ಯೋಗ ದೊರಕುವುದ ಆದ್ಯತೆಯಾಗಬೇಕೆಂಬ ವಿಚಾರವನ್ನು ಚರ್ಚಿಸುವ ಈ ಪುಸ್ತಕವು, ಈ ವಿಷಯದಲ್ಲಿ ಇತ್ತೀಚೆಗೆ ಹೊರಬಂದಿರುವ ಮಹತ್ವದ ಪುಸ್ತಕ ಎನ್ನಬಹುದು.

ಕನ್ನಡಿಗರ ಉದ್ಯೋಗ ಪುರಾಣ
ಲೇ: ರಾ.ನಂ.ಚಂದ್ರಶೇಖರ
ಪ್ರ: ಸಪ್ನ ಬುಕ್ ಹೌಸ್
08040114455
ಬೆಲೆ ರು.150/-

ವಿಶ್ವವಾಣಿ ಅಂಕಿತ ಟಾಪ್ ಟೆನ್

1



ನುಡಿಗಳ ಅಳಿವು
(ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೃತಿ)
ಲೇ: ಕೆ.ವಿ. ನಾರಾಯಣ
ಪ್ರ: ಅಹರ್ನಿಶಿ ಪ್ರಕಾಶನ, ಶಿವಮೊಗ್ಗ
ಬೆಲೆ : ರೂ 125/-

2



ತತ್ರಾಣಿ
(ಗತ ಶತಮಾನದ ಉತ್ಕ್ರಾಂತಿಯ ಕಥೆ - ಕಾದಂಬರಿ)
ಲೇ: ದೀಪಾ ಜೋಶಿ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 395/-

3



ಓದುವವರೆಲ್ಲ ಓದುಗರಲ್ಲ
(ಗಂಭೀರ ಓದನ್ನು ಕುರಿತ ಬರಹಗಳು)
ಲೇ: ಕೆ. ಸತ್ಯನಾರಾಯಣ
ಪ್ರ: ಅಮೂಲ್ಯ ಪುಸ್ತಕ. ಬೆಂಗಳೂರು
ಬೆಲೆ : ರೂ 250/-

4



ಇದೇ ಅಂತರಂಗ ಸುದ್ದಿ 2
(ಅಂಕಣ ಬರಹಗಳು)
ಲೇ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ : ರೂ 250/-

5



ನಾಡವರ್ಗಳ್
(ಸಂಪನ್ನರ ನಡೆನುಡಿ)
ಲೇ: ಅಗ್ರಹಾರ ಕೃಷ್ಣಮೂರ್ತಿ
ಪ್ರ: ಜೀರುಂಡೆ ಪುಸ್ತಕ, ಬೆಂಗಳೂರು
ಬೆಲೆ : 200/-

6



ವಾತಾಪಿ..
(ಇಮ್ಮಡಿ ಪುಲಕೇಶಿಯ ರೋಚಕ ಚರಿತ್ರೆ)
ಸಂತೋಷಕುಮಾರ ಮೆಹೆಂದಳೆ
ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ : ರೂ 449/-

7



ಮನ ಬಯಸಿದ ಮರಣ
(ನಿಗೂಢ ರಾತ್ರಿಗೆ ನೀರವ ಪಯಣ)
ಲೇ: ಎಚ್. ಡಿ. ಶೌರಿ
ಅನು : ಗೊ.ರು. ಚನ್ನಬಸಪ್ಪ
ಪ್ರ: ಸ್ನೇಹ ಬುಕ್ ಹೌಸ್, ಬೆಂಗಳೂರು
ಬೆಲೆ : ರೂ 130/-

8



ದುಃಖ ಆರದ ನೆಲದಲ್ಲಿ
(ಲೇಖನಗಳು)
ಲೇ: ಸುಬ್ಬು ಹೊಲೆಯಾರ್
ಪ್ರ: ಕೌದಿ ಪ್ರಕಾಶನ, ಆನೇಕಲ್
ಬೆಲೆ : ರೂ 160/-

9



ಹಳ್ಳಿಗಳನ್ನು ಕಟ್ಟುವ ಕಷ್ಟಸುಖ
(ಗ್ರಾಮೀಣ ಅಭಿವೃದ್ಧಿ ಕುರಿತ ಚಿಂತನೆಗಳು)
ಲೇ: ಡಾ। ಪ್ರಕಾಶ್ ಭಟ್
ಪ್ರ: ಬಹುರೂಪಿ, ಬೆಂಗಳೂರು
ಬೆಲೆ : ರೂ 300/-

10

ವಿಶೇಷ ಕರ್ನಾಟಕ
(ನೀವು ತಿಳಿದಿರಲೇ ಬೇಕಾದ ಕನ್ನಡನಾಡು)
ಲೇ: ಜಿ. ಆನಂದ್
ಪ್ರ: ಟೋಟಲ್ ಕನ್ನಡ. ಬೆಂಗಳೂರು
ಬೆಲೆ : ರೂ 599/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755 ಮೊಬೈಲ್ ನಂ: 9019190502

ಸದ್ಗುರು ತೋರಿದ ಹಾದಿ

» ಅನುಪಮಾ ಮಂಗಳವೇಢೆ, ಶಿಕಾಗೊ



ಸಾಧ'ನ'ಪಾ'ದ' ಕಾರ್ಯಕ್ರಮಕ್ಕೆ ಅರ್ಜಿ ಸಲ್ಲಿಸಿದರಲ್ಲಿ, ಆಯ್ಕೆಯಾದವರಲ್ಲಿ, ಯುವಕ-ಯುವತಿಯರೇ ಹೆಚ್ಚು. ಇದು ಸ್ವಲ್ಪ ಆಶ್ಚರ್ಯವೇ. ಏಕೆಂದರೆ, ನನಗಾದರೂ ಮಕ್ಕಳು ದೊಡ್ಡವರಾಗಿದ್ದು, ಬೇರೆ ಊರಲ್ಲಿ ದ್ದುಕೊಂಡು ಕಾಲೇಜಿನಲ್ಲಿ ಓದುತ್ತಿದ್ದರು. ಅವರನ್ನು ನೋಡಿಕೊಳ್ಳುವ ಹೆಚ್ಚಿನ ಜವಾಬ್ದಾರಿಯಿಲ್ಲ. ಕೆಲಸಕ್ಕೆ ದೀರ್ಘಕಾಲ ಸಂಬಳವಿಲ್ಲದ ರಜೆಗೆ ಬಾಸ್ ಒಪ್ಪಿದ್ದರು. ಗಂಡನಿಗೆ ಅಡುಗೆ ಗೊತ್ತಿರುವುದರಿಂದ ಆ ಯೋಚನೆಯೂ ಇರಲಿಲ್ಲ. ಹತ್ತು ತಿಂಗಳ ಸಮಯವನ್ನು ಇದಕ್ಕಾಗಿ ಮುಡಿಪಿಡುವುದು ಕಷ್ಟವೆನಿಸಲಿಲ್ಲ. ಇಂತಹ

ಈಶ ಗುರುಕುಲದಲ್ಲಿ ನಡೆದ ಸಾಧನಪಾದ ಕಾರ್ಯಕ್ರಮದಲ್ಲಿ ಭಾಗವಹಿಸಿದವರ ಅನುಭವ ಕಥನದ ಕೊನೆಯ ಭಾಗ ಇದು.

ಆಧ್ಯಾತ್ಮಿಕ ಸಾಧನೆಗೆ ಜನರು ಸಮಯಕೊಡಲು ಸಾಧ್ಯವಾಗುವುದು ಇಳಿವಯಸ್ಸಲ್ಲೇ ಹೆಚ್ಚು ಎಂದುಕೊಂಡಿದ್ದೆ.

ವಾನಪ್ರಸ್ಥಾಶ್ರಮಕ್ಕೆ ಹೊರಟೆಯಾ? ಎಂದು ಗಂಡ ತಮಾಷೆ ಮಾಡಿದ್ದೂ ಉಂಟು. ಅಲ್ಲಿ ಹೋಗಿ ನೋಡುತ್ತೇನಾದರೆ ಹೆಚ್ಚಿನವರೆಲ್ಲ ನನಗಿಂತ ಚಿಕ್ಕವರೇ! ಅಮೆರಿಕದಲ್ಲಿ ಹುಟ್ಟಿಬೆಳೆದ ಭಾರತೀಯ ಮೂಲದ ಹುಡುಗಿಯೊಬ್ಬಳು ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಪದವಿಪೂರ್ವ ವ್ಯಾಸಂಗಕ್ಕೆ ಮುನ್ನ, ಸಾಧನಪಾದದ ಅನುಭವ ಪಡೆಯಲು ನೋಂದಾಯಿಸಿದವಳೂ ಇದ್ದಳು. ವಕೀಲರು, ವೈದ್ಯರು, ಇಂಜಿನಿಯರ್ಸ್, ಆರ್ಕಿಟೆಕ್ಟ್ಸ್, ತಮ್ಮದೇ ಕಂಪನಿ ನಡೆಸುವವರು, ಒಳ್ಳೊಳ್ಳೆ ಕೆಲಸದಲ್ಲಿದ್ದವರೂ ತಮ್ಮತಮ್ಮ ಕೆಲಸ ಬಿಟ್ಟು ಬಂದವರಿದ್ದರು.

ಹಬ್ಬ ಮತ್ತು ವಿಶೇಷ ದಿನಗಳಲ್ಲಿ ಸೀರೆ ಉಡುವುದಕ್ಕೆ ಹೆಂಗಳೆಯರಿಗೆ ಸಂಭ್ರಮ. ಚಿಕ್ಕ ಹುಡುಗಿಯರಿಗೆ, ಪಾಶ್ಚಾತ್ಯರಿಗೆ ಸೀರೆ ಉಡುವುದಕ್ಕೆ ಬರುತ್ತಿರಲಿಲ್ಲ. ನಾನಲ್ಲಿದ್ದಾಗ ಸಾಮಾನ್ಯ ಸೀರೆ ಉಡುತ್ತಿದ್ದರಿಂದ, ಅಕ್ಕ ನನಗೂ ಸೀರೆ ಉಡಿಸಿ ಎಂದು ನನ್ನ ರೂಮಿಗೆ ಬಂದು ಉಡಿಸಿಕೊಳ್ಳುತ್ತಿದ್ದರು. ಬೆಳಿಗ್ಗೆಯಿಂದ ಸಂಜೆತನಕ ಸೀರೆಯುಟ್ಟು ಓಡಾಡುವುದು ಕಷ್ಟವೆಂದು ಕೆಲವು ಭಾರತೀಯ ಹುಡುಗಿಯರು ಸ್ವಲ್ಪಹೊತ್ತು ಸೀರೆಯುಟ್ಟು ಬಟ್ಟೆ ಬದಲಾಯಿಸುತ್ತಿದ್ದರು. ಆದರೆ ಆಶ್ಚರ್ಯ-ಖುಶಿ ಆಗುತ್ತಿದ್ದದ್ದು ಪಾಶ್ಚಾತ್ಯ ಹುಡುಗಿಯರನ್ನು ನೋಡಿದಾಗ! ಊಟಕ್ಕೆ ಚಕ್ಕಂಬಕ್ಕಳ ಹಾಕಿ ಕುಳಿತುಕೊಳ್ಳುವುದಾಗಲಿ, ಬಡಿಸುವುದಾಗಲಿ, ಸಲೀಸಾಗಿ ನಡೆದಾಡುವುದಾಗಲಿ, ಸೀರೆಯುಟ್ಟೇ ಆರಾಮಾಗಿ ಮಾಡುತ್ತಿದ್ದರು. ಒಬ್ಬಳಂತೂ ಅವಳ ಹುಟ್ಟುಹಬ್ಬದಂದು ಸೀರೆಯುಟ್ಟುಕೊಂಡೇ ಆದಿಯೋಗಿ ಪರಿಕ್ರಮ, ಸೈಕಲ್‌ಸವಾರಿ, ದಿನದ ಚಟುವಟಿಕೆಗಳನ್ನೆಲ್ಲ ಮಾಡಿಮುಗಿಸಿದಳು! ಆಕೆಯ ಸ್ಫೂರ್ತಿಯಿಂದ ಒಮ್ಮೆ ನಾನೂ ಸೀರೆಯುಟ್ಟು ಸೈಕಲ್ ಸವಾರಿ ಮಾಡಿದ ಅನುಭವ ಚೆನ್ನಾಗಿತ್ತು.

ಆಶ್ರಮದಲ್ಲಿ ಬಟ್ಟೆ ಒಗೆದುಕೊಳ್ಳುವುದು ಕೂಡ ಚ್ಯಾಲೆಂಜ್ ಆಗಿತ್ತು. ಅಮೆರಿಕಾಗೆ ಬಂದು 25 ವರ್ಷಗಳಲ್ಲಿ, ಕಲ್ಲಿನ ಮೇಲೆ ಬಟ್ಟೆ ಒಗೆಯುವ ಅಭ್ಯಾಸ ತಪ್ಪಿಹೋಗಿತ್ತು. ಪಾಶ್ಚಾತ್ಯರಿಗಂತೂ ಕಲ್ಲಿನ ಮೇಲೆ ಬಟ್ಟೆ ಒಗೆಯುವುದು ಸೋಜಿಗವೆನಿಸಿತ್ತು! ಬಟ್ಟೆಯೊಗೆದು ಬಿಸಿಲಲ್ಲಿ ಒಣಗಿಸಿ ಗರಿಗರಿಯಾಗಿರುವಾಗ ಮಡಿಸುವ ಗಮ್ಮತ್ತೇ ಬೇರೆ. ಸುಕ್ಕಿಲ್ಲದ ಇಸ್ತ್ರಿ ಮಾಡಿದ ಬಟ್ಟೆ ಧರಿಸಬೇಕೆಂದು ಸಲಹೆಯಿದ್ದದ್ದು. ವಸತಿಗೃಹದ ಪ್ರತಿ ಅಂತಸ್ತಿನಲ್ಲೂ ಇಸ್ತ್ರಿಪೆಟ್ಟಿಗೆ ಸೌಲಭ್ಯವಿತ್ತು.

ಭಾರತಕ್ಕೂ ಅಮೇರಿಕಾಗೂ ಸಮಯ ವ್ಯತ್ಯಾಸದಿಂದಾಗಿ ಗಂಡ ಮತ್ತು ಮಕ್ಕಳೊಡನೆ ಫೋನ್ ಸಂಭಾಷಣೆ ನನಗೆ ಕಷ್ಟವಾಗುತ್ತಿತ್ತು. ಎರಡು ದಿನಕ್ಕೊಮ್ಮೆ ಹತ್ತು ನಿಮಿಷ ಮಾತಾಡಿದರೆ ಹೆಚ್ಚೆಚ್ಚು. ಆಶ್ರಮದ ವಾತಾವರಣ ನನಗೆಷ್ಟು ಒಗ್ಗಿತ್ತೆಂದರೆ, ಗಂಡ-ಮಕ್ಕಳನ್ನು ಮಿಸ್ ಮಾಡಿಕೊಳ್ತಿದ್ದೇನೆ ಎನಿಸುತ್ತಿರಲಿಲ್ಲ. ನನ್ನ ದಿನಚರಿಗೆ ತೊಂದರೆಯಾಗಬಾರದೆಂದು ಅವರೂ ಫೋನ್ ಮಾಡುತ್ತಿರಲಿಲ್ಲ. ವಾಟ್ಸಾಪ್ ಮೆಸೇಜುಗಳನ್ನು ನೋಡಬೇಕು ಉತ್ತರಿಸಬೇಕು ಎನ್ನುವ ಬಾಧ್ಯತೆಯೂ ನನಗಿರಲಿಲ್ಲ. ಅದೆಷ್ಟು ಹಾಯೆನಿಸುತ್ತಿತ್ತೆಂದರೆ ಒಂದುರೀತಿಯ ಸ್ವಾತಂತ್ರ್ಯದ ಅನುಭವ.



ಸಹಬಾಳ್ವೆಯ ಪಾಠ

ಆಧ್ಯಾತ್ಮಿಕ ಜೀವನದ ಮುಖ್ಯ ಅಂಶಗಳಲ್ಲಿ, ಯಾರೊಂದಿಗೂ ಅತಿಯಾದ ಬಾಂಧವ್ಯ ಇಟ್ಟುಕೊಳ್ಳದಿರುವುದೂ ಒಂದು. ಯಾರನ್ನೂ ಹೆಚ್ಚಾಗಿ ಅಂಟಿಸಿಕೊಳ್ಳಬಾರದೆಂದು, ಇಷ್ಟಾನಿಷ್ಟಗಳಿಗೆ ಗಮನ ಕೊಡಬಾರದೆಂದು, ಎರಡು ತಿಂಗಳಿಗೊಮ್ಮೆ ನಮ್ಮ ವಸತಿಕೊಠಡಿ ಬದಲಾವಣೆ. ಪ್ರತಿ ರೂಮಿನಲ್ಲಿ ನಾಲ್ಕು ಬಂಕ್ ಬೆಡ್ಸ್ ಇದ್ದು, ಅದರಲ್ಲಿ ಎಂಟು ಜನರು ಇರುತ್ತಿದ್ದೆವು. ಹತ್ತು ತಿಂಗಳಲ್ಲಿ ಒಟ್ಟು 28 ಹುಡುಗಿಯರೊಡನೆ ಇದ್ದಂತಾಗಿತ್ತು. ವಿವಿಧ ಸ್ವಭಾವಗಳ, ವಿವಿಧ ಹಿನ್ನೆಲೆಯುಳ್ಳವರ ಜೊತೆ ಸಹಬಾಳ್ವೆಯ ಪಾಠವನ್ನಿದು ಕಲಿಸಿತ್ತು.

ಸದ್ಗುರುಗಳು ಸೂಚಿಸಿದ ಒಂದೆರೆಡು ನಿಯಮಗಳನ್ನು ಪಾಲಿಸಲಿಲ್ಲವೆಂಬ ಪಶ್ಚಾತ್ತಾಪವಿದೆ. ಒಂದು, ನಮಗೆ ಪ್ರತಿನಿತ್ಯ ಜರ್ನಲ್ ಬರೆಯಲು ಹೇಳಿದ್ದರು. ಇದೂ ಸಾಧನೆಯ ಒಂದು ಭಾಗ. ನಮ್ಮ ಒಳಮುಖ ಪಯಣ ಎಷ್ಟರಮಟ್ಟಿಗೆ ಮುಂದೆ ಸಾಗುತ್ತಿದೆಯೆಂದು ಅವಲೋಕಿಸಿವುದು ಬಹಳ ಮುಖ್ಯ. ಆದರೆ ನಾನೆಷ್ಟೇ ಪ್ರಯತ್ನಿಸಿದರೂ, ದಿನನಿತ್ಯ ಬರೆಯುವುದು ಸಾಧ್ಯವಾಗಿರಲಿಲ್ಲ. ಎರಡನೆಯದು, ಪರರನ್ನು ಹಚ್ಚಿಕೊಳ್ಳದೆ, ಕೇವಲ ಧ್ಯಾನ-ಸಾಧನ-ಸೇವೆಗಳಲ್ಲಿ ಮನಸ್ಸಿಟ್ಟು ನಮ್ಮಪಾಡಿಗೆ ನಾವಿರುವುದು. ಇದನ್ನೂ ನನ್ನಿಂದ ಪಾಲಿಸಲಾಗಲಿಲ್ಲ. ಹತ್ತು ತಿಂಗಳ ಆಶ್ರಮಜೀವನದಲ್ಲಿ ಅನೇಕ ಸಹೃದಯಿಗಳ ಸ್ನೇಹವಾಯಿತು. ನಮ್ಮೆಲ್ಲರ ಮನೋಭಾವ, ಜೀವನದ ಧ್ಯೇಯ ಒಂದೇ ಆಗಿದ್ದರಿಂದ ಕೆಲವರೊಡನೆ ಬೇಗ ಹತ್ತಿರವಾಗಿಬಿಟ್ಟಿದ್ದೆ.

ನನ್ನದೇ ಮಕ್ಕಳಿಂದ ದೂರ ಇದ್ದದ್ದಕ್ಕೋ ಏನೋ, ಅವರೆಲ್ಲಾ ನನ್ನ ಮಕ್ಕಳೆಂದೇ ಅನಿಸುತ್ತಿತ್ತು.

ಅವರನ್ನು ಹಚ್ಚಿಕೊಂಡಿದ್ದರಲ್ಲಿ ತಪ್ಪಿಲ್ಲವಾದರೂ, ಈಗ ಯೋಚಿಸಿದರೆ, ಅದು ಬೇಕಿತ್ತೇ ಎನ್ನುವ ಪ್ರಶ್ನೆ. ನಾನಲ್ಲಿದ್ದ ಮೊದಲ ಮುಕ್ಕಾಲು ಭಾಗ ಸಮಯ ನನ್ನ ಸಾಧನೆ ಅದ್ಭುತವೆನಿಸಿತ್ತು. ಪರಿಚಯವಿದ್ದರೂ ಯಾರನ್ನೂ ಹಚ್ಚಿಕೊಂಡಿರಲಿಲ್ಲ. ಕಾಲಕಳೆದು ಸ್ನೇಹ ಹೆಚ್ಚಾಗುತ್ತಿದ್ದಂತೆ, ಸಾಧನೆಗೆ ಕೊಡುತ್ತಿದ್ದ ಸಮಯ ಕಡಿಮೆಯಾಗದಿದ್ದರೂ ಸಾಧನೆಯಲ್ಲಿನ ಇಂಟೆನ್ಸಿಟಿ ಅಥವಾ ತೀವ್ರತೆ ಸ್ವಲ್ಪಮಟ್ಟಿಗೆ ಕಡಿಮೆಯಾದದ್ದು ಗೊತ್ತಾಗುತ್ತಿತ್ತು. ಸದ್ಗುರುಗಳ ಮಾತನ್ನು ಕೇಳಬೇಕಿತ್ತು ಎಂದು ನನಗೀಗ ಕೆಲವೊಮ್ಮೆ ಅನಿಸುವುದಿದೆ.

ಒಟ್ಟಾರೆಯಾಗಿ ಸಾಧನಪಾದದಿಂದ ನಿನಗಾದ ಪ್ರಯೋಜನಗಳೇನು? ನಿನ್ನಲ್ಲಾದ ಬದಲಾವಣೆಗಳೇನು ಎಂದು ಬಹಳಷ್ಟು ಜನ ನನ್ನನ್ನು ಕೇಳಿದ್ದಾರೆ. ನಿಜ ಹೇಳಬೇಕೆಂದರೆ ನನಗೇ ತಿಳಿಯದು! ದೀರ್ಘಕಾಲ ಒಂದು ದೈವಿಕ ಸ್ಥಳದಲ್ಲಿದ್ದು, ಜೀವಮಾನದಲ್ಲಿ ಹಿಂದೆ ಮಾಡದಿದ್ದಂತಹ ದಿನಕ್ಕೆ ಏಳೆಂಟು ಗಂಟೆಗಳ ಯೋಗ-ಧ್ಯಾನ-ಸಾಧನೆ ಮಾಡಿದ ತೃಪ್ತಿಯಿದೆ. ಬೆಳಗ್ಗೆ 2:45ಕ್ಕೆ ಏಳುವುದಾಗಲೀ, ಕೊರೆಯುವ ಚಳಿಯಲ್ಲಿ ತಣ್ಣೀರುಸ್ನಾನ, ತೀರ್ಥಕುಂಡದಲ್ಲಿ ಸ್ನಾನವಾಗಲೀ, ಸಾಧನೆಗೆ ಮುನ್ನ ಅರಿಶಿನ ಮತ್ತು ಬೇವಿನ ಗುಳಿಗೆಗಳನ್ನಷ್ಟೇ ತಿಂದು, ಬೆಳಗ್ಗೆ 10ರ ತನಕ ಕಾಫೀ-ಟೀ ಇಲ್ಲದೆ, ದಿನಕ್ಕೆರಡು ಹೊತ್ತು ಮಾತ್ರ ಊಟ ಮಾಡುವುದಾಗಲಿ, ಬರಿಗಾಲನಲ್ಲಿ ಹತ್ತಿಪ್ಪತ್ತು ಕಿ.ಮೀ. ನಡಿಗೆಯಾಗಲಿ, ಎಲ್ಲವನ್ನೂ ಸಂತೋಷದಿಂದ ಮಾಡಿರುವುದರಿಂದ ಬೇರೆಯೇನು ಲಾಭ ಪಡೆದೆನೆಂದು ತಲೆಕೆಡಿಸಿಕೊಂಡಿಲ್ಲ. ನನ್ನಲ್ಲಿ ಪರಿವರ್ತನೆಗಳಾಗಿದ್ದರೆ ಒಳ್ಳೆಯದೇ. ಇಲ್ಲದಿದ್ದರೂ ಸದ್ಗುರುಗಳು ತೋರಿರುವ ಸಾಧನೆಯ ಹಾದಿಯಂತೂ ಜೀವನದುದ್ದಕ್ಕೂ ಇದೆಯಲ್ಲ!

ಈ ಲೇಖನ ಸರಣಿಯಲ್ಲಿ ಸಾಗರದಷ್ಟು ಬರೆಯಬಹುದೆಂದು ಹೃದಯಕ್ಕೆ ಅನಿಸಿದರೂ, ಒಂದು ತಂಬಿಗೆಯಷ್ಟೇ ಬರೆಯಲು ಸಾಧ್ಯವಾದದ್ದು. ಆಧ್ಯಾತ್ಮಿಕ ಆಂತರಿಕ ಅನುಭವಗಳನ್ನು ಬರೆಯಲು ಅಶಕ್ತಳಾದೆ. ಇದನ್ನೋದಿದಾಗ ನಿಮಗೆ ಅಧ್ಯಾತ್ಮದ ಒಂದು ಹನಿಯಷ್ಟು ಅನುಭವವಾಗಿದ್ದರೆ, ನಾನು ಧನ್ಯೆ.

anu2nitin@gmail.com (ಮುಗಿಯಿತು)

ನೆರಳು

ನೆರಳು ಬಹು ಕಾಟ ಕೊಡುತ್ತಿತ್ತು; ಏಕೆಂದು ಅರ್ಥವಾಗಲಿಲ್ಲ. ಆಕೆ ಕೆಲಸಕ್ಕೆ ರಾಜೀನಾಮೆ ಪತ್ರ ಬರೆದಳು. ನೆರಳಿನ ಕಾಟ ದೂರವಾಯ್ತು! ವಿಭಾಳಿಗೆ ಈಗ ತಿಂಡಿ ಊಟವೇನೂ ಬೇಡವೆನಿಸಿತ್ತು. ಸಹೋದ್ಯೋಗಿಗಳ ಪ್ರತಿದಿನದ ಕಿರುಕುಳದಿಂದ ತಪ್ಪಿಸಿಕೊಂಡರೆ ಸಾಕು, ಯಾವ ಸಂಬಳವೂ ಬೇಡ, ಹುದ್ದೆಯೂ ಬೇಡ, ಹಾಳು ಸ್ಥಾನಮಾನಗಳೂ ಬೇಡ! ವಿಭಾಳ ಮನಸ್ಸು ಯಾವುದೇ ದ್ವಂದ್ವಕ್ಕೆ ಒಳಗಾಗದೆ ತೀರ್ಮಾನಕ್ಕೆ ಬದ್ಧವಾಗಿಬಿಟ್ಟಿತು.

ಹೊಸ ಕಥೆ

» ಬಿ.ಕೆ.ಮೀನಾಕ್ಷಿ, ಮೈಸೂರು

ತನ್ನ ನೆರಳೇ ತನ್ನ ಜೊತೆಜೊತೆಗೇ ತನ್ನನ್ನು ಮುಳುಗಿಸಿಬಿಡುವಂತೆ ಹೆಜ್ಜೆ ಹಾಕುತ್ತಿದೆ! ವಿಭಾಳಿಗೆ ನಗು ಬಂತು. ನಮ್ಮ ನೆರಳನ್ನೇ ನಾವು ನಂಬಬಾರದು ಎಂಬ ನಾಣ್ಣುಡಿ ತನಗೆ ಇಂದು ಚೆನ್ನಾಗಿ ಅನ್ವಯಿಸುತ್ತಿದೆ. ಮನಸ್ಸು ಕಹಿಯಾದಾಗ ಭೂತವಾಗಿ ಕಾಡುವ ನೆರಳು, ಇಂದೇಕೋ ಭಯಾನಕವಾಗಿ ಕಾಣಿಸತೊಡಗಿ, ನೆರಳು ಬೀಳದಂತೆ ಮಾಡಲು ಏನು ಮಾಡಲಿ ಎಂಬ ಯೋಚನೆ ಮನದ ತುಂಬ ಸುಳಿದಾಡಿ, ನೆರಳನ್ನು ಮಾಯ ಮಾಡುವ ಉಪಾಯ ಕಾಣದೆ ಕಂಗಾಲಾದಳು. ನಿಂತರೆ ನಿಲ್ಲುತ್ತದೆ, ನಡೆದರೆ ನಡೆಯುತ್ತದೆ, ಹೋದಲ್ಲೆಲ್ಲ ಜೊತೆಯಾಗೇ ಬರುತ್ತಿದೆ. ಈ ನೆರಳುಗಳಿಂದ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲವೇನೋ. ಮನದಿಂಗಿತ ಅರಿತು ಈ ನೆರಳುಗಳು ಮನುಷ್ಯನನ್ನು ಹಿಂಬಾಲಿಸಿ ಬರುವಂತೆ ಕಾಣುತ್ತದೆ. ಒಮ್ಮೊಮ್ಮೆ ಯಾವ ನೆರಳೂ ತನ್ನ ಗಮನಕ್ಕೆ ಬರುವುದೇ ಇಲ್ಲ. ದೊಡ್ಡ ದೊಡ್ಡ ನೆರಳು ತಾನು ನಿಂತ ಕಡೆಯಿಂದ ಆ ಕಡೆಯ ತುದಿಯವರೆಗೂ ದೆವ್ವದಂತೆ ಹಿಂಬಾಲಿಸುತ್ತದೆ. ವಿಭಾ ನೆರಳುಗಳ ಬಗ್ಗೆ, ಇವತ್ತೇಕೋ ತಲೆಕೆಡಿಸಿಕೊಂಡು ತನ್ನ ನೆರಳನ್ನೇ ನೋಡುತ್ತಾ ನಡೆಯುತ್ತಿದ್ದವಳು, ಇದ್ದಕ್ಕಿದ್ದಂತೆ ನಿಂತಳು. ಅರೇ! ತನ್ನನ್ನು ತನ್ನದಲ್ಲದ ಇನ್ನೊಂದು ನೆರಳು ಹಿಂಬಾಲಿಸುತ್ತಿದೆ. ತನ್ನ ಜೊತೆಗೆ ಬರಬೇಕೆಂಬ ಕಾತುರವಿದ್ದರೂ ಸಂಕೋಚದಿಂದಲೋ, ಕಳ್ಳತನದಿಂದಲೋ ಹಿಂದೆಯೇ ಉಳಿಯುತ್ತಿದೆ. ಓರೆಗಣ್ಣಿನಲ್ಲಿ ಕಂಡ ನೆರಳು ಗಂಡಸಿನದೋ

ಹೆಂಗಸಿನದೋ ಸ್ಪಷ್ಟವಾಗದೆ ಒಮ್ಮೆ ತಿರುಗಿ ನೋಡಿಬಿಡಲೇ ಅನಿಸಿದರೂ, ಕುತೂಹಲವನ್ನು ಹಾಗೇ ದಮನಿಸಿಕೊಂಡು ನಡೆಯತೊಡಗಿದಳು.

ವಿಭಾಳ ಮನಸ್ಸು ಎಂದಿನಂತಿರದೆ, ಕಛೇರಿಯ ವಿದ್ಯಮಾನಗಳು, ಇವತ್ತಿನ ಘಟನೆಗಳು ಮತ್ತೆ ಮತ್ತೆ ಅವಳನ್ನು ನೆರಳಿನಂತೆ ಬಾಧಿಸುತ್ತಿದ್ದವು. ವಿಭಾಳ ಕೆಲಸವನ್ನು ಇವತ್ತು ಅವಳ ಮೇಲಧಿಕಾರಿಗಳು ಮೆಚ್ಚಿಕೊಂಡು ಅವಳಂತೆ ಶ್ರದ್ಧೆಯಿಂದ ಕೆಲಸ ಮಾಡಲೇನಾಗಿದೆ ನಿಮಗೆಲ್ಲ ಎಂದು ಸಹೋದ್ಯೋಗಿಗಳನ್ನು ಹಂಗಿಸಿದ್ದರು. ವಯೋವೃದ್ಧರಾದ ಅವರ ಮಾತುಗಳನ್ನು ಗೌರವಿಸಬೇಕೆಂದು ತಿಳಿದಿದ್ದರೂ, ಕೆಲವರಿಗೆ ಉಡಾಫೆ ಮತ್ತೆ ಕೆಲವರಿಗೆ ಉಪೇಕ್ಷೆ. ಹಾಗಾಗಿ ಕೆಲಸವನ್ನು ನಿಯತ್ತಾಗಿ ನಿರ್ವಹಿಸದಿದ್ದರೂ, ಅಪಹಾಸ್ಯ ಮಾಡುವುದರಲ್ಲಿ ಮುಂದಾಳುಗಳೇ ಆಗಿದ್ದರು.

'ವಿಭಾ ಮೇಡಂ, ನಿಮಗೆ ಮುಂದಿನ ವರ್ಷ ಪ್ರಮೋಷನ್ ಗ್ಯಾರಂಟಿ.' ವಿನಯ್ ನಕ್ಕು ಹೇಳಿದರೆ,

ಸುಮ, 'ಅದಕ್ಕೆ ನೋಡಿ ವಿನಯ್...... ನೋಡಲು ಸುಂದರವಾಗಿರಬೇಕು, ಚೆನ್ನಾಗಿಲ್ದಿದ್ರೂ ಚೆನ್ನಾಗಿ ಕಾಣಿಸಿಕೊಳ್ಳಬೇಕು. ನಾವು ನೋಡಿ, ಗೂಬೆಗಳು' ಅನ್ನುತ್ತಲೇ ಹಲ್ಲು ಬಿಟ್ಟಿದ್ದಳು. ವಿಭಾಳಿಗೆ ಸಿಟ್ಟು ತಡೆಯಲಾಗದೆ,

'ನೀವು ಚೆನ್ನಾಗಿಲ್ದಿದ್ರೂ ನಿಮ್ ಹಲ್ಲು ಚೆನ್ನಾಗ್ ಕಾಣ್ತಿವೆ, ಬಾಯ್ಮುಚ್ಚಿ. ಸಾಕು ಹಲ್ಲಿನ ಪ್ರದರ್ಶನ ಮಾಡಿದ್ದು.' ಸುಮಳಿಗೆ ಏನು ಉತ್ತರಿಸಬೇಕೆಂದು ತಿಳಿಯದೆ, ಎಲ್ಲರೆದುರಿಗೆ ಆದ ಅವಮಾನಕ್ಕೆ ಬಾಯಿಮುಚ್ಚಿಕೊಂಡು ಕೆಲಸ ಮಾಡತೊಡಗಿದಳು.

'ವಿನಯ್, ನನಗೇನಾದರೂ ಪ್ರೊಮೋಷನ್ ಕೊಟ್ರೆ, ನಂಗೆ ಬೇಡ, ನನಗಾಗಿ ಪರಿತಾಪ ಪಡುವ ವಿನಯ್‌ಗೆ ಕೊಡಿ ಅಂತ ಹೇಳ್ತೇನೆ. ಆಗಬಹುದಾ?' ವಿಭಾ ಅವನನ್ನೇ ಇರಿಯುವಂತೆ ನೋಡುತ್ತಾ ಹೇಳಿದ್ದಳು.

'ಅಯ್ಯೋ, ನಿಮ್ಮ ಭಿಕ್ಷೆ ಏನೂ ನನಗೆ ಬೇಡಮ್ಮಾ' ಎಂದು ತನ್ನ ಚೇರ್ ಮೇಲೆ ಕುಕ್ಕರಿಸಿದ್ದನು.

'ಭಿಕ್ಷೆ ಅಲ್ಲ, ನಿಮಗಾಗಿ ನನ್ನ ತ್ಯಾಗ.' ಇರಿಯುವ ಅವಳ ನೋಟವನ್ನು ಎದುರಿಸಲಾಗದೆ ಕತ್ತು ಬಗ್ಗಿಸಿದ್ದನು. ವಿಭಾ ಮಧ್ಯಾಹ್ನ ಊಟಕ್ಕೆ ಹೋಗದೆ, ತನ್ನ ಜಾಗದಲ್ಲೇ ಕುಳಿತು ಕೆಲಸ ಮುಂದುವರೆಸಿದ್ದಳು. ಇವರುಗಳು ತುಂಬಿದ ಕಸದಿಂದ ಮನಸ್ಸು ಕೊಳಕಾಗಿತ್ತು. ತನ್ನಷ್ಟಗೆ ತಾನಿರುತ್ತೇನೆಂದರೂ ಬಿಡದ ಇವರ ಜೊತೆ ಸೇರಿ ಮಾತಾಡುವುದೇನನ್ನು? ಇವತ್ತು ಮಿತ್ರಾ ಬೇರೆ ಬಂದಿಲ್ಲ. ಯಾಕಾದರೂ ರಜೆ ಹಾಕಿಕೊಂಡಳೋ? ಹೇಳುವುದಿಲ್ಲ ಕೇಳುವುದಿಲ್ಲ. ಕಂಗೆಟ್ಟ ಮನದಲ್ಲಿ ನೂರೆಂಟು ಭೂತಗಳೇ ತಾಂಡವವಾಡುತ್ತಿವೆ, ಅವಳನ್ನು ಹಿಂಬಾಲಿಸಿ ಅವಳನ್ನು ತಮ್ಮ ಅಧೀನವಾಗಿಸಿಕೊಂಡಿವೆ.

ರೂಮಿಗೆ ಹೋದ ಕೂಡಲೇ ಸ್ನಾನ ಮಾಡಿಬಿಡಬೇಕು. ಮನಸ್ಸು ಮೈ ಎರಡೂ ಸ್ವಚ್ಛವಾಗುತ್ತವೆ. ತನ್ನ ಹಿಂದೆ ನಿಜವಾಗಲೂ ನೆರಳು ಹಿಂಬಾಲಿಸುತ್ತಿದೆಯಾ? ಯಾರು ನೋಡಿಯೇ ತೀರೋಣವೆಂದುಕೊಂಡವಳೇ ತಕ್ಷಣ ತಿರುಗಿ ನಿಂತಳು. ಒಬ್ಬ ಹುಡುಗ ಅವಳ ಹಿಂದೆಯೇ ಬರುತ್ತಿದ್ದಾನೆ. ಓ! ಭ್ರಮೆಯಲ್ಲ, ನಿಜ! ಅವನನ್ನು ತಿಂದುಬಿಡುವಂತೆ ನೋಡಿದವಳ ಹತ್ತಿರ ಬಂದು ಅವಳೆದುರಿಗೆ ನಿಂತನು. 'ಏಯ್, ಮೀಸೆಯೂ ಚಿಗುರಿಲ್ಲವಲ್ಲೋ..' ಹುಡುಗನ ಕಣ್ಣಲ್ಲಿ ನೀರು ತುಂಬಿಕೊಂಡಿತು. ಬೆವರಿದ್ದ ಮುಖ, ಗುಂಗುರು ಕೂದಲು, ತಕ್ಕಮಟ್ಟಿನ ಬಟ್ಟೆ, ಕ್ಷಣದಲ್ಲಿ ಅವನನ್ನು ಅಳೆದವಳಿಗೆ, ಪಶ್ಚಾತ್ತಾಪವಾಗಿತ್ತು. 'ಏನು?' ಎಂದವಳನ್ನು,

'ಅಕ್ಕಾ, ನಿಮ್ಮ ಬಳಿ ಎರಡು ನಿಮಿಷ ಮಾತಾಡಲಾ?' ವಿಭಾ ಹುಡುಗನ ವಿನಯ ಕಂಡು ಸೌಮ್ಯವಾದಳು.

'ಅಕ್ಕಾ, ನಾನು ಸುರೇಂದ್ರ ಅಂತ. ಕಾಲೇಜು ವಿದ್ಯಾರ್ಥಿ. ಎರಡನೇ ವರ್ಷದ ಬಿ.ಕಾಂ. ಓದುತ್ತಿದ್ದೇನೆ. ನಿಮ್ಮಿಂದ ನನಗೆ ಸಹಾಯವಾಗಬೇಕಿತ್ತು.' ಅವನ ದೈನೇಸಿತನ ಅವನ ಧ್ವನಿಯಲ್ಲಿ ವ್ಯಕ್ತವಾಗುತ್ತಿತ್ತು. ಅವನು ತನ್ನ ಸಮಸ್ಯೆಯನ್ನು ಹೇಳಲು ಶುರುವಿಟ್ಟುಕೊಳ್ಳುತ್ತಾನೆಂದು ಅನಿಸಿದ್ದೇ ತಡ, 'ಎಷ್ಟು ಹಣ ಬೇಕಪ್ಪಾ?' ಎನ್ನುತ್ತಾ ವ್ಯಾನಿಟಿಯನ್ನು ತೆರೆದಳು.

ಹುಡುಗ ಹೇಳಲಿಲ್ಲ, 'ನನ್ನ ಸಮಸ್ಯೆ ಏನೆಂದು ಕೇಳದೆ ಹಣವನ್ನು ಹೇಗೆ ನಿಮ್ಮಿಂದ ತೆಗೆದುಕೊಳ್ಳಲಿ?' ವಿಭಾ ತಬ್ಬಿಬ್ಬಾದಳು. ಆದರೆ ಅವಳಿಗೆ ಯಾರ ಬಳಿ ಮಾತನಾಡುವ ವ್ಯವಧಾನವೂ ಇರಲಿಲ್ಲ.

'ನೋಡು, ಇನ್ನೊಮ್ಮೆ ಸಿಕ್ಕಾಗ ಹೇಳುವೆಯಂತೆ, ನನಗೆ ಮನಸ್ಸು ಸಮಾಧಾನವಿಲ್ಲ. ಎಷ್ಟು ಹಣ ಬೇಕು?' ಎಂದಳು. ಹುಡುಗ ಒಪ್ಪಲಿಲ್ಲ.

'ಅಕ್ಕಾ, ನನಗೆ ನಿಮ್ಮ ಆಫೀಸು ಗೊತ್ತು. ನಾನು ಪ್ರತಿದಿನ ನಿಮ್ಮನ್ನು ನೋಡುತ್ತೇನೆ. ನನ್ನ ದಾರಿಯೂ ಅದೇ. ನಿಮಗೆ ಸಮಾಧಾನವಾದಾಗ ನನ್ನ ಕಷ್ಟವನ್ನು ಕೇಳಿ ಸಹಾಯ ಮಾಡುವಿರಂತೆ. ಮತ್ತೆ ಸಿಗುತ್ತೇನೆ. ನೀವು ಹೋಗಿಬನ್ನಿ' ಎಂದವನೇ ಸರಸರನೆ ಮುಂದೆನಡೆದ. ಬೇಡಿ ಬಂದ ಈ ಹುಡುಗನೂ ತನ್ನ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದಾನಲ್ಲಾ ಅನಿಸಿ ಮನಸ್ಸು ವ್ಯಗ್ರವಾಯಿತು. ಮತ್ತೆ ಸಿಗಲಿ ಎಂದುಕೊಂಡವಳಿಗೆ ರೂಮು ಹೇಗೆ ಸೇರಿದೆ ಎಂಬುದೇ ಅರಿವಿಗೆ ಬರಲಿಲ್ಲ.

ಇಡೀ ರಾತ್ರಿ ನಿದ್ದೆಯಿಲ್ಲದೆ ನರಳಿದವಳಿಗೆ ಕೆಲಸಕ್ಕೆ ರಾಜೀನಾಮೆ ನೀಡಿಬಿಡೋಣವೇ ಎಂಬ ಯೋಚನೆಯೊಂದು ಮನಸಿನಲ್ಲಿ ಹಾದುಹೋಯಿತು. ತನಗೆ ಈ ಕುತಂತ್ರದ ಪ್ರಪಂಚವನ್ನು, ಕುಹಕವನ್ನು ನಿಭಾಯಿಸಿ ಮುಂದುವರೆಯುವ ಶಕ್ತಿಯಿಲ್ಲವೇನೋ ಎಂಬ ಅವಿಶ್ವಾಸದೊಂದಿಗೆ ರಾಜೀನಾಮೆ ಕೊಡುವುದೇ ಸರಿಯಾದ ನಿರ್ಧಾರವೆಂದುಕೊಂಡವಳಿಗೆ ಬೆಳಗಿನ ಝಾವಕ್ಕೆ ನಿದ್ರೆಯಾವರಿಸಿತು.

★★★

ಹೇಗಿದ್ದರೂ ರಾಜೀನಾಮೆ ಕೊಡುವವಳು ಎಂಬ ಉದಾಸೀನಭಾವ ಮನದೊಳಗೆ ತುಂಬಿಕೊಂಡಿದ್ದರಿಂದಲೋ ಏನೋ ಬೆಳಗ್ಗೆ ಬಹು ತಡವಾಗಿ ಎಚ್ಚರವಾಯಿತು. ಕಾಫಿ ಕುಡಿದು ರಾಜೀನಾಮೆ ಪತ್ರವನ್ನು ಟೈಪಿಸಿ ಕವರಿಗೆ ಸೇರಿಸಿದಳು. ಎದೆಯ ಭಾರ ಇಳುಕಿದಂತಾಗಿ ನಿರಾಳವಾಗಿ ಸ್ವಲ್ಪಹೊತ್ತು ಕುಳಿತವಳಿಗೆ, ಇನ್ನು ಇಲ್ಲಿದ್ದು ಮಾಡುವುದಾದರೂ ಏನಿದೆ? ಲಗ್ಗೇಜನ್ನಾದರೂ ರೆಡಿ ಮಾಡಿಬಿಡುವುದೊಳ್ಳೆಯದು ಎಂದವಳೇ ಎದ್ದು ಕಿಟ್‌ಗಳನ್ನು ಮುಂದೆ ತಂದಿರಿಸಿಕೊಂಡು ಎಲ್ಲವನ್ನೂ ಹೇಗೆ ಬೇಕೋ

ಹಾಗೆ ತುರುಕಿದಳು. ಮೊದಲು ಗಾಡಿ ರಿಪೇರಿಯಾಗಿದ್ದರೆ ಹೋಗಿ ತಂದು ಬಿಡಬೇಕು. ಇದ್ದಕ್ಕಿದ್ದಂತೆ ಕೇಳಿದರೆ ಅಡ್ವಾನ್ಸ್ ಹೇಗೆ ವಾಪಸ್ ಕೊಡುತ್ತಾರೆ? ಮೂರು ತಿಂಗಳು ಸಮಯ ಕೊಟ್ಟರಾಯಿತು. ಒಂದು ಮಾತು ಈಗ ಹೇಳಿದ್ದರೆ ಒಳ್ಳೆಯದು.

ಕೆಳಗಿಳಿದು ಮನೆ ಮಾಲೀಕರನ್ನು ಕಾಣಲು ಹೋದಳು. ಮನೆಗೆ ಬೀಗ ಬಿದ್ದಿತ್ತು. ಫೋನ್ ಮಾಡಿದರಾಯ್ತು ಎಂದುಕೊಂಡು ರೂಮ್‌ಗೆ ಹಿಂದಿರುಗಿದಳು. ವಿಭಾಳಿಗೆ ಈಗ ತಿಂಡಿ ಊಟವೇನೂ ಬೇಡವೆನಿಸಿತ್ತು. ಸಹೋದ್ಯೋಗಿಗಳ ಪ್ರತಿದಿನದ ಕಿರುಕುಳದಿಂದ ತಪ್ಪಿಸಿಕೊಂಡರೆ ಸಾಕು, ಯಾವ ಸಂಬಳವೂ ಬೇಡ, ಹುದ್ದೆಯೂ ಬೇಡ, ಹಾಳು ಸ್ಥಾನಮಾನಗಳೂ ಬೇಡ! ವಿಭಾಳ ಮನಸ್ಸು ಯಾವುದೇ ದ್ವಂದ್ವಕ್ಕೆ ಒಳಗಾಗದೆ ತೀರ್ಮಾನಕ್ಕೆ ಬದ್ಧವಾಗಿಬಿಟ್ಟಿತು.

ಇವಳು ಆಫೀಸಿಗೆ ಹೋಗಲು ತಯಾರಾಗುವಷ್ಟರಲ್ಲಿ ಹನ್ನೊಂದಾಯಿತು. ಹರಿಬಿರಿಯಿಲ್ಲದೆ, ಯಾರ ಭಯವಿಲ್ಲದೆ ನಿರಾತಂಕವಾಗಿ ಕಛೇರಿಯೊಳಗೆ ಕಾಲಿಟ್ಟಳು. ಆಶ್ಚರ್ಯವಾಯಿತು. ಆಫೀಸಿನಲ್ಲಿ ಹೊಸ ಗಾಳಿ ಬೀಸಿದ ಹಾಗೆ ದಿನನಿತ್ಯದ ದೃಶ್ಯವಿಲ್ಲದೆ, ಎಲ್ಲರ ಮುಖದಲ್ಲೂ ಖುಷಿ ಕಾಣುತ್ತಿದೆ. ಇದೇನಿದು? ನಾನು ತಡವಾಗಿ ಬರಬಾರದಿತ್ತು. ಏನಾಗಿದೆ ಇಲ್ಲಿ? ಎಂದು ಯೋಚಿಸುತ್ತಲೇ ಒಳ ನಡೆದ ವಿಭಾಳ ಕಣ್ಣಿಗೆ ಎಲ್ಲರ ಟೇಬಲ್ ಮೇಲೂ ಸ್ನ್ಯಾಕ್ಸ್-ಕಾಫಿ ಇರುವುದು ಕಾಣಿಸಿತು. ಏನಿವತ್ತು ವಿಶೇಷ ಎಂದು ಯಾರನ್ನು ಕೇಳುವುದು? ಕೇಳಬೇಕಾದರೂ ಏಕೆ? ಇವರ ಸಹವಾಸವನ್ನೇ ತೊರೆದು ಹೋಗಲು ನಿರ್ಧರಿಸಿದವಳಿಗೆ ಇಲ್ಲಿ ಏನಾದರೆ ತನಗೇನಾಗಬೇಕು? ತನ್ನ ಟೇಬಲ್ ಮೇಲೆ ಬ್ಯಾಗ್ ಇಟ್ಟು, ನೀರಿನ ಬಾಟಲ್ ತೆಗೆದು ನೀರು ಕುಡಿದು, ಕವರ್ ತೆಗೆದು ಕೈಲಿ ಹಿಡಿದುಕೊಂಡಳು. ಸೀದಾ ಸಾಹೇಬರ ಕೊಠಡಿಗೆ ಬಾಗಿಲು ತಳ್ಳಿಕೊಂಡು ಒಳನಡೆದವಳಿಗೆ ಅಚ್ಚರಿ ಕಾದಿದೆಯೆಂದು ತಿಳಿದಿರಲಿಲ್ಲ.

ಅಧಿಕಾರಿಗಳ ಎದುರಿಗೆ ಅಪರಿಚಿತ ವ್ಯಕ್ತಿಯೋರ್ವರು ಕತ್ತು ಬಗ್ಗಿಸಿ ಏನೋ ಬರೆಯುತ್ತಿದ್ದರು. ಯಾರಾದರೆ ತನಗೇನೆಂಬ ಧೋರಣೆಯಲ್ಲೇ ಆತನ ಬೆನ್ನ ಹಿಂದೆ ನಿಂತವಳು, 'ಗುಡ್ ಮಾರ್ನಿಂಗ್ ಸರ್' ಎಂದಳು.

'ಯಾಕಮ್ಮಾ ಇಷ್ಟು ತಡ? ವಿಭಾ ಎಂದರೆ ಶಿಸ್ತಿಗೆ ಹೆಸರು ತಾನೇ?' ನಗುತ್ತಾ ಕೇಳಿದವರ ಕೈಗೆ ಕವರನ್ನಿತ್ತಳು. ಮುಖ ಮುಖ ನೋಡುತ್ತಾ ಕವರನ್ನು ತೆರೆದು ಲೆಟರ್ ಓದಿದವರಿಗೆ,

'ನಿನಗೇನು ಹುಚ್ಚು ಹಿಡಿದಿದೆಯೇನಮ್ಮಾ? ಏನಾಗಿದೆ? ಅಂಥ ಪ್ರಾಬ್ಲಂ ಏನು ನಿನಗೆ?' ಅವರ ಧ್ವನಿಯಲ್ಲಿ ಕೋಪದೊಂದಿಗೆ ಕಳಕಳಿಯೂ ಬೆರೆತಿತ್ತು. ವಿಭಾಳ ಕಣ್ಣುಗಳಲ್ಲಿ ನೀರು ಜಿನುಗಿತು.

ಸಂಭಾಷಣೆಯನ್ನು ಕೇಳಿಸಿಕೊಂಡ ಅಪರಿಚಿತ ವ್ಯಕ್ತಿ, ಹಿಂತಿರುಗಿ ವಿಭಾಳ ಕಡೆಗೆ ದೃಷ್ಟಿ ಹಾಯಿಸಿದ. ವಿಭಾ ಒಮ್ಮೆಲೇ ಎರಡು ಹೆಜ್ಜೆ ಹಿಂದಕ್ಕೆ ಸರಿದಳು. ಕುರ್ಚಿಯಲ್ಲಿ ಕುಳಿತ ಆ ವ್ಯಕ್ತಿ ಎದ್ದುನಿಂತವನೇ, 'ನೀನಾ?' ಎಂದ ಅವನು, ಅವಳನ್ನು ನೋಡಿದ ಶಾಕ್‌ನಿಂದ ತಬ್ಬಿಬ್ಬುಗೊಂಡಿದ್ದ. ಇವಳೂ ಮಾತೇ ಮರೆತು ಹೋದಂತೆ ನಿಂತವಳು ಸುಮ್ಮನೇ ಕಣ್ಣರಳಿಸಿ ಅವನನ್ನು ನೋಡತೊಡಗಿದಳು. ಸಾಹೇಬರು ಇವರಿಬ್ಬರ ನಡವಳಿಕೆ ಗಮನಿಸಿ, 'ನಿಮ್ಮಿಬ್ಬರಿಗೂ ಮೊದಲೇ ಪರಿಚಯವಿದೆಯಾ? ಹೇಗೆ ಗೊತ್ತು?' ಎನ್ನುತ್ತಾ ಆತನ ಮುಖ ನೋಡಿದರು. 'ಸರ್, ಇವಳು ನಮ್ಮ ಪಕ್ಕದ ಮನೆ ಹುಡುಗಿ ಸರ್. ನನಗೆ ಉದ್ಯೋಗ ಸಿಕ್ಕಿ ಗುಜರಾತ್‌ಗೆ ಹೋದಾಗ ಇವಳಿನ್ನೂ ಫೈನಲ್ ಇಯರ್ ಡಿಗ್ರಿಲಿದ್ದಳು.' ವಿಭಾ ಈಗಲೂ ಸುಮ್ಮನೆ ನಿಂತಿದ್ದಳು.

'ಹೀಗೆಂದು ಮೊದಲೇ ಗೊತ್ತಿದ್ದರೆ, ಈಕೆ ಈ ಪತ್ರ ಕೊಡುತ್ತಿರಲಿಲ್ಲ..' ಎಂದು ಆತನ ಮುಂದೆ ಪತ್ರವನ್ನು ಹಿಡಿದರು. ಆತ ಪತ್ರ ಓದಿದವನೇ, 'ಅಯ್ಯೋ, ನಿನಗೇನಾಯ್ತೇ? ಇರೋ ಕೆಲಸ ಬಿಟ್ಟು, ಮುಂದಕ್ಕೆ ಏನಾಗ್ಬೇಕೂ ಅಂತಿದೀಯಾ?' ಎಂದವನೇ,

'ಸರ್, ಹರಿದು ಬಿಸಾಕಿ ಸರ್ ಆ ಲೆಟರ್‌ನಾ' ಎಂದವನೇ ತಾನೇ ಹರಿದು ಹಾಕಿದ.

'ಕುಳಿತುಕೊಳ್ಳಮ್ಮಾ ಅದೇನು ನಿನ್ನ ಸಮಸ್ಯೆ? ಈಗ ಹೊಸ ಆಫೀಸರ್ ಮುಂದೆ ಹೇಳಿಕೊಳ್ಳಮ್ಮಾ' ಎಂದು ನಕ್ಕರು.

ಈಗ ಬಾಯಿ ಬಿಟ್ಟಳು ವಿಭಾ. 'ಸರ್, ಮತ್ತೆ ನೀವು?'

'ನಾನು ನನ್ನ ಸ್ವಂತ ಊರು ಹೈದರಾಬಾದ್‌ಗೆ ಹೋಗ್ತೀನಮ್ಮಾ. ಇನ್ನು ಮುಂದೆ ನಿಮ್ಮ ಬಾಸ್ ಇವರೇ ಮಿ. ಮೋಹನ್ ಕುಮಾರ್'. ವಿಭಾಳ ಮನಸ್ಸು ಗೊಂದಲದ ಗೂಡಾಗಿದ್ದರೂ ಮುಖದಲ್ಲಿ ತಿಳಿನೀರಿನ ಸಮಾಧಾನವಿತ್ತು.

'ಸರ್, ನಾನು ನಿಮಗೆ ಲೆಟರ್ ಕೊಟ್ಟಿರೋದು. ಅದನ್ನು ಅನುಮೋದಿಸುವುದು ನಿಮ್ಮ ಕೆಲಸ. ಮೋಹನ, ನೀನಿಲ್ಲಿಗೆ ಬಂದಿದ್ದು ಸಂತೋಷವಾಗಿದೆ. ಆಫೀಸು, ಆಫೀಸಿನ ಜನ ಎಲ್ಲ ಸಹಕಾರದಿಂದ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ. ಎಲ್ಲರೂ ಆರಾಮವೆಂದು ಭಾವಿಸುವೆ. ನಾನಿನ್ನು ಬರುತ್ತೇನೆ ಸರ್'. ಇಬ್ಬರಿಗೂ ಕೈ ಮುಗಿದಳು. ಕೂಡಲೇ ಬಾಗಿಲಿನೆಡೆಗೆ ಮುಖ ಮಾಡಿದವಳನ್ನು, ಮೋಹನ ಕ್ಷಣಾರ್ಧದಲ್ಲಿ ಎದ್ದು ನಿಂತು ಕೈ ಅಡ್ಡ ಹಾಕಿ ತಡೆದನು.

'ಸರ್, ಇವಳಿಗೇನಾಗಿದೆ? ಯಾಕೆ ಹೀಗಾಡುತ್ತಿದ್ದಾಳೆ? ಏನಾದರೂ ಸಮಸ್ಯೆಯಾ ನಿನಗೆ? ಏನು ಸಮಾಚಾರ ಹೇಳು.' ವಿಭಾ ಯಾವುದಕ್ಕೂ ಚಕಾರವೆತ್ತಲಿಲ್ಲ. ಸಾಹೇಬರು ಇದನ್ನೆಲ್ಲ ನೋಡುತ್ತಿದ್ದವರು, 'ಆಯ್ತಮ್ಮಾ, ಇವತ್ತು ನಿನಗೆ ಸಿ. ಎಲ್. ಹಾಕಿರುತ್ತೇನೆ. ನಾಳೆ ಬಾ ಯಾವುದನ್ನೂ ಮೋಹನ್ ತೀರ್ಮಾನ ಮಾಡುತ್ತಾರೆ.' ವಿಭಾ ಆತನ ಕೈಕೆಳಗಿನಿಂದ ನುಸುಳಿಕೊಂಡು ಹೊರನಡೆದಳು. 'ಸರ್, ಇವತ್ತು ನನಗೂ ಸಿ.ಎಲ್. ಹಾಕಿಬಿಡಿ. ನಾಳೆ ಚಾರ್ಜ್ ತಗೊಳ್ತೀನಿ' ಎಂದವನೇ ಅವಳ ಹಿಂದೆಯೇ ಹೊರನಡೆದ.

ಇಬ್ಬರೂ ದೇವಾಲಯದ ದ್ವಾರವೊಂದರ ಪಕ್ಕದಲ್ಲಿ ಕುಳಿತರು. ಸುಮಾರು ಹೊತ್ತಿನ ಮೌನದ ನಂತರ ವಿಭಾಳೇ ಮಾತು ಶುರುವಿಟ್ಟುಕೊಂಡಳು. 'ನನಗೆ ಅಲ್ಲಿ ಕೆಲಸ ಮಾಡಲು ಇಷ್ಟವಿಲ್ಲ ಮೋಹನ. ಎಲ್ಲರೂ ಕಿಚಾಯಿಸುತ್ತಾರೆ. ಲೇವಡಿ ಮಾಡಿಕೊಂಡು ನಗುತ್ತಾರೆ. ಇದೆಲ್ಲಕ್ಕಿಂತ ಹೆಚ್ಚಾಗಿ, ತಂದೆಯಂತಿರುವ ನಮ್ಮ ಸಾಹೇಬರ ಹೆಸರಿನ ಜೊತೆಗೆ ನನ್ನ ಹೆಸರನ್ನು ಜೋಡಿಸುತ್ತಿದ್ದಾರೆ. ಇಷ್ಟರಲ್ಲೇ ಪ್ರೊಮೋಷನ್ ಸಿಗುತ್ತದೆಂದು ಆಡಿಕೊಂಡು ನಗುತ್ತಾರೆ.' ಅನ್ನುವಷ್ಟರಲ್ಲಿ ವಿಭಾಳ ಗಂಟಲು ನಡುಗತೊಡಗಿ ಕಣ್ಣೀರು ಹರಿಯತೊಡಗಿತು. ಮೋಹನ ಅವಳನ್ನು ಸಮಾಧಾನ ಮಾಡಲಿಲ್ಲ. ಸದ್ದಿಲ್ಲದೆ ಹರಿದ ಕಣ್ಣೀರನ್ನು ಪದೇಪದೇ ಒರೆಸಿಕೊಂಡವಳಿಗೆ ಈ ಚಳಿಗಾಲದಲ್ಲಿ, ಕೆನ್ನೆ ಉರಿಯತೊಡಗಿದ್ದು ಅರಿವಿಗೆ ಬಂತು. ಮೋಹನ ತನ್ನ ಬ್ಯಾಗಿನಿಂದ ನೀರು ತೆಗೆದು ಅವಳಿಗೆ ನೀಡಿದನು. ನೀರು ಕುಡಿದ ಮೇಲೆ ತಹಬಂದಿಗೆ ಬಂದ ವಿಭಾ, 'ಅರ್ಥ ಆಯ್ತಾ? ನನಗೆ ಕೆಲಸವೇ ಇಷ್ಟವಿಲ್ಲ. ನಾನಿವತ್ತು ಊರಿಗೆ ಹೊರಟಿದ್ದೇನೆ. ಅಪ್ಪ ಅಮ್ಮನ ಜೊತೆ ಇರುತ್ತೇನೆ. ನಿನ್ನ ಕೈಲೇ ಇನ್ನೊಂದು ಪತ್ರ ಬರೆದು ಕೊಟ್ಟುಬಿಡುತ್ತೇನೆ' ಎಂದವಳೇ ಒಂದು ಹಾಳೆ ತೆಗೆದು ಬರೆದು ಅವನಿಗೆ ನೀಡಿ, ತನ್ನಷ್ಟಿಗೆ ತಾನು ಎದ್ದು ನಡೆದಳು.

'ವಿಭಾ, ಚೆನ್ನಾಗಿದ್ದೀಯಾ? ಊರಿನಲ್ಲಿ ಎಲ್ಲರೂ ಕ್ಷೇಮವೇ?' ಅವನ ಹೊಸ ವರಸೆಯ ಮಾತಿನ ಧ್ವನಿಗೆ ಪುಳಕಗೊಂಡವಳಿಗೆ ಏನು ಹೇಳಬೇಕೆಂದೇ ತೋರಲಿಲ್ಲ.

'ಮಹಾ ಮೂರ್ಖಳಂತೆ ಆಡಬೇಡ. ನಾನು ನಿಮ್ಮೂರಿಗೆ ಹೊರಟಿದ್ದೇನೆ.' ಇವಳಿಗೆ ಮಾತೇ ಹೊರಡಲಿಲ್ಲ. ಅಷ್ಟು ಹೇಳಿ ಮೋಹನ ಫೋನ್ ಕಟ್ ಮಾಡಿದನು.

ವಿಭಾಳ ಅಪ್ಪ ಅಮ್ಮ ಮೋಹನನ ಸನ್ನಡತೆ, ವಿನಯ, ನೇರ ಮಾತುಗಾರಿಕೆಗೆ ಖುಷಿಯಾಗಿ ಹೋದರು. ವಿಭಾಳನ್ನು ಕೆಲಸಕ್ಕೆ ಕರೆಯಲು ಬಂದಿದ್ದಾನೆಂದು ಇನ್ನೂ ಉಬ್ಬಿ ಹೋದರು. ಮೋಹನ ಅಂಜುತ್ತಂಜುತ್ತಲೇ, 'ಅಮ್ಮಾ, ನಿಮ್ಮ ಬಳಿ ಇನ್ನೊಂದು ಮಾತು ಕೇಳಬೇಕಿತ್ತು..'

★★★

ಹದಿನೈದು ದಿನಗಳ ನಂತರ ಇವರ ಕಚೇರಿಯ ಮುಂದೆ ಒಂದು ಅಚ್ಚರಿಯ ದೃಶ್ಯ. ವಿಭಾ ಮೋಹನ ಜೊತೆಯಾಗಿ ಕಾರಿನಿಂದಿಳಿದರು. ಸಹೋದ್ಯೋಗಿಗಳಿಗೆ ಆಶ್ಚರ್ಯವೆಂದರೆ ಪರಮಾಶ್ಚರ್ಯ! ಹೇಗೆ ಓಡಿಸಿಬಿಟ್ಟೆವು ವಿಭಾಳನ್ನು ಎಂದು ಒಬ್ಬರಿಗೊಬ್ಬರು ಹೇಳಿಕೊಂಡು ಖುಷಿ ಪಟ್ಟ ದಿನಗಳು ಮರುಕಳಿಸಿ, ಹೋದೆಯಾ ಎಂದರೆ.........ಎಂದು ಹಪಹಪಿಸಿದರು.

ಸಾಹೇಬರ ಕೊಠಡಿಯೊಳ ಹೊಕ್ಕ ಮೋಹನ ಮತ್ತು ವಿಭಾ, ತನ್ನ ಹಾಜರಾತಿ ಚೆಕ್ ಮಾಡಿದಳು. ಹದಿನೈದು ದಿನಗಳ ಇ.ಎಲ್. ಎಂಟ್ರಿ ಮಾಡಬೇಕಿದೆ. ಇಲ್ಲದಿದ್ದರೆ ಕೆಲಸ ಬಿಟ್ಟರು ಅಂತ ಬರೆಯಬೇಕಾಗುತ್ತೆ ಎಂದು ಪರಸ್ಪರ ಮಾತಿನಲ್ಲಿ ಮುಳುಗಿದ್ದವರನ್ನು ಅಟೆಂಡರ್ ಧ್ವನಿ ಎಚ್ಚರಿಸಿತು. 'ನಿಂತ್ಕಳಿ ಇಬ್ರೂವೇ' ಎಂದು ಇಬ್ಬರನ್ನೂ ನಿಲ್ಲಿಸಿದ ರಾಮಣ್ಣ ಅವರಿಬ್ಬರಿಗೂ ಒಂದೊಂದು ಗುಲಾಬಿ ಹೂವು ನೀಡಿದ. 'ಇಬ್ರೂ ಚಂದಾಕಿರಿ ತಾಯೀ. ನೀವಿಲ್ದೇ ಆಫೀಸು ಬಿಕೋ ಅಂತಿತ್ತು ಕಣ್ರವ್ವಾ' ಎಂದವನೇ ಸ್ವೀಟ್ ಬಾಕ್ಸ್ ತೆರೆದು ಸಿಹಿ ತೆಗೆದುಕೊಳ್ಳಲು ಹೇಳಿ, ಇಬ್ಬರೂ ಪರಸ್ಪರ ತಿನ್ನಿಸಬೇಕೆಂದು ಕಡ್ಡಿ ಮುರಿದಂತೆ ಒತ್ತಾಯ ಹೇರಿದ. ವಿಧಿಯಿಲ್ಲದೆ ಇಬ್ಬರೂ ಒಬ್ಬರಿಗೊಬ್ಬರು ಇನ್ನೇನು ತಿನ್ನಿಸಬೇಕು, ಅಷ್ಟರಲ್ಲಿ, 'ಹ್ಯಾಪೀ ಮ್ಯಾರೀಡ್ ಲೈಫ್ ಬೋತ್ ಆಫ್ ಯೂ' ಎನ್ನುತ್ತಾ ಎಲ್ಲರೂ ಒಳಗೆ ಬಂದರು. ವಿಭಾಳನ್ನು ನೋಡಿದವರ ಕಣ್ಣುಗಳಲ್ಲಿ, 'ಒಮ್ಮೆ ಕ್ಷಮಿಸಿಬಿಡಮ್ಮಾ' ಎಂದು ಬೇಡಿಕೊಳ್ಳುವ ದೀನತೆಯಿತ್ತು. ವಿಭಾ ಎಲ್ಲರನ್ನೂ ನೋಡಿದವಳು, ಪರವಾಗಿಲ್ಲ ಬಿಡಿ ಎನ್ನುವಂತೆ ಕಣ್ಣಲ್ಲೇ ನುಡಿದಳು. 'ಸರ್, ಇವತ್ತು ನಿಮ್ಮಿಬ್ಬರಿಗಾಗಿ ನಮ್ಮ ಟ್ರೀಟ್. ಬೇಡವೆನ್ನಬಾರದು' ಮೋಹನ ಒಪ್ಪಿಗೆ ಸೂಚಿಸಿ ನಕ್ಕ. ವಿಭಾ ಕೂಡ ಆ ನಗುವಿಗೆ ಜೊತೆಯಾದಳು.

ಇವತ್ತು ಆ ಹುಡುಗ ಸುರೇಂದ್ರ ಸಿಕ್ಕರೆ ಅವನಿಗೆ ಕೈತುಂಬ ಹಣ ನೀಡಬೇಕು. ಅಯ್ಯೋ, ಅದಕ್ಕಿಂತ ಮೊದಲು, ಅವನ ಕಷ್ಟದ ಕಾರಣ ಕೇಳಬೇಕು ಎಂದುಕೊಂಡಳು. ಆಫೀಸು ಮುಗಿಸಿ ಕಾರಿನಲ್ಲಿ ಕುಳಿತು ಹೊರಟರು. ವಿಭಾಳಿಗೆ ಇಂದು ಯಾವ ನೆರಳಿನ ಕಾಡುವಿಕೆಯ ಆತಂಕವೂ ಇರಲಿಲ್ಲ.

ಕಳೆದ ಶತಮಾನವು ನಮ್ಮ ನಾಡಿಗೆ ತಂದ ತೀವ್ರ ಬದಲಾವಣೆಗಳು ಸಣ್ಣ ಕ್ರಾಂತಿಯನ್ನೇ ಮಾಡಿದ್ದವು! ಆ ಹಿನ್ನೆಲೆಯ ಕಥನ ಹೊಂದಿದ ಹೊಸ ಕಾದಂಬರಿ 'ತತ್ರಾಣಿ'ಯ ಆಯ್ದ ಭಾಗ ಇಲ್ಲಿದೆ.

ಗ್ರಾಮಾಫೋನಿನೊಳಗೆ ಕೂತವರ್ಯಾರು?

» ದೀಪಾ ಜೋಶಿ

ಮುಂಬೈಯಿಂದ ಮಗ ತಂದ ದೊಡ್ಡ ದೊಡ್ಡ ಲೌಡ್ ಸ್ಪೀಕರ್ ನೋಡಿ ಸುಂದರಾ ಬಾಯಿ ಹಣೆ ಹಣೆ ಬಡಿದುಕೊಂಡರು. ಅವಕ್ಕೆ ಎಷ್ಟು ರೊಕ್ಕ ಎಂದು ಭುಜಂಗಾಚಾರ್ರು ಬಾಯಿತಪ್ಪಿಯೂ ತಾಯಿಗೆ ಹೇಳಲಿಲ್ಲ.

ಶೀನಿ, ಸಂಬಳವಿಲ್ಲದೇ ದುಡಿದದ್ದರಿಂದ ಇಷ್ಟು ವರ್ಷಗಳಲ್ಲಿ ಅವನು ಪಡೆದ ಸಾಲ ತೀರಿತ್ತು. ಭುಜಂಗಾಚಾರ್ರು, ಲೌಡ್ ಸ್ಪೀಕರ್ ದಂಧೆ ತಮ್ಮೊಬ್ಬರಿಂದ ಮಾಡಲಾಗದು ಎಂದು ಅರಿತರು. ಗೋವಿಂದ ಈಗ ಇಂಟರ್ ಓದುತ್ತಿದ್ದ. ಮುಂದೆ ಬಿ. ಕಾಂ. ಓದಲು ಬೆಂಗಳೂರಿಗೆ ಹೋಗಬೇಕೆಂದು ಅವನ ಇಚ್ಛೆಯಾಗಿತ್ತು. ಸಾಥ್ ನೀಡಲು ಶೀನೀಯೇ ಯೋಗ್ಯನೆಂದುಕೊಂಡರು. ತಾಬಡತೋಬಡ್ ಹೊರಟು ಬರುವಂತೆ ಅವನಿಗೆ ಪತ್ರ ಬರೆದರು. ಅಣ್ಣನ ಮಾತಿಗೆ ಎಂದೂ ದೂಸರಾ ಉತ್ತರ ಕೊಟ್ಟವನಲ್ಲ ಶೀನಿ. ಹದಿನೈದು ದಿನಗಳಲ್ಲಿ ಗಂಟು, ಮೂಟೆ ಕಟ್ಟಿಕೊಂಡು ರಾಣೆಬೆನ್ನೂರಿಗೆ ಮರಳಿದ.



ತತ್ರಾಣಿ
ಲೇ: ದೀಪಾ ಜೋಶಿ
ಪ್ರ: ಅಂಕಿತ ಪುಸ್ತಕ
ಬೆಂಗಳೂರು
ಬೆಲೆ ರು.395/-

ಅಣ್ಣನ ಸಾಹಸ ನೋಡಿ ಶೀನಿಗೆ ಎಲ್ಲಿಲ್ಲದ ಸಂಭ್ರಮವಾಯಿತು. ಶೀನಿ ನಾಟಕ ಕಂಪನಿಯಲ್ಲಿ ಇದ್ದುದರಿಂದ ಮೈಕು, ಹಿನ್ನೆಲೆ ಗಾಯನ ಎಲ್ಲದರ ಬಗ್ಗೆ ಸ್ವಲ್ಪ ತಿಳಿದು ಕೊಂಡಿದ್ದ. ಒಂದೆರಡು ಗ್ರಾಮಾಫೋನ್‌ಗಳನ್ನೂ ಖರೀದಿ ಮಾಡುವಂತೆ ಅಣ್ಣನಿಗೆ ಸಲಹೆ ಕೊಟ್ಟ. ಬರೀ ಸ್ವಾತಂತ್ರ್ಯ ಹೋರಾಟಗಾರರ ಭಾಷಣಗಳಿಗಷ್ಟೇ ಅಲ್ಲದೇ ಜಾತ್ರೆ ಗಳಲ್ಲಿ, ಸಾಬರ ನಿಕಾಹ್‌ಗಳಲ್ಲಿ ಗ್ರಾಮಾಫೋನು ಹಚ್ಚಿ, ಹಾಡುಗಳನ್ನು ಲೌಡ್ ಸ್ಪೀಕರುಗಳಲ್ಲಿ ಹಚ್ಚಬಹುದೆಂದು ಹೇಳಿದ. ಶ್ರೀಮಂತ ಜನರಂತೂ ಮುಗಿಬೀಳುವುದು ಪಕ್ಕಾ, ಎಂದ. ಅದರಂತೆಯೇ ಭುಜಂಗಾಚಾರ್ರು ಅವತ್ತೇ ಶೀನಿಯ ಕೈಗೆ ದುಡ್ಡು ಕೊಟ್ಟು ಗ್ರಾಮಾಫೋನ್ ತರುವಂತೆ ಹೇಳಿ ಹುಬ್ಬಳ್ಳಿಗೆ ಕಳಿಸಿದರು. ಜಾಣ ಶೀನಿ ಖರೀದಿ ಮಾಡುವುದಕ್ಕಿಂತ ಮೊದಲೇ ವೆಂಕೂವಿನ ಮನೆಗೆ ಹೋಗಿ ಅವಳನ್ನು ಭೇಟಿಯಾದ. ಗ್ರಾಮಾಫೋನು ತೆಗೆದುಕೊಂಡು ಅವರ ಮನೆಗೆ ಹೋದರೆ ಗಂಗಾ ಬಾಯಿಗೆ ಏನೆಲ್ಲಾ ಉತ್ತರ ಕೊಡಬೇಕಾಗುತ್ತದೆಯೋ ಎಂಬ ಚಿಂತೆ ಅವನಿಗೆ. ಈಗ ಅಳಿಯ ದೊಡ್ಡವನಾಗಿದ್ದ. ವೆಂಕೂ ಮತ್ತೆ ಗರ್ಭಿಣಿ. ಅವರನ್ನು ಭೇಟಿಯಾಗಿ, ಊಟ ಮಾಡಿಕೊಂಡು, ಅಣ್ಣ ಕೊಟ್ಟ ದುಡ್ಡಿನಲ್ಲಿ ಎ.ವಿ.ಎಂ. ಕಂಪನಿಯ ಐದು ಗ್ರಾಮಾಫೋನ್ ಖರೀದಿ ಮಾಡಿಕೊಂಡು ಅವತ್ತೇ ಊರಿಗೆ ಮರಳಿದ.

ಮರುದಿನವೇ ರಾಣೇಬೆನ್ನೂರಿನ ಶಂಕರ ಟಾಕೀಸಿನ ಮಾಲೀಕ ರಂಗೋಜಿಯ ಮಗಳ ಮದುವೆ. ಆತನೂ ಭುಜಂಗಾಚಾರ್ರ ಸ್ನೇಹಿತನೇ. ಭುಜಂಗಾಚಾರ್ರು ಮತ್ತು ಶೀನಿ ಮನೆಯಲ್ಲಿ ಹಿಂದಿನ ದಿನ ಗ್ರಾಮಾಫೋನು ಮತ್ತು ಲೌಡ್ ಸ್ಪೀಕರಿನ ಪ್ರಯೋಗ ಮಾಡಿ ನೋಡಿದರು. ಸಂಜೆ ಇದ್ದಕ್ಕಿದ್ದಂತೆ ಶುರುವಾದ ಹಾಡಿಗೆ ಓಣಿಯ ಹುಡುಗರೆಲ್ಲಾ ಭುಜಂಗಾಚಾರ್ರ ಮನೆಯ ಮುಂದೆ ಕಿಕ್ಕಿರಿದರು. ಐದು ನಿಮಿಷ ಗ್ರಾಮಾಫೋನಿನ ಪರೀಕ್ಷೆ ನಡೆಸಿ, ಯಾರ್ಯಾರು ಹಾಡು ಕೇಳಬೇಕು ಅಂತೀರೋ, ನಾಳೆ ಶಂಕರ ಟಾಕೀಸ್ ಮಾಲೀಕರ ಮಗಳ ಮದುವೀಗ ಬರ್ರೀ. ಅಲ್ಲೇ ಹಾಡು ಹಚ್ಚತೇವಿ ಭುಜಂಗಾಚಾರ್ರು ಮೈಕಿನಲ್ಲಿ ಹೇಳಿ, ಲೌಡ್ ಸ್ಪೀಕರ್ ಬಂದು ಮಾಡಿದರು. ಸೇರಿದ್ದ ಎಲ್ಲರಿಗೂ ಅಚ್ಚರಿ. ಮುಂದೆ ನಿಂತಿದ್ದ ಹುಡುಗನೊಬ್ಬ ಗ್ರಾಮಾಫೋನಿನ ಮೇಲೆ ನಾಯಿಯ ಚಿತ್ರವನ್ನು ನೋಡಿ, 'ಆಚಾರ್ರು ಮುಂಬೈಯಿಂದ ಒಂದು ಹಾಡೋ ನಾಯಿ ತಂದಾರ. ಅದನ್ನ ಒಂದು ಕರಿ ಡಬ್ಬ್ಯಾಗ ಕಟ್ಟಿ ಹಾಕ್ಯಾರ. ಅವರು 'ಹಾಡು' ಅಂತ ಹೇಳೋಣ ಹಾಡತದ ಅದು' ಎಂದು ಊರ ತುಂಬಾ ಸುದ್ದಿ ಮಾಡಿಬಿಟ್ಟ.

ಮರುದಿನ ಬೆಳಿಗ್ಗೆ ಭುಜಂಗಾಚಾರ್ರು ಮತ್ತು ಶೀನಿ ಬೇಗ ಹೋಗಿ ಕಲ್ಯಾಣ ಮಂಟಪದ ಹೊರಗಿನ ಕಂಬಕ್ಕೆ ಲೌಡ್ ಸ್ಪೀಕರ್ ಬಿಗಿದರು. ಗ್ರಾಮಾಫೋನು ತಯಾರು ಮಾಡಿಕೊಂಡು ಅಕ್ಷತೆಯ ಸಮಯಕ್ಕೆ ಕಾಯುತ್ತಿದ್ದರು. ಆದರೆ ಇದ್ದಕ್ಕಿದ್ದಂತೆ ಜನರ ನೂಕುನುಗ್ಗಲು. ನಾಯಿಯ ಹಾಡಿನ ಸುದ್ದಿ ಎಲ್ಲೆಡೆ ಹರಡಿ, ಅದನ್ನು ನೋಡಲು ಜನಸಾಗರ ಹರಿದು ಬಂದಿತ್ತು. ಜನರ ಗದ್ದಲದಿಂದ ತಪ್ಪಿಸಿಕೊಳ್ಳಲು ಕೊನೆಗೆ ಕಲ್ಯಾಣ ಮಂಟಪದ ಮೇಲ್ಛಾವಣಿ ಏರಿ ಅಲ್ಲಿ ಗ್ರಾಮಾಫೋನು ಹಚ್ಚಿದರು ಭುಜಂಗಾಚಾರ್ರು. ಜೋರಾಗಿ ಬರುತ್ತಿದ್ದ ಹಾಡುಗಳನ್ನು ಕೇಳಿ ಜನ ಕುಣಿದು ಕುಪ್ಪಳಿಸಿದರು. ಸುತ್ತಲಿನ ಗ್ರಾಮಗಳಾದ ಕದರಮಂಡಲಗಿ, ದೇವರಗುಡ್ಡ ಮುಂತಾದ ಕಡೆಗಳಿಂದ ತಮ್ಮ ತಮ್ಮ ಊರಿನ ಜಾತ್ರೆಗಳಲ್ಲಿ ಹಾಡು ಹಚ್ಚಲು ಬೇಡಿಕೆ ಬಂತು. ಹತ್ತು ರೂಪಾಯಿಯಿಂದ ಐವತ್ತು ರೂಪಾಯಿ ತನಕ ದಿನದ ಕೂಲಿಯ ಲೆಕ್ಕದಲ್ಲಿ. ಸಾಬರೂ ತಮ್ಮ ಮನೆಗಳ ನಿಕಾಹ್ ಗಳಲ್ಲಿ ಗ್ರಾಮಾಫೋನು ಹಚ್ಚಲು ಹೇಳಿದರು. ನೋಡ ನೋಡುತ್ತಿದ್ದಂತೆ ಒಂದು ತಿಂಗಳ ಅವಧಿಗೆ ಗ್ರಾಮಾಫೋನು ಮತ್ತೆ ಲೌಡ್ ಸ್ಪೀಕರ್ ಬುಕ್ ಆಗಿ ಹೋದವು. ಮುಂಗಡ ಹಣವೇ ಐದುನೂರು ರೂಪಾಯಿ ಕೂಡಿತ್ತು. ಶೀನಿ ತಂದುಕೊಟ್ಟ ಹಣವನ್ನು ಕೈಯಲ್ಲಿ ಹಿಡಿದು ಗದ್ಗದಿತರಾದರು ಭುಜಂಗಾಚಾರ್ರು. ಕಾಕಾಗೆ ಕೊಡಬೇಕಾದ ಹಣ, ಇಷ್ಟು ಬೇಗ ಕೂಡುವುದೆಂದು ಕನಸಿನಲ್ಲಿಯೂ ಎಣಿಸಿರಲಿಲ್ಲ ಆಚಾರ್ರು. ಕಾಕಾ ಊರಿಗೆ ಮರಳಲು ಇನ್ನೂ ಒಂದು ತಿಂಗಳು ಇದೆಯೆಂದು ಅರಿತಿದ್ದ ಭುಜಂಗಾಚಾರ್ರು ಅರ್ಧ ಹಣವನ್ನು ಮಾತ್ರ ತೆಗೆದಿಟ್ಟರು. ಉಳಿದ ಹಣದಲ್ಲಿ ಒಂದು ಒಳ್ಳೆಯ ಹಿಂಡುವ ಹಸು ಮತ್ತು ಕರುವನ್ನು ಮನೆಗೆ ತಂದರು. ಸುಂದರಾಬಾಯಿ ಬೆಳ್ಳನೆಯ ಹಸುವನ್ನು ನೋಡಿ ಸಂಭ್ರಮಿಸಿದರು. ಗೌರಿ ಎಂದು ಹೆಸರಿಟ್ಟರು. ಅದರ ಜೊತೆಯ ಕರುವೂ ಹೆಣ್ಣು ಕರುವೇ. ಇನ್ನೂ ಸ್ವಲ್ಪ ಸಮಯದಲ್ಲಿ ಮನೆಯಲ್ಲಿ ಎರಡು ಹಿಂಡುವ ಹಸುಗಳಾಗುತ್ತವೆಂದು ಸಂಭ್ರಮಿಸಿದರು. ಪ್ರತಿ ದಿನ ಬೆಳಿಗ್ಗೆ ಕೊಟ್ಟಿಗೆ ಸ್ವಚ್ಛ ಮಾಡಿ ಹಾಲು ಹಿಂಡುವ ಕೆಲಸ ಭುಜಂಗಾಚಾರ್ರದ್ದೇ. ಮೊಸರು ಕಡೆದು ಬೆಣ್ಣೆ ತೆಗೆಯಲು ಕೂಡುತ್ತಿದ್ದಳು ವಿಜಯಾಬಾಯಿ. ಮಕ್ಕಳು ಮುಟ್ಟುತ್ತಾರೆಂದು ಬೆತ್ತಲೆಯೇ ಓಡಾಡಲು ಬಿಡುತ್ತಿದ್ದರು. ನಾನ್ಯಾ ತಪ್ಪುಗಾಲು ಇಡುತ್ತಾ ತಾಯಿಯ ಹಿಂದೆ ಮುಂದೆ ಸುತ್ತಾಡುತ್ತಿದ್ದ. ಬೆಣ್ಣೆ ಕಡೆಯುತ್ತಿರುತ್ತಿದ್ದ ವಿಜಯಾಬಾಯಿ ಕೂತಲ್ಲಿಂದಲೇ ಒಂದು ಪುಟ್ಟ ಬೆಣ್ಣೆಯ ಮುದ್ದೆಯನ್ನು ಅವನ ಎತ್ತರಕ್ಕೆ ಸಿಗುವಂತೆ ಗೋಡೆಗೆ ಎಸೆಯುತ್ತಿದ್ದಳು. ಗೋಡೆಗೆ ಅಂಟಿರುತ್ತಿದ್ದ ಬೆಣ್ಣೆಯನ್ನು, ಸುಣ್ಣದ ಸಮೇತ ಕೆಬರಿ ಕೆಬರಿ ಮಗು ತಿನ್ನುತ್ತಿತ್ತು. ಅಂತೂ ಮತ್ತೆ ಮನೆಯಲ್ಲಿ ಹೈನು ಸಮೃದ್ಧಿಯಾಯಿತು. ಉಳಿದ ಹಣದಲ್ಲಿ ಶೆಟ್ಟಿಯ ಕಿರಾಣಿ ಅಂಗಡಿಯ ಸಾಲವನ್ನು ತೀರಿಸಿ ನಿರಾಳವಾದರು ಭುಜಂಗಾಚಾರ್ರು.

ಮುಂದಿನ ಆರು ತಿಂಗಳ ಕಾಲ ಅಣ್ಣ, ತಮ್ಮ ಇಬ್ಬರೂ ಕಾಲಿಗೆ ಚಕ್ರ ಕಟ್ಟಿಕೊಂಡವ ರಂತೆ ಊರೂರು ಸುತ್ತಿದರು. ಬೆಂಗಳೂರು ಬಿಟ್ಟರೆ ಹೆಚ್ಚು, ಕಡಿಮೆ ಎಲ್ಲಿಯೂ ಗ್ರಾಮಾಫೋನ್ ಮತ್ತು ಲೌಡ್ ಸ್ಪೀಕರ್ ಇರಲಿಲ್ಲ. ಹೋದಲೆಲ್ಲಾ ಹೊಸಾ ಬೇಡಿಕೆಗಳು ಬರುತ್ತಿದ್ದವು. ನಾಟಕ ಕಂಪನಿಯವರಿಂದಲೂ ಬೇಡಿಕೆ ಬಂತು. ಇತ್ತ ಭುಜಂಗಾಚಾರ್ರ ಗಡಿಯಾರದ ಅಂಗಡಿಗೂ ಜನ ಬರಲಾರಂಭಿಸಿದ್ದರು. ಅಲಾರಾಂ ಗಡಿಯಾರಗಳನ್ನು ಹುಬ್ಬಳ್ಳಿ, ಧಾರವಾಡದಲ್ಲಿ ಓದುವ ತಮ್ಮ ಮಕ್ಕಳಿಗಾಗಿ ತಂದೆಯಂದಿರು ಖರೀದಿ ಮಾಡತೊಡಗಿದ್ದರು. ಗೋಡೆ ಗಡಿಯಾರಗಳು ಶ್ರೀಮಂತರ ಮನೆಗೆ ಬಂದವು. ಪಾಕೀಟು ವಾಚುಗಳನ್ನು ಶೌಕೀನರು ಕೊಂಡರು. ಅವುಗಳ ಖರೀದಿ, ರಿಪೇರಿ ಹೀಗೆ ಅಂಗಡಿಯಲ್ಲಿ ಕೆಲಸ ಜಾಸ್ತಿಯಾಯಿತು. ಭುಜಂಗಾಚಾರ್ರು ಅಂಗಡಿಯಲ್ಲಿ ಇರಲೇಬೇಕಾಯಿತು. ಶೀನಿ ಒಬ್ಬನೇ ಲೌಡ್ ಸ್ಪೀಕರಿನ ಕೆಲಸ ನಿಭಾಯಿಸಬೇಕಾಯಿತು. ಎರಡೆರಡು ಕಡೆಗೆ ಹೋಗಬೇಕಾಗಿ ಬಂದರೆ ಕಷ್ಟವಾಗುತ್ತಿತ್ತು. ಆಗ ಭುಜಂಗಾಚಾರ್ರಿಗೆ ಓಣಿಯ ಒಂದಿಬ್ಬರು ಜಾಣ ಹುಡುಗರು ನೆನಪಾದದ್ದು. ಮೂಲೀ ಮನೆಯ ಗೋಖಲೆ ಮಾಸ್ತರರ ಮಕ್ಕಳು ರಾಮ, ಲಕ್ಷ್ಮಣ. ರಾಮ ಮೆಟ್ರಿಕ್ ಓದುತ್ತಿದ್ದ, ಲಕ್ಷ್ಮಣ ಮುಲ್ಕೀ. ಅವರ ಮನೆಯ ಪರಿಸ್ಥಿತಿಯೂ ಇವರಷ್ಟೇ. ಭುಜಂಗಾಚಾರ್ರು ರಾಮಣ್ಣನನ್ನು ಕರೆದರು.

ರಾಮಣ್ಣಾ ನನಗ ಲೌಡ್ ಸ್ಪೀಕರ್ ಹಚ್ಚಲಿಕ್ಕೆ ಹುಡುಗರು ಬೇಕಾಗ್ಯಾರ. ನೀ ಇದ್ದೂರಾಗ ಸಾಬರವು ನಿಕಾಹಕ್ಕ ಬುಲಾವ್ ಬಂದರ ಗ್ರಾಮಾಫೋನು ಲೌಡ್ ಸ್ಪೀಕರ್ರು ಒಯ್ದು ಹಚ್ಚತೀಯಾ. ಹಚ್ಚಿಬಂದ್ರ ಎರಡು ರೂಪಾಯಿ ಕೊಡತೇನಿ. ನಿಮ್ಮಪ್ಪನೂ ಈ ವರ್ಷ ರಿಟೈರ್ ಆಗ್ಯಾನ. ಮುಂದ ಧಾರವಾಡಕ್ಕ ಹೋಗಿ ಕಾಲೇಜು ಓದಬೇಕಂತಿ. ಉಪಯೋಗಕ್ಕ ಬರತಾವು ರೊಕ್ಕ. ಮಾಡತೀಯೇನು ಕೆಲಸಾ? ಕೇಳಿದರು. ರಾಮಣ್ಣ ಖುಷಿಯಿಂದಲೇ ಒಪ್ಪಿದ. ತನ್ನ ಜೊತೆಗೆ ಲಕ್ಷ್ಮಣನನ್ನೂ ಕರೆದುಕೊಂಡು ಹೋಗುವುದಾಗಿ ಹೇಳಿದ. ಅವನಿಗೆ ಭುಜಂಗಾಚಾರ್ರು ಗ್ರಾಮಾಫೋನು ಮತ್ತು ಲೌಡ್ ಸ್ಪೀಕರ್ ಅನ್ನು ಹಚ್ಚುವುದನ್ನು ಕಲಿಸಿಕೊಟ್ಟರು. ಅಂದಿನಿಂದ ಇದ್ದೂರಲ್ಲಿಯೇ ಸಾಬರ ನಿಕಾಹ್ ಇದ್ದರೆ, ಏನಾದರೂ ಉತ್ಸವಗಳಿದ್ದರೆ ತನ್ನ ಸೈಕಲ್ಲಿನ ಹಿಂದೆ ಗ್ರಾಮಾಫೋನು, ಮುಂದೆ ಲೌಡ್ ಸ್ಪೀಕರ್ ಕಟ್ಟಿಕೊಂಡು ಹೋಗುತ್ತಿದ್ದ ರಾಮಣ್ಣ. ನಿಕಾಹಗಳಲ್ಲಿ ರಾಮ ಮತ್ತು ಲಕ್ಷ್ಮಣ ಕಾರ್ಯಕ್ರಮ ಮುಗಿಯುವವರೆಗೂ ಕೂತು ಹಾಡು ಹಚ್ಚಿ ಬರುತ್ತಿದ್ದರು. ಹಾರೋರ ಹುಡುಗರು ತಮ್ಮಲ್ಲಿ ಊಟ ಮಾಡುವುದಿಲ್ಲವೆಂದು ಹಣ್ಣು ತಿನ್ನಲು ಕೊಡುತ್ತಿದ್ದರು ಮನೆಯವರು. ಅಂತೂ ಭುಜಂಗಾಚಾರ್ರ ಕೆಲಸ ತುಸು ಹಗುರವಾಗಿ, ಓದುವ ಹುಡುಗರಿಗೆ ಸಹಾಯವೂ ಆಯಿತು.

ಏನೇ ಆದರೂ ಗ್ರಾಮಾಫೋನಿನ ಒಳಗೆ ಕೂತು ಹಾಡುತ್ತಿರುವವರು ಯಾರು ಎಂಬುದು ಮಾತ್ರ ಜನರಿಗೆ ದೊಡ್ಡ ಒಗಟಾಗಿಯೇ ಉಳಿದಿತ್ತು. ಒಮ್ಮೆ ಗ್ರಾಮದೇವತೆ ಚಕ್ಕಿಮಕ್ಕಿ ದುರ್ಗವ್ವನ ಉತ್ಸವಕ್ಕೆ ರಾಮಣ್ಣ ಗ್ರಾಮಾಫೋನು ಒಯ್ದಿದ್ದ. ಸೈಕಲ್ಲಿನ ಕ್ಯಾರಿಯರು ಕಿತ್ತು ಗ್ರಾಮಾಫೋನು ನೆಲದ ಮೇಲೆ ಬಿದ್ದು ಬಿಟ್ಟಿತು. ರಾಮಣ್ಣ ಎಷ್ಟು ಪ್ರಯತ್ನ ಮಾಡಿದರೂ, ಗ್ರಾಮಾಫೋನು ನಡೆಯಲೇ ಇಲ್ಲ. ಲಕ್ಷ್ಮಣನನ್ನು ಅಲ್ಲಿಯೇ ಬಿಟ್ಟು, ಭುಜಂಗಾಚಾರ್ರ ಅಂಗಡಿಗೆ ಓಡಿದ ರಾಮಣ್ಣ. ಅವರಿಗೆ ಗ್ರಾಮಾಫೋನು ಕೆಳಗೆ ಬಿದ್ದ ವಿಷಯ ಹೇಳಿದ. ಉತ್ಸವ ಮಂಡಳಿ, ಹಾಡು ಹಚ್ಚಲೇಬೇಕೆಂದು ಹಠ ಹಿಡಿದಿದೆಯೆಂದೂ ಹೇಳಿದ. ನೋಡೋಣ ನಡಿಯೆಂದ ಭುಜಂಗಾಚಾರ್ರು, ತಮ್ಮ ಬಳಿ ಇದ್ದ ರಿಪೇರಿಯ ಸಾಮಾನುಗಳನ್ನು ತೆಗೆದುಕೊಂಡು ಹೋದರು. ಅಲ್ಲೇ ಗುಡಿಯ ಕಟ್ಟೆಯ ಮೇಲೆ ಕುಳಿತು ಗ್ರಾಮಾಫೋನು ಬಿಚ್ಚತೊಡಗಿದರು. ಆ ಗ್ರಾಮಾಫೋನಿನ ಒಳಗಿನಿಂದ ಯಾರು ಹೊರಗೆ ಬರುತ್ತಾರೆಯೋ ನೋಡಲು ಜನಜಾತ್ರೆ ನೆರೆಯಿತು. ಉತ್ಸವಕ್ಕೆ ಬಂದ ಜನ ಭುಜಂಗಾಚಾರ್ರ ಸುತ್ತ. ಗ್ರಾಮಾಫೋನನ್ನು ಕೈಯಲ್ಲಿ ಹಿಡಿದ ಭುಜಂಗಾಚಾರ್ರ ಧೈರ್ಯಕ್ಕೆ ಊರ ಜನ ಭಲೆಭಲೆಯೆಂದರು. ಭುಜಂಗಾಚಾರ್ರು ನಿಧಾನವಾಗಿ ಗ್ರಾಮಾ ಫೋನು ಬಿಚ್ಚಿದರು. ಅದರಿಂದ ಏನೂ ಹೊರಗೆ ಬರದಿದ್ದುದನ್ನು ನೋಡಿ ಜನರಿಗೆ ಆಶ್ಚರ್ಯ. ದೂರನಿಂತಿದ್ದ ಗುಂಪು ಧೈರ್ಯವಾಗಿ ಮುಂದೆ ಬಂತು. ಹತ್ತು ನಿಮಿಷ ಅದನ್ನು ತಡಕಾಡಿ, ಕಿತ್ತು ಹೋದ ಒಂದು ತಂತಿಯನ್ನು ಜೋಡಿಸಿದಾಕ್ಷಣ ಅದರಿಂದ ಧ್ವನಿ ಬರಲಾರಂಭಿಸಿತು. ಗ್ರಾಮಾಫೋನು ಮೊದಲಿನಂತೆಯೇ ಹಾಡತೊಡಗಿತ್ತು. ಈಗಂತೂ ರಾಮಣ್ಣ ಭುಜಂಗಾಚಾರ್ರ ಪಕ್ಕಾ ಅಭಿಮಾನಿಯಾಗಿಬಿಟ್ಟ. ರಾಮಣ್ಣ, ತನ್ನ ಪುಸ್ತಕಗಳನ್ನು ಅಂಗಡಿಯಲ್ಲಿ ಬಿಟ್ಟು ಹೋದಾಗಲೆಲ್ಲಾ ಅವನ ವಿಜ್ಞಾನ ಪುಸ್ತಕದಲ್ಲಿ ಎ.ಸಿ. ಕರೆಂಟು, ಡಿ.ಸಿ. ಕರೆಂಟಿನ ಕುರಿತಾದ ಪಾಠವನ್ನು ಓದಿ ಓದಿ ಅರಗಿಸಿಕೊಂಡಿದ್ದ ಭುಜಂಗಾಚಾರ್ರು ಆ ಜ್ಞಾನವನ್ನು ಕಾರ್ಯರೂಪಕ್ಕೆ ತಂದು ಅವನಿಗೆ ಒಬ್ಬ ದೊಡ್ಡ ವಿಜ್ಞಾನಿಯಂತೆ ಕಂಡರು. ರಾಮಣ್ಣನ ಹೆಗಲ ಮೇಲೆ ಕೈ ಇಟ್ಟು, ಮೃದುವಾಗಿ ಒತ್ತಿ ಅಂಗಡಿಗೆ ಹೊರಟು ಹೋದರು.

ಭುಜಂಗಾಚಾರ್ರು ಅಲ್ಲಿ ಏನೂ ಮಾತನಾಡಲಿಲ್ಲವಾದರೂ ತಮ್ಮ ಪ್ರೀತಿಯ ಗ್ರಾಮಾಫೋನು ಸೈಕಲ್ಲಿನ ಮೇಲಿನಿಂದ ಬಿದ್ದ ಘಟನೆಯಿಂದ ಅವರಿಗೆ ತುಸು ಬೇಜಾರಾಗಿತ್ತು. ಗ್ರಾಮಾಫೋನು ಮತ್ತು ಲೌಡ್ ಸ್ಪೀಕರ್ ಸಾಗಣೆಗೆ ಏನಾದರೂ ವ್ಯವಸ್ಥೆ ಮಾಡಬೇಕೆಂದು ಅವರಿಗೆ ಅನ್ನಿಸತೊಡಗಿತ್ತು.

Ask the Editor

● ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ
ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ನನ್ನದು ಬರೆಯದೇ ಇರಲಾಗದ ಪಿಂಡ!

ಪೂಜಾ ಶರ್ಮ, ಶಿವಮೊಗ್ಗ

- **ಭಟ್ಟರೇ, ನಾನು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿದ್ದೇನೆ. ಕೆಲವು ಸಂಪಾದಕರು ಬರೆಯುವುದೇ ಇಲ್ಲ. ನೀವು ಪ್ರತಿದಿನವೂ ಪುಟಗಟ್ಟಲೆ ಬರೆಯುವುದನ್ನು ಓದುತ್ತಾ ಬಂದಿದ್ದೇನೆ. ಪತ್ರಿಕೋದ್ಯಮದ ಉಪನ್ಯಾಸಕರು ಸಹ ತಾವು ಕಳೆದ 25 ವರ್ಷಗಳಿಂದ ಭಟ್ಟರ ಅಂಕಣಗಳನ್ನು ಓದುತ್ತಾ ಬಂದಿದ್ದೇವೆ ಎಂದು ಕ್ಲಾಸಿನಲ್ಲಿ ಹೇಳುತ್ತಾರೆ. ನೀವೇಕೆ ಬರೆಯುತ್ತೀರಿ ಮತ್ತು ಉಳಿದ ಸಂಪಾದಕರು ಯಾಕೆ ಬರೆಯುವುದಿಲ್ಲ? ಸಂಪಾದಕರಾದವರು ಬರೆಯದಿದ್ದರೂ ಆಗುವುದಾ? ಈ ಪ್ರಶ್ನೆ ಹಲವು ದಿನಗಳಿಂದ ನನ್ನನ್ನು ಕಾಡುತ್ತಿದೆ. ನನಗೆ ನಿಮ್ಮ ಉತ್ತರ ಬೇಕು.**

– ಪೂಜಾ ಅವರೇ, ಪತ್ರಿಕೆಯ ಸಂಪಾದಕರುಗಳಿಗೆ ಅವರದ್ದೇ ಆದ ನಿರ್ದಿಷ್ಟ ಜವಾಬ್ದಾರಿಗಳು ಹಾಗೂ ಕೆಲಸಕಾರ್ಯಗಳು ಇರುತ್ತವೆ. ಇದು ಪತ್ರಿಕೆಯಿಂದ ಪತ್ರಿಕೆಗೆ ವ್ಯತ್ಯಾಸವಾಗಬಹುದು. ಇದು ಪತ್ರಿಕೆಯ ಆಡಳಿತ ಮಂಡಳಿಯನ್ನೂ ಅವಲಂಬಿಸಿರುತ್ತದೆ. ಸಂಪಾದಕರಾದವರು ನಿತ್ಯವೂ ಬರೆಯಲೇ ಬೇಕೆಂದೇನೂ ಇಲ್ಲ. ನಮ್ಮ ದೇಶದ ನಂಬರ್ ಒನ್ ದೈನಿಕವಾದ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ ಸಂಪಾದಕರು ಯಾರು ಎಂಬುದು ನಿಮಗೆ ಗೊತ್ತಿದೆಯಾ? ಕಳೆದ ಎರಡು ದಶಕಗಳಲ್ಲಿ ಅವರ ಹೆಸರಿನಲ್ಲಿ ಪ್ರಕಟವಾದ ಯಾವುದಾದರೂ ಒಂದು ಲೇಖನವನ್ನುಓದಿದ್ದರೆ ಅದನ್ನು ತಾವು ಉಲ್ಲೇಖಿಸಬಹುದಾ? ಆ ಪತ್ರಿಕೆಯ ಸಂಪಾದಕರ ಹೆಸರು ಯಾವ ಪುಟದಲ್ಲಿ ಪ್ರಕಟವಾಗುತ್ತದೆ ಎಂಬುದನ್ನು ತಿಳಿಸಬಹುದಾ? ಪತ್ರಿಕೆಯಲ್ಲಿ ಅವರ ಫೋಟೋ ಆಗಲಿ ಲೇಖನವಾಗಲಿ ನೋಡಿದ್ದು, ಓದಿದ್ದು ನೆನಪಿದೆಯಾ?

ಗೊತ್ತಿರಲಿ, ಆ ಪತ್ರಿಕೆಯ ಸಂಪಾದಕರಾದವರು ಬರೆಯುವುದೇ ಇಲ್ಲ, ಯಾರು ಬರೆಯುವುದಿಲ್ಲವೋ ಅವರನ್ನೇ ಆ ಪತ್ರಿಕೆಯ ಸಂಪಾದಕರನ್ನಾಗಿ ನೇಮಿಸುತ್ತಾರೆ ಎಂಬುದು ಸಹ ಅಷ್ಟೇ ಸತ್ಯ. ಸಂಪಾದಕರಾದವರು ಇಡೀ ಸಂಸ್ಥೆಯಲ್ಲಿ ಕೆಲಸ ಮಾಡುವ ಸಂಪಾದಕೀಯ ಸಿಬ್ಬಂದಿಯ ಮೇಲ್ವಿಚಾರಕರಾಗಿ (Men Manager) ಕಾರ್ಯ ನಿರ್ವಹಿಸಬೇಕು ಎಂದು ಆಡಳಿತ ಮಂಡಳಿ ಅಪೇಕ್ಷಿಸಿದರೆ, ಸಂಪಾದಕರು ಅದೇ ರೀತಿ ವರ್ತಿಸುತ್ತಾರೆ.

ನೀವೇನನ್ನು ಬರೆಯಬಾರದು ಎಂದು ಸಂಪಾದಕರುಗಳಿಗೆ ಆಡಳಿತ ಮಂಡಳಿ ಪರೋಕ್ಷವಾಗಿ ಸೂಚಿಸಿರುತ್ತದೆ. ಸಂಪಾದಕ ಬರೆದರೆಷ್ಟು ಬಿಟ್ಟರೆಷ್ಟು ಎಂಬುದು ಅಂಥ ಆಡಳಿತ ಮಂಡಳಿಯ ಧೋರಣೆಯಾಗಿರುತ್ತದೆ. ಹೀಗಾಗಿ ಅಷ್ಟೇನೂ ಹೆಸರುವಾಸಿಯಲ್ಲದ, ಆದರೆ ಪತ್ರಕರ್ತರ ದಂಡನ್ನು ನಿಭಾಯಿಸಿಕೊಂಡು ಹೋಗುವ ಚಾಕಚಕ್ಯತೆ ಇರುವವರನ್ನು ಅಲ್ಲಿ ಸಂಪಾದಕರನ್ನಾಗಿ ನೇಮಿಸಿಕೊಂಡಿರುತ್ತಾರೆ. ಸಂಪಾದಕರಾಗಿಯೂ ಬರೆಯುವುದಿಲ್ಲ ಎಂಬುದು ಅಂಥವರ ಅರ್ಹತೆಯೂ ಆಗಿರುತ್ತದೆ. ಏನಾದರೂ ಬರೆದು ವಿವಾದಕ್ಕೊಳಗಾಗಿ ಎಡವಟ್ಟು ಮಾಡಿಕೊಂಡು ಹುದ್ದೆಗೆ ರಾಜೀನಾಮೆ ಕೊಡುವ ಪರಿಸ್ಥಿತಿ ನಿರ್ಮಿಸಿಕೊಳ್ಳುವ ಬದಲು, ಏನನ್ನೂ ಬರೆಯದೇ ಸುರಕ್ಷಿತವಾಗಿ ಇರುವುದೇ ಒಳ್ಳೆಯದು ಎಂದು ಆ ಪತ್ರಿಕೆಯ ಸಂಪಾದಕರು ಭಾವಿಸಿರುತ್ತಾರೆ.

ಅಂತಹ ಪತ್ರಿಕೆಗಳಿಗೆ ಸಂಪಾದಕರಾಗಿ ನೇಮಿಸಿಕೊಳ್ಳುವಾಗಲೇ, ಅವರು ಏನನ್ನೂ ಬರೆಯುವುದಿಲ್ಲ ಎಂಬುದನ್ನು ದೃಢಪಡಿಸಿಕೊಂಡಿರುತ್ತಾರೆ. ಹೀಗಾಗಿ ಸಂಪಾದಕರು ಏನನ್ನೂ ಬರೆಯುವುದಿಲ್ಲ ಎಂದು ಅವರ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ. ಈಗಿರುವ ಸಂಪಾದಕರ ನಂತರ ಬೇರೆ ಯಾರೇ ಬಂದರೂ ಅವರು ಬರೆಯಲು ಹೋಗುವುದಿಲ್ಲ. ಕಾರಣ ಸಂಪಾದಕರಾದವರು ಬರೆಯಬಾರದು ಎಂಬ ಸಂಪ್ರದಾಯವನ್ನು ಈಗಿನವರು ಹಾಕಿಕೊಟ್ಟಿದ್ದಾರೆ. ಅದೇ ಸಂಪ್ರದಾಯವನ್ನು ಪಾಲಿಸಿಕೊಂಡು ಹೋದರೆ ಸಾಕು ಎಂದು ಮುಂದೆ ಬರುವವರು ಭಾವಿಸುತ್ತಾರೆ.

ಸಂಪಾದಕರಾದವರು ಬರೆಯುತ್ತಾ ಕುಳಿತುಕೊಂಡರೆ, ಉಳಿದ ಕೆಲಸಗಳನ್ನು ಮಾಡುವವರು ಯಾರು? ಸಂಪಾದಕರು ಬರೆದರೆ ಅವರು ಪತ್ರಿಕೆಯ ಖರ್ಚಿನಲ್ಲಿ ಜನಪ್ರಿಯರಾಗಬಹುದು ಎಂದು ಕೆಲವು ಆಡಳಿತ ಮಂಡಳಿಗಳು ಯೋಚಿಸುವುದುಂಟು. ಹೀಗಾಗಿ ಸಂಪಾದಕರಾದವರು ಈ ಯಾವ ಉಸಾಬರಿಯೇ ಬೇಡವೆಂದು ತಮ್ಮ ಪಾಡಿಗೆ ಬರೆಯದೇ ಇರುತ್ತಾರೆ. ಕೆಲವು ಸಲ ಸಂಪಾದಕರ ಬರಹ ಅವರ ನೌಕರಿಗೆ ಸಂಚಕಾರ ತರಲೂಬಹುದು. ಇವೆಲ್ಲವುಗಳಿಂದ ಮುಕ್ತವಾಗಿರಬೇಕೆಂದರೆ, ಬರೆಯದೇ ಇರುವುದು. ಬರೆದರೆ ತಾನೇ ಎಲ್ಲ ಸಮಸ್ಯೆಗಳಿಗೆ ಕಾರಣ? ಈಗಿನ ದಿನಗಳಲ್ಲಿ ಸಂಪಾದಕರಾದವರಿಗೆ ಬರೆಯುವುದರ ಹೊರತಾಗಿ, ಉಳಿದ ಅನೇಕ ಕೆಲಸಗಳಿರುತ್ತವೆ. ಅವರು ಆ ಕೆಲಸಗಳಲ್ಲಿಯೇ ಹೆಚ್ಚುಮಗ್ನರಾಗಿರುತ್ತಾರೆ.

ನನ್ನದು ಬೇರೆ ಪಿಂಡ ಬಿಡಿ. ಬರೆಯದೇ ಇರಲಾಗದ ಪಿಂಡ. ನನಗೆ ಕೊಡಬಹುದಾದ ದೊಡ್ಡ ಶಿಕ್ಷೆ ಅಂದ್ರೆ ಏನನ್ನೂ ಬರೆಯಬಾರದು ಎಂದು ಆದೇಶಿಸುವುದು. ಇನ್ನೊಂದು ಸಂಗತಿ ಗೊತ್ತಿರಲಿ, ಏನನ್ನೂ ಬರೆಯದೇ ಹಾಗೆ ಎದ್ದು ಹೋಗಿಯೂ ಉತ್ತಮ ಸಂಪಾದಕ ಎಂದು ಕರೆಸಿಕೊಂಡವರಿದ್ದಾರೆ. ಅಂಥವರು ಓದುಗರಿಗಿಂತ ಆಡಳಿತ ಮಂಡಳಿಗೆ ಹೆಚ್ಚು ಉತ್ತಮರಾಗಿರುತ್ತಾರೆ ಎಂಬುದು ಸಹ ಅಷ್ಟೇ ಸತ್ಯ.

★★★

ರಮೇಶ, ಚಿತ್ರದುರ್ಗ

- **ಭಟ್ರೇ, ನಿಮಗೆ ದಿನಕ್ಕೆ ಎಷ್ಟು ಪ್ರಶ್ನೆಗಳು ಬರುತ್ತವೆ? ಎಲ್ಲ ಪ್ರಶ್ನೆಗಳಿಗೆ ನೀವೇ ಉತ್ತರಿಸುತ್ತೀರಾ? ನಿಮ್ಮ ಸಹಾಯಕ್ಕೆ ಯಾರಾದರೂ ಸಹಾಯಕರು ಅಥವಾ ಸೆಕ್ರೆಟರಿಗಳನ್ನು ನೀವು ನೇಮಕ ಮಾಡಿಕೊಂಡಿದ್ದೀರಾ? ಎಲ್ಲ ಕೆಲಸಗಳನ್ನು ನೀವೊಬ್ಬರೇ ಹೇಗೆ ಮಾಡುತ್ತೀರಿ? ದಯವಿಟ್ಟು ತಿಳಿಸಿ.**

– ರಮೇಶ ಅವರೇ, ಈ ಅಂಕಣಕ್ಕೆ ಪ್ರತಿದಿನ ಹದಿನೈದು-ಇಪ್ಪತ್ತು ಪ್ರಶ್ನೆಗಳಾದರೂ ಬರುತ್ತವೆ. ಭಟ್ಟರ ಸ್ಕಾಚ್ ಅಂಕಣಕ್ಕೆ ಏನಿಲ್ಲವೆಂದರೂ ಮೂವತ್ತು-ನಲವತ್ತು ಪ್ರಶ್ನೆಗಳು ಬರುತ್ತವೆ. ಇವುಗಳ ಹೊರತಾಗಿ, ನನಗೆ ಏನಿಲ್ಲವೆಂದರೂ ಕನಿಷ್ಠ ಐವತ್ತು ಇಮೇಲ್‌ಗಳಾದರೂ ಬರುತ್ತವೆ. ವಾಟ್ಸಾಪ್ ಮೆಸೇಜ್ ಬೇರೆ ಬಿಡಿ. ಈ ಎಲ್ಲ ಪ್ರಶ್ನೆಗಳನ್ನು ನಾನೇ ಖುದ್ದಾಗಿ ಓದುತ್ತೇನೆ. ನನಗೆ ಬರುವ ಎಲ್ಲ ಇಮೇಲ್‌ಗಳಿಗೂ ನಾನೇ ಉತ್ತರ ಬರೆಯುತ್ತೇನೆ. ನನಗೆ ಇಮೇಲ್ ಮಾಡಿಯೂ ಉತ್ತರ ಪಡೆಯದವರಿದ್ದರೆ, ಅವರು ಹೇಳಬಹುದು.

Ask the Editor ಅಂಕಣಕ್ಕೆ ಬರುವ ಎಲ್ಲ ಪ್ರಶ್ನೆಗಳಿಗೆ ಮತ್ತು ಭಟ್ಟರ ಸ್ಕಾಚ್‌ನಲ್ಲಿ ಕೇಳುವ ಎಲ್ಲ ಪ್ರಶ್ನೆಗಳಿಗೆ ನಾನೇ ಖುದ್ದಾಗಿ ಉತ್ತರಿಸುತ್ತೇನೆ. ಈ ಅಧಿಕಾರವನ್ನು ನಾನು ಬೇರೆ ಯಾರಿಗೂ ಕೊಟ್ಟಿಲ್ಲ, ನನ್ನ ಹೆಸರಿನಲ್ಲಿ ಬೇರೆಯವರು ಉತ್ತರಿಸುವ ಅಥವಾ ಹೆಸರು ನನ್ನದು, ಬಸಿರು ಇನ್ಯಾರದ್ದೋ ಎಂಬ ವ್ಯವಹಾರವೇ ಇಲ್ಲ, ನಾನು ಇಲ್ಲಿ ತನಕ ಬಾಡಿಗೆ ಲೇಖಕರು, Ghost Writers, ಅನಾಮಧೇಯ ಬರಹಗಾರರನ್ನು ಇಟ್ಟುಕೊಂಡಿಲ್ಲ ಅಥವಾ ಅವರ ನೆರವನ್ನು ಪಡೆದಿಲ್ಲ, ಅಷ್ಟಕ್ಕೂ ನನಗೆ ಸೆಕ್ರೆಟರಿಗಳಿಲ್ಲ, ನನ್ನ ಜತೆ ಏಗುವುದು ಬಹಳ ಕಷ್ಟ. ಒಂದಿಬ್ಬರು ಬಂದವರು ಒಂದು ತಿಂಗಳು ಸಹ ಇರಲಾಗದೇ ಹೊರಟು ಹೋದರು.

ಸಾಮಾನ್ಯವಾಗಿ ಪತ್ರಿಕೆಯ ಸಂಪಾದಕರು ತಮ್ಮ ಕೆಲಸವನ್ನು ಹಗುರ ಮಾಡಿಕೊಳ್ಳಲು ಸಹಾಯಕರನ್ನು ಇಟ್ಟುಕೊಳ್ಳುತ್ತಾರೆ. ಆ ಸಹಾಯಕರು ಸಂಪಾದಕರು ಬಯಸುವವಎಲ್ಲ ಮಾಹಿತಿಯನ್ನು ಕಾಲಕಾಲಕ್ಕೆ ಒದಗಿಸುತ್ತಾ, ಸಂಪಾದಕರ ಬರೆಯುವ ಕೆಲಸವನ್ನು ಸರಳ, ಸರಾಗಗೊಳಿಸುತ್ತಾರೆ. ಆದರೆ ಇವೆರಡೂ ನನ್ನಿಂದ ಆಗದ್ದು. ಇಲ್ಲಿ ತನಕ ನಾನು ಯಾವ ಸಹಾಯಕರನ್ನೂ ಇಟ್ಟುಕೊಂಡಿಲ್ಲ, ನನಗೆ ಬೇಕಾದವೆಲ್ಲಾ ಮಾಹಿತಿಗಳನ್ನು ನಾನೇ ಸಂಗ್ರಹಿಸುತ್ತೇನೆ. ಸಂದೇಹ ಬಂದಾಗ ಸಂಬಂಧಪಟ್ಟವರನ್ನು ನೇರವಾಗಿ ಸಂಪರ್ಕಿಸುತ್ತೇನೆ. ಬೇರೆಯವರ ಸಹಾಯವನ್ನು ಪಡೆದು ಲೇಖನ ಅಥವಾ ಅಂಕಣವನ್ನು ಬರೆಯುವುದೆಂದರೆ ಎಂಜಲುಬಾಳೆಯ ಮೇಲೆ ಊಟ ಮಾಡಿದ ಹಾಗೆ. ಅಂಥ ಊಟ ಎಷ್ಟೇ ರುಚಿಕಟ್ಟಾಗಿರಲಿ ಅದು ಮೈಗೆ ಹತ್ತುವುದಿಲ್ಲ ಎಂಬುದು ನನ್ನ ಸ್ಪಷ್ಟ ನಿಲುವು.

ಯಾವುದೇ ಅಂಕಣವಿರಲಿ, ಅದು ಸಣ್ಣ ಪ್ರಮಾಣದ ಶೋಧನೆ, ಅಧ್ಯಯನ, ಸುತ್ತಾಟ, ಸಂವಾದವನ್ನು ಅಪೇಕ್ಷಿಸುತ್ತದೆ. ಇಂಥ ಕೆಲಸಗಳಿಗೆ ಸಹಾಯಕರಿದ್ದರೆ, ನಮ್ಮ ಕೆಲಸ ಸಲೀಸು. ಆದರೆ ನಾನು ಈ ವಿಷಯದಲ್ಲಿ ಇಲ್ಲಿ ತನಕ ರಾಜೀ ಆಗಿಲ್ಲ. ನಾನೇ ಎಲ್ಲವನ್ನೂ ಮಾಡಿಕೊಳ್ಳುತ್ತೇನೆ. ಬೇರೆಯವರ ತೊಡೆ ಮೇಲೆ ಬತ್ತಿ ಹೊಸೆಯುವ ಹವ್ಯಾಸ ಇಲ್ಲವೇ ಇಲ್ಲ. ನಮ್ಮ ಪಾಲಿನ ಊಟವನ್ನು ಬೇರೆಯವರು ಮಾಡಿದರೆ, ನಮಗೆ ಹೊಟ್ಟೆ ತುಂಬುವುದಿಲ್ಲ, ನಮ್ಮ ಊಟವನ್ನು ನಾವೇ ಮಾಡಬೇಕು. ಈ ಮಾತು ಬರಹಕ್ಕೂ ಅನ್ವಯ ಎಂದು ಪ್ರತ್ಯೇಕ ಹೇಳಬೇಕಿಲ್ಲ.

★★★

ಮೋಹನ್ ಎಂ., (ಇಮೇಲ್ ಮೂಲಕ)

- **ನಾನು ಸಣ್ಣವನಿದ್ದಾಗ ನನ್ನ ತಂದೆ-ತಾಯಂದಿರು, ಆಹಾರವನ್ನು ಚೆನ್ನಾಗಿ ಅಗಿದು ತಿನ್ನಬೇಕೆಂದು ಹೇಳುತ್ತಿದ್ದರು. ಇದನ್ನು ಈಗಲೂ ಪಾಲಿಸಿಕೊಂಡು ಬಂದಿರುವೆ. ಆದರೆ ಮದುವೆಯಾದ ಮೇಲೆ, ಈ ಶಬ್ದ ನನ್ನ ಹೆಂಡತಿಗೆ ರುಚಿಸುತ್ತಿಲ್ಲ! ಶಬ್ದ ಮಾಡದೇ ತಿನ್ನಿ ಎಂದು ಹೇಳುತ್ತಿರುತ್ತಾಳೆ. ಚಿಕ್ಕಂದಿನಿಂದಲೇ ಅಭ್ಯಾಸವಾಗಿರುವುದರಿಂದ ಇದನ್ನು (ಶಬ್ದ ಮಾಡದೇತಿನ್ನುವುದು) ಬಿಡಲು ಆಗುತ್ತಿಲ್ಲ. ನನಗೆ ಊಟವಾದ ಮೇಲೆ ತೇಗುವ ಅಭ್ಯಾಸವೂ ಇದೆ. ನಮ್ಮ ಅಪ್ಪ ಪ್ರತಿ ಬಾರಿ ತೇಗಿದಾಗ, ನಮ್ಮಮ್ಮನ ಮುಖದಲ್ಲಿ ಸಾರ್ಥಕ ಭಾವ ಕಾಣುತ್ತಿತ್ತು (ಅಡುಗೆ ಚೆನ್ನಾಗಿದೆಯೆಂದು). ಆದರೆ, ಈಗ ತೇಗುವುದೂ ನನ್ನಹೆಂಡತಿಗೆ ಇಷ್ಟವಿಲ್ಲ. ಭಟ್ಟರೇ ಇದಕ್ಕೇನು ಪರಿಹಾರ ಸೂಚಿಸುವಿರಿ?**

– ಮೋಹನ್ ಅವರೇ, ನಾನು ಆಗಾಗ ಹೇಳುತ್ತಿರುತ್ತೇನೆ – ಸೆಲೂನ್ ಶಾಪ್‌ಗೆ ಹೋದಾಗ ಕ್ಷೌರಿಕರು ಹೇಳಿದ ಹಾಗೆ ಕೇಳಬೇಕು. ವೇದಿಕೆ ಮೇಲೆ ಫೋಟೋಗ್ರಾಫರುಗಳು ಹೇಳಿದ ಹಾಗೆ ಕೇಳಬೇಕು. ಪೂಜೆ ಮಾಡುವಾಗ ಪುರೋಹಿತರು ಹೇಳಿದ ಹಾಗೆ ಕೇಳಬೇಕು. ಆಫೀಸಿನಲ್ಲಿ ಬಾಸ್ ಹೇಳಿದಂತೆ ಕೇಳಬೇಕು. ಮನೆಗೆ ಬಂದಾಗ ಹೆಂಡತಿ ಹೇಳಿದಂತೆ ಕೇಳಬೇಕು. ಹೀಗೆ ಮಾಡಿದರೆ ನೀವು ಬದುಕಿನಲ್ಲಿ ನೆಮ್ಮದಿಯಿಂದ ಮತ್ತು ತಲೆಬಿಸಿ ಇಲ್ಲದೆ ಹಾಯಾಗಿ ಇರುತ್ತೀರಿ. ಕೇಳುವುದು ಯಾವತ್ತೂ ಸುರಕ್ಷಿತ. ಹೇಳುವುದು ಸಮಸ್ಯೆಗೆ ಮೂಲ. ಅದರಲ್ಲೂ ಹೇಳಿದಂತೆ ಮಾಡುವುದು ಅಥವಾ ಕೇಳಿದಂತೆ ನಡೆಯುವುದು ಅತ್ಯಂತ ಸುರಕ್ಷಿತ. ಹೀಗೆ ಮಾಡಿದರೆ ಬದುಕಿನಲ್ಲಿ ನಿಮಗೆ ಯಾವ ಸಮಸ್ಯೆಯೂ ಎದುರಾಗುವುದಿಲ್ಲ, ನನ್ನ ಈ ಸಲಹೆಯನ್ನು ಪಾಲಿಸಿ ನಿಮಗೇ ಅದು ಅನುಭವಕ್ಕೆ ಬರುತ್ತದೆ.

ಇನ್ನು ನೀವು ಹೇಳಿದ ವಿಷಯ. ನಮ್ಮ ಹಿರಿಯರು ಆಹಾರವನ್ನು ಚೆನ್ನಾಗಿ ಅಗಿದು ತಿನ್ನಬೇಕೆಂದು ಹೇಳುತ್ತಿದ್ದುದು ನಿಜ. ಅಗಿದು ತಿನ್ನಬೇಕು ಎಂದು ಹೇಳಿದ ಮಾತ್ರಕ್ಕೆ ತಿನ್ನುವಾಗ ಸದ್ದು ಮಾಡಬೇಕು ಎಂದು ಹೇಳಿಲ್ಲವಲ್ಲ. ಅಗಿದು ತಿನ್ನುವಾಗ ಬಾಯಿ ಮುಚ್ಚಿಕೊಂಡಿದ್ದರೆ ಯಾವ ಶಬ್ದವೂ ಬರುವುದಿಲ್ಲ, ಶಬ್ದ ಬರುವಂತೆ ಆಹಾರ ಸೇವಿಸಿದರೆ ಪಕ್ಕದಲ್ಲಿ ಇದ್ದವರಿಗೆ ಕಿರಿಕಿರಿ ಆಗಬಹುದು. ಆ ಕಾರಣದಿಂದ ನಿಮ್ಮ ಪತ್ನಿ ನಿಮ್ಮ ಬಗೆಗಿನ ಒಳ್ಳೆಯ ಭಾವನೆಯಿಂದ ಹಾಗೆ ಹೇಳಿದ್ದಾಳೆ. ಆಹಾರ ಸೇವಿಸುವಾಗ ನಮ್ಮಿಂದ ಶಬ್ದ ಬರದಂತೆ ನೋಡಿಕೊಳ್ಳುವುದು ಒಳ್ಳೆಯ ಶಿಷ್ಟಾಚಾರವೇ. ಈ ವಿಷಯದಲ್ಲಿನಾನು ಸಹ ನಿಮ್ಮ ಹೆಂಡತಿಯ ಪರವೇ.

ಕೆಲವರು ಊಟವಾದ ಮೇಲೆ ಡರ್ ಎಂದು ತೇಗುತ್ತಾರೆ. ಇದು ಅಡುಗೆ ಚೆನ್ನಾಗಿದೆ ಎಂಬುದರ ಸೂಚಕವೇನೂ ಅಲ್ಲ, ಹೊಟ್ಟೆ ತುಂಬ ಊಟ ಮಾಡಿದ್ದೀರಿ ಎಂಬುದನ್ನಷ್ಟೇ ಅದು ಸೂಚಿಸುತ್ತದೆ. ಊಟ ಸಮ ಪ್ರಮಾಣದಲ್ಲಿದ್ದರೆ ನಿಮಗೆ ತೇಗು ಬರುವುದಿಲ್ಲ. ಊಟ ಜಾಸ್ತಿಯಾದಾಗಲೇ ಆ ರೀತಿಯ ಸದ್ದು ಬರುತ್ತದೆ. ಅಂದರೆ ನೀವು ತೇಗಿದಾಗ, ಅಗತ್ಯಕ್ಕಿಂತ ಹೆಚ್ಚು ಆಹಾರವನ್ನು ಸೇವಿಸಿದ್ದೀರಿ ಎಂಬ ಭಾವನೆ, ಉಳಿದವರಲ್ಲಿ ಮೂಡುತ್ತದೆ. ಈ ಕಾರಣದಿಂದ ಸಾಮಾನ್ಯವಾಗಿ ಯಾರೂ ಇತರರಿಗೆ ಕೇಳಿಸುವ ಹಾಗೆ ತೇಗುವುದಿಲ್ಲ. ನಿಮ್ಮ ಬಗ್ಗೆ ಯಾರೂ ತಪ್ಪು ತಿಳಿಯಬಾರದು ಎಂಬ ಕಾರಣದಿಂದ ಹೆಂಡತಿ ಹಾಗೆ ಹೇಳಿರಬಹುದು. ನಿಮ್ಮ ತಂದೆ-ತಾಯಿಯರ ಕಾಲದಲ್ಲಿ ಆಚರಣೆಯಲ್ಲಿರುವ ಅಥವಾ ಸಹ್ಯವಾಗುವ ಸಂಪ್ರದಾಯಗಳು ಅಥವಾ ಶಿಷ್ಟಾಚಾರಗಳು ಈಗಿನ ಕಾಲದಲ್ಲೂ ಸ್ವೀಕೃತವಾಗಬೇಕು ಎಂದೇನೂ ಇಲ್ಲವಲ್ಲ! ನಮ್ಮ ನಡತೆ ಮತ್ತು ಶಿಷ್ಟಾಚಾರಗಳನ್ನು ಆಗಾಗ ಬದಲಿಸಿಕೊಳ್ಳುವುದರಲ್ಲಿ ತಪ್ಪೇನೂ ಇಲ್ಲ. ಈ ವಿಷಯದಲ್ಲೂ ನಾನು ನಿಮ್ಮ ಹೆಂಡತಿಯ ಪರವೇ.

ನಿಮ್ಮ ಹೆಂಡತಿ ಯಾಕಾಗಿ ನಿಮ್ಮ ಈ ಎರಡು ಅಭ್ಯಾಸಗಳಿಗೆ ವಿರೋಧ ವ್ಯಕ್ತಪಡಿಸುತ್ತಾರೆ ಎಂಬುದನ್ನು ನೀವು ಆಲೋಚಿಸಬೇಕಿತ್ತು. ಇಲ್ಲಿ ಆಕೆಗೆ ನಿಮ್ಮ ಬಗ್ಗೆ ಇರುವ ಕಾಳಜಿಯನ್ನು ಗ್ರಹಿಸಬೇಕಿತ್ತು. ತನ್ನ ಗಂಡ ಎಲ್ಲರ ಮುಂದೆ ಗುಗ್ಗು ಅಥವಾ ಅನಾಗರಿಕ ಎಂದು ಅನಿಸಿಕೊಳ್ಳಬಾರದು ಎಂಬುದಷ್ಟೇ ಆಕೆಯ ಕಳಕಳಿ, ಹೊರತು ಇದರಲ್ಲಿ ನಿಮ್ಮ ತಂದೆ-ತಾಯಿ ಹಾಕಿಕೊಟ್ಟ ಸಂಪ್ರದಾಯವನ್ನು ಮುರಿಯಬೇಕು ಎಂಬ ಧಿಕ್ಕಾರದ ಮನೋಭಾವವೇನೂ ಇಲ್ಲ. ಕೆಲವು ವಿಚಾರಗಳಲ್ಲಿ ಹೆಂಡತಿ ಹೇಳಿದಂತೆ ಪಾಲಿಸುವುದರಲ್ಲಿ ತಪ್ಪೇನೂ ಇಲ್ಲ, ಹಾಗೆ ಮಾಡಿದರೆ, ನೀವು ನಿಮ್ಮತಂದೆ-ತಾಯಿಯನ್ನು ವಿರೋಧಿಸಿದಂತೆಯೂ ಆಗುವುದಿಲ್ಲ.

★★★

ಮಾಲತಿ ವಿನೋದ್, ಬೆಂಗಳೂರು

- **ಸಂಪಾದಕರೇ, ನನಗೆ 22 ವರ್ಷದ ಮಗಳಿದ್ದಾಳೆ. ನೋಡಲು ಸುಂದರವಾಗಿದ್ದಾಳೆ. ಅವಳು ಮನೆಯಿಂದ ಹೊರಗಡೆ ಹೊರಟರೆ ಸಾಕು, ನನಗೆ ಇನ್ನಿಲ್ಲದ ಟೆನ್ಶನ್. ಈಗಿನ ಕಾಲದ ಹುಡುಗರೆಲ್ಲ ಅವಳನ್ನೇ ದುರುಗುಟ್ಟಿ ನೋಡುತ್ತಾರೆ. ಅವಳು ವಾಪಸ್ ಮನೆ ಸೇರುವ ತನಕ ನನಗೆ ಇನ್ನಿಲ್ಲದ ಚಿಂತೆ. ಇತ್ತೀಚಿನ ದಿನಗಳಲ್ಲಿ ಆಕೆಯು ಮನೆಯಲ್ಲಿದ್ದಾಗಲೆಲ್ಲ ಮೊಬೈಲ್‌ನಲ್ಲಿಯೇ ಕಾಲ ಕಳೆಯುತ್ತಾಳೆ. ಯಾರೊಂದಿಗೋ ಮಾತಿನಲ್ಲಿ ತಲ್ಲೀನಳಾಗಿರುತ್ತಾಳೆ. ಮೊದಲೆಲ್ಲ ನನ್ನ ಜತೆ ಮುಕ್ತವಾಗಿ ಮಾತನಾಡುತ್ತಿದ್ದವಳು, ಇತ್ತೀಚಿನ ದಿನಗಳಲ್ಲಿ ಏನನ್ನೂ ಹಂಚಿಕೊಳ್ಳುವುದಿಲ್ಲ, ಅವಳನ್ನು ಮದುವೆ ಮಾಡಿಕಳಿಸಿಕೊಟ್ಟರೆ ಸಾಕು ಎಂದೆನಿಸಿಬಿಟ್ಟಿದೆ. ಬೆಳದು ನಿಂತ ಮಗಳ ತಾಯಿಯ ಸಂಕಟ ನೂರಾರು. ನನಗೆ ನಿಮ್ಮ ಸಾಂತ್ವನದ ಮಾತುಗಳು ಸಹಾಯಕ.**

– ಮಾಲತಿ ಅವರೇ, ನಿಮ್ಮ ಅಂತರಂಗದ ತಲ್ಲಣಗಳನ್ನು ಅರ್ಥಮಾಡಿಕೊಳ್ಳಬಹುದು. ಇದು ನಿಮ್ಮದೊಂದೇ ಸಮಸ್ಯೆ ಅಲ್ಲ, ಮನೆಯಲ್ಲಿ ಬೆಳೆದು ನಿಂತ ಮಗಳನ್ನು ಇಟ್ಟುಕೊಂಡ ಎಲ್ಲ ತಂದೆ ತಾಯಿಯಂದಿರ ಸಂಕಟವೂ ಇದೇ. ಆದರೆ ನೀವು ಅಗತ್ಯಕ್ಕಿಂತ ಹೆಚ್ಚು ಚಿಂತೆ ಮಾಡುತ್ತಿದ್ದೀರೇನೋ ಎಂದು ಅನಿಸುತ್ತಿದೆ. ಈಗಿನ ಕಾಲದ ಹೆಣ್ಣು ಮಕ್ಕಳು ಏನೂ ಗೊತ್ತಿಲ್ಲದವರೇನೂ ಅಲ್ಲ, ಅವರಿಗೆ ತಮ್ಮ ಜೀವನವನ್ನು ಕಟ್ಟಿಕೊಳ್ಳುವುದು ಹೇಗೆ ಎಂಬುದು ಗೊತ್ತಿರುತ್ತದೆ. ಹುಡುಗರ ವರಸೆಗಳೇನು ಎಂಬುದನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿರುತ್ತಾರೆ. ಮೊದಲಾಗಿದ್ದರೆ ಹುಡುಗಿಯರನ್ನು ಚುಡಾಯಿಸುವುದು ಸಾಮಾನ್ಯವಾಗಿತ್ತು. ಈ ದಿನಗಳಲ್ಲಿ ಸಿಸಿಟಿವಿ ಮತ್ತು ಮೊಬೈಲ್ ವ್ಯಾಪಕವಾಗಿರುವುದರಿಂದ ಹುಡುಗರು ಹುಡುಗಿಯರನ್ನು ಚುಡಾಯಿಸುವಾಗ ನೂರು ಸಲ ಯೋಚಿಸುತ್ತಾರೆ. ಹುಡುಗಿಯರಿಗೆ ಮೆಸೇಜ್ ಕಳಿಸುವಾಗಲೂ ಸಾಕಷ್ಟು ಯೋಚನೆ ಮಾಡಿಯೇ ಮುಂದುವರಿಯುತ್ತಾರೆ. ಯಾರನ್ನೂ ಯಾರೂ ಸುಖಾಸುಮ್ಮನೆ ಯಾಮಾರಿಸಲು ಆಗುವುದಿಲ್ಲ.

ಈಗಿನ ಕಾಲದಲ್ಲಿ ಮಗಳು ಬೆಳೆದಿದ್ದಾಳೆಂದು ಮನೆಯಲ್ಲಿಯೇ ಇಟ್ಟುಕೊಳ್ಳಲು ಸಹ ಆಗುವುದಿಲ್ಲ. ಅವರ ಭವಿಷ್ಯಮತ್ತು ಮುಂದಿನ ವಿದ್ಯಾಭ್ಯಾಸದ ದೃಷ್ಟಿಯಿಂದ ಮನೆಯಿಂದ ಆಚೆ ಕಳಿಸುವುದು, ವಿದೇಶಗಳಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಹೋಗುವುದು ಸಾಮಾನ್ಯ. ಇಂಥ ಸಂದರ್ಭದಲ್ಲಿ ಅವರು ಏಕಾಂಗಿಯಾಗಿ ಇರಬೇಕಾಗುತ್ತದೆ. ವಿದೇಶಗಳಿಗೆ ಹೋದಾಗಲೂ ನೀವು ಪ್ರಸ್ತಾಪಿಸಿದ ಸಮಸ್ಯೆಗಳು ಉದ್ಭವಿಸಬಹುದು. ಹಾಗಂತ ಅವರನ್ನು ಮನೆಯಲ್ಲಿಯೇ ಇರು ಎನ್ನಲು ಆಗುವುದಾ? ಈಗಿನ ಕಾಲದ ಮಕ್ಕಳು ತಮ್ಮ ಭವಿಷ್ಯವನ್ನು ಹೇಗೆ ಕಟ್ಟಿಕೊಳ್ಳಬೇಕು ಎಂಬ ಬಗ್ಗೆ ಸ್ಪಷ್ಟ ಯೋಚನೆಯನ್ನು ಮಾಡಿರುತ್ತಾರೆ. ಆ ನಿಟ್ಟಿನಲ್ಲಿ ಅವರು ಸಾಕಷ್ಟು ಪೂರ್ವಸಿದ್ಧತೆಗಳನ್ನು ಕೂಡ ಮಾಡಿಕೊಂಡಿರುತ್ತಾರೆ.

ಹೀಗಾಗಿ ನಿಮ್ಮ ಮಗಳ ಬಗ್ಗೆ ಅನಗತ್ಯವಾಗಿ ಚಿಂತೆ ಮತ್ತು ಚಿಂತನೆಯನ್ನು ಮಾಡಬೇಡಿ. ಇಂದು ಯುವತಿಯರು ಏಕಾಂಗಿಯಾಗಿ ಜಗತ್ತನ್ನು ಸುತ್ತುತ್ತಿರುವುದನ್ನು ನೀವು ನೋಡಿರಬಹುದು. ಹೀಗಿರುವಾಗ ನಿಮ್ಮ ಮಗಳ ಬಗ್ಗೆ ಯಾಕೆ ಅನಗತ್ಯವಾದ ಯೋಚನೆಗಳನ್ನು ಮಾಡುತ್ತೀರಿ. ನಿಮ್ಮ ಮಗಳಿಗೆ ಭವಿಷ್ಯದ ಬದುಕಿನ ಮಹತ್ವವನ್ನು ತಿಳಿಸಿ ಕೊಡಿ, ಸಾಕು. ಆ ನಿಟ್ಟಿನಲ್ಲಿ ಅವಳಿಗೆ ಬೇಕಾದ ಎಲ್ಲ ಹಣಕಾಸು ಸಹಾಯ, ಬೆಂಬಲವನ್ನ ಕೊಡಿ. ಆಕೆಗೆ ತನ್ನ ಬದುಕನ್ನು ಸುಂದರವಾಗಿ ಕಟ್ಟಿಕೊಳ್ಳುವುದು ಹೇಗೆ ಎಂಬುದು ಗೊತ್ತಿರುತ್ತದೆ. ಯಾವ ಕಾರಣಕ್ಕೂ ಅವಳನ್ನು ಗುಮಾನಿಯಿಂದ ನೋಡಬೇಡಿ. ಅವಳ ನಿರ್ಧಾರಗಳನ್ನು ಬೆಂಬಲಿಸಿ ಮತ್ತು ಸ್ವಾಗತಿಸಿ.

ಉದಯ ಕೆ.ವಿ., ಕೆಂಗೇರಿ

- **ಸಂಪಾದಕರೇ, ನನಗೆ ಕಾಲೇಜಿಗೆ ಹೋಗುವ ಮಗಳಿದ್ದಾಳೆ. ಅವಳು ದಿನವೂ ಕನಿಷ್ಠ 2-3 ಗಂಟೆಗಳ ಕಾಲ ರೀಲ್ಸ್ ಮಾಡುತ್ತಾ ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯವಾಗಿ ಇರುತ್ತಾಳೆ. ಅವಳ ರೀಲ್ಸ್ ಪೋಸ್ಟ್ ನೋಡಿ ಪಡ್ಡೆ ಹುಡುಗರು ಕಾಮೆಂಟ್ ಮಾಡುತ್ತಾರೆ. ನನಗೆ ಇದನ್ನು ನೋಡಲು ಮತ್ತು ಸಹಿಸಿಕೊಳ್ಳಲು ಆಗುತ್ತಿಲ್ಲ. ಅವಳ ರೀಲ್ಸ್ ಅಭಿಯಾನಕ್ಕೆ ನನ್ನಪತ್ನಿಯ ಸಹಕಾರ ಕೂಡ ಇದೆ. ಈ ಕಾರಣಕ್ಕೆ ಮನೆಯಲ್ಲಿ ಆಗಾಗ ಜಗಳಗಳು ಆಗುತ್ತಿರುತ್ತವೆ. ಈ ಸಮಸ್ಯೆಯನ್ನು ನಿಭಾಯಿಸುವುದು ಹೇಗೆ, ದಯವಿಟ್ಟು ತಿಳಿಸಿ.**

– ಉದಯ ಅವರೇ, ಈಗಿನ ಕಾಲದಲ್ಲಿ ಹುಡುಗಿಯರು ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯರಾಗಿರುವುದು ಹಾಗೂ ರೀಲ್ಸ್ ಮಾಡುವುದು ಹೊಸ ಸಂಗತಿ ಅಲ್ಲ, ಅನೇಕರು ಆ ರೀತಿ ಮಾಡುವ ಮೂಲಕವೇ ಸೋಶಿಯಲ್ ಮೀಡಿಯಾ ಪ್ರಭಾವಿಗಳು ಎಂದು ಕರೆಸಿಕೊಂಡಿದ್ದಾರೆ. ಸಾಕಷ್ಟು ಬೆಂಬಲಿಗರನ್ನು, ಅನುಯಾಯಿಗಳನ್ನು ಹೊಂದಿದ್ದಾರೆ. ಸೋಶಿಯಲ್ ಮೀಡಿಯಾ ಎನ್ನುವುದು ನಮ್ಮ ಅಭಿಜಾತ ಕಲೆಗಳನ್ನು ಹೊರಹಾಕಲು ಇರುವ ಬಹಳ ದೊಡ್ಡ ವೇದಿಕೆ. ನಿಮ್ಮ ಮಗಳು ಅಂತ ವೇದಿಕೆಯಲ್ಲಿ ಸಕ್ರಿಯಳಾಗಿದ್ದಾಳೆ ಅಂದರೆ ನೀವು ಖುಷಿ ಪಡಬೇಕು. ಅದು ನೆಗೆಟಿವ್ ಸಂಗತಿ ಏನಲ್ಲ.

ಈಗಿನ ಕಾಲದಲ್ಲಿ ರೀಲ್ಸ್ ಮಾಡಿ ಹಣ ಗಳಿಸುವವರೂ ಇದ್ದಾರೆ. ನಿಮ್ಮ ಮಗಳು ರೀಲ್ಸ್ ಮಾಡುತ್ತಿದ್ದಾಳೆ ಎಂದ ಮಾತ್ರಕ್ಕೆ ಅದೇನು ಯಾರೂ ಮಾಡಬಾರದ ಕೆಲಸ ಮಾಡುತ್ತಿದ್ದಾಳೆ ಎಂದು ಭಾವಿಸಬೇಕಿಲ್ಲ. ಸಾಮಾಜಿಕ ಜಾಲತಾಣ ಎನ್ನುವುದು ಒಂದು ಒಂದು ವೇದಿಕೆ ಅಷ್ಟೇ. ಅದು ಸಾಕಷ್ಟು ಸುರಕ್ಷಿತವಾದ ವೇದಿಕೆಯೂ ಹೌದು. ಅವಳ ಅಭಿನಯಕ್ಕೆ ಕೆಲವು ಮಂದಿ ಅಸಭ್ಯವಾಗಿ ಕಾಮೆಂಟ್ ಮಾಡಿರಬಹುದು. ಅಂಥವರನ್ನು ಬ್ಲಾಕ್ ಮಾಡಲು ಅವಕಾಶ ಇದೆ. ನಿಮ್ಮ ಮಗಳಲ್ಲಿ ಉತ್ತಮ ನಟನೆಯ ಗುಣಗಳಿದ್ದರೆ, ನೀವು ಅದನ್ನು ಪ್ರೋತ್ಸಾಹಿಸಿ. ರೀಲ್ಸ್ ಮಾಡುವುದು ಅಸಭ್ಯ ಎಂದು ಭಾವಿಸಬೇಡಿ.